# ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ

ಬೊಳುವಾರು ಮಹಮದ್ ಕುಂಞಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸುವರ್ಣ ಕರ್ನಾಟಕ ೨೦೦೬

# ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ

ಬೊಳುವಾರು ಮಹಮದ್ ಕುಂಞಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-೫೬೦ ೦೦೨

**PAPU GANDHI, GANDHI BAPU ĀDA KATHE :** A story of Mahatma Gandhi by Bolwar Mahamad Kunhi, Senior Manager (Publicity), SyndicateBank, Corporate Office, Bangalore - 560 009 and Published by Ashok N. Chalawadi, Administrative Officer, **Kannada Pustaka Pradhikara,** Kannada Bhavan, J.C. Road, Bangalore - 560 002.

First Impression : 2006
Second Impression : November, 2006
Thrid Impression : January, 2007
Pages : xii + 184
**Price : Rs. 90/-**

ISBN : 81-7713-193-1
Copies : 1,000

© : **Kannada Pustaka Pradhikara**

**Editorial Board :**

*Editor in Chief* : **Prof. S.G. Siddaramaiah**

*Editor* : **Bolwar Mahamad Kunhi**

*Members* : **Kanchyani Sharanappa**
**Bilegere Krishna Murthy**
**Sharanamma Gorebala**

*Cover Page :* **Pa. Sa. Kumar**
*Inside Sketches :* **Sudesh Mahan**

ಪ್ರಕಾಶಕರು
**ಅಶೋಕ್ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು – 560 002

ಮೊದಲ ಮುದ್ರಣ : 2006
ದ್ವಿತೀಯ ಮುದ್ರಣ : ನವೆಂಬರ್ 2006
ತೃತೀಯ ಮುದ್ರಣ : ಜನವರಿ 2007

ಪುಟಗಳು : xii + 184
ಬೆಲೆ : ರೂ. 90–00
ISBN : 81–7713–193–1
ಪ್ರತಿಗಳು : 1,000

© : ಈ ಆವೃತ್ತಿಯ ಹಕ್ಕು : ಕನ್ನಡ ಪುಸ್ತಕ ಪ್ರಾಧಿಕಾರ

**ಸಂಪಾದಕ ಮಂಡಳಿ**
*ಪ್ರಧಾನ ಸಂಪಾದಕರು* : **ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
*ಸಂಪಾದಕರು* : **ಬೊಳುವಾರು ಮಹಮದ್ ಕುಂಞಿ**
*ಸದಸ್ಯರು* : **ಕಂಚ್ಯಾಣಿ ಶರಣಪ್ಪ**
**ಕೃಷ್ಣಮೂರ್ತಿ ಬಿಳಿಗೆರೆ**
**ಶರಣಮ್ಮ ಗೊರೆಬಾಳ**

ಮುದ್ರಣ : **ಇಳಾ ಮುದ್ರಣ,** # 36, 40 ಅಡಿ ರಸ್ತೆ, ರಾಘವನಗರ, ಎನ್.ಟಿ.ವೈ. ಲೇಔಟ್, ಬೆಂಗಳೂರು – 560 026
ದೂರವಾಣಿ : 26757159. ಇ–ಮೇಲ್ : ila_printers@yahoo.co.in

# ಹಣತೆ ಹಚ್ಚುತ್ತೇವೆ

ಆಡಿಬಾ ನನ ಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ನಿನ್ನ ಬಂಗಾರ ಮೋರೆ ತೊಳೆದೇನು.

ಬಾಲ್ಯವೆಂಬುದು ಮಗುವಿನ ಬೆಳವಣಿಗೆಯಲ್ಲಿ ಪವಿತ್ರವಾದ ಹಾಗೂ ಅಮೂಲ್ಯವಾದ ಅನುಭವ. ವಿಶೇಷ ಮನೋವಿಜ್ಞಾನಿಗಳ ಪ್ರಕಾರ ಮಕ್ಕಳಲೋಕಗ್ರಹಿಕೆ ಸುಮಾರು ನಾಲ್ಕೈದು ವರ್ಷಗಳಿಂದ ಮೊದಲ್ಗೊಂಡು ಹದಿನಾಲ್ಕು ಹದಿನೈದು ವರ್ಷಗಳ ಅವಧಿಯಲ್ಲಿ ತುಂಬಾ ತೀಕ್ಷ್ಣ ಹಾಗೂ ಸೂಕ್ಷ್ಮವಾಗಿರುತ್ತದೆ. ಪರಿಸರ ಭಾಷೆ ಅರ್ಥಾತ್ ಮಾತೃಭಾಷೆ ಇಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಬೇಕಾದ್ದು ಸಮಾಜದ ಆದ್ಯ ಕರ್ತವ್ಯ. ಮನುಷ್ಯನ ದುರಾಸೆ ಪೈಪೋಟಿ ಹೋಲಿಕೆಗಳ ದಾಳಿಗೆ ಮಕ್ಕಳು ಪ್ರಯೋಗಪಶುಗಳಾಗಬಾರದು. ಒತ್ತಡದ ಶಿಕ್ಷಣಕ್ಕೆ ಒಳಗುಮಾಡಿ ಅವರ ಸೃಜನಶಕ್ತಿಯನ್ನು ಮುರುಟಿಸಬಾರದು. ಬಾಲ್ಯಾನುಭವದ ಸುಮಧುರತೆ ಹಾಳಾಗಬಾರದು. ಕಲಿಕೆ ಪ್ರಯಾಸದ ಶಿಕ್ಷೆಯಾಗದೆ ನಲಿಯುತ್ತಾ ಗ್ರಹಿಸುವ ವಿಕಾಸಶೀಲ ಗತಿಯಾಗಬೇಕು.

ಕನ್ನಡ ಮಕ್ಕಳ ಮನಸ್ಸನ್ನು ಬೆಳೆಸುವ ಕೈಂಕರ್ಯದಲ್ಲಿ ನಾಡಿನ ಹಲವು ಜನ ಪೂರ್ವಸೂರಿಗಳು ಮಕ್ಕಳಿಗಾಗಿ ಗುಣಾತ್ಮಕ ಸಾಹಿತ್ಯ ರಚನೆಮಾಡಿದ್ದಾರೆ. ಸರಳ ಸುಂದರ ಸುಲಲಿತವಾದ ಆ ರಚನೆಗಳು ಬಾಲ್ಯದ ಮನಸ್ಸಿಗೆ ಮುದನೀಡುವುದಷ್ಟೇ ಅಲ್ಲದೆ ಮಾನವೀಯ ಜೀವನ ಮೌಲ್ಯಗಳನ್ನು ಕುಸುಮಗಂಧದ ಪರಿಯಲ್ಲಿ ಅರಿವಿಗೆ ಮುಟ್ಟಿಸುತ್ತವೆ. ಪೂರ್ವಸೂರಿಗಳ ಈ ಹಾದಿಯನ್ನು ಅನುಸರಿಸಿದಂತೆ ಆನಂತರದ ಹಲವು ಕನ್ನಡ ಮನಸ್ಸುಗಳು ತಮ್ಮ ಭಾವನೆ, ಆಲೋಚನೆಗಳನ್ನು ಮಗುಸಹಜ ಭಾವಗತಿಯಲ್ಲಿ ಹರಿಯ ಬಿಟ್ಟಿವೆ. ಕನ್ನಡ ಮಕ್ಕಳ ಮನಸ್ಸನ್ನು ಆರೋಗ್ಯಕರ ಭಾವದಲ್ಲಿ ಬೆಳಸುವ ಇಂಥ ಸಾಹಿತ್ಯವನ್ನು ಸಂಕಲಿಸಿ ಕರ್ನಾಟಕದ ಎಲ್ಲ ಭಾಗದ ಮಕ್ಕಳಿಗೂ ಸುಲಭವಾಗಿ ತಲುಪುವಂತೆ ಮಾಡಬೇಕೆಂಬುದು ಕನ್ನಡ ಪುಸ್ತಕ ಪ್ರಾಧಿಕಾರದ ಹೆಬ್ಬಯಕೆ. ಅದರ ಫಲ ಈ ಮಕ್ಕಳ ಪುಸ್ತಕಮಾಲೆ ಈ ಮಾಲೆಯಲ್ಲಿ ಕವಿತೆ, ನಾಟಕ, ಕಾದಂಬರಿ, ವ್ಯಕ್ತಿಚಿತ್ರ, ಪ್ರವಾಸ ಕಥನಗಳನ್ನು ಒಳಗೊಂಡ ಹತ್ತು ಪುಸ್ತಕಗಳು ಸದ್ಯಕ್ಕೆ ಪ್ರಕಟವಾಗುತ್ತಿವೆ.

* * *

ಬೆಳೆಯುವ ಮಕ್ಕಳಿಗೆ ಆದರ್ಶ ಜೀವಿಗಳ ಜೀವನಗತಿ ದಾರಿ ದೀಪವಿದ್ದಂತೆ, ಹಣತೆ ಹಚ್ಚುತ್ತೇವೆ ಕತ್ತಲೆಯನ್ನು ಹೊಡೆದೋಡಿಸುತ್ತೇವೆಂಬ ಭ್ರಮೆಯಿಂದಲ್ಲ; ಇಡುವ ಹೆಜ್ಜೆಯಗತಿಗೆ ದಾರಿ ಕಾಣುವಷ್ಟು ಬೆಳಕು ಚೆಲ್ಲ ಬಹುದೆಂಬ ಆಸೆಯಿಂದ. ಮಕ್ಕಳಿಗೆ ಪ್ರಿಯವಾಗುವ ಎರಡು ಚೇತನಗಳ ಜೀವನ ಚಿತ್ರಣವನ್ನು ಈ ಮಾಲೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಒಂದು ; ಗಾಂಧೀಜಿಯವರ ಜೀವನವನ್ನು ಆಧರಿಸಿ "ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ" ಇನ್ನೊಂದು; ಶ್ರೀ ಅಬ್ದುಲ್ ಕಲಾಂ ಅವರ ಜೀವನವನ್ನು ಆಧರಿಸಿದ 'ಕಲಾಂ ಮೇಸ್ಟ್ರು'

'ಪಾಪು ಗಾಂಧಿ, ಗಾಂಧಿ ಬಾಪು ಆದ ಕಥೆ'ಯನ್ನು ಬರೆದವರು 'ತಟ್ಟು ಚಪ್ಪಾಳೆ ಪುಟ್ಟ ಮಗು'ವಿನ ಖ್ಯಾತಿಯ ಬೊಳುವಾರು ಮೊಹಮ್ಮದ್ ಕುಂಞ ಅವರು. ಗಾಂಧೀಜಿಯವರ ಜೀವನ ಕುರಿತಂತೆ ಅಸಂಖ್ಯ ಭಾಷೆಗಳಲ್ಲಿ ಅಸಂಖ್ಯ ಬರಹಗಳು ಮೂಡಿಬಂದಿವೆ. ಕನ್ನಡದಲ್ಲೂ ಸಾಕಷ್ಟು ಪುಸ್ತಕಗಳಿವೆ. ಆ ಪರಂಪರೆಯ ಬರಹಗಳ ಸಾಲಿನಲ್ಲಿ ಇದೂ ಒಂದು ಬಗೆಯ ವಿಶಿಷ್ಟ ಪ್ರಯತ್ನ. ಗಾಂಧೀಜಿಯವರ ಆತ್ಮಕಥನವಾದ "ನನ್ನ ಸತ್ಯಾನ್ವೇಷಣೆ'ಯ ಮಹಾಜ್ಯೋತಿಯ ಕುಡಿಗೆ ಕುಡಿತಾಗಿಸಿ ಹತ್ತಿದ ದೀಪದ ಬೆಳಗು ಇದು. ಈ ದೀಪದ ಬೆಳಗು ನೆಲದ ಗುಣಕ್ಕೆ ನಿಷ್ಠವಾಗಿ ನಡೆದ ಮಹಾಚೇತನವನ್ನು ಮನುಷ್ಯ ಸಹಜ ವಸ್ತುನಿಷ್ಠತೆಯ ನಿಕಷದಲ್ಲಿ ಗ್ರಹಿಸಿ ಕಾಣಿಸುವ ಹಂಬಲದ ಫಲ. ಮೆಹತಾಬನ ಸಾಕ್ಷಿ ಪ್ರಜ್ಞೆಯ ಮುಖೇನ ಗಾಂಧೀಜಿಯ ಬದುಕನ್ನು ಆತ್ಮ ನಿರೀಕ್ಷೆಯ ನಿಕಷಕ್ಕೆ ಒಡ್ಡಿದಂತೆ ನಿರೂಪಿತವಾದ ಕಥನವಿದು. ವೈಭವೀಕರಣದ ಉತ್ಪ್ರೇಕ್ಷೆಯ ಮಾತಿನ ಸೂತಕದಲ್ಲಿ ಯಾವುದೇ ಸಾಧಕನ ಜೀವನ ಸೌಂದರ್ಯ ಹಾಳಾಗುತ್ತದೆ. ಇಂಥ ಮಾತಿನ ಸೂತಕದಲ್ಲಿ ಮೈಲಿಗೆಯಾಗದೆ ಅರಿವಿನ ವಿವೇಕದಲ್ಲಿ ಅರಳಿದ ವಸ್ತುನಿಷ್ಠತೆ ಈ ಕೃತಿಯ ಜೀವಧಾತುವಾಗಿದೆ.


ಕತೆಗಾರ ಬೊಳುವಾರರಲ್ಲಿ ವಸ್ತುನಿಷ್ಠತೆಯೆಂಬುದು ನೆಲದ ಗುಣಕ್ಕೆ ನಿಷ್ಠವಾದ ಜೀವಚೇತನದ ಜೀವಿತಕ್ಕೆ ಕಥನಕಲೆಯ ಹೊಸಬಗೆಯ ಮೆರಗು ನೀಡಿದೆ. ಗಾಂಧೀಜಿಯವರನ್ನು ತಮ್ಮ ನಡುವಿನ ನಿಜದ ಮನುಷ್ಯನನ್ನಾಗಿ ಮಕ್ಕಳು ತಮ್ಮೊಳಕ್ಕೆ ತಂದುಕೊಳ್ಳಲು ಈ ಕಥನ ಪ್ರಭಾವಿಸುತ್ತದೆ. ಕತೆಗಾರ ಬೊಳುವಾರರಿಗೆ ಕನ್ನಡ ಪುಸ್ತಕಪ್ರಾಧಿಕಾರದ ಆತ್ಮೀಯ ಧನ್ಯವಾದಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಆಯೋಜಿಸಿದ ಈ ಮಕ್ಕಳ ಸಾಹಿತ್ಯಮಾಲೆಯ ಸಂಪಾದಕತ್ವವನ್ನು ವಹಿಸಿಕೊಂಡು ತುಂಬಾ ಸಮರ್ಥವಾಗಿ ಈ ಕೈಂಕರ್ಯವನ್ನು ಆಗುಮಾಡಿಕೊಟ್ಟ ಬೊಳುವಾರು ಮಹಮ್ಮದ್ ಕುಂಞ ಅವರಿಗೂ ಅವರ ಸಂಗಡ ಸದಸ್ಯರಾಗಿ ಸಹಕರಿಸಿದ ಹಿರಿಯರಾದ ಶ್ರೀ ಕಂಚ್ಯಾಣಿ ಶರಣಪ್ಪ, ಡಾ. ಶರಣಮ್ಮ ಗೊರೆಬಾಳ, ಪ್ರೊ. ಕೃಷ್ಣಮೂರ್ತಿ ಬಿಳಿಗೆರೆ ಇವರಿಗೂ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು.

## ಎರಡನೆಯ ಮುದ್ರಣ ಕುರಿತು

ಈ ಪುಸ್ತಕ ಪ್ರಕಟವಾದ ಎರಡು ತಿಂಗಳಲ್ಲಿ ಎಲ್ಲ ಪ್ರತಿಗಳೂ ಮಾರಾಟವಾಗಿವೆ. ಕನ್ನಡ ಪುಸ್ತಕೋದ್ಯಮದ ಸಂದರ್ಭದಲ್ಲಿ ಇದೊಂದು ವಿಶಿಷ್ಟ ಘಟನೆಯೆಂದು ಭಾವಿಸುತ್ತೇವೆ. ಮಕ್ಕಳಿಂದ ಹಿಡಿದು ಕನ್ನಡದ ಬಹು ದೊಡ್ಡ ವಿಮರ್ಶಕ ಮನಸ್ಸುಗಳು ಈ ಕೃತಿಯ ಬಗ್ಗೆ ಮೆಚ್ಚುಗೆಯ ಮಾತನಾಡಿದ್ದಾರೆ. ನಾಡಿನ ಹಲವು ಪತ್ರಿಕೆಗಳಲ್ಲಿ ಈ ಕೃತಿ ಕುರಿತು ವಿಮರ್ಶಾ ಲೇಖನಗಳು ಪ್ರಕಟವಾಗಿವೆ. ಬಹಳಷ್ಟು ಕಡೆಯಿಂದ ಕೃತಿಯನ್ನು ಕಳಿಸುವಂತೆ ದೂರವಾಣಿ ಕರೆಗಳು, ಪತ್ರಗಳು ಬಂದಿವೆ. ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತು ಪ್ರಕಟವಾಗಿರುವ ಬರಹಗಳ ಸಾಲಿನಲ್ಲಿ ಇದು ಗಮನಾರ್ಹವಾದ ಸಾಧನೆಯೆಂದು ಭಾವಿಸಿದ್ದೇನೆ. ಓದುಗ ಪ್ರಪಂಚಕ್ಕೆ ಆತ್ಮೀಯ ನಮನಗಳು. ಮರುಮುದ್ರಣಕ್ಕೆ ಒಪ್ಪಿಗೆ ನೀಡಿದ ಗೆಳೆಯ ಬೊಳುವಾರು ಅವರಿಗೆ ಆತ್ಮೀಯ ಕೃತಜ್ಞತೆಗಳು.

**ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ



ಪ್ರಹ್ಲಾದನಂತೆ ಸತ್ಯಾಗ್ರಹ ಹೂಡಿ
ನನ್ನೊಳಗಿನ ಹಿರಣ್ಯಕಶಿಪುವನ್ನು ಕೊಂದ
ಮುಮತಾಜ್ ಬೆನಜೀರಳಂತಹ ಹೆಣ್ಣುಮಕ್ಕಳಿಗೆ



ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು, ಬಾಪೂಜಿ ಎಂದೇ ಪ್ರಖ್ಯಾತರಾದ ಮಹಾತ್ಮ ಗಾಂಧೀಜಿ ಯೆಂಬುದು ನಿಮಗೆ ಗೊತ್ತಿದೆ. ನಿಮ್ಮ ಊರಿನ ಎಲ್ಲ ಶಾಲೆಗಳಲ್ಲಿ ಮಾತ್ರವಲ್ಲ, ಸರಕಾರಿ ಕಚೇರಿಗಳಲ್ಲೂ, ನ್ಯಾಯಾಲಯಗಳಲ್ಲೂ ಬಾಪೂಜಿ ಯವರ ಭಾವಚಿತ್ರ ಇರಿಸಿರುವುದನ್ನು ನೀವು ನೋಡಿರುವಿರಿ. ಚಿತ್ರ ದಲ್ಲಿರುವ ಅವರ ಬೋಳು ತಲೆಯನ್ನು, ದೊಡ್ಡ ಕಿವಿ ಗಳನ್ನು, ಉರುಟು ಕನ್ನಡಕದೆಡೆಯಿಂದ ಇಣುಕುವ ಪ್ರೀತಿ ಸೂಸುವ ಕಣ್ಣುಗಳನ್ನು, ಬಿಳುಪು ಮೀಸೆಯನ್ನು, ಮತ್ತು ಬರಿಮೈಗೆ ಸುತ್ತಿರುವ ತುಂಡು ಮೇಲು ವಸ್ತ್ರವನ್ನು ಕಂಡು ನೀವು ಸಂತೋಷ ಪಟ್ಟಿರುವಿರಿ. ಅವರ ಹುಟ್ಟು ಹಬ್ಬವನ್ನು 'ಗಾಂಧಿ ಜಯಂತಿ' ಯಂದು ನೀವು, ನಿಮ್ಮ ಶಾಲೆಯಲ್ಲಿ ಸಹಪಾಠಿಗಳ ಜತೆ ಸೇರಿ ಆಚರಿಸಿದ್ದೀರಿ. ಇಂತಹ ಮಹಾತ್ಮನ ಕತೆಯನ್ನು ಓದುವ ಕುತೂಹಲ ನಿಮಗಿದೆಯಲ್ಲವೆ?

# ಪ್ರೀತಿಯೊಂದೇ ಕಾರಣ

ಸ್ವತಂತ್ರ ಭಾರತದ ಆರಂಭದ ದಿನಗಳಲ್ಲಿ ನಾವು, ದೊಡ್ಡವರೆಲ್ಲ ಸೇರಿಕೊಂಡು ಒಮ್ಮತದಿಂದ ನಮ್ಮ ದೇಶದ ರಾಜರಸ್ತೆಗಳಿಗೆಲ್ಲ ಮಹಾತ್ಮ ಗಾಂಧಿ ಮಾರ್ಗವೆಂದು ಹೆಸರಿಟ್ಟೆವು. ಕ್ರಮೇಣ ಆ ರಸ್ತೆಗಳಲ್ಲಿ ಕಲ್ಲು ಮುಳ್ಳುಗಳೇ ಜಾಸ್ತಿ ಎಂಬುದನ್ನರಿತು, ನಯವಾಗಿ ಜಾರಬಲ್ಲ, ಬಲು ಬೇಗ ಗುರಿ ತಲುಪಬಲ್ಲ ಒಳ ದಾರಿ ಬಳಸಲಾರಂಭಿಸಿದೆವು. ನಾವು ಕೈ ಹಿಡಿದು ನಡೆಸಿದ ನಮ್ಮ ಮಕ್ಕಳು ಕೂಡಾ ಸಹಜವಾಗಿ ನಮ್ಮ ಜತೆಗೆ ನಮ್ಮದೇ ದಾರಿಯಲ್ಲಿ ನಡೆದು ಬಂದರು. ಆದ್ದರಿಂದ ಅವರಿಗೆ ಗಾಂಧಿಮಾರ್ಗದ ಪರಿಚಯವಾಗಲಿಲ್ಲ. ಅವರಿಗೆ ಗೊತ್ತಿರುವುದು ಎಂದರೆ, ಗಾಂಧೀಜಿಯೆಂದರೆ ಬ್ರಿಟಿಷರೊಡನೆ ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಬಲು ದೊಡ್ಡ ಮಹಾತ್ಮ; ಗಾಂಧಿ ಜಯಂತಿಯೆಂದರೆ ಅ ಮಹಾತ್ಮನ ಹ್ಯಾಪಿ ಬರ್ತ್‌ಡೇ; ಗಾಂಧಿ ಮಾರ್ಗವೆಂದರೆ ಎಂ. ಜಿ. ರೋಡ್, ಇಷ್ಟೆ; ಯಾಕೆಂದರೆ, ನಾವು ಅವರಿಗೆ ಕಲಿಸಿದ್ದು ಅಷ್ಟೆ.

ಇಂತಹ ಮಕ್ಕಳಿಗೆ, ಮಹಾತ್ಮ ಗಾಂಧೀಜಿಯೆಂದರೆ, ಯಾರಿಗೂ ನಿಲುಕದ ಅತಿಮಾನವನಲ್ಲ, ಸುಮಾರು ನೂರಿಪ್ಪತ್ತೈದು ವರ್ಷಗಳ ಹಿಂದೆ ಎಲ್ಲರಂತೆಯೇ ಹುಟ್ಟಿ, ಎಲ್ಲರಂತೆಯೇ ಬೆಳೆದ ಒಬ್ಬ ಸಾಮಾನ್ಯ ಮಗುವಾಗಿದ್ದವನು; ಎಲ್ಲರಂತೆಯೇ ಅಪ್ಪ ಅಮ್ಮನ ಮುದ್ದಿನ ಪಾಪುವಾಗಿದ್ದವನು; ಶಾಲೆಗೆ ಸೇರಿ, ಆಟವಾಡಿ, ಪಾಠ ಓದಿ ಪರೀಕ್ಷೆ ಬರೆದು ಪಾಸಾಗಿ ದೊಡ್ಡ ವಕೀಲನಾಗಿದ್ದವನು; ಕಷ್ಟದಲ್ಲಿರುವವರ ಬಗ್ಗೆ ಸದಾ ಮರುಗುವ, ಸುಳ್ಳು ಮತ್ತು ಅನ್ಯಾಯದ ವಿರುದ್ಧ ಎದೆಗುಂದದೆ ಹೋರಾಡಿದ ಯುವಕನಾಗಿದ್ದವನು; ಸಾಮಾನ್ಯ ಮನುಷ್ಯನೊಬ್ಬ ಪರಿಪೂರ್ಣ ಮನುಷ್ಯನಾಗಲು, ಮಹಾತ್ಮನೆಂಬುದಾಗಿ ಕರೆಸಿಕೊಳ್ಳಲು ಹೇಗೆ ಬದುಕಿ ಬಾಳಬೇಕು ಎಂಬುದಕ್ಕೆ ಮಾದರಿಯಾದ ಅಜ್ಜನಾಗಿದ್ದವನು; ಪ್ರಯತ್ನ ಪಟ್ಟರೆ ಎಲ್ಲ ಮಕ್ಕಳೂ ಗಾಂಧೀಜಿಯಂತಾಗಬಹುದು ಎಂದಷ್ಟೇ ತಿಳಿಸಿಕೊಡುವ ಪ್ರಯತ್ನ ಈ ಪುಸ್ತಕದ್ದು.

ಈ ದೇಶದಲ್ಲಿ ಅಕ್ಷರ ಕಲಿತು ಪುಸ್ತಕ ಓದಬಲ್ಲ ಮಕ್ಕಳ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆಯಲ್ಲಿ, ಮಹಾತ್ಮ ಗಾಂಧೀಜಿಯ ಬಗ್ಗೆ ಪುಸ್ತಕಗಳು, ಲೇಖನಗಳು ಪ್ರಕಟವಾಗಿವೆ. ಈ ಸಂಖ್ಯೆಗೆ ನನ್ನ ಈ ಪುಸ್ತಕವೂ ಮತ್ತೊಂದು ಸಂಖ್ಯೆಯಾಗಿ ಸೇರಿ ಹೋಗಬಹುದೆಂಬ ಅರಿವು ನನಗಿದೆ. ಮಕ್ಕಳು ಅರ್ಥ ಮಾಡಿಕೊಳ್ಳುವುದು ಹೋಗಲಿ, ದೊಡ್ಡವರೆನ್ನಿಸಿಕೊಂಡವರೂ ಗಾಂಧೀಜಿಯನ್ನು ಅರ್ಥ ಮಾಡಿಕೊಂಡಿರುವುದು ಮತ್ತು ಇತರರಿಗೆ ಅರ್ಥ ಮಾಡಿಸಿ ಕೊಡುತ್ತಿರುವುದು ತಮ್ಮ ತಮ್ಮ ಮೂಗಿನ ನೇರಕ್ಕೆ. ಅದೇ ರೀತಿ, ನಾನು ಕೂಡಾ ನನ್ನ ಪ್ರೀತಿಯ ನೇರಕ್ಕೆ ಮಕ್ಕಳಗಾಂಧಿಯನ್ನು ಅರ್ಥಮಾಡಿಕೊಂಡು ಈ ಪುಸ್ತಕ ಬರೆದಿರುವೆ.

ಈ ಪುಸ್ತಕ ಬರೆಯುವಾಗ, ಗಾಂಧೀಜಿಯ ದೊಡ್ಡ ವ್ಯಕ್ತಿತ್ವಕ್ಕೆ ಎಲ್ಲೂ ಅಪಚಾರವಾಗದಂತೆ, ಅವರ ಬಗ್ಗೆ ಗೌರವಕ್ಕಿಂತ ಹೆಚ್ಚಾಗಿ ಪ್ರೀತಿ ಹುಟ್ಟುವಂತೆ ಪ್ರಯತ್ನಿಸಿದ್ದೇನೆ. ಐದರಿಂದ ಹತ್ತನೇ ತರಗತಿಯವರೆಗಿನ ಮಕ್ಕಳ ಮತಿ ಮತ್ತು ಪುಸ್ತಕದ ಪುಟಗಳ ಮಿತಿ, ಎರಡನ್ನೂ ಗಮನದಲ್ಲಿರಿಸಿಕೊಂಡು, ಮಕ್ಕಳಿಗೆ ಆಸಕ್ತಿ

ಹುಟ್ಟಿಸಬಹುದಾದ ಕೆಲವು ಎಳೆಗಳನ್ನು ವಿಸ್ತರಿಸಿ, ಮಕ್ಕಳಿಗೆ ಅನಗತ್ಯ ಎಂಬುದಾಗಿ **ನಾನು ಭಾವಿಸಿದ** ಘಟನೆಗಳನ್ನು ತೇಲಿಸಿ ಅಥವಾ ಕೈಬಿಟ್ಟು ಈ ಕತೆ ಹೆಣೆದಿರುವೆ. ಈ ಪುಸ್ತಕವನ್ನೋದಿದ ಬಳಿಕ ಒಂದೆರಡು ಮಕ್ಕಳಿಗಾದರೂ, ತಾವು ಮುಂದೆ ಬೆಳೆದು ದೊಡ್ಡವರಾದ ಬಳಿಕ ಗಾಂಧೀಜಿ ಬಗ್ಗೆ ಹೆಚ್ಚು ಓದಬೇಕು, ತಿಳಿಯಬೇಕು ಎಂಬ ಕುತೂಹಲ ಮೂಡಿದರೆ ನನಗೆ ಸಂತೋಷ. ಮಕ್ಕಳ ಹೆತ್ತವರು ಮತ್ತು ಶಿಕ್ಷಕರು ಈ ಪುಸ್ತಕವನ್ನು ಮಕ್ಕಳಿಗೆ ಓದಿ ಹೇಳಿದರೆ ನನ್ನ ಸಂತೋಷ ಹೆಚ್ಚಾಗುತ್ತದೆ. ಹಾಗಾಗದೆ ಹೋದರೂ, ಈ ಪುಸ್ತಕ ಬರೆಯುವ ಕಾರಣದಿಂದ ಗಾಂಧೀಜಿಯವರನ್ನು ಮತ್ತೊಮ್ಮೆ ಸರಿಯಾಗಿ ಓದಿಕೊಳ್ಳಲು ಸಾಧ್ಯವಾದುದಕ್ಕೆ ನನಗೆ ಸಂತೋಷವಿದೆ.

ಈ ಪುಸ್ತಕದ ಒಳಿತು ಕೆಡುಕುಗಳಿಗೆಲ್ಲ ನನ್ನಿಂದ ಈ ಪುಸ್ತಕವನ್ನು ಬರೆಯಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪ್ರೊ॥ ಎಸ್.ಜಿ. ಸಿದ್ಧರಾಮಯ್ಯನವರ ಪ್ರೀತಿಯೊಂದೇ ಕಾರಣ.

ಬೆಂಗಳೂರು
ಆಕ್ಟೋಬರ ೨, ೨೦೦೫

**ಬೊಳುವಾರು ಮಹಮದ್ ಕುಂಞ**

## ಅಚ್ಚರಿ

ಈ ಪುಸ್ತಕ ಇದಿಷ್ಟು ಬೇಗ ಎರಡನೇ ಮುದ್ರಣವಾಗುತ್ತಿರುವುದು 'ಗಾಂಧಿ'ಯಷ್ಟೇ ಅಚ್ಚರಿಯ ಸಂಗತಿ. ಈ ಅಚ್ಚರಿಗೆ ಕಾರಣರಾದ ಓದುಗರಿಗೆ ನಾನು ಕೃತಜ್ಞ.

ಬೆಂಗಳೂರು
ಆಕ್ಟೋಬರ ೨, ೨೦೦೬

**ಬೊಳುವಾರು ಮಹಮದ್ ಕುಂಞ**

> ಒಬ್ಬನು, ಎಲ್ಲಿಯ ವರೆಗೆ ರಕ್ತ ಮಾಂಸಗಳಿಂದ ಕೂಡಿರುವ ದೇಹವನ್ನು ಹೊಂದಿರುವನೋ, ಅಲ್ಲಿಯ ವರೆಗೆ ಅವನು ತನ್ನ ಅಹಂಕಾರವನ್ನು ನಿಗ್ರಹಿಸಿಕೊಳ್ಳಲಾರ. ಯಾವಾತನೂ ಬದುಕಿರುವ ವರೆಗೆ ಪರಿಪೂರ್ಣನಾಗಲಾರ.
>
> – **ಮೋ.ಕ. ಗಾಂಧಿ** (ಯಂಗ್ ಇಂಡಿಯಾ : ೨೦.೦೯.೧೯೨೮)

# 'ಸತ್ಯಾಗ್ರಹ'ದ ಹೆಜ್ಜೆಗಳು...

## ಪಾಪು


೧. ಮೋನುವಿನ ಉಪವಾಸ ... ೩
೨. ಗಟ್ಟಿ ಹಾಡಿದವರಿಗೆ ಹೆಚ್ಚು ಕಾಸು ... ೬
೩. ಮೋನುವಿನ ಸುಳ್ಳು ... ೮
೪. ತಪ್ಪಾಗಿ ಬರೆದರೂ ತಪ್ಪು ಮಾಡದ ವಿದ್ಯಾರ್ಥಿ ... ೧೧
೫. ಅಳುವಿನ ಕಾರಣ ... ೧೩
೬. ಮದುವೆಯಾಟ ... ೧೬
೭. ಸಾಯೋ ಆಟ ... ೧೯
೮. ಕಾಗದದ ಬಾಣ ... ೨೩
೯. ಮುಟ್ಟುವ ಆಟ ... ೨೭
೧೦. ಮಾಂಸ ತಿಂದು ಗಟ್ಟಿಯಾಗಿ ... ೩೩
೧೧. ಮಾಂಸ ತಿಂದ ಮೋಹನದಾಸ ! ... ೩೭
೧೨. ಬಂಗಾರದ ಕಡಗ ... ೪೧
೧೩. ಅಪರಾಧ ಮತ್ತು ಶಿಕ್ಷೆ ... ೪೫
೧೪. ಕಡಲು ದಾಟಿದರೆ ಬಹಿಷ್ಕಾರ ... ೫೦
೧೫. ಸ್ನೇಹದ ಕಡಲಲ್ಲಿ ... ೫೫
೧೬. ಸೊಗಸುಗಾರ ಪುಟ್ಸಾಮಿ ... ೫೯
೧೭. ಊಟದ ಬ್ಯಾರಿಸ್ಟರ್ ... ೬೫

## ಗಾಂಧಿ


೧೮. ಕೆಲಸ ಖಾಲಿ ಇದೆ ... ೭೧

೧೯. ತಲೆಗೊಂದು ಮುಂಡಾಸು ... ೭೯

೨೦. ಕೂಲಿ ಬ್ಯಾರಿಸ್ಟರ್–೧ ... ೮೪

೨೧. ಕೂಲಿ ಬ್ಯಾರಿಸ್ಟರ್–೨ ... ೯೦

೨೨. ಹೋರಾಟದ ಸಾವಿರ ದಿನಗಳು ... ೯೫

೨೩. ಯೇಸುಕ್ರಿಸ್ತ ಇಳಿಸಿದ ಬಾವುಟ ... ೧೦೧

೨೪. ನಡುರಾತ್ರಿಯಲ್ಲಿ ಹಗಲು ವೇಷ ... ೧೦೭

೨೫. ನಗುವಿನ ಕಾರಣ – ೧ ... ೧೧೧

೨೬. ನಗುವಿನ ಕಾರಣ – ೨ ... ೧೧೫

೨೭. ಕಟ್ಟ ಕಡೆಯವನಿಗೆ ನ್ಯಾಯ ... ೧೧೮

೨೮. ಹಣ್ಣಿನ ತೋಟದಲ್ಲಿ ... ೧೨೩

೨೯. ಮುನಿದರೆ ನಾರಿ ... ೧೨೭


## ಬಾಪು


೩೦. ಮರಳಿ ಮಣ್ಣಿಗೆ ... ೧೩೩

೩೧. ಗಾಂಧೀಜಿಯ ಕುಂಭಮೇಳ ... ೧೩೯

೩೨. ಸತ್ಯಾಗ್ರಹ ಆಶ್ರಮ ... ೧೪೪

೩೩. ನೀಲಿ ಸತ್ಯಾಗ್ರಹ ... ೧೪೮

೩೪. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ... ೧೫೨

೩೫. ಕಟ್ಟುವೆವು ನಾವು ... ೧೫೬

೩೬. ಬರಿಮೈ ತಣ್ಣಗೆ... ... ೧೫೯

೩೭. ರಾಗಿಕುಮೇರಿನ ಬಾವಿ ... ೧೬೪

೩೮. ಭೂಪಟಕ್ಕೆ ಮಸಿಯಲ್ಲಿ ಗೆರೆ ಎಳೆದರು ... ೧೬೮

೩೯. ವಿಭಜನೆಯ ಶಾಪ ... ೧೭೧

೪೦. ಮಹಾತ್ಮನ ಮನಸು ... ೧೭೭

೪೧. ಯುಗಪುರುಷನ ಯುಗಳ ... ೧೮೨



ಪಾಪು

# ಮೋನುವಿನ ಉಪವಾಸ

ರಾತ್ರಿಯಿಡೀ ಮಳೆ ಸುರಿಯುತ್ತಿತ್ತು. ಮಾಡಿನ ಮೇಲೇ 'ಧೋ' ಎಂದು ಒಂದೇ ಸವನೆ ಸುರಿಯುತಿದ್ದ ಮಳೆಯ ಸದ್ದಿನಿಂದಾಗಿ ಮೋನುಪಾಪುವಿಗೆ ಬೆಳಗ್ಗೆ ಬೇಗನೆ ಎಚ್ಚರವಾಯಿತು. ಕಿಟಿಕಿಯ ಕಂಡಿಯಿಂದ ನೀರ ಹನಿಗಳು ಒಳಗೆ ಚಿಮ್ಮಿ ಬರುತ್ತಿದ್ದವು. ಮೋನುಪಾಪುವಿಗೆ ಬಹಳ ಖುಷಿಯಾಯಿತು. ಪಕ್ಕದಲ್ಲಿ ಹಾಸಿದ್ದ ಅಮ್ಮನ ಹಾಸಿಗೆ ಖಾಲಿಯಾಗಿತ್ತು. ಅಮ್ಮ ಅಡುಗೆ ಮನೆಯಲ್ಲಿದ್ದಿರಬಹುದು.

ಮೋನುಪಾಪು ಹಾಸಿಗೆಯಿಂದ ಎದ್ದು ಸದ್ದಾಗದಂತೆ, ದೊಡ್ಡ ಪಡಸಾಲೆ ಹಾದು, ಮೆಲ್ಲನೆ ನಡೆದು ಅಡುಗೆ ಮನೆಯ ಬಾಗಿಲ ಬಳಿ ನಿಂತನು. ರಂಭತ್ತೆಯ ಬೆನ್ನು ಕಾಣಿಸಿತು. ಅವಳು ಮೋನುಪಾಪುವಿನ ಅಮ್ಮನ ಜತೆ ಚಪಾತಿ ಲಟ್ಟಿಸುವುದರಲ್ಲಿ ಮುಳುಗಿ ಹೋಗಿದ್ದಳು. ಅಣ್ಣಂದಿರು ಯಾರೂ ಕಾಣಿಸಲಿಲ್ಲ. ರಲಿತಕ್ಕ ಇಷ್ಟು ಹೊತ್ತಿನಲ್ಲಿ ಹಿತ್ತಲ ಬಚ್ಚಲುಮನೆಯಲ್ಲಿ ಒಲೆಗೆ ಬೆಂಕಿ ಹಾಕುತ್ತಿರುತ್ತಾಳೆಂಬುದು ಮೋನುಪಾಪುವಿಗೆ ಗೊತ್ತಿತ್ತು. ಯಾರಿಗೂ ಗೊತ್ತಾಗ ದಂತೆ ಎರಡನೆಯ ಸಣ್ಣ ಪಡಸಾಲೆ ದಾಟಿ ಮನೆಯ ಮುಂಬಾಗಿಲು ತೆರೆದನು.

ದೊಡ್ಡ ಮನೆಯ ಮೂರನೇ ಮಹಡಿಯ ಮೇಲೆ ಬೀಳುತ್ತಿದ್ದ ಮಳೆ ನೀರು, ಮಾಡಿನಿಂದ ಜಾರುತ್ತಾ ಅಂಗಳಕ್ಕೆ ಬೀಳುವಾಗ ಹೆಚ್ಚು ಸದ್ದು ಮಾಡುತ್ತಿತ್ತು. ಆದ್ದರಿಂದ, ಬಾಗಿಲು 'ಕಿರ್' ಎಂದು ಕಿರುಚಿದ್ದು ಒಳಗೆ ಕೆಲಸ ಮಾಡುತ್ತಿರುವ ರಂಭತ್ತೆಗೆ ಕೇಳಿಸಲು ಸಾಧ್ಯವಿದ್ದಿರಲಿಲ್ಲ.

ಹೊಸ್ತಿಲು ದಾಟಿ ಹೊರಗೆ ಕಾಲಿಟ್ಟನು. ಮಳೆಯ ಹನಿಗಳು ಮೂಗಿನ ಮೇಲೆ ಬಿದ್ದಾಗ ಕಚಗುಳಿ ಯಿಟ್ಟಂತಾಯಿತು. ಜಗಲಿಯ ಮೂಲೆಯಲ್ಲಿ ನಿಂತ ಮೋನುಪಾಪು, ಮಾಡಿನಿಂದ ಜಾರಿ ಸುರಿಯುವ ಮಳೆನೀರಿಗೆ ಕೈಚಾಚಿ ಪುಟ್ಟ ಬೊಗಸೆಯಲ್ಲಿ ತುಂಬಿದ ನೀರಹನಿಗಳನ್ನು ಕುಡಿದನು. ಮಳೆಯ ನೀರು ಕುಡಿಯುವುದೆಂದರೆ ಮೋನುಪಾಪುವಿಗೆ ತುಂಬಾ ಇಷ್ಟ. ಆದರೆ ರಂಭತ್ತೆಯದೇ ಭಯ.

ಮೋನುಪಾಪು ನೀರಿನಲ್ಲಿ ಆಟವಾಡುತ್ತಿರುವುದು ರಂಭತ್ತೆಯ ಕಣ್ಣಿಗೇನಾದರೂ ಬಿತ್ತು ಅಂದರೆ ಅಲ್ಲಿಗೆ ಮುಗಿಯಿತು. ಮೋನುಪಾಪುವಿನ ರಟ್ಟೆ ಹಿಡಿದು ದರದರನೆ ಎಳೆದುಕೊಂಡು ಒಳಕೋಣೆಗೆ ಹೋಗಿ, ಅವನ ಒದ್ದೆಯಾಗಿದ್ದ ಕೈಕಾಲುಗಳನ್ನು ಬಟ್ಟೆಯಲ್ಲಿ ಒರಸಿ ಮಂಚದ ಮೇಲೆ ಮಲಗಿಸಿ ಬಾಗಿಲು ಮುಚ್ಚಿ, ಹೊರಗಿನಿಂದ ಚಿಲಕ ಹಾಕಿಬಿಡುತ್ತಿದ್ದಳು.

ಅಮ್ಮ ತುಂಬಾ ಸಲ ಮೋನುಪಾಪುವಿಗೆ ಹೇಳಿದ್ದರು. 'ಮಳೆ ಬರುವಾಗ ಅಂಗಳಕ್ಕೆ ಹೋಗಬಾರದು ಪಾಪೂ. ಮಳೆನೀರು ಕುಡಿದರೆ ಜ್ವರ ಬರುತ್ತದೆ, ಕೆಮ್ಮು ಕೂಡಾ ಬರುತ್ತದೆ. ಆ ನಂತರ ಇಂಗ್ಲಿಷ್ ಡಾಕ್ಟರ್ ಬಂದು ಸೂಜಿ ಚುಚ್ಚುತ್ತಾರೆ ನೋಡು.'

ಆದರೆ, ಕಳೆದ ಸಲ ರಲಿತಕ್ಕನಿಗೆ ಜ್ವರ ಬಂದಿದ್ದಾಗ ಸೂಜಿ ಚುಚ್ಚುವ ಇಂಗ್ಲಿಷ್ ಡಾಕ್ಟರನ್ನು ಕರೆಸಿದ್ದಿರಲಿಲ್ಲ. ಆಗ ಅಪ್ಪ ಕರೆಸಿಕೊಂಡಿದ್ದ ಕೊಳಕಾದ ಧೋತಿಯ ಉರುಟು ಕನ್ನಡಕದ ಪಂಡಿತಪ್ಪನಿಗೆ ಸೂಜಿ ಚುಚ್ಚಲು ಗೊತ್ತಿಲ್ಲವೆಂದು ಕಾಣುತ್ತದೆ. ಗಾಜಿನ ಬಾಟಲಿಯಲ್ಲಿ ತುಂಬಿಸಿದ ಕೆಂಪು ಬಣ್ಣದ ಕಷಾಯವನ್ನು ಲೋಟೆಗೆ ಸುರಿದು ಕುಡಿಯುವಾಗ ಕಹಿಯಾಗುವುದಾದರೂ, ಸೂಜಿಯ ನೋವು ಆಗುವುದಿಲ್ಲ ಎಂದು ರಲಿತಕ್ಕ ಹೇಳಿದ್ದಳು.

ಆದರೆ, ಮೋನುಪಾಪುವಿಗೆ ಅಥವಾ ಪಾಪುವಿನ ದೊಡ್ಡಣ್ಣ ಕಾಲ(ಲಕ್ಷ್ಮೀದಾಸ್), ಅಥವಾ ಸಣ್ಣಣ್ಣ ಕರ್ಸನಿಯಾ (ಕೃಷ್ಣದಾಸ್) ಹುಷಾರಿಲ್ಲದೆ ಮಲಗಿದ್ದರೆ ಅಪ್ಪ ಹೇಳಿ ಕಳುಹಿಸುತ್ತಿದ್ದದ್ದು ಬೂಡ್ಸ್ ಹಾಕಿಕೊಂಡೇ ಒಳಗೆ ಬರುವ ಕೆಂಪು ಮೂಗಿನ ಇಂಗ್ಲಿಷ್ ಡಾಕ್ಟರರಿಗೆ.

ಅವರು ಬರುತ್ತಿದ್ದಂತೆಯೇ 'ಹೆಲ್ಲೋ ಮಿಸ್ಟರ್ ಗಾಂಡಿ' ಎನ್ನುತ್ತಾ ಮೋನುಪಾಪುವಿನ ತಂದೆಯ ಕೈ ಕುಲುಕಿ ನಗುತ್ತಿದ್ದರು. ಕರಮ್‌ಚಂದ್ ಗಾಂಧಿಯವರು ಆ ದಿನಗಳಲ್ಲಿ ಪೋರ್‌ಬಂದರಿನ ದಿವಾನರಾಗಿದ್ದುದರಿಂದ, ಡಾಕ್ಟರಿಗೆ ಅವರ ಬಗ್ಗೆ ಅಭಿಮಾನವಿತ್ತು. ಕರಮಚಂದ್ ಗಾಂಧಿಯವರು ಆಡಳಿತದ ವ್ಯವಹಾರಗಳಲ್ಲಿ ತುಂಬಾ ಶಿಸ್ತುಬದ್ಧರೂ, ಸತ್ಯ ಮತ್ತು ನ್ಯಾಯವನ್ನು ತಮ್ಮ ಕೆಲಸ ಕಾರ್ಯಗಳಲ್ಲಿ ಸರಿಯಾಗಿ ಪಾಲಿಸುವವರೆಂಬುದೂ ಆ ಕೆಂಪು ಮೂಗಿನ ಇಂಗ್ಲಿಷ್ ಡಾಕ್ಟರಿಗೆ ಗೊತ್ತಿತ್ತು.

ಮೋನುಪಾಪುವಿಗೆ ಕಳೆದ ಸಲ ಹೊಟ್ಟೆನೋವು ಬಂದಿದ್ದಾಗಲೂ ಅದೇ ಡಾಕ್ಟರು ಬಂದಿದ್ದರು. ಡಾಕ್ಟರು ಬಂದ ಕೂಡಲೇ ಒಳಗಿನಿಂದ ಬಿಸಿನೀರು ತರಬೇಕೆಂಬುದು ರಂಭತ್ತೆಗೆ ಗೊತ್ತಿತ್ತು. ಆದರೆ ಹೊಟ್ಟೆ ನೋವಿಗೆಂದು ಔಷಧಿ ನೀಡಲು ಬಂದಿದ್ದ ಡಾಕ್ಟರು, ಪಾಪುವಿನ ಹೊಟ್ಟೆಯನ್ನು ಪರೀಕ್ಷೆ ಮಾಡದೆ, ಬಲಗೈ ಹಿಡಿದುಕೊಂಡು ಸ್ವಲ್ಪ ಹೊತ್ತು ಹಾಗೆಯೇ ನಿಂತದ್ದನ್ನು ಕಂಡು ರಂಭತ್ತೆಗೆ ಅಚ್ಚರಿಯಾಗಿತ್ತು.

ಪಾಪುವಿಗೆ ನೋವು ಇರುವುದು ಕೈಯಲ್ಲಿ ಅಲ್ಲ, ಅವನಿಗೆ ಹೊಟ್ಟೆನೋವು ಎಂದು ಹೇಳುವುದು ಯಾವ ಭಾಷೆಯಲ್ಲಿ ಎಂದು ರಂಭತ್ತೆ ಯೋಚಿಸುತ್ತಿದ್ದಂತೆ, ಆ ಡಾಕ್ಟರು ಬಿಸಿನೀರಿನಲ್ಲಿ ಮುಳುಗಿಸಿದ ಸೂಜಿಯನ್ನು ಎತ್ತಿಕೊಂಡು ಪಾಪುವಿನ ಚಡ್ಡಿ ಜಾರಿಸಿ ಕುಂಡೆಗೆ ಚುಚ್ಚಿ ಹೊರಟೇ ಹೋಗಿದ್ದರು.

ಆದರೆ, ಹೊರಗೆ ಮಳೆ ಶುರುವಾಯಿತು ಎಂದರೆ ಆ ಪುಟ್ಟ ಮೋನುಪಾಪುವಿಗೆ ಡಾಕ್ಟರು ಮತ್ತು ಅವರ ಸೂಜಿ ಎಲ್ಲವೂ ಮರೆತು ಹೋಗುತ್ತಿತ್ತು. ಬೆಳಗಿನ ಹೊತ್ತು ಪೂಜೆ ಮುಗಿಸದೆ ಅಮ್ಮ ಹೊರಗೆ ಅಂಗಳಕ್ಕೆ ಕಾಲಿಡುವುದಿಲ್ಲವೆಂಬುದು ಮೋನುಪಾಪುವಿಗೆ ಗೊತ್ತಿತ್ತು. ಅವನಿಗೆ ರಂಭತ್ತೆಯದೇ ಭಯ. ರಂಭತ್ತೆ ಯಾವಾಗ ಹೊರಗೆ ಬರುತ್ತಾರೆ, ಯಾವಾಗ ಒಳಗೆ ಹೋಗುತ್ತಾರೆ ಎಂಬುದನ್ನು ಹೇಳಲು ಸಾಧ್ಯವಿದ್ದಿರಲಿಲ್ಲ. ಅದಕ್ಕಾಗಿ, ಸದ್ದಿಲ್ಲದೆ ಒಳಗಡೆ ಹೋಗಿ ನೋಡಿಕೊಂಡೇ ಬಂದಿದ್ದನು. ರಂಭತ್ತೆ ಅಡುಗೆ ಮನೆಯಲ್ಲಿ ಅಮ್ಮನ ಜತೆ ಬೆಳಗಿನ ತಿಂಡಿ ಮಾಡುವ ಕೆಲಸದಲ್ಲಿ ಮುಳುಗಿದ್ದರು.

ಮೋನುಪಾಪು ಮುಂಬಾಗಿಲು ದಾಟಿ ಜಗಲಿಗೆ ಕಾಲಿಟ್ಟಿದ್ದನು. ಅದು ಯಾರು ಹೋಗಿ ಚಾಡಿ ಹೇಳಿದರೋ. ರಂಭತ್ತೆ ಹೊರಗೆ ಬಂದೇ ಬಿಟ್ಟಿದ್ದರು. ಚಪಾತಿಯ ಹಿಟ್ಟು ಮೆತ್ತಿಕೊಂಡಿದ್ದ ಕೈಗಳಲ್ಲೇ ಮೋನುಪಾಪುವಿನ ರಟ್ಟೆ ಹಿಡಿದು ಎತ್ತಿಕೊಂಡು ಒಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದರು.

ಒಳ ಬಾಗಿಲ ಹತ್ತಿರ ನಿಂತಿದ್ದ ರಲಿತಕ್ಕ ಮುಸಿ ಮುಸಿ ನಗುತ್ತಿದ್ದದ್ದು ಮೋನುಪಾಪುವಿನ ಪುಟ್ಟ ಕಣ್ಣುಗಳಿಗೆ ಕಾಣಿಸಿತ್ತು. ರಲಿತಕ್ಕ ಚಾಡಿ ಹೇಳಿದ್ದು ಗೊತ್ತಾಗಿಬಿಟ್ಟಿತ್ತು. ಮೋನುಪಾಪು ಆಗೇನೂ ಅಳಲಿಲ್ಲ. ಜಗಳ ಮಾಡಲಿಲ್ಲ. ಅವನು ಯಾವಾಗಲೂ ಹಾಗೆಯೇ.

ಸುಮ್ಮನೆ ನಿಂತು ಅಕ್ಕನನ್ನು ದುರುಗುಟ್ಟಿ ನೋಡಿದನು; ಅಷ್ಟೇ. ಆದರೆ, ಸಂಜೆಯ ಹೊತ್ತು ರಂಭತ್ತೆ ಹಿತ್ತಾಳೆಯ ಲೋಟದಲ್ಲಿ ಹಾಲು ತುಂಬಿಸಿಕೊಂಡು 'ಕುಡಿಯೋ ಕಂದಾ', ಎನ್ನುತ್ತಾ ಹತ್ತಿರ ಬಂದಾಗ, ಮೋನುಪಾಪು ಅವರ ಕೈಗೆ ಸಿಗದೆ, ದೂರ ಓಡುವ ಮೂಲಕ ತನ್ನ ಕೋಪವನ್ನು ತೋರಿಸಿಬಿಟ್ಟನು.

ಪಾಪುವಿನ ಕೋಪದ ಕಾರಣ ರಂಭತ್ತೆಗೆ ಗೊತ್ತಿತ್ತು. ಅವರು ಪಾಪುವನ್ನು ಹಿಂಬಾಲಿಸಿಕೊಂಡು ಮನೆತುಂಬಾ ಓಡಾಡಿ, ಕೊನೆಗೂ ಹಿಡಿದುಕೊಂಡು ಎಷ್ಟೇ ರಮಿಸಿದರೂ ಪಾಪು ಹಾಲು ಕುಡಿಯಲು ಒಪ್ಪಲಿಲ್ಲ.

ರಂಭತ್ತೆಗೆ ಬೇರೆ ಕೆಲಸಗಳು ತುಂಬಾ ಇರುವುದರಿಂದ ಸಿಟ್ಟು ಬರುವುದು ಬೇಗ.

ಮೋನುಪಾಪುವನ್ನು ಹಿಡಿದು ತನ್ನ ಮಡಿಲಲ್ಲಿ ಮಲಗಿಸಿ, ಹಿತ್ತಾಳೆಯ ಲೋಟೆಯನ್ನು ಅವನ ಬಾಯಿಗೆ ಬಲವಂತವಾಗಿ ಒತ್ತಿ ಹಿಡಿದು ತುಟಿ ತೆರೆಯುವಂತೆ ಒತ್ತಾಯಿಸಿದ್ದಳು. ಆದರೆ ಮೋನುಪಾಪು ಸುಲಭದಲ್ಲಿ ಸೋಲಲಿಲ್ಲ. ತುಟಿಯನ್ನು ತೆರೆದಂತೆ ಮಾಡಿ ಹಲ್ಲುಗಳನ್ನು ಗಟ್ಟಿಯಾಗಿ ಅವುಚಿಕೊಂಡನು. ಇದರಿಂದಾಗಿ ಕುಡಿಸಿದ ಹಾಲು ಗಲ್ಲದ ಮೂಲಕ ಹೊರಗೆ ಹರಿದು ರಂಭತ್ತೆಯ ಸೀರೆಯ ಮೇಲೆ ಬಿತ್ತು. ರಂಭತ್ತೆಗೆ ಆಗ ಬಹಳ ಕೋಪ ಬಂದಿತ್ತು. ಅಲ್ಲಿಂದಲೇ ಕೂಗಿ ಮೋನುಪಾಪುವಿನ ತಾಯಿಗೆ ದೂರು ನೀಡಿದ್ದಳು.

ಅಮ್ಮ ಹೊರಬರುವ ಸೀರೆಯ ಸದ್ದು ಕೇಳಿಸಿದಾಗ ಮೋನುಪಾಪು, ರಂಭತ್ತೆಯ ತೊಡೆಯ ಮೇಲೆ ತಲೆಯಿರಿಸಿ ಕಣ್ಣು ಮುಚ್ಚಿ ನಿದ್ರೆ ಮಾಡುತ್ತಿರುವವನಂತೆ ಮಲಗಿಬಿಟ್ಟನು.

ಮೋನುಪಾಪುವಿನ ನಿದ್ರೆಯ ನಾಟಕ ಕಂಡು ಇಬ್ಬರೂ ನಕ್ಕುಬಿಟ್ಟರು. ಆದರೆ ಪಾಪು ಹಾಲು ಕುಡಿಯದೆ ಇರುವುದು ಅವರಿಗೆ ಹೆದರಿಕೆಯನ್ನುಂಟು ಮಾಡಿತು. ಮೋನುಪಾಪು ಯಾವಾಗಲೂ ಹಾಗೆಯೇ ಎಂಬುದು ಅವರಿಬ್ಬರಿಗೂ ತಿಳಿದಿತ್ತು.

ತನ್ನ ಇಷ್ಟದಂತೆ ನಡೆಯದಾಗ ಮೋನುಪಾಪು ಎಂದೂ ಅಳುತ್ತಿರಲಿಲ್ಲ; ಚೀರಾಡಿ ಗಲಾಟೆ ಮಾಡುತ್ತಿರಲಿಲ್ಲ. ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಆದರೆ, ಎಷ್ಟೇ ರಮಿಸಿದರೂ, ರೊಟ್ಟಿ ತಿನ್ನದೆ, ಹಾಲು ಕುಡಿಯದೆ, ಆ ದಿನವಿಡೀ ಉಪವಾಸ ಇದ್ದುಬಿಡುತ್ತಿದ್ದನು.

# ಗಟ್ಟಿ ಹಾಡಿದವರಿಗೆ ಹೆಚ್ಚು ಕಾಸು

ಮೋನುಪಾಪುವಿನ ತಾಯಿಯ ಹೆಸರು ಪುತಲೀಬಾಯಿ. ಅವರು ಬಾಲ್ಯದಲ್ಲಿ ಕ್ರಮಬದ್ಧವಾಗಿ ಶಾಲೆಗೆ ಸೇರಿ, ಪಾಠ ಪುಸ್ತಕ ಓದಿ, ಪರೀಕ್ಷೆ ಬರೆದು ಪಾಸಾಗಿ ವಿದ್ಯೆ ಕಲಿತವರಲ್ಲ. ಅವರ ಮನೆಯೇ ಅವರಿಗೆ ಪಾಠಶಾಲೆಯಾಗಿತ್ತು; ಅವರ ತಾಯಿ ತಂದೆಗಳೇ ಅವರಿಗೆ ಗುರುಗಳಾಗಿದ್ದರು. ಯಾವಾಗಲೂ ದೇವರ ಧ್ಯಾನ, ಪೂಜೆಗಳಲ್ಲೇ ಸಮಯವನ್ನು ಕಳೆಯುತ್ತಿದ್ದ ಅಮ್ಮನ ಬಗ್ಗೆ ಮೋನುಪಾಪುವಿಗೆ ತುಂಬಾ ಪ್ರೀತಿ. ಪ್ರತಿದಿನವೂ ಅಮ್ಮನ ಜತೆಗೆ ದೇವಸ್ಥಾನಕ್ಕೆ ಹೋಗುವುದನ್ನು ಮೋನುಪಾಪು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ.

ಅಕ್ಟೋಬರ ತಿಂಗಳಿನ ಎರಡನೆಯ ತಾರೀಕು ಬಂದಿತು. ಇಂದು ಮೋನುಪಾಪುವಿನ ನಾಲ್ಕನೆಯ ಹುಟ್ಟಿದಹಬ್ಬ. ಇನ್ನು ಮುಂದೆ ಮೋನುಪಾಪು ಅಮ್ಮನ ಜತೆ ದೇವಸ್ಥಾನಕ್ಕೆ ಹೋಗುವಾಗ, ರಂಭತ್ತೆ ಅವನನ್ನು ಎತ್ತಿಕೊಂಡು ನಡೆಯಬೇಕಾಗಿಲ್ಲ. ಅವನೀಗ ಅಮ್ಮನಷ್ಟೇ ಜೋರಾಗಿ ನಡೆಯಲು ಕಲಿತಿದ್ದಾನೆ. ಮಾತ್ರವಲ್ಲ, ಕೆಲವೊಮ್ಮೆ ಅಮ್ಮ ಮತ್ತು ರಂಭತ್ತೆ ಬೇಡ ಬೇಡವೆಂದರೂ ಅವರಿಬ್ಬರ ಕೈತಪ್ಪಿಸಿ ವೇಗವಾಗಿ ಓಡಿ ಹೋಗಿ ದೇವಸ್ಥಾನದ ಬಾಗಿಲಲ್ಲಿ ನಿಂತು, ತಾನೇ ಗೆದ್ದೆ ಎಂಬಂತೆ ಕೈಗಳನ್ನು ಮೇಲಕ್ಕೂ ಕೆಳಕ್ಕೂ ಆಡಿಸುತ್ತಾ ರಂಭತ್ತೆಯನ್ನು ಅಣಕಿಸುವಷ್ಟು ದೊಡ್ಡವನಾಗಿದ್ದಾನೆ.

ದೇವಸ್ಥಾನದ ಎದುರು ಯಾವಾಗಲೂ ಭಿಕ್ಷುಕರ ದಂಡು ಸೇರಿರುತ್ತಿತ್ತು. ಎರಡು ಸಾಲುಗಳಲ್ಲಿ ಕುಳಿತುಕೊಂಡು 'ಅಮ್ಮಾ.... ತಾಯೀ....' ಒಂದು ಕಾಸು ದಾನ ಮಾಡಿ ಪುಣ್ಯ ಕಟ್ಟಿ ಕೊಳ್ಳೀ....' ಎಂದು ಹೇಳುತ್ತಾ ಅವರು ಭಿಕ್ಷೆ ಬೇಡುತ್ತಿರುವುದನ್ನು ಮೋನುಪಾಪು ಕುತೂಹಲದಿಂದ ನೋಡುತ್ತಿದ್ದನು.

ಕೆಲವು ಭಿಕ್ಷುಕರು 'ಮೀರಾ ಭಜನೆಗಳನ್ನು' ರಾಗವಾಗಿ ಹಾಡುತ್ತಿದ್ದರು. ಭಿಕ್ಷುಕರ ಎದುರು ಹಾಸಿರುತ್ತಿದ್ದ ಬಟ್ಟೆಗಳ ಮೇಲೆ ದೇವಸ್ಥಾನಕ್ಕೆ ಬಂದವರು ಕಾಸು ಎಸೆಯುತ್ತಿದ್ದರು. ಒಳ್ಳೆಯ ಕಂಠವಿರುವ ಭಿಕ್ಷುಕರ ಎದುರು ಕೆಲವರು ಗುಂಪಾಗಿ ನಿಂತು, ಭಿಕ್ಷುಕರಿಂದ ಹೆಚ್ಚು ಹೆಚ್ಚು ಹಾಡುಗಳನ್ನು ಹಾಡಿಸಿ ಹೆಚ್ಚು ಕಾಸು ಕೊಡುತ್ತಿದ್ದರು.

ರಂಭತ್ತೆಗೆ ಮೀರಾ ಭಜನೆಗಳೆಂದರೆ ಬಹು ಇಷ್ಟ. ಮೋನುಪಾಪುವಿನ ಅಮ್ಮನಿಗೂ ಅದು ಅಷ್ಟೇ ಇಷ್ಟ. ಆದರೆ ಅವರು ಊರ ದಿವಾನರ ಹೆಂಡತಿಯಾಗಿರುವುದರಿಂದ ಅವರಿಗೆ ಇತರ ಗಂಡಸರ ನಡುವೆ ರಸ್ತೆಯಲ್ಲಿ ನಿಂತು, ಭಿಕ್ಷುಕರ ಹಾಡು ಆಲಿಸಲು ಮುಜುಗರವಾಗುತ್ತಿತ್ತು. ಆದ್ದರಿಂದ ಅವರು ದೇವಸ್ಥಾನದ ಹೊರಗಿನ ಅರಳಿ ಮರದ ಕಟ್ಟೆಯಲ್ಲಿ ರಂಭತ್ತೆ ಬರುವ ವರೆಗೆ ಸುಮ್ಮನೆ ಕುಳಿತುಕೊಳ್ಳುತ್ತಿದ್ದರು. ಆದರೆ ಮೋನುಪಾಪು ರಂಭತ್ತೆಯ ಜತೆಯಲ್ಲೇ ಹಾದಿ ಬದಿಯಲ್ಲಿ ನಿಂತು ಹಾಡು ಆಲಿಸಲು ಅವರ ಅಡ್ಡಿಯಿರಲಿಲ್ಲ. ಹಾಡು ಮುಗಿದ ಬಳಿಕ ಎಲ್ಲರೂ ಕಾಸು ಎಸೆಯುವುದನ್ನು ನೋಡುತ್ತಿದ್ದ ಮೋನುಪಾಪುವಿಗೆ ರಂಭತ್ತೆ ಹಾಗೆ ಮಾಡದಿರುವುದನ್ನು ಕಂಡು ತುಂಬಾ ನಿರಾಸೆಯಾಗುತ್ತಿತ್ತು.

'ನೀನೇಕೆ ದುಡ್ಡು ಎಸೆಯುವುದಿಲ್ಲ' ಎಂದು ಮೋನುಪಾಪು ಪ್ರಶ್ನಿಸಿದರೆ, ರಂಭತ್ತೆ ನಗುತ್ತಾ, 'ದುಡ್ಡು ಎಸೆಯುವುದು ಗಂಡಸರ ಕೆಲಸ. ನೀನು ಬೆಳೆದು ದೊಡ್ಡವನಾಗಿ ಗಂಡಸಾದ ನಂತರ, ನೀನೂ ದುಡ್ಡು ಎಸೆಯುವಿಯಂತೆ' ಎಂದು ಸಮಾಧಾನ ಹೇಳುತ್ತಿದ್ದರು. ತಾನು ದೊಡ್ಡವನಾಗುವವರೆಗೆ ಈ ಭಿಕ್ಷುಕರು ಹಾಡುತ್ತಲೇ ಇರುತ್ತಾರೆಂದು ಮೋನುಪಾಪುವಿಗೆ ನಂಬಿಕೆಯಿರಲಿಲ್ಲ. 'ಇವರಲ್ಲದಿದ್ದರೆ ಬೇರೆಯವರಿರುತ್ತಾರೆ, ಈಗ ಬಾ' ಎಂದು ಸಮಾಧಾನ ಹೇಳಿ ಮೋನುಪಾಪುವನ್ನು ಹೊರಡಿಸುವಷ್ಟರಲ್ಲಿ ರಂಭತ್ತೆಗೆ ಸಾಕು ಸಾಕಾಗುತ್ತಿತ್ತು.

ಮನೆಗೆ ಮರಳುವ ದಾರಿಯಲ್ಲಿ ರಂಭತ್ತೆ ನಡೆದುದನ್ನೆಲ್ಲ ಮೋನುಪಾಪುವಿನ ತಾಯಿಗೆ ವಿವರಿಸಿ ಹೇಳುತ್ತಿದ್ದಳು. ಮಗನ ಪ್ರಶ್ನೆಗಳನ್ನು ಕೇಳಿ ತಾಯಿ ನಗುತ್ತಿದ್ದರೆ, ಮೋನುಪಾಪು ಬೇರೆಯೇ ಯೋಚನೆಯಲ್ಲಿ ಮುಳುಗಿರುತ್ತಿದ್ದನು.

ತಾನು ದೊಡ್ಡವನಾದಾಗ ಬೇರೆ ಭಿಕ್ಷುಕರಿರುತ್ತಾರೆಂದು ರಂಭತ್ತೆ ಹೇಳಿದ ಮಾತು ಅವನಿಗೆ ಪೂರ್ತಿಯಾಗಿ ಅರ್ಥವಾಗಿರಲಿಲ್ಲ. ಪ್ರತಿಯೊಂದು ರಾತ್ರಿ ಮಲಗುವ ಹೊತ್ತಿನಲ್ಲಿ ರಂಭತ್ತೆ ಹಾಲು ಕುಡಿಸಲೆಂದು ಹಿತ್ತಾಳೆಯ ಲೋಟ ಹಿಡಿದುಕೊಂಡು ಬರುತ್ತಿದ್ದಳಲ್ಲವೇ? ಆಗ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳುತ್ತ, ಉತ್ತರ ಕೊಡದಿದ್ದರೆ ಹಾಲು ಕುಡಿಯುವುದಿಲ್ಲ ಎಂದು ಮೋನುಪಾಪು ಹಠ ಹಿಡಿಯುತ್ತಿದ್ದನು. ಆಗ ರಂಭತ್ತೆಗೆ ಭಯವಾಗುತ್ತಿತ್ತು.

ಅವನ ಪ್ರಶ್ನೆಗಳಿಗೆ ಉತ್ತರ ಕೊಡದೇ ಇದ್ದರೆ ಮೋನುಪಾಪು ಹಟದಿಂದ ಉಪವಾಸ ಮಲಗಿಬಿಡುತ್ತಾನೆಂಬುದು ಅವರಿಗೆ ಗೊತ್ತಿತ್ತು.

ಬೇರೆ ಭಿಕ್ಷುಕರೆಂದರೆ ಯಾರು? ಈ ಭಿಕ್ಷುಕರ ಮಕ್ಕಳೇ ಅಥವಾ ಬೇರೆ ಊರಿನಿಂದ ಬರುವವರೆ? ಬೇರೆ ಊರಿಂದ ಇಲ್ಲೇಕೆ ಬರುತ್ತಾರೆ? ಅವರಿಗೆ ಅವರ ಊರಿನಲ್ಲಿ ಮನೆಯಿಲ್ಲವೆ? ಹಾಗಾದರೆ, ರಂಭತ್ತೆ ಹೇಳುವ ಬೇರೆ ಮಕ್ಕಳೆಂದರೆ ಈ ಭಿಕ್ಷುಕರ ಮಕ್ಕಳೇ ಇರಬಹುದು. ಅಂದ ಮೇಲೆ ಭಿಕ್ಷುಕರ ಮಕ್ಕಳು ಭಿಕ್ಷೆ ಬೇಡಲೇ ಬೇಕೇ? ಅವರೆಲ್ಲ ತನ್ನ ಅಣ್ಣಂದಿರ ಹಾಗೆ ಶಾಲೆಗೆ ಹೋಗುವುದಿಲ್ಲವೆ?

ಕೆಲವೊಮ್ಮೆ ಮನೆಯಲ್ಲಿ ವಿಶೇಷ ಪೂಜೆಯಿದ್ದರೆ ಅದನ್ನು ಮಾಡಲು ಪಂಡಿತರೊಬ್ಬರು ಬರುತ್ತಿದ್ದರು. ಪಂಡಿತರು ರಾಗವಾಗಿ ಕೀರ್ತನೆ ಹಾಡಿದ ಬಳಿಕ ಪೂಜೆ ಮುಗಿಸಿ ಹೊರಡುವಾಗ ಅವರಿಗೂ ಮನೆಯಲ್ಲಿ ಕಾಸು ಕೊಡುತ್ತಿದ್ದರು. ಕೆಲವು ದಿನಗಳ ಹಿಂದೆ ಮೋನುಪಾಪುವಿಗೆ 'ಅಮ್ಮ' ಖಾಯಿಲೆಯಿಂದಾಗಿ, ದೇಹದ ಮೇಲೆಲ್ಲ ಬೊಕ್ಕೆಗಳೆದ್ದು ಎರಡು ವಾರ ಮನೆಯ ಒಳ ಕೋಣೆಯಲ್ಲಿ ಮಲಗಿಕೊಂಡೇ ಇದ್ದನು. ಖಾಯಿಲೆ ವಾಸಿಯಾದ ಬಳಿಕ ಮನೆಯಲ್ಲಿ ವಿಶೇಷ ಪೂಜೆ ನಡೆಸಿದ್ದರು. ಆ ದಿನ ಪೂಜೆ ಮುಗಿಸಿದ ಪಂಡಿತರು ಹೊರಡುವಾಗ, ಮೋನುಪಾಪುವಿನ ಕೈಯಲ್ಲಿ ಎರಡು ನಾಣ್ಯಗಳನ್ನು ಇರಿಸಿದ್ದ ತಂದೆಯವರು, 'ಪಂಡಿತರಿಗೆ ದಾನ ಕೊಡು' ಎಂದು ಹೇಳಿ ಅವನ ಕೈಯಿಂದಲೇ ನಾಣ್ಯ ಕೊಡಿಸಿದ್ದರು.

ಹಾಗಾದರೆ ಪಂಡಿತರಾದವರು ಕೂಡಾ ಭಿಕ್ಷೆ ಬೇಡಬಹುದೇ? ಮುಂದೆ ಅವರ ಮಕ್ಕಳೂ ಹಾಗೆಯೇ ಭಿಕ್ಷೆ ಬೇಡುತ್ತಾರೆಯೇ? ರಂಭತ್ತೆ ನೀಡುವ ಹಾರಿಕೆಯ ಉತ್ತರಗಳಿಂದ ಮೋನು ಪಾಪುವಿಗೆ ಸಮಾಧಾನವಾಗುತ್ತಿರಲಿಲ್ಲ.

ಅವನು ರಾತ್ರಿ ಮಲಗುವ ಹೊತ್ತಲ್ಲಿ ತಾಯಿಯ ಜತೆಗೂ ಅದೇ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳುತ್ತಿದ್ದನು. ತಾಯಿ ಮಾತ್ರ, 'ಹಾಗೆಲ್ಲ ಮಾತನಾಡಬಾರದು ಪಾಪೂ. ದೊಡ್ಡವನಾದ ಬಳಿಕ ಇದೆಲ್ಲ ನಿನಗೆ ತನ್ನಿಂದ ತಾನೇ ತಿಳಿಯುತ್ತದೆ. ಈಗ ನಿದ್ರೆ ಮಾಡು' ಎಂದು ಹೇಳಿ ಮಾತು ಮುಗಿಸುತ್ತಿದ್ದರು. ಆದರೆ ಮೋನುಪಾಪು ತನ್ನ ಹಠವನ್ನು ನಿಲ್ಲಿಸುತ್ತಿರಲಿಲ್ಲ. ಪ್ರತಿಸಲ ದೇವಸ್ಥಾನಕ್ಕೆ ಹೋಗುವಾಗಲೂ ಭಿಕ್ಷುಕರಿಗೆ ದಾನ ನೀಡಲು ಒಂದು ಕಾಸಿನಂತೆ ಕೊಡುತ್ತೇನೆಂದು ತಾಯಿ ಭಾಷೆ ಕೊಟ್ಟ ನಂತರವಷ್ಟೇ ಮೋನುಪಾಪು ಪ್ರಶ್ನೆ ಕೇಳುವುದನ್ನು ನಿಲ್ಲಿಸಿದ್ದು.

ಅನಂತರದ ದಿನಗಳಲ್ಲಿ ಮೋನುಪಾಪು ಉತ್ಸಾಹದಿಂದ ದೇವಸ್ಥಾನಕ್ಕೆ ಹೋಗಿ, ಅಲ್ಲಿ ರಂಭತ್ತೆಯ ಜತೆ ನಿಂತು ಭಿಕ್ಷುಕರು ಹಾಡುವುದನ್ನು ಸ್ವಲ್ಪ ಹೊತ್ತು ಆಲಿಸುವುದು ದಿನಚರಿಯೇ ಅಯಿತು. ಯಾರು ಹೆಚ್ಚು ಗಟ್ಟಿಯಾಗಿ ಹಾಡುತ್ತಾರೋ ಆ ಭಿಕ್ಷುಕನಿಗೆ ಮೋನುಪಾಪುವಿನ ಒಂದು ಕಾಸು ಸಿಗುತ್ತಿತ್ತು.

ಕೆಲವೇ ದಿನಗಳೊಳಗೆ ಈ ಗುಟ್ಟು ಭಿಕ್ಷುಕರೆಲ್ಲರಿಗೆ ಗೊತ್ತಾಗಿ ಹೋಗಿತ್ತು. ಆದ್ದರಿಂದ, ಮೋನುಪಾಪು ರಂಭತ್ತೆಯ ಜತೆಗೆ ಬರುವುದನ್ನು ಕಂಡರೆ ಸಾಕು; ಪ್ರತಿಯೊಬ್ಬ ಭಿಕ್ಷುಕನೂ ಉಳಿದವರಿಗಿಂತ ಹೆಚ್ಚು ಜೋರಾಗಿ ಹಾಡಿ, ಅವನ ಗಮನ ಸೆಳೆಯಲು ಯತ್ನಿಸುತ್ತಿದ್ದನು.

ತಾನು ದೊಡ್ಡವನಾಗಿ ದುಡ್ಡು ಗಳಿಸಿದಮೆಲೆ ಎಲ್ಲ ಭಿಕ್ಷುಕರಿಗೂ, ಅವರು ಗಟ್ಟಿಯಾಗಿ ಹಾಡದಿದ್ದರೂ, ಕಾಸು ಕೊಡಬೇಕೆಂದು ಮೋನುಪಾಪು ನಿರ್ಧರಿಸಿಬಿಟ್ಟಿದ್ದನು.

## ಮೋನುವಿನ ಸುಳ್ಳು

ಪುತಲೀಬಾಯಿಯುವರು ತಮ್ಮ ತಾಯಿಯ ಮನೆಯಲ್ಲಿ ನಡೆದುಕೊಂಡು ಬಂದಿದ್ದ ಸಂಪ್ರದಾಯಗಳಲ್ಲಿ ಬಹಳ ನಂಬಿಕೆಯುಳ್ಳವರಾಗಿದ್ದರು. ಪ್ರತಿ ವರ್ಷ ಬೇಸಿಗೆ ಕಳೆದು, ಬರುವ ಮಳೆಗಾಲದ 'ಚಾತುರ್ಮಾಸ'ದಲ್ಲಿ ಉಪವಾಸ ವ್ರತವನ್ನು ಬಹಳ ನಿಷ್ಠೆಯಿಂದ ಆಚರಿಸುತ್ತಿದ್ದರು. ತಾವು ಖಾಯಿಲೆ ಬಿದ್ದರೂ, ವ್ರತದ ನಿಯಮದಂತೆ ಸೂರ್ಯೋದಯ ವಾಗುವುದನ್ನು ಕಣ್ಣಾರೆ ನೋಡದೆ ಊಟ ಮಾಡುತ್ತಿರಲಿಲ್ಲ.

ಅಂತಹ ದಿನಗಳಲ್ಲಿ ಅಮ್ಮ ಆದಷ್ಟು ಬೇಗನೆ ಊಟ ಮಾಡಬೇಕೆಂಬುದು ಮೋನುಪಾಪುವಿನ

ಆಸೆಯಾಗಿತ್ತು. ಅದಕ್ಕಾಗಿ ಅವನು ಮನೆಯೆದುರಿನ ಎತ್ತರದ ಗೋಡೆಯನ್ನು ಹತ್ತಿ, ಪೂರ್ವ ದಿಕ್ಕಿನ ಕಡೆಗೆ ಕತ್ತು ಉಬ್ಬಿಸಿ ನಿಂತು, ಸೂರ್ಯೋದಯವಾಗುವುದನ್ನು ಎಲ್ಲರಿಗಿಂತಲೂ ಮುಂಚಿತವಾಗಿ ನೋಡಿ, ಅಲ್ಲಿಂದ ಓಡಿ ಬಂದು ಅಮ್ಮನಿಗೆ ತಿಳಿಸುತ್ತಿದ್ದನು. ಆಗ ಅಮ್ಮ ಹೊರಗೆ ಅಂಗಳಕ್ಕೆ ಕಾಲಿಟ್ಟು, ಪೂರ್ವದಿಕ್ಕಿನಲ್ಲಿ ಕೆಂಪಾದ ಆಕಾಶದಲ್ಲಿ ಮೇಲೇರುತ್ತಿರುವ ಸೂರ್ಯನನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ ಊಟ ಮಾಡಲು ಹೊರಡುವುದನ್ನು ಕಂಡು ಸಂತೋಷ ಪಡುತ್ತಿದ್ದನು.

ಆದರೆ ಕೆಲವೊಮ್ಮೆ ಸೂರ್ಯ ಉದಯಿಸುವ ಸಮಯ ದಾಟಿದ್ದರೂ, ಉದಯಿಸಿದ ಸೂರ್ಯನನ್ನು ಕರಿ ಮೋಡಗಳು ಮರೆಮಾಡಿ ಮೋನುಪಾಪುವಿಗೆ ನಿರಾಸೆಯನ್ನುಂಟುಮಾಡುತ್ತಿದ್ದವು. ಅಂತಹ ದಿನಗಳಲ್ಲಿ ಅಮ್ಮನ ಉಪವಾಸ ವ್ರತವು ಮರುದಿನಕ್ಕೂ ಮುಂದುವರಿಯುವುದನ್ನು ನೋಡಿ ಮೋನುಪಾಪು ಅಸಹಾಯಕನಾಗಿ ಮರುಗುತ್ತಿದ್ದನು.

ಮೋನುಪಾಪುವಿಗೆ ಐದು ವರ್ಷ ತುಂಬಿದ ದಿನ ಅವನಿಗೆ ಅಪ್ಪ ಹೊಸ ಬಟ್ಟೆ ಹೊಲಿಸಿದ್ದರು. ರಂಭತ್ತೆ ಆ ದಿನ ಮನೆಯಲ್ಲಿ ಸಿಹಿಯೂಟದ ಅಡುಗೆ ಮಾಡಿದ್ದಳು. ಮೋನುಪಾಪು ಸಿಹಿಯೂಟಮಾಡಿ ಹೊಸ ಬಟ್ಟೆ ಧರಿಸಲು ಆಸೆಯಿಂದಿದ್ದನು.

ಆದರೆ, ಅಂದಿನ ಬೆಳಗಿನ ಜಾವದಲ್ಲಿ ಬಹಳ ಮಳೆ ಸುರಿಯುತ್ತಿತ್ತು. ಗಾಳಿಯು ರಭಸದಿಂದ ಬೀಸುತ್ತಿತ್ತು. ಸೂರ್ಯೋದಯದ ಸಮಯ ದಾಟಿದ್ದರೂ ದಟ್ಟ ಮೋಡದ ಕಾರಣದಿಂದ ಸೂರ್ಯ ಕಾಣುತ್ತಿರಲಿಲ್ಲ. ಮಬ್ಬು ಬೆಳಕಿನಿಂದಾಗಿ ದೂರದಲ್ಲಿದ್ದ ದೇವಾಲಯದ ಗೋಪುರವು ಕಪ್ಪಾಗಿ ಕಾಣಿಸುತ್ತಿತ್ತು.

ಕಳೆದ ಎರಡು ದಿನಗಳಿಂದಲೂ ಅಮ್ಮ ಜ್ವರದಿಂದ ನರಳುತ್ತ ಒಳಕೋಣೆಯಲ್ಲಿ ಮಲಗಿದ್ದರು. ಆದರೂ ಅಮ್ಮ ವ್ರತದಲ್ಲಿರುವುದರಿಂದ, ಸೂರ್ಯನನ್ನು ನೋಡದೆ ಊಟ ಮಾಡಲು ಒಪ್ಪಲಾರರು ಎಂಬುದು ಮೋನುಪಾಪುವಿಗೆ ತಿಳಿದಿತ್ತು. ಅಮ್ಮ ಉಪವಾಸ ವ್ರತದಲ್ಲಿರುವಾಗ ತಾನೊಬ್ಬನೇ ಸಿಹಿಯೂಟ ಮಾಡುವುದು ಮೋನುಪಾಪುವಿಗೆ ಒಲ್ಲದ ಸಂಗತಿಯಾಗಿತ್ತು. ಅಲ್ಲದೆ ಅಮ್ಮನಿಗೆ ಖಾಯಿಲೆಯಿರುವುದರಿಂದ ಅವರು ಹೊಟ್ಟೆಗೆ ಸ್ವಲ್ಪವಾದರೂ ಆಹಾರ ಸೇವಿಸುವುದು ತೀರ ಅಗತ್ಯವೆಂಬುದಾಗಿ ಹಿಂದಿನ ರಾತ್ರಿ ಬಂದು ಔಷಧಿ ಕೊಟ್ಟಿದ್ದ ಪಂಡಿತರು ಹೇಳಿದ್ದನ್ನು ಅವನು ಸರಿಯಾಗಿ ಕೇಳಿಸಿಕೊಂಡಿದ್ದನು.

ಮೋನುಪಾಪುವಿಗೆ ಗೊತ್ತಿತ್ತು; ಅಮ್ಮ ಊಟ ಮಾಡಬೇಕಾದರೆ ಸೂರ್ಯ ಉದಯಿಸಬೇಕು. ಸೂರ್ಯ ಉದಯಿಸಿರುವದನ್ನು ಕಾಣಬೇಕಾದರೆ ಮಳೆ ನಿಂತು ಮೋಡಗಳು ಕರಗಿ ಹೋಗಬೇಕು. ಆದರೆ ಮಳೆ ನಿಲ್ಲುವ ಯಾವ ಸೂಚನೆಗಳೂ ಇರಲಿಲ್ಲ. ರಲಿತಕ್ಕಳ ಜತೆ ಮೋನು ಪಾಪು ಈ ವಿಷಯವನ್ನು ಚರ್ಚಿಸಿದನು. ಅಮ್ಮ ಊಟ ಮಾಡುವಂತಾಗಲು ಅವರಿಬ್ಬರೂ ಒಂದು ಉಪಾಯ ಮಾಡಲು ನಿರ್ಧರಿಸಿದರು.

ಇಬ್ಬರೂ ಅಂಗಳಕ್ಕೆ ಹೋದರು. ದಟ್ಟ ಮೋಡ ಕವಿದ ಆಕಾಶದಲ್ಲಿ ಸೂರ್ಯ ಕಾಣುವುದಿರಲಿ, ಸೂರ್ಯನ ಕಿರಣಗಳೂ ಕಾಣಿಸುತ್ತಿರಲಿಲ್ಲ. ಆದರೆ, ಮೊದಲೇ ನಿರ್ಧರಿಸಿದಂತೆ ಇಬ್ಬರೂ ಜತೆಯಲ್ಲಿ ಅಂಗಳದಲ್ಲಿ ನಿಂತು, ಒಳಮನೆಯಲ್ಲಿ ಮಲಗಿದ್ದ ಅಮ್ಮನಿಗೆ ಕೇಳಿಸುವಂತೆ ಗಟ್ಟಿಯಾಗಿ 'ಓಹ್! ಸೂರ್ಯ ಕಾಣಿಸಿದ ! ಸೂರ್ಯ ಉದಯಿಸಿದ !' ಎಂದು ಸುಳ್ಳು ಸುಳ್ಳೇ ಕಿರುಚಿದರು. ಹಾಗೆಯೇ ಗಟ್ಟಿಯಾಗಿ ಹೇಳುತ್ತಾ ಒಳಗೆ ಧಾವಿಸಿ ಅಮ್ಮ ಮಲಗಿದ್ದಲ್ಲಿಗೆ ಬಂದು ನಿಂತರು.

ತಾಯಿಗೆ ತಮ್ಮ ಮಕ್ಕಳು ಸುಳ್ಳು ಹೇಳುತ್ತಿದ್ದಾರೆಂಬುದು ಗೊತ್ತಾಗಿತ್ತು. ದಟ್ಟ ಮೋಡ ಕವಿದಿರುವ ಮುಂಜಾನೆಯ ಹೊತ್ತು ಸೂರ್ಯ ಕಾಣುವುದು ಸಾಧ್ಯವೇ ಇಲ್ಲ ಎಂಬುದನ್ನು ಅವರು ಅನುಭವದಿಂದ ಅರಿತಿದ್ದರು. ಮಕ್ಕಳು ಸುಳ್ಳು ಹೇಳುತ್ತಿರುವುದನ್ನು ಕೇಳಿ ಅವರ ಮನಸ್ಸಿಗೆ ಬಹಳ ನೋವು ಉಂಟಾಯಿತು.

ಅಮ್ಮ ಮಲಗಿದಲ್ಲಿಂದಲೇ ತಲೆಯೆತ್ತಿ ತಮ್ಮ ಮಕ್ಕಳಿಬ್ಬರನ್ನೂ ದುರುಗುಟ್ಟಿ ದಿಟ್ಟಿಸುತ್ತಾ 'ನೀವಿಬ್ಬರೂ ಸೂರ್ಯನನ್ನು ಕಂಡದ್ದು ನಿಜವೇನು?' ಎಂದು ಪ್ರಶ್ನಿಸಿದರು. ತಾಯಿಯವರು ಆಹಾರ ಸೇವಿಸುವಂತೆ ಮಾಡುವುದೇ ತಮ್ಮ ಪರಮ ಕರ್ತವ್ಯವೆಂದು ನಿಜವಾಗಿ ನಂಬಿದ್ದ ಇಬ್ಬರು ಮಕ್ಕಳೂ, 'ಹೌದು' ಎನ್ನುವಂತೆ ತಲೆ ಆಡಿಸಿದರು. ಆದರೆ, ಮಕ್ಕಳಿಬ್ಬರ ಸುಳ್ಳಾಟ ತಾಯಿಗೆ ಇಷ್ಟವಾಗಲಿಲ್ಲ.

ಅಮ್ಮ ಹಾಸಿಗೆಯಲ್ಲಿ ಎದ್ದು ಕುಳಿತರು. ತಮ್ಮ ಬಲಗೈಯನ್ನು ಮುಂದಕ್ಕೆ ಚಾಚಿ, 'ನೋಡಿ ಮಕ್ಕಳೇ, ನಾನು ನನ್ನ ಬಲಗೈಯನ್ನು ಹೀಗೆ ಚಾಚಿ ಹಿಡಿದುಕೊಂಡು ಕಣ್ಣು ಮುಚ್ಚಿಕೊಳ್ಳುತ್ತೇನೆ. ಸೂರ್ಯ ಉದಯಿಸಿದ್ದನ್ನು ನೀವು ನೋಡಿದ್ದು ನಿಜವಾಗಿದ್ದರೆ ನನ್ನ ಕೈಯ್ಯನ್ನು ನಿಮ್ಮ ಬಲಗೈಯ್ಯಲ್ಲಿ ಮುಟ್ಟಬೇಕು. ಅಥವಾ ನೀವು ಸೂರ್ಯನನ್ನು ನೋಡದೇ, ನೋಡಿರುವುದಾಗಿ ಸುಳ್ಳು ಹೇಳುತ್ತಿರುವಿರಾದರೆ ನಿಮ್ಮ ಎಡಗೈಯ್ಯಲ್ಲಿ ನನ್ನ ಕೈ ಮುಟ್ಟಬೇಕು. ನೀವು ಬಲಗೈಯ್ಯಲ್ಲಿ ಮುಟ್ಟಿದ್ದೀರೋ ಎಡಗೈಯಿಂದ ಮುಟ್ಟಿದ್ದೀರೋ ಎಂಬುದು ನನಗೆ ಕಾಣಿಸುವುದಿಲ್ಲ. ಅಂತೆಯೇ, ನೀವು ನಿಜ ಹೇಳುತ್ತಿದ್ದೀರೋ ಸುಳ್ಳು ಹೇಳುತ್ತಿದ್ದೀರೋ ಎಂಬುದು ಕಣ್ಣು ಮುಚ್ಚಿಕೊಂಡಿರುವ ನನಗೆ ಕಾಣಿಸುವುದಿಲ್ಲ. ನೀವು ಯಾವ ಕೈ ಬೇಕಾದರೂ ಮುಟ್ಟಬಹುದು.' ಎಂದು ಹೇಳಿ ಕಣ್ಣು ಮುಚ್ಚಿಕೊಂಡರು.

ಇಬ್ಬರು ಮಕ್ಕಳೂ ಪರಸ್ಪರ ಮುಖ ನೋಡಿಕೊಂಡರು. ಇಬ್ಬರು ಮಕ್ಕಳಿಗೂ ತಮ್ಮ ತಪ್ಪಿನ ಅರಿವಾಗಿತ್ತು. ಅಮ್ಮನ ಎದುರು ಸುಳ್ಳು ಹೇಳಿದುದಕ್ಕಾಗಿ ಅವರಿಗೆ ಪಶ್ಚಾತ್ತಾಪ ಉಂಟಾಗಿತ್ತು. ಮೋನುಪಾಪು ತನ್ನ ಪಕ್ಕದಲ್ಲಿ ನಿಂತಿದ್ದ ಅಕ್ಕನ ಮುಖ ನೋಡಿದನು. ಅವಳು ತಪ್ಪು ಮಾಡಿ ಸಿಕ್ಕಿಬಿದ್ದವಳಂತೆ ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿದ್ದಳು. ಮೋನುಪಾಪು ಕೂಡಾ 'ನನ್ನದು ತಪ್ಪಾಯಿತು' ಎನ್ನುವಂತೆ ತಲೆ ತಗ್ಗಿಸಿ ನಿಂತನು. ಅಮ್ಮನ ಹತ್ತಿರ ಹೋಗಲು ಇಬ್ಬರೂ ಭಯಪಟ್ಟರು.

ಬಹಳ ಹೊತ್ತಾದರೂ ತಮ್ಮ ಕೈಯ್ಯನ್ನು ಮಕ್ಕಳಿಬ್ಬರೂ ಮುಟ್ಟದಿದ್ದಾಗ ಅವರಿಬ್ಬರೂ ತಮ್ಮ ತಪ್ಪುಗಳನ್ನು ಒಪ್ಪಿಕೊಂಡಿದ್ದಾರೆ ಎಂಬುದು ಮೋನುಪಾಪುವಿನ ತಾಯಿಗೆ ಅರ್ಥವಾಯಿತು. ಅವಳು ಸಂತೋಷದಿಂದ ಕಣ್ಣು ತೆರೆದಳು. ಇಬ್ಬರನ್ನೂ ಬಳಿಗೆ ಕರೆದು ಅಪ್ಪಿಕೊಂಡು ಮುಗುಳು ನಗು ಸೂಸುತ್ತಾ, 'ಯಾವುದೇ ಕಾರಣಕ್ಕೂ ಸುಳ್ಳು ಹೇಳಬಾರದು ಮಕ್ಕಳೇ. ಅದು ತಪ್ಪು, ನಾನು ಈದಿನ ಊಟ ಮಾಡುವುದು ದೇವರಿಗೆ ಇಷ್ಟವಿದ್ದಿರಲಿಕ್ಕಿಲ್ಲ.' ಎಂದು ಹೇಳಿದಳು.

ಮೋನುಪಾಪು ಅಂದೇ ತನ್ನ ಮನಸ್ಸಿನಲ್ಲಿ ಶಪಥ ಮಾಡಿಬಿಟ್ಟಿದ್ದನು – 'ಎಷ್ಟೇ ಕಷ್ಟ ಎದುರಾದರೂ ಇನ್ನು ಮುಂದೆ ಅಮ್ಮನೊಡನೆ ಸುಳ್ಳು ಹೇಳುವುದಿಲ್ಲ'.

## ತಪ್ಪಾಗಿ ಬರೆದರೂ ತಪ್ಪು ಮಾಡದ ವಿದ್ಯಾರ್ಥಿ

ಮೋನುವಿಗೆ ಈಗ ಆರು ವರ್ಷ. ಅವನ ತಂದೆ ತಾಯಿಗಳು ಶಾಲೆಗೆ ಸೇರಿ ಕಲಿತವರಲ್ಲ ವಾದರೂ ತಮ್ಮ ಮಕ್ಕಳು ಆಧುನಿಕ ಶಿಕ್ಷಣ ಪಡೆಯಬೇಕೆಂಬುದು ಅವರ ಆಸೆಯಾಗಿತ್ತು. ಆದುದರಿಂದ ಮೋನುಪಾಪುವಿಗೆ ಆರು ವರ್ಷ ವಯಸ್ಸಾಗುತ್ತಲೇ ಪೋರ್ ಬಂದರಿನ ಶಾಲೆಗೆ ಸೇರಿಸಿದರು. ಶಾಲೆಯ ದಾಖಲೆಯಲ್ಲಿ ಮೋನುಪಾಪುವಿನ ಪೂರ್ತಿ ಹೆಸರನ್ನು– ಮೋಹನದಾಸ ಕರಮಚಂದ್ ಗಾಂಧಿ – ಎಂದು ಬರೆಸಿದ್ದರು. ಅದರೆ, ಶಾಲೆಯಲ್ಲಿ ಎಲ್ಲರೂ ಅವನನ್ನು ಮೋಹನ ಎಂದೇ ಕರೆಯುತ್ತಿದ್ದರು.

ಮೋಹನನು ಪ್ರತಿ ಮುಂಜಾನೆ ಬೇಗನೆ ಎದ್ದು ಸ್ನಾನ ಮುಗಿಸಿ ದೇವರಿಗೆ ನಮಸ್ಕರಿಸಿ ಶಾಲೆಗೆ ಹೊರಡುತ್ತಿದ್ದನು. ಶಾಲೆಯಲ್ಲಿ ಮುಂದಿನ ಸಾಲಿನ ಬೆಂಚಿನಲ್ಲಿ ಕುಳಿತು ಶಿಕ್ಷಕರು ಹೇಳಿಕೊಡುವ ಪ್ರತಿಯೊಂದು ಪಾಠವನ್ನೂ ಗಮನವಿಟ್ಟು ಆಲಿಸುತ್ತಿದ್ದನು. ತರಗತಿಯಲ್ಲಿ ತಂಟೆ ತಕರಾರು ಮಾಡುವ ಇತರ ಸಹಪಾಠಿಗಳಿಂದ ಮೋಹನನು ದೂರವೇ ಇದ್ದುಬಿಡುತ್ತಿದ್ದನು. ಶಿಕ್ಷಕರಿಗೆ ಬೇರೆ ಬೇರೆ ಹೆಸರುಗಳನ್ನಿಟ್ಟು ತಮಾಶೆ ಮಾಡುವ ಹುಡುಗರ ಬಗ್ಗೆ ಭಯ ಪಡುತ್ತಿದ್ದನು. ತನಗೆ ಗುಣಾಕಾರ ಮತ್ತು ಮಗ್ಗಿ ಬಾಯಿಪಾಟ ಮಾಡುವುದು ಕಷ್ಟವೆಂದು ತಿಳಿದು, ಅದನ್ನು ಸರಿಯಾಗಿ ತಿಳಿಸಿಕೊಡುವಂತೆ ತನ್ನ ಸಹಪಾಠಿಗಳಲ್ಲಿ ಬುದ್ಧಿವಂತರಾದ ಹುಡುಗರನ್ನು ವಿನಂತಿಸುತ್ತಿದ್ದನು.

ಮೋಹನನಿಗೆ ಏಳು ವರ್ಷ ತುಂಬಿದಾಗ, ಅವನ ತಂದೆ ಕರಮಚಂದ್ ಗಾಂಧಿಯವರನ್ನು ದೂರದ ರಾಜಕೋಟೆಯ ರಾಜಸ್ಥಾನಿಕ ನ್ಯಾಯಾಲಯದ ಸದಸ್ಯರನ್ನಾಗಿ ನೇಮಿಸಿ ಬ್ರಿಟಿಷರ ಸರಕಾರವು ಆದೇಶ ಹೊರಡಿಸಿತು. ಮೋಹನನ ಮನೆಯವರೆಲ್ಲರೂ ಪೋರ್ ಬಂದರಿನಿಂದ ರಾಜಕೋಟೆಗೆ ಹೋಗಿ ಮನೆ ಮಾಡಿದರು.

ರಾಜಕೋಟೆಯಲ್ಲಿ ಮೋಹನನು ಹೊಸ ಪ್ರಾಥಮಿಕ ಶಾಲೆಗೆ ಸೇರಿದನು. ಅಲ್ಲಿ ಕೂಡಾ ಅವನು

ತರಗತಿಯಲ್ಲಿ ಎಲ್ಲರಿಗಿಂತ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಯಾಗಿದ್ದಿರಲಿಲ್ಲ. ನಾಚಿಕೆಯ ಸ್ವಭಾವದವನಾಗಿದ್ದುದರಿಂದ ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಒಂಟಿಯಾಗಿ ಕುಳಿತು ಪಾಠ ಪುಸ್ತಕಗಳನ್ನು ಓದುವ ಅಭ್ಯಾಸ ರೂಢಿ ಮಾಡಿಕೊಂಡಿದ್ದನು. ಆದರೆ ತರಗತಿಯಲ್ಲಿ ಶಿಕ್ಷಕರು ಕಲಿಸುವ ಎಲ್ಲ ವಿಷಯಗಳನ್ನೂ ಗಮನವಿಟ್ಟು ಆಲಿಸುವ ತನ್ನ ಅಭ್ಯಾಸವನ್ನು ಮೋಹನನು ಬದಲಿಸಲಿಲ್ಲ. ಆಯಾ ದಿನದ ಪಾಠಗಳನ್ನು ಆಯಾ ದಿನವೇ ಓದಿಕೊಳ್ಳುವು ದರಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ. ಹಾಗಾಗಿ ಅವನಿಗೆ ಪಾಸಾಗಲು ಅಗತ್ಯವಿರುವುದಕ್ಕಿಂತ ಹೆಚ್ಚು ಅಂಕಗಳು ಸುಲಭವಾಗಿಯೇ ಸಿಗುತ್ತಿದ್ದವು. ಮೋಹನನು ಒಂದೊಂದೇ ತರಗತಿಗಳನ್ನು ಪಾಸು ಮಾಡಿಕೊಳ್ಳುತ್ತಾ ಸಾಗಿ ಐದು ವರ್ಷಗಳಲ್ಲಿ, ಪ್ರಾಥಮಿಕ ಶಾಲೆಯ ಕಲಿಕೆ ಮುಗಿಸಿ, ಹತ್ತಿರದಲ್ಲೇ ಇದ್ದ ಪ್ರೌಢಶಾಲೆಗೆ ಸೇರಿದನು.

ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆ ಬಂದಿತು. ಮೋಹನನು ಮೊದಲ ಪರೀಕ್ಷೆಯ ಹಿಂದಿನ ರಾತ್ರಿ ಎಲ್ಲಪಾಠಗಳನ್ನೂ ಚೆನ್ನಾಗಿ ಓದಿಕೊಂಡು ಪರೀಕ್ಷೆ ಶುರುವಾಗುವುದಕ್ಕಿಂತ ಅರ್ಧ ತಾಸು ಮುಂಚಿತವಾಗಿ ಶಾಲೆಗೆ ಹೋಗಿ, ಪರೀಕ್ಷಾ ಕೊಠಡಿಯಲ್ಲಿ ಕುಳಿತುಕೊಂಡಿದ್ದನು.

ಅಂದು ಪರೀಕ್ಷೆ ನಡೆಸುವವರು ತರಗತಿಯಲ್ಲಿ ಕಲಿಸಿದ ಶಿಕ್ಷಕರಾಗಿದ್ದರೂ, ಅದರ ತಪಾಸಣೆ ಗೆಂದು ಶ್ರೀ ಗೈಲ್ಸ್ ಎಂಬ ಬ್ರಿಟಿಷ್ ಶಿಕ್ಷಣಾಧಿಕಾರಿಯವರು ಬಂದಿದ್ದರು. ಆವರು ವಿದ್ಯಾರ್ಥಿಗಳ ಅಕ್ಷರ ಜ್ಞಾನವನ್ನು ಪರಿಶೀಲಿಸುವ ಉದ್ದೇಶದಿಂದ ಐದು ಸರಳವಾದ ಇಂಗ್ಲಿಷ್ ಪದಗಳನ್ನು ಹೇಳಿ, ಅವುಗಳನ್ನು ತಪ್ಪಿಲ್ಲದೆ ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿದರು.

ಮೋಹನನಿಗೆ ಕೆಟಲ್(KETTLE) ಎಂಬ ಇಂಗ್ಲಿಷ್ ಪದವನ್ನು ಸರಿಯಾಗಿ ಬರೆಯಲು ಬರುತ್ತಿದ್ದರೂ, ಗಾಬರಿಯಿಂದ ಬರೆಯುವಾಗ, ಒಂದು ಅಕ್ಷರವನ್ನು ತಪ್ಪಾಗಿ ಬರೆದುಬಿಟ್ಟಿದ್ದನು. ಮೋಹನನು ಪದವೊಂದನ್ನು ತಪ್ಪಾಗಿ ಬರೆದದ್ದು, ಕೊಟಡಿಯಲ್ಲಿ ಮುಂದಕ್ಕೂ ಹಿಂದಕ್ಕೂ ನಡೆದಾಡುತ್ತಿದ್ದ ತರಗತಿಯ ಶಿಕ್ಷಕರ ಕಣ್ಣಿಗೆ ಬಿದ್ದಿತ್ತು.

ಅವರಿಗೆ ತಮ್ಮ ಎಲ್ಲ ವಿದ್ಯಾರ್ಥಿಗಳೂ ಎಲ್ಲಾ ಪದಗಳನ್ನು ತಪ್ಪಿಲ್ಲದೆ ಬರೆದು, ತಪಾಸಣೆಗೆಂದು ಬಂದಿರುವ ಬ್ರಿಟಿಷ್ ಅಧಿಕಾರಿಯವರ ಎದುರು ತಾನೊಬ್ಬ ಉತ್ತಮಶಿಕ್ಷಕನೆಂಬ ಹೆಸರುಗಳಿಸ ಬೇಕೆಂಬ ಆಸೆಯಿತ್ತು. ಆದ್ದರಿಂದ ತರಗತಿಯಲ್ಲಿ ದಡ್ಡರೆಂದು ಗುರುತಿಸಲ್ಪಟ್ಟ ಕೆಲವು ಹುಡುಗರು ಅವರವರ ಪಕ್ಕದಲ್ಲಿ ಕುಳಿತ ಜಾಣ ಹುಡುಗರ ಬರಹವನ್ನು ನೋಡಿ ತಮ್ಮ ತಪ್ಪುಗಳನ್ನು ತಿದ್ದಿಕೊಂಡಿದ್ದನ್ನು ಕಂಡೂ ಕಾಣದವರಂತಿದ್ದರು. ಆದರೆ ಮೋಹನನು ಮಾತ್ರ ಬೇರೆಯವರ ಉತ್ತರ ಪತ್ರಿಕೆ ನೋಡುವ ತಪ್ಪನ್ನು ಮಾಡದೆ ತನಗೆ ತಿಳಿದಷ್ಟನ್ನು ಬರೆದಿದ್ದನು.

ತರಗತಿಯ ಶಿಕ್ಷಕರು ಮೋಹನನ ಬಳಿಗೆ ಬಂದು ನಿಂತರು. ಶ್ರೀ ಗೈಲ್ಸ್ ಅವರ ಗಮನ ಕೊಠಡಿ ಯಿಂದ ಹೊರಗಿದೆ ಎಂಬುದನ್ನು ಖಾತರಿಪಡಿಸಿಕೊಂಡ ಅವರು ತಮ್ಮ ಕಾಲಿನ ಬೆರಳುಗಳ ತುದಿಯಿಂದ ಮೋಹನನ ಕಾಲನ್ನು ತಡವಿದರು. ಅಚ್ಚರಿಯಿಂದ ತನ್ನತ್ತ ನೋಡಿದ ಮೋಹನ

ನಿಗೆ, ಪಕ್ಕದ ಹುಡುಗನ ಬರಹವನ್ನು ನೋಡಿ ತಪ್ಪಾಗಿ ಬರೆದ ಪದವನ್ನು ತಿದ್ದಿಕೊಳ್ಳುವಂತೆ ಕಣ್ಣುಗಳಲ್ಲೇ ಸೂಚಿಸಿದರು. ಆದರೆ, ಪರೀಕ್ಷಾ ಕೊಠಡಿಯಲ್ಲಿ ಶಿಕ್ಷಕರು ಇರುವುದು, ಹಿಂದಕ್ಕೂ ಮುಂದಕ್ಕೂ ನಡೆದಾಡುವುದು, ವಿದ್ಯಾರ್ಥಿಗಳು ಬೇರೆಯವರ ಬರಹ ನೋಡಿ 'ಪ್ರತಿ' ಮಾಡದಂತೆ ನೋಡಿಕೊಳ್ಳಲು ಮಾತ್ರ ಎಂದೇ ತಿಳಿದಿದ್ದ ಮೋಹನನಿಗೆ ಶಿಕ್ಷಕರ ಸೂಚನೆ ಅರ್ಥವಾಗಿರಲೇ ಇಲ್ಲ.

ಇದರಿಂದ ಶಿಕ್ಷಕರಿಗೆ ತುಂಬಾ ಬೇಸರವಾಗಿತ್ತು. ತನ್ನ ಸಲಹೆಯನ್ನು ತಿರಸ್ಕರಿಸಿದ ಮೋಹನನ ಬಗ್ಗೆ ಬಹಳ ಕೋಪ ಬಂದಿತ್ತು. ಪರೀಕ್ಷೆ ಮುಗಿದ ಬಳಿಕ ಮೋಹನನನ್ನು ಕರೆಸಿಕೊಂಡು ಅವನ ಮೂರ್ಖತನವನ್ನು ಅವನಿಗೇ ತಿಳಿಸಲು ಯತ್ನಿಸಿದರು. ಆದರೆ ಮೋಹನನು ತನ್ನ ವರ್ತನೆಯೇ ಸರಿಯಾದದ್ದು ಎಂದು ನಂಬಿದ್ದರಿಂದ ತನ್ನನ್ನು ಸಮರ್ಥಿಸಿಕೊಂಡನು.

ಈ ಘಟನೆಯಿಂದಾಗಿ ಶಿಕ್ಷಕರಿಗೆ ಮೋಹನನ ಬಗ್ಗೆ ಸಿಟ್ಟು ಬಂದಿದ್ದರೂ, ಮೋಹನನಿಗೆ ಮಾತ್ರ ಶಿಕ್ಷಕರ ಮೇಲಿನ ಗೌರವ ಕಡಮೆಯಾಗಲಿಲ್ಲ. ಯಾಕೆಂದರೆ, 'ಹಿರಿಯರ ಒಳ್ಳೆಯ ಗುಣಗಳನ್ನು ಮಾತ್ರ ಕಲಿಯಬೇಕೇ ಹೊರತು, ಅವರ ಗುಣಾವಗುಣಗಳನ್ನು ಪರಿಶೀಲಿಸುವುದು ಕಿರಿಯರಿಗೆ ತಕ್ಕುದಲ್ಲ' ಎಂದು ತಾಯಿ ಹೇಳಿದ ಮಾತನ್ನು ಮೋಹನನು ಚಾಚು ತಪ್ಪದೆ ಪಾಲಿಸುತ್ತಿದ್ದನು.

## ಅಳುವಿನ ಕಾರಣ

ಒಂದು ರವಿವಾರದ ದಿನ, ಮಧ್ಯಾಹ್ನದ ಹೊತ್ತು ಅಂಗಳದಲ್ಲಿ ಒಂಟಿಯಾಗಿ ಕುಳಿತಿದ್ದ ಮೋಹನನು ಕಣ್ಣೀರು ಸುರಿಸುತ್ತಿದ್ದನು. ಅದನ್ನು ನೋಡಿದ ರಲಿತಕ್ಕ, ಮನೆಯೊಳಗೆ ಹೋಗಿ ಅಡುಗೆ ಕೋಣೆಯಲ್ಲಿದ್ದ ತಾಯಿಯನ್ನು ಕರೆದುಕೊಂಡು ಅಂಗಳಕ್ಕೆ ಬಂದಳು.

ಅಂಗಳದ ಮೂಲೆಯಲ್ಲಿ ಮರದ ದಿಮ್ಮಿಯ ಮೇಲೆ ಕುಳಿತು ಆಕಾಶದತ್ತ ಕಣ್ಣು ನೆಟ್ಟಿದ್ದ ಮೋಹನನ ಕೆನ್ನೆಗಳ ಮೇಲೆ ಕಣ್ಣೀರ ಹನಿಗಳನ್ನು ಕಂಡು ಪುತಲೀಬಾಯಿಯವರು ಗಾಬರಿಗೊಂಡರು. ಆತಂಕದಿಂದ ಹತ್ತಿರ ಹೋಗಿ ಅವನ ಹೆಗಲ ಮೇಲೆ ಕೈಯಿರಿಸಿ 'ಏನಾಯಿತು ಮೋನೂ?' ಎಂದು ಪ್ರೀತಿಯಿಂದ ಪ್ರಶ್ನಿಸಿದ್ದರು.

ಯಾವುದೋ ಲೋಕದಲ್ಲಿ ತನ್ನ ಯೋಚನೆಗಳೊಂದಿಗೆ ಮುಳುಗಿ ಹೋಗಿದ್ದ ಮೋಹನನು, ನಿದ್ರೆಯಿಂದ ಎಚ್ಚರಗೊಂಡವನಂತೆ ಅವರತ್ತ ತಿರುಗಿನೋಡಿದನು. ಅಮ್ಮನ ಮುಖದಲ್ಲಿನ ಆತಂಕ ಮಾತ್ರವಲ್ಲ, ಆಕೆಯ ಪಕ್ಕದಲ್ಲಿ ನಿಂತಿದ್ದ ರಲಿತಕ್ಕನ ಮುಖದಲ್ಲೂ ಅವನಿಗೆ ಗಾಬರಿಯ ಚಿಹ್ನೆಗಳು ಕಾಣಿಸಿದ್ದವು. ಅವರಿಬ್ಬರು ತನ್ನನ್ನು ಹಾಗೇಕೆ ದಿಟ್ಟಿಸಿ ನೋಡುತ್ತಿದ್ದಾರೆಂಬುದು ಮೋಹನನಿಗೆ ಅರ್ಥವಾಗಿದ್ದಿರಲಿಲ್ಲ.

'ಯಾಕೆ ಮೋನು ಅಳುತಿದ್ದೀಯಾ? ಏನಾಯಿತು ನಿನಗೆ? ಯಾರಾದರೂ ನಿನಗೆ ಬೇಡದ ಮಾತು ಹೇಳಿದರೇನೂ? ಅಥವಾ ಆರೋಗ್ಯವೇನಾದರೂ ಕೆಟ್ಟಿದೆಯಾ?' ಎಂದು ತಾಯಿಯವರು ಒಂದೇ ಉಸಿರಿನಲ್ಲಿ ಹಲವು ಪ್ರಶ್ನೆಗಳನ್ನು ಕೇಳಿದಾಗ ಮೋಹನನಿಗೆ, ತಾನು ಅಳುತ್ತಿರುವುದನ್ನು ಕಂಡು ರಲಿತಕ್ಕ ಮತ್ತು ಅಮ್ಮ ಹೆದರಿಹೋಗಿದ್ದಾರೆಂಬುದು ಗೊತ್ತಾಯಿತು. ಆದರೆ ತನ್ನ ಅಳುವಿನ ಕಾರಣವನ್ನು ಹೇಳಲು ಅವನಿಗೆ ನಾಚಿಕೆಯಾಗಿತ್ತು.

'ಕಣ್ಣಿಗೆ ಕಸ ಬಿದ್ದಿತ್ತು, ಅದರಿಂದಾಗಿ ಕಣ್ಣಲ್ಲಿ ನೀರು ಬಂದಿತ್ತು' ಎಂದು ಹೇಳಲೇ? ಎಂದುಕೊಂಡನು. ಆದರೆ, ಹಾಗೆ ಹೇಳಿದರೆ, ತಾನು ಯಾವುದೇ ಕಾರಣಕ್ಕೂ ಅಮ್ಮನೊಡನೆ ಸುಳ್ಳು ಹೇಳುವುದಿಲ್ಲವೆಂದು ತನಗೇ ತಾನು ವಿಧಿಸಿಕೊಂಡಿದ್ದ ಪ್ರತಿಜ್ಞೆಗೆ ಕುಂದು ಬಂದಂತಾಗುವುದರಿಂದ, ನಾಲಗೆ ಬಿಗಿ ಹಿಡಿದು ಮೌನವಾಗಿ ಕುಳಿತನು. ಮೋಹನನ ಮೌನವು ತಾಯಿಯ ಭಯವನ್ನು ಹೆಚ್ಚಿಸಿತು. ಮಗನ ಪಕ್ಕದಲ್ಲಿ ಕುಳಿತು, ಅವನ ಬೆನ್ನು ಸವರುತ್ತಾ 'ನನ್ನಲ್ಲಿ ಹೇಳು ಪಾಪೂ, ನೀನು ಹೀಗೆ ಮೌನವಾಗಿ ಒಬ್ಬನೇ ಅಳುವುದರಿಂದ ನಮಗೆಲ್ಲ ಬೇಸರವಾಗುವುದಿಲ್ಲವೇ? ಏನು ಬೇಕು ನಿನಗೇ?' ಎಂದು ಮಮತೆಯಿಂದ ಮೃದುವಾಗಿ ಪ್ರಶ್ನಿಸಿದರು.

ತನ್ನ ಅಳುವಿನ ನಿಜಕಾರಣವನ್ನು ತಿಳಿಸಿದರೆ ಅಮ್ಮನ ಜತೆ ರಲಿತಕ್ಕ ಕೂಡಾ ಪಕಪಕನೆ ನಕ್ಕು ಗೇಲಿ ಮಾಡುವುದು ಖಂಡಿತ ಎಂಬುದು ಅವನಿಗೆ ಗೊತ್ತಿತ್ತು. ಹಾಗೆಂದು ಅಮ್ಮನನ್ನು ಸಮಾಧಾನಪಡಿಸಲು, ನಿಜವನ್ನು ಮರೆಮಾಚಿ ಹೇಳಬಹುದಾದ ಯಾವ ಮಾತುಗಳೂ ಅವನಿಗೆ ಆ ಸಮಯದಲ್ಲಿ ಹೊಳೆದಿದ್ದಿರಲಿಲ್ಲ. ಹಾಗಾಗಿ ತುಟಿ ಬಿಗಿ ಹಿಡಿದು ಮೌನವಾಗಿ ಕುಳಿತುಬಿಟ್ಟಿದ್ದನು.

ಅಂಗಳದಲ್ಲಿ ನಡೆಯುತ್ತಿರುವ ಮಾತುಕತೆಗಳ ಸದ್ದು ಒಳಗೆ ಹಜಾರದಲ್ಲಿ ಕುಳಿತಿದ್ದ ತಂದೆಯವರ ಕಿವಿಗೂ ಬಿದ್ದಿತ್ತು. ಅವರೂ ಕುತೂಹಲಗೊಂಡು ಕುಳಿತಲ್ಲಿಂದ ಎದ್ದು ಹೊರಗೆ ಅಂಗಳಕ್ಕೆ ಬಂದುಬಿಟ್ಟಿದ್ದರು. ಅಪ್ಪನನ್ನು ಕಂಡ ಮೋಹನನಿಗೆ, ತಾನಿನ್ನು ಹೆಚ್ಚು ಹೊತ್ತು ಮೌನವಾಗಿರುವುದು ಸಾಧ್ಯವಿಲ್ಲ ಎಂದು ಖಂಡಿತವಾಗಿತ್ತು. ಬೇರೆ ಉಪಾಯ ಕಾಣದೆ, ಸಂಕೋಚದಿಂದ ನಾಚಿಕೆ ಪಟ್ಟುಕೊಳ್ಳುತ್ತಾ, ತನ್ನ ಅಳುವಿನ ಕಾರಣವನ್ನು ನಿಧಾನವಾಗಿ ವಿವರಿಸತೊಡಗಿದನು:

ನಡೆದದ್ದು ಇಷ್ಟು:

ಹಿಂದಿನ ದಿನ, ಅಂದರೆ ಶನಿವಾರದ ಸಂಜೆ, ಮೋಹನನು ತಂದೆಯವರಿಂದ ಅನುಮತಿ ಪಡೆದು, ಪ್ರಾಥಮಿಕ ಶಾಲೆಯ ಪಕ್ಕದ ಮೈದಾನದಲ್ಲಿ ಕಳೆದೊಂದು ವಾರದಿಂದ ಪ್ರದರ್ಶಿಸಲ್ಪಡುತ್ತಿದ್ದ ನಾಟಕವನ್ನು ನೋಡಲು, ಕೆಲವು ಗೆಳೆಯರ ಜತೆಗೆ ಹೋಗಿದ್ದನು. ಅಂದು ಪ್ರದರ್ಶಿಸಲ್ಪಟ್ಟ ನಾಟಕದ ಹೆಸರು– ಸತ್ಯ ಹರಿಶ್ಚಂದ್ರ.

ಸತ್ಯ ಹರಿಶ್ಚಂದ್ರ ನಾಟಕದ ಕತೆ ಎಲ್ಲರಿಗೂ ಗೊತ್ತು. ಎಂತಹಾ ಕಷ್ಟ ಎದುರಾದರೂ ಸತ್ಯವನ್ನಲ್ಲದೆ

ಬೇರೇನನ್ನೂ ಹೇಳಲಾರ ಎಂಬುದಾಗಿ ಮೂರು ಲೋಕಗಳಲ್ಲೂ ಪ್ರಸಿದ್ಧಿ ಪಡೆದಿರುವ ಮಹಾರಾಜ ಸತ್ಯ ಹರಿಶ್ಚಂದ್ರ. ಇಂತಹ ಮಹಾರಾಜನನ್ನು ಪರೀಕ್ಷೆ ಮಾಡುವ ಉದ್ದೇಶದಿಂದ, ವಿಶ್ವಾಮಿತ್ರನೆಂಬ ಪ್ರಸಿದ್ಧ ಮುನಿಯು ಹರಿಶ್ಚಂದ್ರನಿಗೆ ಬಗೆ ಬಗೆಯಲ್ಲಿ ಹಿಂಸೆ ನೀಡಿ, ಅವನ ಬಾಯಿಯಿಂದ ಸುಳ್ಳನ್ನು ಹೊರಡಿಸಲು ಪ್ರಯತ್ನಿಸುತ್ತಾನೆ. ಆದರೆ ಹರಿಶ್ಚಂದ್ರ ಸುಳ್ಳು ಹೇಳಲು ಒಪ್ಪುವುದಿಲ್ಲ.

ನಿಜವನ್ನೇ ಹೇಳುವ ತನ್ನ ಸತ್ಯನಿಷ್ಠೆಯಿಂದಾಗಿ ಹರಿಶ್ಚಂದ್ರ ಮಹರಾಜ ತನ್ನ ರಾಜ್ಯ, ಬೊಕ್ಕಸ, ಅರಮನೆ, ನಗ ನಾಣ್ಯ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಕೊನೆಗೆ ಸತ್ಯಧರ್ಮದ ಪರಿಪಾಲನೆಗಾಗಿ, ತನ್ನ ಧರ್ಮಪತ್ನಿಯನ್ನೂ ಹರಾಜು ಹಾಕಿ ಮಾರಾಟ ಮಾಡುತ್ತಾನೆ. ಆದರೂ ಹರಿಶ್ಚಂದ್ರ ಮಹಾರಾಜ ತನ್ನ ಸತ್ಯ ಹೇಳುವ ನಿಯಮವನ್ನು ಮುರಿಯುವುದಿಲ್ಲ.

ನಾಟಕದ ಕೊನೆಯ ದೃಶ್ಯಗಳಲ್ಲಿ, ಹಾವು ಕಡಿದು ಸತ್ತುಹೋಗುವ ತನ್ನ ಸ್ವಂತ ಮಗ ಲೋಹಿತಾಶ್ವನ ಶವ ಸಂಸ್ಕಾರವನ್ನು ಮಾಡಲು ಸ್ಮಶಾನಕ್ಕೆ ನೀಡಬೇಕಾದ ಶುಲ್ಕವನ್ನು ನೀಡಲೂ ಹಣವಿಲ್ಲದೆ ಕೊರಗುವ ಪತ್ನಿ ಚಂದ್ರಮತಿಯ ಕೊರಳನ್ನು ಕಡಿಯಲೂ ಹಿಂಜರಿಯುವುದಿಲ್ಲ. ನಾಟಕದುದ್ದಕ್ಕೂ ಹರಿಶ್ಚಂದ್ರನಿಗೆ ವಿಧವಿಧವಾಗಿ ತೊಂದರೆ ನೀಡುವ ನಕ್ಷತ್ರಿಕನ ಪಾತ್ರವಂತೂ ಪ್ರೇಕ್ಷಕರ ತಾಳ್ಮೆಯನ್ನೇ ಪರೀಕ್ಷಿಸುವಂಥದ್ದಾಗಿತ್ತು.

ಮೋಹನನ ಮೃದುವಾದ ಮನಸ್ಸಿಗೆ ನಾಟಕದ ಪ್ರತಿಯೊಂದು ದೃಶ್ಯವೂ ಬಾಣದಂತೆ ಚುಚ್ಚಿ ನೋವನ್ನುಂಟುಮಾಡಿತ್ತು. ನಾಟಕದುದ್ದಕ್ಕೂ ಒಂದರ ಹಿಂದೆ ಮತ್ತೊಂದರಂತೆ ಎದುರಾಗುವ ಕಷ್ಟಗಳನ್ನು ಧೈರ್ಯವಾಗಿ ಎದುರಿಸುವ ಹರಿಶ್ಚಂದ್ರನನ್ನು ಮೆಚ್ಚಿಕೊಳ್ಳುತ್ತಲೇ, ಅವನ ಕಷ್ಟದ ಸಂದರ್ಭಗಳಲ್ಲಿ, ತಾನು ನೋಡುತ್ತಿರುವುದು ಬರಿಯ ನಾಟಕವೆಂಬುದನ್ನೂ ಮರೆತು, ದುಃಖದಿಂದ ಬಿಕ್ಕಳಿಸಿ ಬಿಕ್ಕಳಿಸಿ ಅತ್ತಿದ್ದನು. ತಾನು ಅಳುತ್ತಿರುವುದನ್ನು ನಾಟಕ ನೋಡುತ್ತಿರುವ ಬೇರೆಯವರೇನಾದರೂ ಗಮನಿಸಿದರೆ, ನಕ್ಕು ಗೇಲಿ ಮಾಡಿಯಾರು ಎಂಬ ನಾಚಿಕೆಯಿಂದ, ಆಗಾಗ್ಗೆ ತನ್ನನ್ನು ತಾನೇ ಎಚ್ಚರಿಸಿಕೊಳ್ಳುತ್ತಿದ್ದರೂ, ಮರುನಿಮಿಷದಲ್ಲಿ ನಾಟಕದ ಹೊಸದೊಂದು ದೃಶ್ಯದಲ್ಲಿ ತನಗರಿವಿಲ್ಲದಂತೆ ಮುಳುಗಿ, ತನ್ನನ್ನೆ ತಾನು ಮರೆತು ಬಿಟ್ಟು, ಮತ್ತೆ ಗಳಗಳನೆ ಅತ್ತು ಬಿಟ್ಟಿದ್ದನು.

ನಾಟಕ ಮುಗಿದ ಮೇಲೆ ಮನೆಗೆ ಬರುವ ದಾರಿಯಲ್ಲಿ ಕೂಡಾ ಹರಿಶಂದ್ರನ ಸತ್ಯನಿಷ್ಠೆ ಮೋಹನನ ಬೆನ್ನು ಹಿಡಿದು ಹಿಂಬಾಲಿಸಿತ್ತು. ಕಳೆದ ರಾತ್ರಿ ಊಟ ಮಾಡುವುದು ಕೂಡ ಅವನಿಂದ ಸಾಧ್ಯವಾಗಿದ್ದಿರಲಿಲ್ಲ. ತನಗೆ ಹಸಿವಿಲ್ಲ ಎಂದು ಹೇಳಿ, ನೀರು ಕುಡಿದು ಮಲಗುವ ಕೋಣೆ ಸೇರಿಕೊಂಡಿದ್ದನು. ರಾತ್ರಿ ಕನಸಿನಲ್ಲಿ ಕೂಡ ನಾಟಕದ ದೃಶ್ಯಗಳು ಒಂದೊಂದಾಗಿ ಮರುಕಳಿಸಿ ಗೋಚರಿಸಿದ್ದವು. ತಾನು ಕೂಡ ಹರಿಶ್ಚಂದ್ರನಂತೆ ಸತ್ಯನಿಷ್ಠೆ ವಹಿಸಿದ್ದಂತೆ, ತನಗೂ

ಹರಿಶ್ಚಂದ್ರನಿಗಾದಂತೆ ಕಷ್ಟಗಳ ಸರಮಾಲೆ ಎದುರಾದಂತೆ, ತನಗೂ ಕೊನೆಯಲ್ಲಿ ಹರಿಶ್ಚಂದ್ರನಿಗೆ ಆದ ಹಾಗೆಯೇ ದೇವರ ಸಾಕ್ಷಾತ್ಕಾರವಾದಂತೆ ಕನಸುಗಳು ಬಿದ್ದಿದ್ದವು.

ಮರುದಿನವೂ ನಾಟಕದ ಗುಂಗಿನಲ್ಲೇ ಇದ್ದ ಮೋಹನನು ರಾತ್ರಿಯ ಕನಸುಗಳನ್ನೇ ನೆನಪಿಸಿ ಕೊಳ್ಳುತ್ತ, ತಾನು ಕೂಡಾ ಹರಿಶ್ಚಂದ್ರನಂತೆ ಆಗಬೇಕೆಂದು ಯೋಚಿಸುತ್ತಾ ಅಂಗಳದಲ್ಲಿ ಕುಳಿತಿದ್ದನು. ಆದರೆ ಅವನಿಗೆ ಅರಿವಿಲ್ಲದೆ ಅವನ ಕಣ್ಣುಗಳಿಂದ ಸುರಿದ ಕಣ್ಣೀರನ್ನು ತಪ್ಪಾಗಿ ತಿಳಿದ ರಲಿತಕ್ಕ, ಮನೆಯವರೆಲ್ಲ ಹೊರಗೆ ಬಂದು ಅಳುವ ಮೋಹನನನ್ನು ನೋಡುವಂತೆ ಮಾಡಿಬಿಟ್ಟಿದ್ದಳು.

ಮೋಹನನ ಅಳುವಿನ ಕಾರಣವನ್ನು ತಿಳಿದ ಹಿರಿಯವರೆಲ್ಲ ಅವನ ಬಗ್ಗೆ ಹೆಮ್ಮೆ ಪಟ್ಟರು.

ತಾಯಿಯು ಮಗನ ತಲೆಯನ್ನು ಸಂತೋಷದಿಂದ ಸವರುತ್ತಾ 'ಸತ್ಯ ಹರಿಶ್ಚಂದ್ರನಂತೆ ಆಗುವ ನಿನ್ನ ಆಸೆ ನೆರವೇರಲಿ' ಎಂದು ಪ್ರೀತಿಯಿಂದ ಆಶೀರ್ವಾದ ಮಾಡಿದರು.

## ಮದುವೆಯಾಟ

ಮೋಹನನಿಗೆ ಏಳು ವರ್ಷ ತುಂಬುವ ಮೊದಲೇ ಅವನ ಮನೆಯವರು, ಅವನಿಗೊಬ್ಬಳು ಹುಡುಗಿಯನ್ನು ಆರಿಸಿ, ಮದುವೆ ಮಾಡಿಸಲು ಹುಡುಗಿಯ ಮನೆಯವರ ಜತೆಗೆ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಆ ಹುಡುಗಿಯು ಅನಾರೋಗ್ಯದಿಂದ ತೀರಿಹೋದುದರಿಂದ ಆ ಮದುವೆ ನಿಂತು ಹೋಗಿತ್ತು.

ಅನಂತರ ಅವನ ತಂದೆಯವರು ಮೋಹನನಿಗಾಗಿ ಇನ್ನೊಬ್ಬಳು ಹುಡುಗಿಯನ್ನು ಹುಡುಕಿ ಮದುವೆ ಗೊತ್ತು ಮಾಡಿದ್ದರು. ಆ ಹುಡುಗಿಯೂ ಅನಾರೋಗ್ಯದ ಕಾರಣ ಮರಣ ಹೊಂದಿದ್ದ ರಿಂದಾಗಿ ಆ ಮದುವೆಯೂ ನಿಂತು ಹೋಗಿತ್ತು.

ಹಟ ಬಿಡದ ಕರಮಚಂದ್‌ಗಾಂಧಿಯವರು ಮೂರನೆಯ ಬಾರಿ ಮೋಹನನಿಗೆ ಮದುವೆಗೆಂದು ಮತ್ತೊಬ್ಬಳು ಹುಡುಗಿಯನ್ನು ಗೊತ್ತುಮಾಡಿದ್ದರು. ಅ ಹುಡುಗಿಯೂ ಅದಾವುದೋ ಕಾರಣ ದಿಂದ ತೀರಿಕೊಂಡಾಗ, ಬೇಸರಗೊಂಡ ಅವರು, ಮೋಹನನ ಮದುವೆ ಯೋಚನೆಯನ್ನು ಕೆಲವು ತಿಂಗಳ ಕಾಲ ಮುಂದೂಡಿದ್ದರು.

ಆ ದಿನಗಳಲ್ಲಿ ಪೋರ್ ಬಂದರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾತ್ರವಲ್ಲ, ಭಾರತದ ಬಹುತೇಕ ರಾಜ್ಯಗಳಲ್ಲಿ 'ಬಾಲ್ಯವಿವಾಹ' ವೆಂಬ ಪದ್ಧತಿ ಆಚರಣೆಯಲ್ಲಿತ್ತು. 'ಬಾಲ್ಯವಿವಾಹ' ವೆಂದರೆ ಪ್ರಾಥಮಿಕ ಅಥವಾ ಪ್ರೌಢಶಾಲೆಗೆ ಹೋಗುವ ವಯಸ್ಸಿನ ಸಣ್ಣ ಸಣ್ಣ ಹುಡುಗ

ಹುಡುಗಿಯರಿಗೆ ಮದುವೆ ಮಾಡುವುದು. ಮಕ್ಕಳಿಗೆ ಅವರು ಆಟವಾಡುವ ಸಣ್ಣ ವಯಸ್ಸಿನಲ್ಲೇ ಮದುವೆ ಮಾಡುವುದು ತಮ್ಮ ಕರ್ತವ್ಯ ಎಂಬುದಾಗಿ ನಂಬಿದ್ದ ಹಿರಿಯರು, ಅಂಥ ಮದುವೆಗಳನ್ನು ಬಹಳ ಅದ್ದೂರಿಯಾಗಿಯೇ ಮಾಡುತ್ತಿದ್ದರು.

ಆಗ ದೇಶವನ್ನು ಆಳುತ್ತಿದ್ದ ಬ್ರಿಟಿಷ್ ಸರಕಾರದ ಕಾನೂನುಗಳು ಕೂಡಾ, ಬಾಲ್ಯವಿವಾಹ ಪದ್ಧತಿಯನ್ನು ಅಪರಾಧವೆಂದು ಪರಿಗಣಿಸುತ್ತಿರಲಿಲ್ಲ. ಮಾತ್ರವಲ್ಲದೆ, ದೊಡ್ಡ ದೊಡ್ಡ ಶ್ರೀಮಂತರ ಮನೆಗಳಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹದ ಸಂಭ್ರಮಗಳಲ್ಲಿ ಬ್ರಿಟಿಷ್ ಸರಕಾರದ ಹಿರಿಯ ಅಧಿಕಾರಿಗಳು ಕೂಡಾ ಭಾಗವಹಿಸಿ ಶುಭ ಹಾರೈಸುತ್ತಿದ್ದರು. ಆದ್ದರಿಂದಲೇ ಅಂತಹ ಮದುವೆಗಳಿಗೆ ಸಾಮಾಜಿಕ ಮನ್ನಣೆಯೂ, ಗೌರವವೂ ಇತ್ತು. ಮದುಮಕ್ಕಳ ಮನೆಯವರು, ಅವರ ಸಂಬಂಧಿಕರು, ದೂರದ ನೆಂಟರು, ನೆರೆಕರೆಯವರು, ಊರವರು ಎಲ್ಲರೂ ಒಟ್ಟಾಗಿ 'ಮಕ್ಕಳ ಮದುವೆ'ಯಲ್ಲಿ ಭಾಗವಹಿಸಿ ಸಂತೋಷಪಡುವುದು ಸಾಮಾನ್ಯ ವಿಷಯವಾಗಿತ್ತು.

ಗಾಂಧಿ ಕುಟುಂಬದವರು ಅಷ್ಟೇನೂ ಶ್ರೀಮಂತರಲ್ಲವಾದರೂ ಸಮಾಜದಲ್ಲಿ ಬಹಳ ಗೌರವಸ್ಥರು. ಮೇಲಾಗಿ ಬ್ರಿಟಿಷ್ ಸರಕಾರದಿಂದ ದಿವಾನರೆಂದು ನಿಯುಕ್ತರಾದವರು. ಆದ್ದರಿಂದ ಅವರ ಕುಟುಂಬದಲ್ಲಿ ಬಾಲ್ಯವಿವಾಹ ನಡೆಯುವುದು ಅಸಹಜ ಸಂಗತಿಯೇನೂ ಆಗಿದ್ದಿರಲಿಲ್ಲ.

ಮೋಹನನಿಗೀಗ ಹದಿಮೂರು ವರ್ಷ. ಅವನು ಪ್ರೌಢಶಾಲೆಯ ಮೂರನೆಯ ತರಗತಿಯಲ್ಲಿ (ಈಗಿನ ಎಂಟನೆಯ ತರಗತಿ) ಕಲಿಯುತ್ತಿದ್ದನು. ಆ ದಿನಗಳಲ್ಲಿ ಸಾಮಾಜಿಕ ಬದಲಾವಣೆ ಮಾಡಬಯಸಿದ ಕೆಲವು ಸಮಾಜ ಸುಧಾರಕರು ದೇಶದ ವಿವಿಧ ಪ್ರದೇಶಗಳಲ್ಲಿ ಗುಟ್ಟಾಗಿ ಕೆಲಸ ಮಾಡುತ್ತಿದ್ದಾರೆಂದು, ಶಾಲೆಯ ಮಾಸ್ತರುಗಳ ಮಾತುಕತೆಗಳಿಂದ ಅವನಿಗೆ ಗೊತ್ತಾಗಿತ್ತು.

ಗಂಡನು ತೀರಿಕೊಂಡಾಗ ಪತ್ನಿಯು, ಗಂಡನ ಚಿತೆಗೆ ಹಾರಿ ಸಹಗಮನ ಮಾಡುವ 'ಸತಿ ಪದ್ಧತಿ'ಯನ್ನು ವಿರೋಧಿಸುವ ಪುಸ್ತಕಗಳು, ಮದುವೆಯೆಂದರೆ ಬರಿಯ ಆಟ ಎಂದಷ್ಟೇ ಅರ್ಥವಾಗುವ ಎಳೆಯ ವಯಸ್ಸಿನ ಮಕ್ಕಳಿಗೆ ಅವರ ಇಷ್ಟವನ್ನೂ ವಿಚಾರಿಸದೆ ಮದುವೆ ಮಾಡಿಸುವ ಪದ್ಧತಿಯನ್ನು ತಪ್ಪು ಎಂದು ವಿವರಿಸುವ ಕಿರುಪುಸ್ತಕಗಳನ್ನು, ಕಾಸಿಗೊಂದರಂತೆ ಮಾರಾಟ ಮಾಡುತ್ತಿದ್ದ ಸೂಟುಧಾರಿ ಇಂಗ್ಲಿಷ್ ಶಿಕ್ಷಕರೊಬ್ಬರು ಮೋಹನನು ಕಲಿಯುತ್ತಿದ್ದ ಪ್ರೌಢಶಾಲೆಯಲ್ಲೂ ಇದ್ದರು. ಮೋಹನನಿಗೆ ಅವನ ಮನೆಯವರು ನಡೆಸಿದ್ದ ಮದುವೆ ಪ್ರಯತ್ನಗಳ ಬಗ್ಗೆ ಅರಿವಿದ್ದ ಆ ಶಿಕ್ಷಕರು, ವರುಷದ ಆರಂಭದಲ್ಲಿಯೇ ಮೋಹನದಾಸನಿಗೆ ಅಂತಹ ಎರಡು ಪುಸ್ತಕಗಳನ್ನು ಉಚಿತವಾಗಿ ಕೊಟ್ಟು ಓದುವಂತೆ ಒತ್ತಾಯಿಸಿದ್ದರು.

'ದಾಂಪತ್ಯ ಪ್ರೇಮ ಹಾಗೂ ಸತಿಸಹಗಮನ', 'ಮದುವೆಯೆಂದರೆ ಮಕ್ಕಳಾಟವೇ?' ಎಂಬ ಹೆಸರಿನ ಅ ಎರಡೂ ಸಣ್ಣ ಪುಸ್ತಕಗಳನ್ನು ಮೋಹನನು ಬಹಳ ಆಸಕ್ತಿಯಿಂದ ಓದಿದ್ದನು. ತಾನು ದೊಡ್ಡವನಾದ ಬಳಿಕ ಅಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಬೇಕು ಎಂದು ಯೋಚಿಸಿದ್ದನು.

ಹಾಗೆಂದು, ಒಬ್ಬಳು ಅಪರಿಚಿತ ಹುಡುಗಿಯೊಡನೆ ನಗು, ಆಟ, ಹೊಸಬಟ್ಟೆ, ಬಗೆಬಗೆಯ ತಿಂಡಿತಿನಿಸುಗಳು, ಬ್ಯಾಂಡು ವಾಲಗಗಳ ಸದ್ದು, ಇವೆಲ್ಲವೂ ಮೋಹನನಿಗೆ ಇಷ್ಟವಾಗದ ಸಂಗತಿಗಳೇನೂ ಅಲ್ಲ. ಆದರೆ, ತನ್ನ ಅಭಿಪ್ರಾಯವನ್ನು ವಿಚಾರಿಸದೆಯೇ, ಯಾವಳೋ ಒಬ್ಬಳ ಜತೆಗೆ ಮದುವೆ ಮಾಡಹೊರಟರುವ ತಂದೆ ತಾಯಿಗಳ ಹಟ ಮಾತ್ರ ಅವನಿಗೆ ಇಷ್ಟವಾಗಿದ್ದಿರಲಿಲ್ಲ.

ಇಷ್ಟವಿಲ್ಲದ ಮದುವೆ ತನಗೆ ಬೇಡ ಎಂದು ಹೇಳುವುದಾದರೂ ಯಾರಲ್ಲೀ? ತಂದೆ ತಾಯಿಗಳು ಅದಾಗಲೆ ಎಲ್ಲವನ್ನೂ ನಿರ್ಧರಿಸಿಬಿಟ್ಟಿದ್ದರು. ಮದುಮಗನ ಇಷ್ಟದ ಬಗ್ಗೆ ಯೋಚಿಸಲು ಅವರಿಗೆ ಸಮಯವಿದ್ದಿರಲಿಲ್ಲ. ಅವರ ಯೋಚನೆಯಿದ್ದದ್ದು: ಮದುವೆಯನ್ನು ಎಷ್ಟು ಗಡದ್ದಾಗಿ ನಡೆಸಬೇಕು, ಎಷ್ಟು ಅಂಕಣದ ಚಪ್ಪರ ಹಾಕಬೇಕು, ಎಷ್ಟು ಜನರಿಗೆ ಹೋಳಿಗೆ ಪಾಯಸದೂಟ ಹಾಕಬೇಕು, ವಾಲಗದವರಿಗೆ ಎಷ್ಟು ದುಡ್ಡು ಕೊಡಬೇಕು ಮತ್ತು ಈ ಖರ್ಚುಗಳಲ್ಲಿ ಹುಡುಗಿಯ ತಂದೆ ತಾಯಿಗಳ ಪಾಲು ಎಷ್ಟಿರಬೇಕು, ಎಂಬವುಗಳ ಬಗ್ಗೆ ಮಾತ್ರ.

ಅದಲ್ಲದೆ, ಅವರು ಏಕಕಾಲದಲ್ಲಿ ಮೂರು ಮದುವೆಗಳಿಗೆ ವ್ಯವಸ್ಥೆ ಮಾಡಬೇಕಾಗಿತ್ತು. ಗಾಂಧಿ ಕುಟುಂಬದ ಹಿರಿಯ ಮಗ, ಅಂದರೆ ಮೋಹನನಿಗಿಂತ ಒಂಭತ್ತು ವರ್ಷ ದೊಡ್ಡವನಾಗಿದ್ದ ಹಿರಿಯಣ್ಣ ಲಕ್ಷ್ಮೀದಾಸನಿಗೆ ಅದಾಗಲೇ ಮದುವೆಯಾಗಿತ್ತು. ಮೋಹನನಿಗಿಂತ ಎರಡು ವರ್ಷ ಹಿರಿಯವನಾಗಿದ್ದ, ಆದರೆ ತರಗತಿಯಲ್ಲಿ ಒಂದು ವರ್ಷ ಮುಂದಿದ್ದ ಸಣ್ಣಣ್ಣ ಕರ್ಸನ್ದಾಸನಿಗೆ ಹಾಗೂ ಮೋಹನನಿಗಿಂತ ಒಂದು ವರ್ಷ ಹಿರಿಯವನಾಗಿದ್ದ ನೆಂಟರ ಹುಡುಗ – ಹೀಗೆ ಇವರಿಬ್ಬರಿಗೆ ಮದುವೆ ನಿಶ್ಚಯವಾಗಿತ್ತು. ಅದರ ಜತೆಗೆ, ಮೋಹನನಿಗೂ ಕಸ್ತೂರಿ ಎಂಬ ಹುಡುಗಿಯನ್ನು ಆರಿಸಿ, ಅವಳ ಹಿರಿಯರೊಡನೆ ಒಪ್ಪಂದ ಮುಗಿಸಿ ಮದುವೆ ತಯಾರಿ ನಡೆಸಿದ್ದರು.

ಮೂರೂ ಮದುವೆಗಳನ್ನು ಒಂದೇ ಬಾರಿ ಮುಗಿಸಿದರೆ ಖರ್ಚು ಉಳಿಯುತ್ತದೆ ಎಂಬುದು ಆ ಹಿರಿಯರ ಯೋಚನೆಯಾಗಿತ್ತು. 'ಕಡಮೆ ಖರ್ಚು ಹೆಚ್ಚು ಸಂಭ್ರಮ' ಇದು ಅವರು ಆರಿಸಿಕೊಂಡ ಜಾಣ ಸೂತ್ರ. ವಸ್ತು ಸ್ಥಿತಿ ಹೀಗಿರುವಾಗ, ತನಗೀಗ ಮದುವೆ ಬೇಡವೆಂದು ತನ್ನೊಳಗೇ ಗೊಣಗಾಡುವ ಮೋಹನನ ಚಡಪಡಿಕೆಗಳ ಬಗ್ಗೆ ಗಮನಹರಿಸಲು ಅವರಿಗೆ ಪುರುಸೊತ್ತು ಸಿಗುವುದಾದರೂ ಹೇಗೇ?

ಅಂತೂ, ಹಿರಿಯರೆಲ್ಲ ನಿರ್ಧರಿಸಿದಂತೆ ಮೋಹನನಿಗೆ ಮದುವೆ ಮಾಡಿಯೇ ಬಿಟ್ಟರು. ಸರಿಸುಮಾರು ಮೋಹನನ ವಯಸ್ಸಿನವಳೇ ಆಗಿದ್ದರೂ ಶಾಲೆಯ ಮುಖವನ್ನೇ ಕಂಡಿರದ, ಒಂದಕ್ಷರವನ್ನೂ ಓದಲು ಕಲಿತಿದ್ದಿರದ, ಕಸ್ತೂರಿ ಎಂಬ ಮುದ್ದು ಹುಡುಗಿಯು ಮೋಹನನ ಹೆಂಡತಿಯಾಗಿ ಬಂದಳು.

# ಸಾಯೋ ಆಟ

ಮದುವೆಯ ಕಾರಣದಿಂದ ಮೋಹನದಾಸನ ಶಾಲಾ ಓದಿನ ಒಂದು ವರ್ಷ ಹಾಳಾಗಿತ್ತು. ಆದರೆ ತೀರಾ ಪ್ರತಿಭಾವಂತನಲ್ಲದಿದ್ದರೂ ಕಷ್ಟಪಟ್ಟು ನಿಷ್ಠೆಯಿಂದ ಓದುತ್ತಿರುವ ತಮ್ಮ ನೆಚ್ಚಿನ ಬುದ್ಧಿವಂತ ವಿದ್ಯಾರ್ಥಿಯ ಶಾಲಾವರುಷವೊಂದು, ಮದುವೆಯ ಕಾರಣದಿಂದ ನಷ್ಟವಾಗುವುದು ಅವನ ಶಿಕ್ಷಕರಿಗೆ ಇಷ್ಟವಾಗಿದ್ದಿರಲಿಲ್ಲ.

ಆ ದಿನಗಳಲ್ಲಿ  ಬುದ್ಧಿವಂತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಡಬಲ್ ಪ್ರಮೋಶನ್' ಎಂಬ ವಿಧಾನವನ್ನು ಶಾಲಾನಿಯಮಗಳಲ್ಲಿ ಅಳವಡಿಸಲಾಗುತ್ತಿತ್ತು. ಆ ನಿಯಮದಂತೆ, ಶಾಲಾವರ್ಷದ ಮೊದಲರ್ಧದಲ್ಲಿ ಒಂದು ತರಗತಿಯ ಪಾಠಗಳನ್ನು ಕಲಿತು ಪರೀಕ್ಷೆ ಬರೆದು ಉತ್ತೀರ್ಣನಾಗಬಲ್ಲ ವಿದ್ಯಾರ್ಥಿಯು ಮುಂದಿನ ತರಗತಿಗೆ ಪ್ರವೇಶ ಪಡೆಯುತ್ತಿದ್ದ. ನಂತರ ಅದೇ ಶಾಲಾ ವರ್ಷದ ಉತ್ತರಾರ್ಧದಲ್ಲಿ ಆ ತರಗತಿಯ ಪಾಠಗಳನ್ನು ಓದಿ, ವರುಷಾಂತ್ಯದಲ್ಲಿ ಮತ್ತೊಮ್ಮೆ ಪರೀಕ್ಷೆ ಬರೆದು ಉತ್ತೀರ್ಣನಾಗಿ, ಅದರ ಮುಂದಿನ ತರಗತಿಗೆ ಸೇರುವ ಅವಕಾಶವಿತ್ತು.

ಅಧ್ಯಾಪಕರುಗಳ ಸಲಹೆಯಿಂದ ಉತ್ತೇಜಿತನಾದ ಮೋಹನದಾಸನು ಹಗಲೂ ರಾತ್ರಿ ಕಷ್ಟಪಟ್ಟು ಓದಿ, ಪ್ರೌಢಶಾಲೆಯ ಮೂರನೇ ತರಗತಿಯ(ಈಗಿನ ಎಂಟನೇ ತರಗತಿ) ಓದನ್ನು  ಆರೇ ತಿಂಗಳಲ್ಲಿ ಮುಗಿಸಿ, ಪರೀಕ್ಷೆ ಬರೆದು ಉತ್ತೀರ್ಣನಾಗಿ, 'ಡಬಲ್ ಪ್ರಮೋಶನ್' ಗಳಿಸಿ, ಅದೇ ಶಾಲಾವರ್ಷದ  ಉತ್ತರಾರ್ಧದಲ್ಲಿ ನಾಲ್ಕನೆ (ಈಗಿನ ಒಂಭತ್ತನೆ) ತರಗತಿಯ ವಿದ್ಯಾರ್ಥಿಗಳ ಜತೆ ಕುಳಿತುಕೊಂಡಿದ್ದನು.

ಪ್ರೌಢಶಾಲೆಯ ನಾಲ್ಕನೆ ತರಗತಿಯಲ್ಲಿ ಎಲ್ಲ ಪಾಠಗಳನ್ನೂ ಆಂಗ್ಲ ಮಾಧ್ಯಮದಲ್ಲಿ ಕಲಿಸಲಾಗುತ್ತಿತ್ತು. ಅದರಲ್ಲೂ ಹೊಸ ವಿಷಯವಾಗಿದ್ದ ರೇಖಾಗಣಿತವನ್ನು ಅರ್ಥವಾಗದ  ಇಂಗ್ಲಿಷ್ ಭಾಷೆಯಲ್ಲಿ, ಅದೆಷ್ಟು ಸಲ ಹೇಳಿಕೊಟ್ಟರೂ ಮೋಹನದಾಸನಿಗೆ ಅರ್ಥವಾಗುತ್ತಿರಲಿಲ್ಲ. ರೇಖೆಯ ತಲೆಯೆಲ್ಲಿ, ಬಾಲವೆಲ್ಲಿ ಎಂಬುದೂ ಗೊತ್ತಾಗುತ್ತಿರಲಿಲ್ಲ.

ವರುಷವೊಂದರಲ್ಲಿ ಎರಡು ತರಗತಿಗಳನ್ನು ಹಾರಿಬಂದ ಸಂತೋಷವೆಲ್ಲ ಒಂದೇ ವಾರದಲ್ಲಿ ಕರಗಿ ಹೋಗಿತ್ತು.  ಮತ್ತೆ, ಮೂರನೆಯ ತರಗತಿಗೆ ಹಿಂತಿರುಗಿ ಹೋಗಬೇಕೆಂಬ ಆಸೆಯಾಗಿದ್ದರೂ, ತನ್ನಲ್ಲಿ ನಂಬಿಕೆಯಿಟ್ಟು ಕಲಿಸಿ ಉತ್ತೀರ್ಣನಾಗುವಂತೆ ಪ್ರೋತ್ಸಾಹಿಸಿದ ಗುರುಗಳಿಗೆ ಅವಮಾನ ಮಾಡುವುದು ಒಲ್ಲದ ಸಂಗತಿಯಾಗಿತ್ತು. ಎಷ್ಟೇ ಕಷ್ಟವಾದರೂ ರೇಖಾಗಣಿತವನ್ನೂ, ಜತೆಯಲ್ಲಿ ಅದನ್ನು ಕಲಿಸುತ್ತಿರುವ ಇಂಗ್ಲಿಷ್ ಭಾಷೆಯನ್ನೂ ಸಂಪೂರ್ಣ ಕಲಿಯಲೇಬೇಕೆಂದು ನಿರ್ಧರಿಸಿದ. ಒಮ್ಮೆ ನಿರ್ಧರಿಸಿದ ಬಳಿಕ ಆ ನಿರ್ಧಾರವನ್ನು ಸಾಧ್ಯವಾಗಿಸಲು ಹಗಲೂ ರಾತ್ರಿ ಪುಸ್ತಕಗಳ ಜತೆ ಪ್ರಯತ್ನ ಮುಂದುವರಿಸಿದ. ಒಂದೇ ತಿಂಗಳು; ಯೂಕ್ಲಿಡ್ ನ ಮೂರನೆಯ ಪ್ರಮೇಯ ಓದುವ ಹೊತ್ತಿಗೆ, ರೇಖಾಗಣಿತವು ಸುಲಿದ ಬಾಳೆಯ ಹಣ್ಣಿನಂತೆ ಸಲೀಸಾಗಿ ಅರ್ಥವಾಗುವ ವಿಷಯವಾಗಿಬಿಟ್ಟಿತ್ತು.

ಆದರೆ, ರೇಖಾಗಣಿತವನ್ನು ಕರಗತ ಮಾಡಿಕೊಂಡ ಮೋಹನದಾಸನಿಗೆ ಅಷ್ಟೇ ಸುಲಭವಾಗಿ ನಾಲ್ಕನೇ ತರಗತಿಯಲ್ಲಿ ಕಲಿಸಲು ಆರಂಭಿಸಿದ್ದ ಸಂಸ್ಕೃತ ಭಾಷೆಯನ್ನು ಕಲಿಯಲು ಸಾಧ್ಯವಾಗಲಿಲ್ಲ. ರೇಖಾಗಣಿತವನ್ನು ಕಲಿಯಲು ಸಂಸ್ಕೃತದಂತೆ ಕಂಠಪಾಠ ಮಾಡುವ ಅಗತ್ಯವಿರಲಿಲ್ಲ. ರೇಖಾಗಣಿತ ಅರಗಿಸಿಕೊಳ್ಳಲು ಸ್ವಲ್ಪ ಬುದ್ಧಿವಂತಿಕೆಯಿದ್ದರೆ ಸಾಕು. ಆದರೆ ಸಂಸ್ಕೃತ ಕಲಿಯಲು ಬುದ್ಧಿಶಕ್ತಿಗಿಂತ ಹೆಚ್ಚಾಗಿ ಅಸಾಧಾರಣವಾದ ಸ್ಮರಣಶಕ್ತಿ ಬೇಕಾಗುತ್ತಿತ್ತು.

ಸಂಸ್ಕೃತ ಭಾಷೆಯನ್ನು ಕಲಿಯುವುದೆಂದರೆ ರಾಗವಾಗಿ ಓದಿಕೊಂಡು ಕಂಠಪಾಠ ಮಾಡುವುದು. ಸಂಸ್ಕೃತ ಕಲಿಸುವ ಪಂಡಿತ ಕೃಷ್ಣ ಶಂಕರ ಪಾಂಡೆಯವರು, ಪಕ್ಕದ ತರಗತಿಯಲ್ಲಿ ಪಾರಸಿ ಭಾಷೆಯನ್ನು ಕಲಿಸುವ ಮೌಲ್ವಿಗಳಿಗಿಂತ ಹೆಚ್ಚು ಉತ್ಸಾಹದಿಂದ ಕಲಿಸುತ್ತಿದ್ದಾರೆಂದು ಅನ್ನಿಸಿದ್ದರೂ, ಪಾಂಡೆಯವರು ಕಲಿಸಿದ್ದು ಮರುಕ್ಷಣದಲ್ಲಿ ಮರೆತು ಹೋದಂತಾಗುತ್ತಿತ್ತು.

ವೈಷ್ಣವ ಪಂಥಕ್ಕೆ ಸೇರಿದ್ದ ಮೋಹನದಾಸನು ಪಾರಸಿ ಭಾಷೆ ಕಲಿಯುವುದಕ್ಕಿಂತ ಮುಖ್ಯವಾಗಿ, ದೇವಭಾಷೆಯೆಂದು ನಂಬಲಾಗಿದ್ದ ಸಂಸ್ಕೃತ ಭಾಷೆಯನ್ನು ಕಲಿಯಬೇಕಾದ ಒತ್ತಾಯವೂ ಇತ್ತು. ಕಲಿಯದೇ ಇರುವುದು ಸಾಧ್ಯವೇ ಇಲ್ಲ ಎಂದ ಮೇಲೆ ಕಲಿಯಲೇಬೇಕಲ್ಲವೇ?. ಮೋಹನದಾಸನು ಪ್ರತಿ ಮುಂಜಾನೆ ಅರ್ಧ ತಾಸಿನ ಹೊತ್ತು ಸಂಸ್ಕೃತ ಪಾಠವನ್ನು ಗಮನವಿಟ್ಟು ಓದುತ್ತಾ ಕಂಠಪಾಠ ಮಾಡಿಕೊಳ್ಳತೊಡಗಿನು. ದಿನ ಕಳೆದಂತೆ ಮೋಹನದಾಸನಿಗೆ ಕಂಠಪಾಠ ಮಾಡಿಕೊಳ್ಳುವ ಗುಟ್ಟೂ ಗೊತ್ತಾಗಿಹೋಯಿತು. ಸಂಸ್ಕೃತ ಕಲಿಕೆ ಸರಳವಾಗತೊಡಗಿತು.

ಇದೇ ದಿನಗಳಲ್ಲಿ ಮೋಹನದಾಸನ ಮನೆಯ ಮಹಡಿಯಲ್ಲಿ ಇದ್ದ ಚಿಕ್ಕಪ್ಪನವರಿಗೆ ಸಿಗರೇಟು ಸೇದುವ ಚಟವಿತ್ತು. ಅವರಿಗೆ ಸಿಗರೇಟು ಸೇದಬೇಕೆಂದು ಅನ್ನಿಸಿದಾಗಲೆಲ್ಲ ಅದನ್ನು ಪೇಟೆ ಬೀದಿಯ ಅಂಗಡಿಯೊಂದರಿಂದ ಖರೀದಿಸಿ ತಂದು ಕೊಡುವ ಮೊಹನದಾಸನದೇ ವಯಸ್ಸಿನ ಹುಡುಗನೊಬ್ಬನಿದ್ದ. ಅವನ ಹೆಸರು ಮಾಧವಲಾಲ. ಅವನೂ ಕ್ರಮೇಣ ಕದ್ದು ಮುಚ್ಚಿ ಸಿಗರೇಟು ಸೇದುವ ಅಭ್ಯಾಸ ಮಾಡಿಕೊಂಡಿದ್ದ.

ಇವನ್ನೆಲ್ಲ ಕುತೂಹಲದಿಂದ ಗಮನಿಸುತ್ತಿದ್ದ ಮೋಹನದಾಸನಿಗೆ ತನ್ನ ಚಿಕ್ಕಪ್ಪ ಸೇದುತ್ತಿದ್ದ ಸಿಗರೇಟಿನ ವಾಸನೆ ಇಷ್ಟವಾಗಿರದಿದ್ದರೂ, ಅವರು ಸೇದಿ ಮಹಡಿಯ ಕಿಟಕಿಯಿಂದ ಅಂಗಳಕ್ಕೆ ಎಸೆಯುವ ಸಿಗರೇಟಿನ ತುಂಡುಗಳನ್ನು ಆರಿಸಿ ಜೋಪಾನವಾಗಿಟ್ಟುಕೊಳ್ಳುವ ಮಾಧವಲಾಲನು, ಹಿತ್ತಲಿನ ಬೇವಿನ ಮರದ ಮರೆಯಲ್ಲಿ ಬೆಂಕಿ ಅಂಟಿಸಿ ಬಾಯಿತುಂಬಾ ಹೊಗೆ ತುಂಬಿಸಿಕೊಂಡು, ಮೂಗಿನ ಮೂಲಕ ಹೊರಗೆ ಬಿಡುವುದನ್ನು ನೋಡುವುದು ಬಹಳ ಆಕರ್ಷಕ ನೋಟವಾಗಿತ್ತು.

ಮಾಧವಲಾಲನು ಒಂದು ದಿನ ಮೋಹನದಾಸನಿಗೂ ತಾನು ಸೇದುತ್ತಿರುವ ಸಿಗರೇಟಿನ ರುಚಿ ತೋರಿಸಿದ್ದನು. ಮಾಧವಲಾಲನ ಬಳಿ ಚಿಕ್ಕಪ್ಪ ಸೇದಿ ಎಸೆದ ಸಿಗರೇಟಿನ ಹಲವಾರು ತುಂಡುಗಳಿದ್ದವು. ಅವುಗಳಿಂದ ತುಂಡೊಂದನ್ನು ಆರಿಸಿಕೊಂಡು ಹೆದರುತ್ತಲೇ ಬೆಂಕಿ ಹಚ್ಚಿ,

ಕುತೂಹಲದಿಂದಲೇ ಒಂದುಬಾರಿ ಹೊಗೆ ಸೇದಿದ ಮೋಹನದಾಸನಿಗೆ ಮತ್ತೊಮ್ಮೆ ಸೇದ ಬೇಕೆಂಬ ಆಸೆ ಹುಟ್ಟಿತು. ಇನ್ನೊಂದು ತುಂಡು ಸಿಗರೇಟು ಸೇದಿದ ಬಳಿಕ ಮೋಹನದಾಸನಿಗೆ ಮತ್ತೊಂದು ತುಂಡು ಸಿಗರೇಟು ಬೇಕು ಅನ್ನಿಸಿತ್ತು.

ನಂತರದ ದಿನಗಳಲ್ಲಿ ಚಿಕ್ಕಪ್ಪ ಮಹಡಿಯ ಕಿಟಕಿಯ ಬಳಿ ನಿಂತು ಸಿಗರೇಟು ಹಚ್ಚಿದರೆ ಸಾಕು, ಹುಡುಗರಿಬ್ಬರೂ ಅಂಗಳದ ಮರೆಯಲ್ಲಿ ನಿಂತುಬಿಡುತ್ತಿದ್ದರು. ಚಿಕ್ಕಪ್ಪ ಸೇದಿ ಎಸೆಯುವ ಸಿಗರೇಟಿನ ತುಂಡುಗಳನ್ನು ಯಾರಿಗೂ ಗೊತ್ತಾಗದಂತೆ ಹೆಕ್ಕಿ ಗುಟ್ಟಾಗಿ ಸಂಗ್ರಹ ಮಾಡಿಟ್ಟು ಕೊಳ್ಳುವುದರಲ್ಲಿ ಹುಡುಗರಿಬ್ಬರಿಗೂ ಸ್ಪರ್ಧೆ ನಡೆಯುತ್ತಿತ್ತು.

ಚಿಕ್ಕಪ್ಪ ಕೆಲವುದಿನ ಪರಊರಿಗೆ ಹೋದಾಗ ಹುಡುಗರಿಗೆ ಸಿಗರೇಟಿನ ತುಂಡುಗಳು ಸಿಗುತ್ತಿರಲಿಲ್ಲ. ಹೊಸದಾದ ಸಿಗರೇಟು ಕೊಳ್ಳಲು ಹಣದ ಅಗತ್ಯವಿತ್ತು. ಕೊನೆಗೆ ಬಹಳ ಚಿಂತಿಸಿದ ಇಬ್ಬರು ಹುಡುಗರೂ ಒಂದು ದಿನ ಮನೆಗೆಲಸದವನು ಗೋಡೆಯಲ್ಲಿ ತೂಗುಬಿಟ್ಟಿದ್ದ ಅಂಗಿಯಿಂದ ಎರಡು ನಾಣ್ಯಗಳನ್ನು ಕದ್ದು ಸಿಗರೇಟು ಖರೀದಿಸಿದರು. ಸಿಗರೇಟು ಖರೀದಿಸಿದ ಬಳಿಕ ಅವುಗಳನ್ನು ಯಾರಿಗೂ ಗೊತ್ತಾಗದಂತೆ ಅಡಗಿಸಿಡುವುದೇ ದೊಡ್ಡ ಸಮಸ್ಯೆಯಾಗಿತ್ತು.

ಒಂದೆರಡು ವಾರ ಕಳೆಯುವಷ್ಟರಲ್ಲಿ, ಒಂದು ವಿಶೇಷವಾದ ಗಿಡದ ಕೊಂಬೆಯನ್ನು ಸಿಗರೇಟಿನಂತೆಯೇ ಸೇದಲು ಸಾಧ್ಯವೆಂಬ ಸಲಹೆಯನ್ನು ತರಗತಿಯ ಗೆಳೆಯನೊಬ್ಬ ನೀಡಿದ್ದನು. ಅದನ್ನು, ಅದೇ ಗೆಳೆಯನ ಸಹಾಯದಿಂದ ಕಾಡಿನೊಳಗಿನಿಂದ ಆರಿಸಿ ತಂದು ಬೆಂಕಿ ಹಚ್ಚಿ ಸೇದಿದರು. ಅದರೆ, ಅದರಿಂದ ಯಾವುದೇ ಸಂತೋಷ ಸಿಗುತ್ತಿರಲಿಲ್ಲವಾದ್ದರಿಂದ, ಮತ್ತೆ ಅಂಗಡಿಯಿಂದ ಸಿಗರೇಟು ಖರೀದಿಸುವುದು ಅನಿವಾರ್ಯವಾಯಿತು.

ತನ್ನ ಅಂಗಿಯ ಜೇಬಿನಲ್ಲಿದ್ದ ಹಣ ಕಳವು ಆದ ಬಳಿಕ, ಮನೆಗೆಲಸದವನು ಅಂಗಿ ಜೇಬಿನಲ್ಲಿ ದುಡ್ಡು ಇಟ್ಟು ಗೋಡೆಯಲ್ಲಿ ತೂಗುಹಾಕುವುದನ್ನೇ ನಿಲ್ಲಿಸಿಬಿಟ್ಟಿದ್ದನು. ಸಿಗರೇಟು ಖರೀದಿಸಲು ಅಗತ್ಯವಾಗಿದ್ದ ಹಣಕ್ಕಾಗಿ ಬೇರೆ ದಾರಿ ಹುಡುಕಬೇಕಾಯಿತು. ಆದರೆ ಎಲ್ಲಿಯೂ ಕದ್ದುಕೊಳ್ಳ ಬಹುದಾದ ದುಡ್ಡು ಕಾಣದೇ ಹೋದಾಗ, ತಮ್ಮ ಅಸಹಾಯಕ ಸ್ಥಿತಿಗೆ ಇಬ್ಬರೂ ಬಹಳ ಬೇಸರಗೊಂಡರು.

ಇಬ್ಬರಿಗೂ ಇದ್ದಕ್ಕಿದ್ದಂತೆ ತಾವು ನಿಷ್ಪ್ರಯೋಜಕರು ಎಂಬ ಯೋಚನೆ ಬಂದಿತ್ತು. ಸ್ವಂತವಾಗಿ ಒಂದು ಕಾಸು ಕೂಡಾ ಸಂಪಾದಿಸಲು ಸಾಧ್ಯವಾಗದ ತಮ್ಮ ಬಾಲ್ಯದ ಬದುಕೇ ವ್ಯರ್ಥ ಎಂದು ಭಾವಿಸಿದ್ದರು. ಪ್ರತಿಯೊಂದು ಸಂಗತಿಗಳಿಗೂ ಹಿರಿಯರ ಅನುಮತಿ ಪಡೆಯಬೇಕಾದ, ಬಯಸಿದ ಯಾವ ವಸ್ತುವನ್ನು ಪಡೆಯಲೂ ಹಿರಿಯರ ಎದುರು ಹಲ್ಲು ಗಿಂಜಿ ಬೇಡಬೇಕಾದ ತಮ್ಮಂತಹ ಬಾಲಕರ ಬದುಕೇ ಅಸಹ್ಯವಾದದ್ದು ಎಂದು ಯೋಚಿಸಿದರು. ಕೆಲವುದಿನಗಳ ಕಾಲ ಈ ಬಗ್ಗೆ ಪರಸ್ಪರ ಚರ್ಚಿಸಿದ ಬಳಿಕ, ಪರಾವಲಂಬನೆಯ ಬದುಕಿಗಿಂತ ಆತ್ಮಹತ್ಯೆ ಮಾಡಿ ಕೊಂಡು ಸತ್ತು ಹೋಗುವುದೇ ಒಳ್ಳೆಯದು ಎಂದು ನಿಶ್ಚಯಿಸಿಬಿಟ್ಟಿದ್ದರು.

ಆದರೆ ಸಾಯುವ ವಿಧಾನದ ಬಗ್ಗೆ ಅವರಲ್ಲಿ ಒಮ್ಮತವಿರಲಿಲ್ಲ. ನೇಣು ಹಾಕಿಕೊಂಡು ಸಾಯುವುದು ಬಹಳ ನೋವಿನ ವಿಧಾನವೆಂಬುದಾಗಿ ಮೋಹನದಾಸನು ವಿವರಿಸಿದರೆ, ವಿಷ ಸೇವಿಸಿದರೆ ಅದಕ್ಕಿಂತಲೂ ಹೆಚ್ಚು ನೋವಿನಿಂದ ನರಳಬೇಕಾಗುತ್ತದೆ ಎಂಬುದು ಮಾಧವಲಾಲನ ಅಭಿಪ್ರಾಯವಾಗಿತ್ತು. ಆದರೆ ಕೊನೆಗೆ ಮೋಹನದಾಸನ ಹಟವೇ ಗೆದ್ದಿತ್ತು. ಇಬ್ಬರೂ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುವುದೆಂದು ನಿರ್ಧಾರ ಮಾಡಿದರು.

ಆದರೆ, ವಿಷ ಖರೀದಿಸಲು ಹಣ ಬೇಕಾಗಿತ್ತು. ಈ ಸಮಸ್ಯೆಯನ್ನು ಖರ್ಚಿಲ್ಲದೆ ಪರಿಹರಿಸುವ ಉಪಾಯವನ್ನು ಮಾಧವಲಾಲನು ಸೂಚಿಸಿದ್ದನು. ಕಾಡಿನಲ್ಲಿ ಸಿಗುವ ಒಂದು ಜಾತಿಯ ಕಪ್ಪು ಬೀಜಗಳನ್ನು ತಿಂದರೆ ಮನುಷ್ಯರು ಸಾಯುತ್ತಾರೆಂಬ ಗುಟ್ಟು ಅವನಿಗೆ ಗೊತ್ತಿತ್ತು. ಇಬ್ಬರೂ ಬಹಳ ಸಂತೋಷದಿಂದ ಕಪ್ಪು ಬೀಜ ತಿಂದು ಜತೆಯಲ್ಲಿ ಸಾಯಲು ನಿರ್ಧರಿಸಿದರು. ಆತ್ಮಹತ್ಯೆಗೆ ದಿನವನ್ನೂ ನಿಶ್ಚಯಿಸಿದ್ದಾಯಿತು. ಸಂಜೆಯ ಹೊತ್ತು ಆತ್ಮಹತ್ಯೆಗೆ ಒಳ್ಳೆಯ ಮುಹೂರ್ತವೆಂಬುದನ್ನು ಮೋಹನದಾಸನೇ ಸೂಚಿಸಿದ್ದನು.

ನಿರ್ಧಾರಿತ ದಿನದಂದು ಸಂಜೆ, ಇಬ್ಬರೂ ಕೇದಾರಸ್ವಾಮಿ ಮಂದಿರಕ್ಕೆ ಹೋದರು. ದೇವರ ದರ್ಶನ ಮಾಡಿ, ದೇವರ ದೀಪಕ್ಕೆ ಕೊನೆಯ ಬಾರಿಗೆಂಬಂತೆ ತುಪ್ಪ ಸುರಿದು, ತಾವು ಇದುವರೆಗೆ ತಿಳಿದೋ ತಿಳಿಯದೆಯೋ ಮಾಡಿದ್ದಿರಬಹುದಾದ ಎಲ್ಲ ತಪ್ಪುಗಳಿಗೂ ಕ್ಷಮೆ ನೀಡುವಂತೆ ದೇವರಲ್ಲಿ ಭಕ್ತಿಯಿಂದ ಕೈಮುಗಿದು ಪ್ರಾರ್ಥಿಸಿದರು. ಬಳಿಕ, ಹೊಳೆಬದಿಯ ಕಾಡಿನಲ್ಲಿ ಮೊದಲೇ ಆರಿಸಿದ್ದ ನಿರ್ಜನ ಸ್ಥಳದ ದಿಕ್ಕಿನತ್ತ ಕೈಕೈ ಹಿಡಿದುಕೊಂಡು ಜತೆಜತೆಯಾಗಿ ಹೆಜ್ಜೆ ಹಾಕಿದರು.

ಸಾಯುವ ಸಂದರ್ಭದಲ್ಲಿ ನೆಲದಲ್ಲಿ ಮಲಗಿಕೊಳ್ಳಬೇಕಾಗಿತ್ತಲ್ಲವೇ?. ಕಲ್ಲು ಮುಳ್ಳುಗಳ ಮೇಲೆ ಸುಖವಾಗಿ ಮಲಗಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಗೊತ್ತಿದ್ದ ಮಾಧವಲಾಲನು ಮನೆಯಿಂದ ಬರುವಾಗಲೇ ಎರಡು ಚಾದರಗಳನ್ನು ಗಂಟು ಕಟ್ಟಿ ತಂದಿದ್ದನು. ಕಾಡಿನ ನಡುವೆ ಪೊದೆಗಳ ಪಕ್ಕದಲ್ಲಿ ಸಮತಟ್ಟಾದ ಜಾಗವೊಂದನ್ನು ಆರಿಸಿಕೊಂಡು ಚಾದರ ಹಾಸಿ ಇಬ್ಬರೂ ಕುಳಿತರು. ಕಾಗದದ ಪೊಟ್ಟಣದಲ್ಲಿ ಗುಟ್ಟಾಗಿ ಕಟ್ಟಿಕೊಂಡು ತಂದಿದ್ದ ಕಪ್ಪು ಬೀಜಗಳನ್ನು ಇಬ್ಬರೂ ಸಮಾನವಾಗಿ ಹಂಚಿಕೊಂಡರು. ಸಾಯುವ ಮೊದಲು ದೇವರನ್ನು ಕೊನೆಯ ಬಾರಿ ಪ್ರಾರ್ಥಿಸುವುದು ಒಳ್ಳೆಯದು ಎಂಬುದನ್ನು ಮಾಧವಲಾಲನು ಸೂಚಿಸಿದನು. ಮೋಹನದಾಸನಿಗೆ ಅವನ ಸಲಹೆ ಸರಿಯೆಂದು ಅನ್ನಿಸಿತು. ಇಬ್ಬರೂ ಕಣ್ಣು ಮುಚ್ಚಿ ದೇವರನ್ನು ನೆನೆಯತೊಡಗಿದರು.

ಇದ್ದಕ್ಕಿದ್ದಂತೆ ಹಲವು ಅನುಮಾನಗಳು ಇಬ್ಬರನ್ನೂ ಸಮಾನವಾಗಿ ಕಾಡತೊಡಗಿದವು. ತಾವು ತಂದಿರುವ ಬೀಜ ತಿಂದರೆ ಮನುಷ್ಯನು ನಿಜವಾಗಿಯೂ ಸಾಯುತ್ತಾನೆಯೇ? ಸಾಯುವಾಗ ಸಂಕಟವಾಗುತ್ತದೆಯೆ? ಒಂದು ವೇಳೆ ಸಾಯದೇ ಇದ್ದರೇನು ಮಾಡುವುದು? ಅರೆಜೀವವಾಗಿ ಇಲ್ಲೇ ನರಳುತ್ತಾ ಬಿದ್ದುಕೊಂಡರೆ ತಮ್ಮನ್ನು ಉಪಚರಿಸುವವರಾರು?

ಇಬ್ಬರು ಹುಡುಗರಿಗೂ ಸಾಯುವುದು ಹೇಗಿರುತ್ತದೆಯೆಂಬುದು ಗೊತ್ತಿದ್ದಿರಲಿಲ್ಲ. ಆದ್ದರಿಂದ ಅವರೊಳಗೆ ಹುಟ್ಟುತ್ತಿದ್ದ ಪ್ರಶ್ನೆಗಳಿಗೆ ಅವರಲ್ಲಿ ಉತ್ತರವಿರಲಿಲ್ಲ. ಉತ್ತರಿಸಬಲ್ಲ ಯಾರನ್ನೂ ಅವರು ಜತೆಯಲ್ಲಿ ಕರೆದುಕೊಂಡು ಬಂದಿರಲಿಲ್ಲ. ಬಹಳ ಹೊತ್ತು ಯೋಚಿಸಿ ಹೇಗೂ ಕಾಡಿನೊಳಗೆ ಇಷ್ಟು ದೂರ ಬಂದುದಾಗಿದೆ ಎಂಬ ಕಾರಣಕ್ಕೆ ಇಬ್ಬರೂ ತಲಾ ಮೂರು ಬೀಜಗಳನ್ನು ಜಗಿದು ನುಂಗಿದರು.

ಬೀಜದ ಕಹಿ ನಾಲಗೆಯಲ್ಲಿ ನಿಧಾನವಾಗಿ ಹರಡುತ್ತಿದ್ದಂತೆ ಸಾವಿನ ಭಯ ಕಾಡತೊಡಗಿತು. ತಾವು ಸಾಯುವುದಕ್ಕೆ ಬಲವಾದ ಯಾವ ಕಾರಣಗಳೂ ಇಲ್ಲ ಎಂಬ ಸತ್ಯ ಮೊದಲಬಾರಿಗೆಂಬಂತೆ ಗೋಚರವಾಯಿತು. ಸಿಗರೇಟು ಖರೀದಿಸಲು ಹಣ ಸಂಪಾದಿಸಲು ಸೋತಿರುವ ಒಂದೇ ಕಾರಣಕ್ಕೆ ತಾವಿಬ್ಬರು ಆತ್ಮಹತ್ಯೆ ಮಾಡಿಕೊಂಡು ಸಾಯುವ ಅಗತ್ಯವಿಲ್ಲವೇನೋ ಎಂಬುದಾಗಿ ಪರಸ್ಪರ ಪ್ರಶ್ನಿಸಿಕೊಂಡರು. ಆಗತ್ಯವಿಲ್ಲ ಎಂಬ ಉತ್ತರ ಇಬ್ಬರದೂ ಆಗಿತ್ತು.

ಸಾಯುವುದು ಬೇಡವೆಂದು ಒಮ್ಮೆ ನಿರ್ಧರಿಸಿದ ಬಳಿಕ ಅವರು ತಡಮಾಡಲಿಲ್ಲ. ಮಿಕ್ಕುಳಿದ ಬೀಜಗಳನ್ನು ಬೀಸಿ ಎಸೆದು, ತಾವಿಬ್ಬರೂ ಕುಳಿತಿದ್ದ ಚಾದರವನ್ನು ಎತ್ತಿ ಕೊಡವಿ ಸುರುಳಿ ಸುತ್ತಿಕೊಂಡರು. ನೇರವಾಗಿ ರಾಮದೇವರ ಮಂದಿರಕ್ಕೆ ಹೋದರು. ದೇವರ ದರ್ಶನ ಮಾಡಿ ಮನಸ್ಸನ್ನು ಹಗುರಮಾಡಿಕೊಂಡು, ಇನ್ನೆಂದಿಗೂ ತಾವು ಸಿಗರೇಟು ಸೇದುವುದಿಲ್ಲ ಮತ್ತು ಯಾವುದೇ ಕಾರಣಕ್ಕೂ ಆತ್ಮಹತ್ಯೆಗೆ ಪ್ರಯತ್ನಿಸುವುದಿಲ್ಲವೆಂದು ಶಪಥ ಮಾಡಿಕೊಂಡರು.

ಇಬ್ಬರೂ ಸಾಯದೆ ಮನೆಗೆ ಮರಳಿದರು.

## ಕಾಗದದ ಬಾಣ

ಮೋಹನದಾಸನಿಗೆ ತಾಯಿಯ ಬಗ್ಗೆ ತುಂಬಾ ಪ್ರೀತಿ; ತಂದೆಯ ಬಗ್ಗೆ ಅಪಾರವಾದ ಗೌರವವಿತ್ತು. ಆವನು ಕಲಿಯುತ್ತಿದ್ದ ರಾಜಕೋಟೆಯ ಪ್ರೌಢಶಾಲೆಯ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಓದು ಮತ್ತು ನಡತೆಯ ಬಗ್ಗೆ, ವಾರ್ಷಿಕ ಪ್ರಗತಿಪತ್ರಗಳನ್ನು ವಿದ್ಯಾರ್ಥಿಗಳ ಹೆತ್ತವರಿಗೆ ನೇರವಾಗಿ ಕಳುಹಿಸಿಕೊಡುತ್ತಿದ್ದರು. ತನ್ನ ಓದಿನ ಬಗ್ಗೆ ಶಾಲೆಯಿಂದ ಕಳುಹಿಸಲಾಗುತ್ತಿದ್ದ ಪ್ರಗತಿಪತ್ರವು ಒಳ್ಳೆಯ ಅಂಶಗಳನ್ನೇ ಹೊಂದಿರಬೇಕೆಂದು ಮೋಹನದಾಸನು ಯಾವಾಗಲೂ ಬಯಸುತ್ತಿದ್ದನು. ಪ್ರಗತಿಪತ್ರವನ್ನು ಪರಿಶೀಲಿಸುವ ತಂದೆಯವರಿಗೆ ಸಂತೋಷವನ್ನುಂಟು ಮಾಡುವಂತೆ ತನ್ನ ನಡತೆ ಮತ್ತು ಓದಿನ ಪ್ರಗತಿಯನ್ನು ಮೋಹನದಾಸನು ಕಾಯ್ದುಕೊಂಡಿರುತ್ತಿದ್ದನು.

ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಯಾಗಿಲ್ಲದಿದ್ದರೂ, ವಿದ್ಯಾರ್ಥಿ ವೇತನ ಪಡೆಯುವಷ್ಟು ಅಂಕಗಳನ್ನು ಗಳಿಸುವುದರಲ್ಲಿ ಮೋಹನದಾಸನು ಎಂದೂ ಹಿಂದೆ

ಬೀಳುತ್ತಿರಲಿಲ್ಲ. ಆದರೂ, ತರಗತಿಯಲ್ಲಿ ತನ್ನದಲ್ಲದ ತಪ್ಪಿಗೆ ಕೆಲವೊಮ್ಮೆ ಏಟಿನ ಶಿಕ್ಷೆ ಅನುಭವಿಸಬೇಕಾಗಿ ಬಂದಾಗ ಬಹಳ ದುಃಖ ಪಡುತ್ತಿದ್ದನು.

ಒಂದು ದಿನ ಗಣಿತದ ತರಗತಿ ನಡೆಯುತ್ತಿದ್ದಾಗ, ತುಂಟ ಹುಡುಗನೊಬ್ಬ ಕಾಗದದ ಬಾಣವೊಂದನ್ನು ಎದುರಿನ ಸಾಲಿನ ಬೆಂಚಿನ ಮೇಲೆ ಎಸೆಯಲು ಯತ್ನಿಸಿದ್ದನು. ಆದರೆ ಅದು ಕರಿಹಲಗೆಯ ಮೇಲೆ ಗಣಿತದ ಕ್ಲಿಷ್ಟ ಸಮಸ್ಯೆಯೊಂದನ್ನು ಬಿಡಿಸುತಿದ್ದ ಶಿಕ್ಷಕರ ಬೆನ್ನಿಗೆ ನೇರವಾಗಿ ಬಡಿದುಬಿಟ್ಟಿತ್ತು.

ಮಕ್ಕಳೆದುರು ತನಗುಂಟಾದ ಅವಮಾನದಿಂದ ಕೋಪಗೊಂಡ ಶಿಕ್ಷಕರು, ಇಡಿಯ ತರಗತಿಯ ಮಕ್ಕಳನ್ನೆಲ್ಲ ಕೆಂಗಣ್ಣಿನಿಂದ ದಿಟ್ಟಿಸುತ್ತಾ, ಕಾಗದದ ಬಾಣವನ್ನು ನೆಲದಿಂದ ಎತ್ತಿಕೊಂಡು ವಿದ್ಯಾರ್ಥಿಗಳತ್ತ ತೋರಿಸುತ್ತಾ, 'ಇದನ್ನು ಎಸೆದ ಮೂರ್ಖ ಯಾರು?' ಎಂದು ಪ್ರಶ್ನಿಸಿದ್ದರು.

ಶಿಕ್ಷಕರ ಕೆಂಪು ಕಣ್ಣುಗಳಲ್ಲಿ ಧುಮುಕ್ಕುತ್ತಿದ್ದ ಕೋಪವನ್ನು ಕಂಡ ಮಕ್ಕಳು ಹೆದರಿ ಉಸಿರು ಬಿಗಿ ಹಿಡಿದುಕೊಂಡು ತಲೆ ತಗ್ಗಿಸಿ ಕುಳಿತಿದ್ದರು. ತರಗತಿಯಲ್ಲಿ ಆರನೆ ಸಾಲಿನ ಬೆಂಚಿನಲ್ಲಿ ಕುಳಿತು ತಲೆ ತಗ್ಗಿಸಿ ಗಣಿತದ ಸಮಸ್ಯೆಯನ್ನು ಬಿಡಿಸಲು ಶಿಕ್ಷಕರ ಜತೆಯಲ್ಲೇ ತಾನೂ ಪ್ರಯತ್ನಿಸುತ್ತಿದ್ದ ಮೋಹನದಾಸನಿಗೆ, ಈ ಕುಕೃತ್ಯವನ್ನು ಮಾಡಿರುವವನು ತನ್ನ ಪಕ್ಕದಲ್ಲೇ ಕುಳಿತಿರುವ ಬಿಪಿನ್ ದಾಸ್ ಎಂಬುದು ಗೊತ್ತಾಗಿದ್ದಿರಲಿಲ್ಲ.

ತರಗತಿಯ ತುಂಟ ಹುಡುಗರಲ್ಲಿ ಅಗ್ರಗಣ್ಯನಾಗಿದ್ದ ಬಿಪಿನ್‌ದಾಸನ ಉಪಟಳದ ಬಗ್ಗೆ ಶಿಕ್ಷಕರಿಗೂ ಅನುಮಾನವಿತ್ತು. ಆದರೆ ತಮ್ಮ ಮನೆಯಿರುವ ಬೀದಿಯಲ್ಲೇ, ಬಹು ದೊಡ್ಡ ಬಂಗಲೆಯಲ್ಲಿ ವಾಸಿಸುತ್ತಿರುವ ಹಿರಿಯ ಪೋಲಿಸ್ ಅಧಿಕಾರಿಯ ಅತಿ ಮುದ್ದಿನ ಏಕೈಕ ಪುತ್ರನ ವಿರುದ್ಧ ಕ್ರಮ ತೆಗೆದುಕೊಳ್ಳಲು ಅವರು ಹಿಂಜರಿದಿದ್ದರು. ಬಿಪಿನ್‌ದಾಸನ ಕಿರಿಕಿರಿಯ ಬಗ್ಗೆ ಮುಖ್ಯೋಪಾಧ್ಯಾಯರಿಗೆ ಈ ಹಿಂದೆ ಒಂದೆರಡು ಬಾರಿ ದೂರನ್ನು ನೀಡಿದ್ದರೂ ಯಾವುದೇ ಪ್ರಯೋಜನವಾಗಿದ್ದಿರಲಿಲ್ಲ. ಬಿಪಿನ್‌ದಾಸನ ಮನೆಯ ಹಿನ್ನೆಲೆಯ ಅರಿವಿದ್ದ ಮುಖ್ಯೋಪಾಧ್ಯಾಯರು ಕೂಡಾ, ಆ ತುಂಟ ಹುಡುಗನ ಉಸಾಬರಿಗೆ ಹೋಗದಂತೆ ಶಿಕ್ಷಕರಿಗೆ ಸಲಹೆ ನೀಡಿದ್ದರು.

ಆದರೆ ಇಂದು ಮಾತ್ರ ಶಿಕ್ಷಕರಿಗೆ ಸಿಟ್ಟು ತಲೆಗೇರಿತ್ತು. ಬಿಪಿನ್‌ದಾಸನೇ ಬಾಣ ಎಸೆದವನೆಂಬುದರ ಬಗ್ಗೆ ಅವರಿಗೆ ಅನುಮಾನವಿದ್ದಿರಲಿಲ್ಲ. ನಾಳೆ ಏನೇ ಆಗಲಿ, ಇಂದು ಮಾತ್ರ ಬಿಪಿನ್ ದಾಸನ ಅಪರಾಧಕ್ಕೆ ಶಿಕ್ಷೆ ನೀಡಲೇಬೇಕು ಎಂದು ಶಿಕ್ಷಕರು ನಿರ್ಧರಿಸಿಬಿಟ್ಟಿದ್ದರು. ಹಿರಿಯ ಪೋಲಿಸ್ ಅಧಿಕಾರಿಯ ಮಗನಿಗೆ ಶಿಕ್ಷೆ ವಿಧಿಸುವ ಮುನ್ನ ಸರಿಯಾದ ಸಾಕ್ಷ್ಯ ಸಂಗ್ರಹಿಸುವುದು ಜಾಣತನವಾಗುತ್ತದೆ ಎಂಬುದನ್ನು ಅವರು ಅನುಭವದಿಂದ ಕಲಿತಿದ್ದರು. ಆದ್ದರಿಂದ ಬಾಣ ಎಸೆದವನು ಬಿಪಿನ್‌ದಾಸನೆಂಬುದಾಗಿ ಉಳಿದ ವಿದ್ಯಾರ್ಥಿಗಳು ಬೆರಳು ತೋರಿಸುವುದನ್ನೇ ನಿರೀಕ್ಷಿಸಿದ್ದರು.

ಬಾಣ ಎಸೆದದ್ದು ಬಿಪಿನ್‌ದಾಸನೆಂಬುದು ಕೆಲವರಿಗೆ ತಿಳಿದಿತ್ತು. ಆದರೆ ತಮ್ಮ ಸಹಪಾಠಿಯ ಬಗ್ಗೆ ಚಾಡಿ ಹೇಳಿ, ಅವನನ್ನು ಶಿಕ್ಷೆಗೆ ದೂಡಲು ಯಾರೂ ಸಿದ್ಧರಿರಲಿಲ್ಲ. ಆದ್ದರಿಂದ ಎಲ್ಲರೂ ತುಟಿ ಬಿಗಿಹಿಡಿದು ಕುಳಿತುಬಿಟ್ಟಿದ್ದರು. ವಿದ್ಯಾರ್ಥಿಗಳೆಲ್ಲ ಸುಮ್ಮನಿರುವುದನ್ನು ಕಂಡು ಶಿಕ್ಷಕರ ಸಿಟ್ಟು ಹೆಚ್ಚಾಗಿ ಹೋಯಿತು. ಮಕ್ಕಳ ಎದುರು ತುಂಟ ಹುಡುಗನೊಬ್ಬನಿಂದ ಸೋಲಾಗುತ್ತಿರುವುದನ್ನು ಸಹಿಸಿಕೊಳ್ಳುವುದು ಅವರಿಂದ ಸಾಧ್ಯವಾಗಲಿಲ್ಲ.

ಬಿಪಿನ್‌ದಾಸನ ಪಕ್ಕದಲ್ಲಿಯೇ ಕುಳಿತಿದ್ದ ಮೋಹನದಾಸನಿಗೆ ಬಾಣ ಎಸೆದವನಾರು ಎಂಬುದು ಖಂಡಿತವಾಗಿ ಗೊತ್ತಿರುತ್ತದೆ ಎಂದು ಅವರು ಬಲವಾಗಿ ನಂಬಿದ್ದರು. ನಿಜ ಗೊತ್ತಿದ್ದರೂ, ಮೋಹನದಾಸನು ಕೂಡ ಉಳಿದ ಹುಡುಗರಂತೆ ಮೌನವಾಗಿರುವುದು ಅವರಿಗೆ ಇಷ್ಟವಾಗಲಿಲ್ಲ. ಬಿಪಿನ್‌ದಾಸನ ಬಗ್ಗೆ ಹುಟ್ಟಿಕೊಂಡಿದ್ದ ಸಿಟ್ಟೆಲ್ಲ ಇದ್ದಕ್ಕಿದ್ದಂತೆ ಮೋಹನದಾಸನ ವಿರುದ್ಧ ತಿರುಗಿತ್ತು.

'ಮೋಹನದಾಸ, ನಿನಗೂ ಗೊತ್ತಿಲ್ಲವೇನೊ?' ಶಿಕ್ಷಕರ ನೇರ ಪ್ರಶ್ನೆಗೆ ಮೋಹನದಾಸನು ಅವಾಕ್ಕಾಗಿದ್ದನು. ಏನು ಹೇಳಬೇಕೆಂಬುದೂ ಹೊಳೆಯದೆ ಕಣ್ಣು ಪಿಳಿ ಪಿಳಿ ಮಾಡುತ್ತ ಶಿಕ್ಷಕರತ್ತ ಯಾಚನೆಯ ನೋಟ ಬೀರಿದ್ದನು.

' ನಿನ್ನನ್ನೇ ನಾನು ವಿಚಾರಿಸುತ್ತಿರುವುದು. ನನ್ನ ಮೇಲೆ ಈ ಕಾಗದದ ಬಾಣ ಬಿಟ್ಟವನು ಯಾರು ಎಂಬುದು ನಿನಗೆ ಗೊತ್ತಾಗದಿರಲು ಸಾಧ್ಯವೇ ಇಲ್ಲ. ಈ ಬಾಣ ನೀನು ಕುಳಿತಿರುವ ದಿಕ್ಕಿನಿಂದಲೇ ಬಂದದ್ದು.' ಶಿಕ್ಷಕರ ಧ್ವನಿ ಬಹಳ ಗಡುಸಾಗಿತ್ತು.

'ನನಗೆ ಗೊತ್ತಿಲ್ಲ', ಮೋಹನದಾಸ ಮೆಲ್ಲನೆ ಉತ್ತರಿಸಿದನು. ಅವನಿಗೆ ನಿಜವಾಗಿ ಗೊತ್ತಿದ್ದಿರಲಿಲ್ಲ.

'ಈ ಬಾಣ ಬಂದದ್ದು ನೀನು ಕುಳಿತಿರುವ ಬೆಂಚಿನ ದಿಕ್ಕಿನಿಂದ, ಅಂದಮೇಲೆ ನಿನಗೆ ಗೊತ್ತಿಲ್ಲವೆಂದರೆ ಹೇಗೆ ನಾನು ನಂಬಬೇಕೂ? ನಾನೇನೂ ಅಷ್ಟೂ ತಿಳಿಯದ ಮೂಢನಲ್ಲ: ಸುಳ್ಳು ಹೇಳಬೇಡ.' ಶಿಕ್ಷಕರ ಧ್ವನಿಯಲ್ಲಿ ಯಾಚನೆ ಇತ್ತು. 'ನಿನಗೆ ಗೊತ್ತಿದೆ, ದಯವಿಟ್ಟು ಬಿಪಿನ್‌ದಾಸನೇ ಎಸೆದದ್ದು ಎಂದು ಒಮ್ಮೆ ಹೇಳಿಬಿಡು' ಎಂಬ ಸೂಚನೆಯಿತ್ತು.

'ನನಗೆ ನಿಜವಾಗಿ ಗೊತ್ತಿಲ್ಲ. ನಾನು ನೋಡಲಿಲ್ಲ. ನಾನು ಖಂಡಿತವಾಗಿ ಸುಳ್ಳು ಹೇಳುತ್ತಿಲ್ಲ.' ಮೋಹನದಾಸನು ನಿಜವನ್ನೇ ಹೇಳಿದ್ದನು.

ಆದರೆ ಅವಮಾನದಿಂದ ಕುದಿಯುತಿದ್ದ ಶಿಕ್ಷಕರು ಸರಿ ತಪ್ಪುಗಳ ವ್ಯತ್ಯಾಸ ತಿಳಿಯುವ ವಿವೇಚನಾ ಶಕ್ತಿಯನ್ನೇ ಕಳೆದುಕೊಂಡುಬಿಟ್ಟಿದ್ದರು. ತರಗತಿಯಲ್ಲಿ ಒಳ್ಳೆಯ ವಿದ್ಯಾರ್ಥಿಯೆಂದು ಹೆಸರು ಗಳಿಸಿದ್ದ ವಿದ್ಯಾರ್ಥಿ ಕೂಡಾ ತಮ್ಮ ನೆರವಿಗೆ ಬಾರದಿದ್ದುದು ಅವರನ್ನು ಕಂಗೆಡಿಸಿತ್ತು.

'ಹಾಗಾದರೆ ನೀನೇ ಎಸೆದದ್ದು ಎಂದು ನಾನು ನಿರ್ಧರಿಸಬೇಕಾಗುತ್ತದೆ. ನೀನು ಈಗ ನಿಜವನ್ನು

ಹೇಳದೆ ಇದ್ದರೆ, ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ.' ಶಿಕ್ಷಕರು ಕೊನೆಯ ಎಚ್ಚರಿಕೆ ನೀಡಿದ್ದರು.

ಶಿಕ್ಷಕರ ಈ ಮಾತಿಗೆ ಯಾವ ಬಗೆಯ ಉತ್ತರ ನೀಡಬೇಕೆಂದು ಅರ್ಥವಾಗದ ಮೋಹನ ದಾಸನು ಮೌನಕ್ಕೆ ಶರಣಾದನು. ಇವೆಲ್ಲವನ್ನೂ ತುಂಟ ನಗೆ ಚೆಲ್ಲುತ್ತ ಗಮನಿಸುತಿದ್ದ ಬಿಪಿನ್ ದಾಸನನ್ನು ಕಂಡಾಗ ಶಿಕ್ಷಕರಿಗೆ ಎಲ್ಲಿಲ್ಲದ ಕೋಪ ಬಂದಿತ್ತು.

ನೇರವಾಗಿ ಮೋಹನದಾಸನತ್ತ ಧಾವಿಸಿ ಬಂದ ಅವರು ಅವನ ಕಿವಿ ಹಿಡಿದು, ದರದರನೆ ಎಳೆದುಕೊಂಡು ಹೋಗಿ ಎಲ್ಲರ ಎದುರು ನಿಲ್ಲಿಸಿ, 'ನೂರು ಬಸ್ಕಿ ತೆಗೆ' ಎಂದು ಆಜ್ಞಾಪಿಸಿದರು.

ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸಬೇಕಾಗಿ ಬಂದ ತನ್ನ ಅಸಹಾಯಕತೆಗೆ ನೊಂದ ಮೋಹನದಾಸನ ಕಣ್ಣಲ್ಲಿ ನೀರು ಜಿನುಗಿತು. 'ನಾನು ನಿಜವಾಗಿ ನೋಡಲಿಲ್ಲ. ನನ್ನನ್ನು ನಂಬಿ' ಎಂದು ಎಷ್ಟೇ ಗೋಗರೆದರೂ ತಾಳ್ಮೆಯನ್ನು ಕಳೆದುಕೊಂಡಿದ್ದ ಶಿಕ್ಷಕರು ಅವನ ಮಾತುಗಳನ್ನು ನಂಬಲಿಲ್ಲ. ತರಗತಿಯ ಮೇಜಿನ ಬಳಿ ಎಲ್ಲ ಹುಡುಗರ ಎದುರು ಏನೂ ಮಾಡಲು ತೋಚದೆ ನಾಚಿಗೆಯಿಂದ ತಲೆ ತಗ್ಗಿಸಿ ಸುಮ್ಮನೆ ನಿಂತಿದ್ದ ಮೋಹನದಾಸನ ರಟ್ಟೆ ಹಿಡಿದು ಕುಳ್ಳಿರಿಸಿದ ಶಿಕ್ಷಕರು, 'ಹೂಂ, ತೆಗೆ ಬಸ್ಕಿ' ಎಂದು ಆದೇಶ ನೀಡಿದ್ದರು.

ನಿರುಪಾಯನಾದ ಮೋಹನದಾಸನು ಶಿಕ್ಷಕರ ಒತ್ತಾಯದಂತೆ ಬಸ್ಕಿ ತೆಗೆಯಲು ಅರಂಭಿಸಿ ದನು. ಒಂದು, ಎರಡು, ಮೂರು, ನಾಲ್ಕು, ಐದು, ಆರು....,

'ನಿಲ್ಲಿ, ಬಾಣ ಎಸೆದದ್ದು ನಾನು. ಮೋಹನದಾಸನಲ್ಲ.' ಬಿಪಿನ್‌ದಾಸ ಜೋರಾಗಿ ಕಿರುಚಿದ್ದನು.

ಇದುವರೆಗೆ ಉಸಿರೆತ್ತದೆ ಎಲ್ಲವನ್ನೂ ಮಿಕಿಮಿಕಿ ನೋಡುತಿದ್ದ ಎಲ್ಲ ಹುಡುಗರು ಮಾತ್ರವಲ್ಲ, ಮೋಹನದಾಸನಿಗೆ ಶಿಕ್ಷೆ ವಿಧಿಸುವುದರಲ್ಲೇ ಮುಳುಗಿದ್ದ ಶಿಕ್ಷಕರೇ ಬೆಚ್ಚಿಬೀಳುವಂತೆ ಬಿಪಿನ್‌ದಾಸ ಕಿರುಚಿಬಿಟ್ಟಿದ್ದನು! ಎಲ್ಲರೂ ನೋಡು ನೋಡುತ್ತಿರುವಂತೆಯೇ ತನ್ನ ಜಾಗದಿಂದ ಎದ್ದು ಮೋಹನದಾಸನ ಬಳಿಗೆ ಬಂದ ಬಿಪಿನ್‌ದಾಸನು, ಬಸ್ಕಿ ಹೊಡೆಯುತಿದ್ದ ಮೋಹನದಾಸನನ್ನು ಪಕ್ಕಕ್ಕೆ ಸರಿಸಿ, ಸುಮ್ಮನೇ ನಿಂತುಕೊಳ್ಳುವಂತೆ ಹೇಳಿ, ತಾನೇ ಬಸ್ಕಿ ತೆಗೆಯಲಾರಂಭಿಸಿದ್ದನು !.

ಶಿಕ್ಷಕರಿಗೆ ಈಗ ತಾನೇನು ಮಾಡಬೇಕೆಂಬುದೇ ಹೊಳೆಯಲಿಲ್ಲ. ಬಿಪಿನ್‌ದಾಸ ಶಿಕ್ಷೆ ಅನುಭವಿಸು ತ್ತಿರುವುದು ನಿಜವಾದರೂ, ಈ ಹಗರಣದಲ್ಲಿ ತನ್ನದು ಗೆಲುವೇ ? ಅಥವಾ ಸೋಲೇ ? ಎಂಬುದನ್ನು ಅವರಿಗೆ ನಿರ್ಧರಿಸಲಾಗಲಿಲ್ಲ. ಗೊಂದಲಗೊಂಡ ಅವರು ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ತೂರಾಡುತ್ತಾ ತರಗತಿಯಿಂದ ಹೊರಗೆ ಹೊರಟು ಹೋಗಿದ್ದರು.

ಸಾವರಿಸಿಕೊಂಡ ಹುಡುಗರೆಲ್ಲ ಎದ್ದು ಬಂದು ಮೋಹನದಾಸನನ್ನು ಸುತ್ತುವರಿದು ಅವನಿಗೆ ಸಮಾಧಾನ ಹೇಳತೊಡಗಿದರು. ಕಾಗದದ ಬಾಣ ಎಸೆದವನು ಬಿಪಿನ್‌ದಾಸನೆಂದು

ತಿಳಿದಿದ್ದರೂ, ಕೊನೆಯವರೆಗೂ ತನ್ನ ಸಹಪಾಠಿಯನ್ನು ಬಿಟ್ಟುಕೊಡದ ಮೋಹನದಾಸನ ವರ್ತನೆಯನ್ನು ಎಲ್ಲರೂ ಹೊಗಳುವವರೇ.

ಆದರೆ, ಬಾಣ ಎಸೆದವನಾರು ಎಂಬುದು ಮೋಹನದಾಸನಿಗೆ ನಿಜವಾಗಿಯೂ ಗೊತ್ತಿರಲಿಲ್ಲ ಮತ್ತು ಅವನು ನಿಜವನ್ನೇ ಹೇಳಿದ್ದನೆಂಬುದು ಉಳಿದವರಿಗೆ ಕೊನೆವರೆಗೂ ಗೊತ್ತೇ ಆಗಿದ್ದಿರಲಿಲ್ಲ.

## ಮುಟ್ಟುವ ಆಟ

ಮೋಹನದಾಸನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ದೊರಾಬ್ಜೀ ಎದುಲ್ಜೀ ಜಿಮಿ ಎಂಬವರು ತಮ್ಮ ಶಿಸ್ತು ಮತ್ತು ನಿಯಮಪಾಲನೆಗೆ ಬಹಳ ಪ್ರಸಿದ್ಧರಾಗಿದ್ದವರು.

ತಪ್ಪು ಮಾಡಿದ ವಿದ್ಯಾರ್ಥಿಗಳನ್ನು ಬೆಂಚಿನ ಮೇಲೆ ತಾಸುಗಟ್ಟಲೆ ನಿಲ್ಲಿಸುವುದು, ಅಂತಹ ವರನ್ನು ಎಲ್ಲ ವಿದ್ಯಾರ್ಥಿಗಳ ಎದುರು ತರಗತಿಯ ಗೋಡೆಗೆ ಮುಖಮಾಡಿ ಒಂಟಿಗಾಲಲ್ಲಿ ನಿಲ್ಲಿಸುವುದು, ಶಾಲಾ ಕಟ್ಟಡದ ಸುತ್ತ ಹಲವಾರು ಸುತ್ತು ಓಡಿಸುವುದು, ಇತ್ಯಾದಿಗಳು ಅವರ ಶಿಕ್ಷೆಯ ಕೆಲವು ಸರಳ ಮಾದರಿಗಳಾಗಿದ್ದವು. ಆದರೆ ಜಿಮಿಯವರ ಕಠಿಣವಾದ ನಿಯಮಗಳ ಬಗ್ಗೆ ಭಯಪಡುವ ವಿದ್ಯಾರ್ಥಿಗಳೂ, ಉತ್ತಮ ಶಿಕ್ಷಕರಾಗಿದ್ದ ಅವರನ್ನು ತುಂಬಾ ಪ್ರೀತಿಸುತ್ತಿದ್ದರು.

ಆ ದಿನಗಳಲ್ಲಿ ಮೋಹನದಾಸನ ತಂದೆಯವರ ಆರೋಗ್ಯ ಅಷ್ಟೊಂದು ಚೆನ್ನಾಗಿದ್ದಿರಲಿಲ್ಲ. ಅವರ ಕಾಲಿನಲ್ಲಿ ಒಂದು ದೊಡ್ಡ ಹುಣ್ಣು ಬೆಳೆದಿತ್ತು. ಹಾಗಾಗಿ ಮೋಹನದಾಸನು ಶಾಲೆ ಬಿಟ್ಟ ಕೂಡಲೇ ಮನೆಗೆ ಮರಳಿ, ಅನಾರೋಗ್ಯದಿಂದ ಮಲಗಿರುತ್ತಿದ್ದ ತಂದೆಯವರ ಕಾಲೊತ್ತುವ ಸೇವೆ ಮಾಡುತ್ತಿದ್ದನು. ಭಗಂದರ ರೋಗದಿಂದ ನರಳುತಿದ್ದ ತಂದೆಯವರ ಕಾಲಿನ ಹುಣ್ಣುಗಳನ್ನು ತೊಳೆಯುವುದು, ಮೂಲಿಕೆಗಳನ್ನು ಜಜ್ಜಿ ಪುಡಿ ಮಾಡಿ ಮುಲಾಮು ತಯಾರಿಸಿ ಗಾಯಕ್ಕೆ ಹಚ್ಚುವುದು, ಔಷದಿ ಬೆರೆಸಿ ಕುಡಿಸುವುದು – ಹೀಗೆ ದಾದಿಯೊಬ್ಬಳು ಮಾಡಬೇಕಾಗಿರುವ ಎಲ್ಲ ಉಪಚಾರಗಳನ್ನೂ ಮೋಹನದಾಸನು ಅತ್ಯಂತ ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಮಾಡುತ್ತಿದ್ದನು.

ಒಂದು ದಿನ ಶ್ರೀ ಜಿಮಿಯವರು, ಮೋಹನದಾಸನ ತರಗತಿಯ ವಿದ್ಯಾರ್ಥಿಗಳಿಗೆ ವ್ಯಾಯಾಮ ಹಾಗೂ ಕ್ರಿಕೆಟ್ ಆಟವನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿದ್ದರು. ಅಂದಿನಿಂದ ಮೋಹನದಾಸನ ಸಂಜೆಯ ದಿನಚರಿಯು ಬದಲಾಗಲೇಬೇಕಾದ ಅನಿವಾರ್ಯ ಸ್ಥಿತಿಯು ಎದುರಾಯಿತು. ಕ್ರಿಕೆಟ್ ಆಟ ಮತ್ತು ವ್ಯಾಯಾಮದ ಕಾರಣದಿಂದ ಶಾಲೆಯ ತರಗತಿಗಳು

ಮುಗಿದ ತಕ್ಷಣ ಮನೆಗೆ ಮರಳಿ ತಂದೆಯ ಸೇವೆ ಮಾಡುವುದು ಸಾಧ್ಯವಿದ್ದಿರಲಿಲ್ಲ. ಶ್ರೀ ಜಿಮಿಯವರ ಕಣ್ಣು ತಪ್ಪಿಸಿ ಕೆಲವು ಹುಡುಗರು ಮನೆಗೆ ಓಡುತ್ತಿದ್ದರಾದರೂ, ಆ ರೀತಿಯಲ್ಲಿ ತಪ್ಪಿಸಿಕೊಂಡು ಹೋಗಿ ಶ್ರೀ ಜಿಮಿಯವರಿಗೆ ಮೋಸ ಮಾಡುವುದು ಮೋಹನದಾಸನಿಗೆ ಇಷ್ಟವಾಗಿದ್ದಿರಲಿಲ್ಲ.

ಎಳೆ ವಯಸಿನಲ್ಲಿ ಹೊಸ ಗೆಳೆಯರು ದೊರಕುವುದು ಆಟದ ಬಯಲಿನಲ್ಲಿ. ಆದರೆ ಆಟವೆಂದರೆ ನೂರು ಮಾರು ದೂರ ಉಳಿಯುವ ಮೋಹನದಾಸನಿಗೆ ಗೆಳೆಯರು ಸಿಗುವುದಾದರೂ ಹೇಗೇ? ವ್ಯಾಯಾಮ ಅಥವಾ ಬಯಲಲ್ಲಿ ಆಟವಾಡುವುದು ಬರಿಯ ಕಾಲಹರಣವೆಂದೇ ಬಾಲಕ ಮೋಹನದಾಸನು ನಂಬಿದ್ದನು.

ಒಂದು ಸಂಜೆ ಮೋಹನದಾಸನು ಶ್ರೀ ಜಿಮಿಯವರ ಕಚೇರಿಗೆ ಹೋದನು. ತನ್ನ ತಂದೆಯವರ ಆರೋಗ್ಯವು ಸರಿಯಿಲ್ಲ; ಅವರ ಉಪಚಾರಕ್ಕಾಗಿ ತನಗೆ ಬೇಗ ಮನೆಗೆ ಹೋಗಲೇಬೇಕಾಗಿದೆ. ತಂದೆಯವರ ಆರೋಗ್ಯ ಸುಧಾರಿಸುವವರೆಗೆ ತನಗೆ, ಸಂಜೆಯ ಹೊತ್ತು ತರಗತಿಗಳು ಮುಗಿದ ಮೇಲೆ ಆಟದ ಬಯಲಿನಲ್ಲಿ ವ್ಯಾಯಾಮ ಹಾಗೂ ಕ್ರಿಕೆಟ್ ಆಟ ಆಡುವ ಕಡ್ಡಾಯ ನಿಯಮದಿಂದ ವಿನಾಯಿತಿ ನೀಡಬೇಕು, ಎಂದು ವಿನಯದಿಂದ ಪ್ರಾರ್ಥಿಸಿದನು.

ಆದರೆ, ಈ ರೀತಿಯಲ್ಲಿ ಸುಳ್ಳು ಹೇಳಿ ಶಾಲೆಯ ನಿಯಮಗಳಿಂದ ತಪ್ಪಿಸಿಕೊಳ್ಳಬಯಸುವ ಅದೆಷ್ಟೋ ವಿದ್ಯಾರ್ಥಿಗಳನ್ನು ಕಂಡಿದ್ದ ಶ್ರೀ ಜಿಮಿಯವರಿಗೆ, ಮೋಹನದಾಸನ ಮಾತಿನ ಮೇಲೆ ವಿಶ್ವಾಸ ಮೂಡಲಿಲ್ಲ. ಮೋಹನದಾಸನ ವಿನಂತಿಯನ್ನು ಖಂಡತುಂಡವಾಗಿ ನಿರಾಕರಿಸಿದ್ದರು. ತನ್ನ ಮಾತಿನ ಸತ್ಯಾಂಶವನ್ನು ಶ್ರೀ ಜಿಮಿಯವರಿಗೆ ಮನದಟ್ಟು ಮಾಡಲು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದಾಗ, ನಿರಾಸೆಗೊಂಡ ಮೋಹನದಾಸನು ಭಾರವಾದ ಮನಸ್ಸಿನಿಂದ ಆಟದ ಬಯಲಿನತ್ತ ಹೋಗಿದ್ದನು.

ಶನಿವಾರದ ದಿನಗಳಲ್ಲಿ ಪಾಠದ ತರಗತಿಗಳು ನಡೆಯುತ್ತಿದ್ದದ್ದು ಮಧ್ಯಾಹ್ನದ ವರೆಗೆ ಮಾತ್ರ. ಆದರೆ ಆಟ ಮತ್ತು ವ್ಯಾಯಾಮದ ತರಗತಿಗಾಗಿ ಸಂಜೆ ನಾಲ್ಕು ಗಂಟೆಗೆ ಮತ್ತೊಂದು ಬಾರಿ ಮನೆಯಿಂದ ಶಾಲೆಗೆ ಹೋಗಬೇಕಾಗಿತ್ತು. ಒಂದು ಶನಿವಾರದ ಸಂಜೆ ಮೋಹನದಾಸನು ಗೋಡೆ ಗಡಿಯಾರದಲ್ಲಿ ಸಮಯವನ್ನು ನೋಡಿಕೊಂಡು, ಸರಿಯಾಗಿ ನಾಲ್ಕು ಗಂಟೆಗೆ ಮನೆಯಿಂದ ಹೊರಟಿದ್ದನು. ಆದರೆ ಅರ್ಧ ದಾರಿ ನಡೆದಾಗ ಇದ್ದಕ್ಕಿದ್ದಂತೆ ಮಳೆ ಶುರುವಾಯಿತು. ಮೋಹನದಾಸನು ಕೊಡೆ ತಂದಿರಲಿಲ್ಲ. ಆದ್ದರಿಂದ ಉಪಾಯವಿಲ್ಲದೆ ರಸ್ತೆಬದಿಯ ಅಂಗಡಿಯತ್ತ ಓಡಿ ಹೋಗಿ ಅಂಗಡಿಯ ಮಾಡಿನ ಅಡಿಯಲ್ಲಿ ನಿಂತನು.

ಅಲ್ಲಿ ಮಳೆಯಿಂದ ತೊಯ್ಯುವುದನ್ನು ತಪ್ಪಿಸಿಕೊಳ್ಳಲು ಅವನಂತೆಯೇ ಬಂದಿದ್ದ ಇಬ್ಬರು ಹಿರಿಯರು ಮಾಡಿನ ಅಡಿಯಲ್ಲಿ ನಿಂತು, ಮಳೆ ನಿಲ್ಲುವುದನ್ನೇ ನಿರೀಕ್ಷಿಸುತ್ತಿದ್ದರು. ಮೋಹನದಾಸನು ಓಡಿ ಬರುತ್ತಿರುವುದನ್ನು ಗಮನಿಸಿದ ಅವರಿಬ್ಬರೂ, ಸ್ವಲ್ಪ ಬದಿಗೆ ಸರಿದು ಅವನಿಗೂ ಮಾಡಿನ ಅಡಿಯಲ್ಲಿ ನಿಲ್ಲಲು ಜಾಗ ನೀಡಿದ್ದರು.

ಆ ಹೊತ್ತಿನಲ್ಲಿ, ಅಂಗಡಿಯ ಎಡ ಹಿತ್ತಲ ಗೋಡೆಯ ಬದಿಯಲ್ಲಿ ಯುವಕನೊಬ್ಬನು ನಿಂತುಕೊಂಡು ಮಳೆಯಿಂದ ರಕ್ಷಣೆ ಪಡೆಯಲು ಪ್ರಯತ್ನಿಸುತ್ತಿದ್ದನು. ಅವನು ನಿಂತ ಜಾಗದ ಮೇಲೆ ಅಂಗಡಿಯ ಸೂರು ಚಾಚುತ್ತಿರಲಿಲ್ಲವಾದದ್ದರಿಂದ, ಅವನು ಮಳೆಗೆ ಪೂರ್ತಿಯಾಗಿ ಒದ್ದೆಯಾಗುತ್ತಿದ್ದನು.

ಗಟ್ಟಿಮುಟ್ಟಾದ ಕಪ್ಪು ಬಣ್ಣದ ಆ ಯುವಕನು ಅಂಗಿ ತೊಟ್ಟಿರಲಿಲ್ಲ. ಕಬ್ಬಿಣದ ಕಂಭಗಳಂತಿದ್ದ ಅವನ ರಟ್ಟೆಗಳ ಮೇಲೆ ಮಳೆಯ ಹನಿಗಳು ಬಿದ್ದು ಒಡೆದು ಹೋಗುತ್ತಿದ್ದವು. ಆ ಕಪ್ಪು ಯುವಕನು ಬಯಸಿದರೆ, ತನ್ನನ್ನೂ, ತನ್ನ ಜತೆ ನಿಂತಿರುವ ಉಳಿದಿಬ್ಬರನ್ನೂ ಮಳೆಗೆ ತಳ್ಳಿಹಾಕಿ, ಮಾಡಿನಡಿಯಲ್ಲಿ ತಾನೊಬ್ಬನೇ ನಿಂತುಬಿಡುವಷ್ಟು ಶಕ್ತಿವಂತನೆಂಬುದರಲ್ಲಿ ಮೋಹನದಾಸನಿಗೆ ಯಾವ ಅನುಮಾನವೂ ಇದ್ದಿರಲಿಲ್ಲ. ಆದರೆ ಆ ಯುವಕನು, ಆ ಬಗ್ಗೆ ಯೋಚನೆಯನ್ನೂ ಮಾಡದವನಂತೆ ಮಳೆಗೆ ತೊಯ್ಯುತ್ತ ನಿಂತದ್ದನ್ನು ಕಂಡು, ಮೋಹನದಾಸನಿಗೆ ಆಶ್ಚರ್ಯವಾಯಿತು.

ಮೋಹನದಾಸನು ಮೊದಲು ತನ್ನ ಬಲಭಾಗದಲ್ಲಿ ನಿಂತಿದ್ದ ಹಿರಿಯರನ್ನು ಸ್ವಲ್ಪ ಬದಿಗೆ ಸರಿಯಲು ವಿನಂತಿಸಿದನು. ತನ್ನನ್ನು ವಿನಂತಿಸುತ್ತಿರುವ ಹುಡುಗನು ಊರಿನ ದಿವಾನರ ಮಗನೆಂಬುದನ್ನು ಅರಿತಿದ್ದ ಆ ಹಿರಿಯರು ಕೂಡಲೇ ಬದಿಗೆ ಸರಿದರು. ಅಲ್ಲಿ ಇನ್ನೊಬ್ಬನಿಗೆ ನಿಂತುಕೊಳ್ಳಲು ಸಾಕಾಗುವಷ್ಟು ಜಾಗವಾಯಿತು. ಆ ಬಳಿಕ ಮೋಹನದಾಸನು ತನ್ನ ಬಳಿಗೆ ಬಂದು ಜತೆಯಲ್ಲಿ ನಿಂತುಕೊಳ್ಳುವಂತೆ ಮಳೆಗೆ ಒದ್ದೆಯಾಗುತ್ತಿರುವ ಆ ಕಪ್ಪು ಯುವಕನನ್ನು ವಿನಂತಿಸಿದನು.

ಆದರೆ ಆ ಯುವಕನು ಮೋಹನದಾಸನ ಮಾತನ್ನು ಕೇಳಿಯೂ ಕೇಳಿಸಿಕೊಳ್ಳದವನಂತೆ ಹಾಗೆಯೇ ನಿಂತುಬಿಟ್ಟಿದ್ದನು. ಮೋಹನದಾಸನು ಆ ಯುವಕನನ್ನು ಮತ್ತೊಮ್ಮೆ ಕರೆದು, ತನ್ನ ಬಳಿಗೆ ಬಂದು ನಿಂತರೆ ಸುರಿಯುವ ಮಳೆಯಿಂದ ರಕ್ಷಣೆ ಪಡೆಯಬಹುದು ಎಂದು ಗಟ್ಟಿಯಾಗಿ ಹೇಳಿದನು. ಆದರೆ ಆ ಯುವಕನು ನಿಂತ ನಿಲುವಿನಿಂದ ಮಿಸುಕಾಡಲಿಲ್ಲ.

'ನಿನಗೆ ಕಿವಿ ಕೇಳಿಸುವುದಿಲ್ಲವೇ?'' ಅಸಹನೆಗೊಂಡ ಮೋಹನದಾಸನು ಗಟ್ಟಿಯಾಗಿ ಕಿರುಚಿದ್ದನು.

ಆಗ ಅಂಗಡಿಯ ಮಾಲಕನು ಗೊಳ್ಳೆಂದು ನಕ್ಕನು.

ಮೋಹನದಾಸನಿಗೆ ತಿಳಿಯ ಹೇಳುವಂತೆ, 'ನೋಡು ಮಗೂ, ಅದು ಅವರವರ ಕರ್ಮದ ಫಲ. ಅವನು ಪೂರ್ವಜನ್ಮದಲ್ಲಿ ಪಾಪ ಮಾಡಿದ್ದನು. ಕರ್ಮದ ಫಲವನ್ನು ತನ್ನ ಜತೆಗೇ ಹೊತ್ತುಕೊಂಡು ಬಂದು ಈ ಜನ್ಮದಲ್ಲಿ ನೀಚಕುಲದಲ್ಲಿ ಹುಟ್ಟಿದ್ದಾನೆ. ಆದ್ದರಿಂದ ಅವನಿಗೆ ನಮ್ಮಂತವರ ನೆರಳಿಗೆ ನಿಲ್ಲಲೂ ಆರ್ಹತೆ ಇಲ್ಲ. ಅದು ಅವನಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ, ನೀನು ಎಷ್ಟೇ ಒತ್ತಾಯಿಸಿದರೂ ಅವನು ಈ ಅಂಗಡಿಯ ನೆರಳಿಗೆ ಬರಲಾರ'. ಎಂದು

ಹೇಳಿದನು. ಮೋಹನದಾಸನ ಜತೆಗೆ ನಿಂತಿದ್ದ ಉಳಿದಿಬ್ಬರು ಕೂಡ, ಅಂಗಡಿಯವನ ಮಾತಿಗೆ ತಮ್ಮ ಸಮ್ಮತಿಯನ್ನು ಮೌನವಾಗಿ ಸೂಚಿಸಿದ್ದರು.

ಬಾಲಕ ಮೋಹನದಾಸನಿಗೆ ಅಂಗಡಿಯವನು ಹೇಳಿದ ಮಾತಿನ ತಲೆಬುಡ ಅರ್ಥವಾಗಿದ್ದಿರಲಿಲ್ಲ. ಹಿಂದಿನ ಜನ್ಮದಲ್ಲಿ ಪಾಪ ಮಾಡಿದ್ದರೆ ಈ ಜನ್ಮದಲ್ಲಿ ಮಳೆಗೆ ಒದ್ದೆಯಾಗಿ ನಿಲ್ಲಬೇಕೆನ್ನುವ ವಾದ ಅವನಿಗೆ ಬಹಳ ತಮಾಶೆಯಾಗಿ ಕಾಣಿಸಿತು.

'ಹಾಗಾದರೆ ಹಿಂದಿನ ಜನ್ಮದಲ್ಲಿ ನಾನು ಒಳ್ಳೆಯ ಕೆಲಸ ಮಾಡಿದ್ದಿರಬೇಕು. ಆದ್ದರಿಂದ ನನಗೆ ಮಳೆಯಲ್ಲಿ ತೊಯ್ಯುವುದರಿಂದ ವಿನಾಯಿತಿ ಸಿಕ್ಕಿದೆ. ಇದೇ ವಾದವನ್ನು ಮುಂದುವರಿಸಿದರೆ, ನಾನೀಗ ಹೊರಗೆ ಹೋಗಿ ನಿಂತರೂ ಮಳೆ ನೀರಿಗೆ ಒದ್ದೆಯಾಗಬಾರದು. ನಾನು ಹೊರಗೆ ಹೋದ ಕೂಡಲೇ ಮಳೆ ನಿಲ್ಲಲೇಬೇಕು.' ಹೀಗೆಂದು ನಿರ್ಧರಿಸಿದ ಮೋಹನದಾಸನು, ಇದ್ದಕ್ಕಿದ್ದಂತೆಯೇ ತಾನು ನಿಂತಲ್ಲಿಂದ ಓಡಿ ಹೋಗಿ ಆ ಯುವಕನ ಬಳಿ ನಿಂತುಬಿಟ್ಟನು. ಆದರೆ ಅವನು ನಿರೀಕ್ಷಿಸಿದಂತೆ ಮಳೆ ನಿಲ್ಲಲಿಲ್ಲ.

ಅಂಗಡಿಯವನ ಜೊತೆ, ಅಂಗಡಿಯ ಸೂರಿನ ನೆರಳಲ್ಲಿ ನಿಂತಿದ್ದ ಇಬ್ಬರು ಹಿರಿಯರೂ, ಮೋಹನದಾಸನ ಹುಚ್ಚಾಟವನ್ನು ನೋಡಿ ನಗಲಾರಂಭಿಸಿದರು. ಮಳೆ ಜೋರಾಯಿತೇ ಹೊರತು ಕಡಿಮೆಯಾಗಲಿಲ್ಲ. ಆದರೆ ಮೋಹನದಾಸನ ನಿರ್ಧಾರ ಮಾತ್ರ ಬದಲಾಗಲಿಲ್ಲ. ನೋಡುವವರು ನಗುತ್ತಿದ್ದಾರೆಂಬುದನ್ನೂ ಲೆಕ್ಕಿಸದೆ ಮಳೆಯಲ್ಲಿ ತೊಯ್ಯುತ್ತ ಬಹಳ ಹೊತ್ತು ಹಾಗೆಯೇ ನಿಂತುಬಿಟ್ಟಿದ್ದನು.

ಪಹಿಲ್ವಾನನಂತೆ ದಷ್ಟಪುಷ್ಟವಾಗಿದ್ದ ಆ ಕಪ್ಪು ಯುವಕನು ಮಾತ್ರ, ಇದಾವುದೂ ತನಗೆ ಸಂಬಂಧಿಸಿದ ಸಂಗತಿಯೇ ಅಲ್ಲವೆಂಬಂತೆ, ಕಲ್ಲಿನಂತೆ ನಿಂತು ಆಕಾಶದತ್ತ ನೋಡುತ್ತಿದ್ದದ್ದು ಮೋಹನದಾಸನನ್ನು ಚಕಿತಗೊಳಿಸಿತ್ತು.

ಸುಮಾರು ಅರ್ಧ ತಾಸು ಎಡೆಬಿಡದೆ ಸುರಿದ ಮಳೆ, ಕ್ರಮೇಣ ನಿಧಾನವಾಗುತ್ತಾ ನಿಲ್ಲುವ ಸೂಚನೆ ನೀಡಿತು. ಮೋಹನದಾಸನಿಗೆ ಒಮ್ಮೆಲೇ ಪುನರ್ಜನ್ಮ, ಪಾಪ ಪುಣ್ಯಗಳೆಲ್ಲ ಮರೆತು ಹೋಗಿ ತನ್ನ ವ್ಯಾಯಾಮ ತರಗತಿಯ ನೆನಪಾಯಿತು. ಶಾಲೆಗೆ ಹೋಗಿ ವ್ಯಾಯಾಮದ ತರಗತಿಗೆ ಸೇರಿಕೊಳ್ಳದಿದ್ದರೆ ಸಿಗಬಹುದಾದ ಶಿಕ್ಷೆಯು, ಯಾವುದೇ ಪಾಪ ಮಾಡದೆಯೂ ತಾನು ಅನುಭವಿಸಿದ ಮಳೆಶಿಕ್ಷೆಗಿಂತಲೂ ಹೆಚ್ಚು ಭಯಾನಕವಾಗಿ ಕಾಡಿತು.

ಮಳೆ ಬಿಟ್ಟಿದ್ದರೂ ಮೋಹನದಾಸನು ಧರಿಸಿದ್ದ ಬಟ್ಟೆಗಳೆಲ್ಲವೂ ನೀರಿನಿಂದ ತೊಯ್ದು ತೊಪ್ಪಚ್ಚಿಯಾಗಿಬಿಟ್ಟಿದ್ದವು. ಒದ್ದೆ ಬಟ್ಟೆಗಳಲ್ಲಿ ನೇರವಾಗಿ ಶಾಲೆಗೆ ಹೋಗುವಂತಿರಲಿಲ್ಲ. ಮನೆ ಬಹಳ ದೂರದಲ್ಲೇನೂ ಇದ್ದಿರಲಿಲ್ಲ. ಮನೆಗೆ ಹೋಗಿ ಬೇರೆ ಬಟ್ಟೆ ಧರಿಸಿ ಶಾಲೆಗೆ ಹೋದ

ರಾಯಿತು ಎಂದು ನಿರ್ಧರಿಸಿದ ಮೋಹನದಾಸನು ಮನೆಗೆ ಧಾವಿಸಿದನು. ಬೇರೆ ಬಟ್ಟೆಗಳನ್ನು ಧರಿಸಿಕೊಂಡು ಶಾಲೆಯತ್ತ ವೇಗವಾಗಿ ಓಡಿದನು.

ಮೋಹನದಾಸನು ಅದೆಷ್ಟು ವೇಗವಾಗಿ ಓಡಿಕೊಂಡು ಹೋಗಿದ್ದರೂ ಆಟದ ಬಯಲು ತಲುಪುವಷ್ಟರಲ್ಲಿ ಬಹಳ ತಡವಾಗಿ ಹೋಗಿತ್ತು. ವ್ಯಾಯಾಮ ತರಗತಿ ಮುಗಿಸಿಕೊಂಡು ಮಕ್ಕಳೆಲ್ಲ ಮನೆಗೆ ಮರಳಿ ಹೋಗಿದ್ದರು. ಮೋಹನದಾಸನಿಗೆ ನಿರಾಸೆಗಿಂತ ಭಯವೇ ಹೆಚ್ಚಾಗಿ ಕಾಡಿತ್ತು. ಮರುದಿನದ ತರಗತಿಯಲ್ಲಿ ಇತರ ಹುಡುಗರೆಲ್ಲರ ಎದುರು ಶಿಕ್ಷೆಯಾಗುವುದರಲ್ಲಿ ಯಾವ ಅನುಮಾನವೂ ಉಳಿದಿದ್ದಿರಲಿಲ್ಲ.

ಕಲ್ಲುಗುಂಡಿನಂತಹ ಕಪ್ಪು ಯುವಕನ ಜತೆ ತಮಾಶೆಗಾಗಿ ಮಳೆಯಲ್ಲಿ ತೊಯ್ದುಕೊಳ್ಳುತ್ತ ಅರ್ಧ ತಾಸು ವ್ಯರ್ಥ ಮಾಡಿಕೊಳ್ಳುವ ಬದಲಿಗೆ, ಅದೇ ಮಳೆಯಲ್ಲಿ ತೊಯ್ದುಕೊಂಡು ಶಾಲೆಗೇ ಓಡಿಕೊಂಡು ಹೋಗಿದ್ದಿದ್ದರೆ ಚೆನ್ನಾಗಿರುತ್ತಿತ್ತೇನೋ ಎಂದು ಚಿಂತಿಸಿದನು. ಆದರೆ ಆಗಿ ಹೋದ ತಪ್ಪಿಗೆ ಶಿಕ್ಷೆ ಅನುಭವಿಸಲೇಬೇಕಾಗಿತ್ತು.

ಸೋಮವಾರದ ದಿನ ಮುಂಜಾನೆ ಮೋಹನದಾಸನು ಹೆದರುತ್ತಲೇ ಶಾಲೆಗೆ ಹೋಗಿದ್ದನು. ಅವನ ಭಯ ನಿಜವಾಗಿತ್ತು. ತರಗತಿ ಆರಂಭವಾಗುವ ಮೊದಲೇ ಶ್ರೀ ಜಿಮಿಯವರು ಮೋಹನದಾಸನನ್ನು ತನ್ನ ಕೊಠಡಿಗೆ ಕರೆಸಿಕೊಂಡು ಎರಡು ಆಣೆ ( ಈಗಿನ ಹನ್ನೆರಡು ಪೈಸೆ) ದಂಡ ವಿಧಿಸಿದ್ದೇನೆಂದು ಘೋಷಿಸಿದ್ದರು.

ಮೋಹನದಾಸನಿಗೆ ಅಳುವೇ ಬಂದುಬಿಟ್ಟಿತ್ತು; ಆದರೆ ಅಳಲಿಲ್ಲ. ದಂಡ ತೆರುವಂತಹ ದೊಡ್ಡ ತಪ್ಪನ್ನು ತಾನು ಮಾಡಲಿಲ್ಲವೆಂದೇ ಶ್ರೀ ಜಿಮಿಯವರಲ್ಲಿ ವಿನಯವಾಗಿ ವಿನಂತಿಸಿದನು. ಆದರೆ ಈ ಹಿಂದೆಯೇ ಮೋಹನದಾಸನು ವ್ಯಾಯಾಮ ತರಗತಿಯಿಂದ ತಪ್ಪಿಸಿಕೊಳ್ಳಲು ವಿನಾಯಿತಿ ಬಯಸಿ ವಿನಂತಿಸಿಕೊಂಡದ್ದು  ಅವರಿಗೆ ನೆನಪಿತ್ತು. ಆದ್ದರಿಂದ, ಮೋಹನದಾಸನು ಸುಳ್ಳು ಸುಳ್ಳೇ ಮಳೆಯ ಕಾರಣ ಕೊಡುತ್ತಿದ್ದಾನೆಂದು ಅವರು ಭಾವಿಸಿದ್ದರು.

ಮೋಹನದಾಸನು ತಾನು ಹೇಳುತ್ತಿರುವುದೆಲ್ಲವೂ ನಿಜವೆಂಬುದನ್ನು ಶ್ರೀ ಜಿಮಿಯವರಿಗೆ ಮನದಟ್ಟು ಮಾಡುವ ಸಲುವಾಗಿ, ತಾನು ವ್ಯಾಯಾಮದ ತರಗತಿಗೆ ಬರುವ ದಾರಿಯಲ್ಲಿ ಮಳೆ ಬಂದಾಗ ರಕ್ಷಣೆಗೆಂದು ಆಶ್ರಯ ಪಡೆದಿದ್ದ ಅಂಗಡಿಯ ಗುರುತು ಹೇಳಿದನು. ಮಾತ್ರವಲ್ಲ, ತಾವು ಇಷ್ಟಪಟ್ಟರೆ ಹೋಗಿ ಪರಿಶೀಲಿಸಬಹುದು ಎಂದೂ ತಿಳಿಸಿದನು. ಹಾಗೆ ತಿಳಿಸುವಾಗ, ಅಂಗಡಿಯ ಬದಿಯಲ್ಲಿ ನಿಂತಿದ್ದ ಕಪ್ಪುಹುಡುಗನ ಜತೆಗೆ ತಾನು ನಿಂತು, ಮಳೆಗೆ ತೊಯ್ದು ತಮಾಶೆಯ ಘಟನೆಯನ್ನೂ ವಿವರಿಸಿದನು.

ಶ್ರೀ ಜಿಮಿಯವರ ಮುಖದ ಬಣ್ಣ ಇದ್ದಕ್ಕಿದ್ದಂತೆ ಬದಲಾಯಿತು. ಮೋಹನದಾಸನು ಹೇಳಿದ ತಮಾಶೆಯ ಘಟನೆಯು  ಅವರಿಗೆ ತಮಾಶೆಯಾಗಿ ಕಾಣಿಸಿದ್ದಿರಲಿಲ್ಲ. ಅವರಿಗೂ ಇಂತಹ

ಅನುಭವವಾಗಿತ್ತು. ಅವರ ಮನೆಯ ಹೂತೋಟದಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ಮಾಲಿಗಳು ಮಾಂಸ ತಿನ್ನುವ ಜಾತಿಗೆ ಸೇರಿದ್ದರು. ಅವರಲ್ಲಿ ಕಾಲಿಯ ಎಂಬ ಹೆಸರಿನ ಒಬ್ಬಾತ, ತಾನು ಕೆಲಸ ಮಾಡುತ್ತಿರುವಾಗಲೂ ಬೇರೆಯವರಿಂದ ಮುಟ್ಟಿಸಿಕೊಳ್ಳುವುದರಿಂದ ತಪ್ಪಿಸಿ ಕೊಳ್ಳಲು ಯತ್ನಿಸುತ್ತಿದ್ದನು.

ಮಾಂಸವೆಂದರೆ ಮಾರು ದೂರ ಓಡುವ ಮೇಲ್ಜಾತಿಯ ಬ್ರಾಹ್ಮಣ ಪಂಡಿತರ ಮನೆಯ ಮಡಿವಂತಿಕೆಯನ್ನು ಶ್ರೀ ಜಿಮಿಯವರು ಹಲವು ಬಾರಿ ಕಂಡಿದ್ದರು. ಅದರೆ, ಮಾಂಸ ತಿನ್ನುವುದು ಮಾತ್ರವಲ್ಲ, ಬೇರೆಯವರು ತಿಂದು ಉಳಿಸಿದ ಮಾಂಸದ ಎಂಜಲನ್ನೂ ತಿನ್ನಲು ಹೇಸದ 'ಕಾಲಿಯ'ನ ಮುಟ್ಟಿಸಿಕೊಳ್ಳದ ಮಡಿವಂತಿಕೆ ಮಾತ್ರ ಅವರಿಗೆ ವಿಚಿತ್ರವಾಗಿ ಕಾಣಿಸಿತ್ತು.

ಎಷ್ಟೇ ಒತ್ತಾಯಿಸಿದರೂ 'ಕಾಲಿಯ' ಮನೆಯ ಹೊಸ್ತಿಲೇನು, ಮನೆಯೆದುರಿನ ಅಂಗಳವನ್ನು ಕೂಡಾ ದಾಟಲು ನಿರಾಕರಿಸುತ್ತಿದ್ದನು. ಅವನ ಕೆಲಸ ಏನಿದ್ದರೂ ಹಿತ್ತಲಿನ ತೋಟದಲ್ಲಿ ಮಾತ್ರ. ನೀಡಿದ ತಿಂಡಿಯನ್ನು, ಅದು ತಿಂದುಳಿಸಿದ ಎಂಜಲೇ ಆಗಿದ್ದರೂ ಅದನ್ನು ಸ್ವೀಕರಿಸುವಾಗ, ನೀಡುತ್ತಿರುವವನ ಬೆರಳುಗಳು ತನ್ನ ಬೆರಳುಗಳಿಗೆ ತಾಕದಂತೆ ಜಾಗ್ರತೆ ವಹಿಸುತ್ತಿದ್ದುದನ್ನು ಹಲವು ಬಾರಿ ನೋಡಿ ಶ್ರೀ ಜಿಮಿಯವರು ಅಚ್ಚರಿಗೊಂಡಿದ್ದರು.

ಆದರೆ ಮುಂದೆ, ಕೆಲವು ದಿನಗಳ ಬಳಿಕ ಅವರಿಗೆ ಕಾಲಿಯನ ಮಡಿವಂತಿಕೆಯ ನಿಜವಾದ ಗುಟ್ಟು ಗೊತ್ತಾಗಿ ಹೋಗಿತ್ತು. ಕಾಲಿಯನು ಬೇರೆಯವರಿಂದ ಮುಟ್ಟಿಸಿಕೊಳ್ಳುವುದನ್ನು ತಪ್ಪಿಸಿ ಕೊಳ್ಳಲು ಯತ್ನಿಸುವುದು, ಅವನ ಮಡಿವಂತಿಕೆಗಾಗಿ ಅಲ್ಲ; ಬದಲಿಗೆ, ಅದು ಬೇರೆಯವರ ಮಡಿವಂತಿಕೆಯನ್ನು ಉಳಿಸಿ ಕೊಡುವ ಸಲುವಾಗಿ ಎಂಬ ಸತ್ಯ ತಿಳಿದು ಬಹಳವಾಗಿ ನೊಂದುಕೊಂಡಿದ್ದರು.

ಇದೆಲ್ಲವನ್ನೂ ನೆನಪಿಸಿಕೊಳ್ಳುತ್ತಾ, ಮೋಹನದಾಸನ ಕಪಟವಿಲ್ಲದ ಕಣ್ಣುಗಳನ್ನು ನೇರವಾಗಿ ದಿಟ್ಟಿಸಿದರು. ಆದರೆ ತಾನು ವಿಧಿಸಿದ ದಂಡವನ್ನು ಮರುಕ್ಷಣದಲ್ಲಿ ಹಿಂದೆಗೆದುಕೊಳ್ಳುವುದು ಶಿಕ್ಷಕನಾದ ತನಗೆ ಶೋಭಿಸದ ಸಂಗತಿಯೆಂದು ನಿರ್ಧರಿಸಿದರು. 'ಹಾಗಾದರೆ ನಾಳೆ ಮನೆ ಯಿಂದ ಬರುವಾಗ, ವ್ಯಾಯಾಮದ ತರಗತಿಯಿಂದ ನಿನಗೆ ವಿನಾಯಿತಿ ನೀಡುವಂತೆ ನಿನ್ನ ತಂದೆಯವರಿಂದ ಒಂದು ಕಾಗದ ಬರೆಸಿ ತೆಗೆದುಕೊಂಡು ಬಾ.' ಎಂದು ಆದೇಶ ನೀಡಿದರು.

ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಕರಮಚಂದ್ ಗಾಂಧಿಗೆ, ತನ್ನ ಮಗನು ಬೇಗನೆ ಮರಳಿ ಬಂದು ತನ್ನ ಸೇವೆಗೆ ದೊರಕುವುದು ಇಷ್ಟದ ವಿಷಯವೇ ಆಗಿತ್ತು. ಅವರು ಕೂಡಲೇ ಆ ರೀತಿಯ ಪತ್ರ ಬರೆದು ಕೊಟ್ಟರು. ಪತ್ರವನ್ನು ಓದಿದ ಶ್ರೀ ಜಿಮಿಯವರು, ಮೊದಲೇ ನಿರ್ಧರಿಸಿ ದ್ದಂತೆ ಮೋಹನದಾಸನಿಗೆ ವಿಧಿಸಿದ್ದ ದಂಡವನ್ನು ಹಿಂತೆಗೆದುಕೊಂಡರಲ್ಲದೆ, ಅವನಿಗೆ ಆ ದಿನದಿಂದ ವ್ಯಾಯಾಮ ತರಗತಿಯಿಂದ ವಿನಾಯಿತಿಯನ್ನೂ ನೀಡಿದರು.

# ಮಾಂಸ ತಿಂದು ಗಟ್ಟಿಯಾಗಿ

ಪ್ರೌಢಶಾಲೆಯಲ್ಲಿ ಓದುತ್ತಿರುವ ದಿನಗಳಲ್ಲಿ ಮೋಹನದಾಸನಿಗೆ ಹೆಚ್ಚು ಸ್ನೇಹಿತರಿದ್ದಿರಲಿಲ್ಲ. ಸದಾ ಒಂಟಿಯಾಗಿಯೇ ತನ್ನ ಪುಸ್ತಕಗಳ ಜತೆ, ತರಗತಿಯ ಕೊಠಡಿಯ ಮೂಲೆಯಲ್ಲೋ, ಆಟದ ಬಯಲಿನ ಬದಿಯಲ್ಲಿ ಆಕಾಶದೆತ್ತರ ಬೆಳೆದು ನಿಂತಿದ್ದ ನೇರಳೆ ಮರದ ಬುಡದಲ್ಲೋ ಕುಳಿತು ತನ್ನದೇ ಯೋಚನೆಗಳಲ್ಲಿ ಮುಳುಗಿ ಹೋಗಿರುತ್ತಿದ್ದನು. ಸಂಕೋಚದ ಮುದ್ದೆಯಂತಿದ್ದ ಮೋಹನದಾಸನ ಜತೆಗೆ ಗೆಳೆತನ ಮಾಡುವ ಆಸಕ್ತಿಯೂ ಬೇರೆ ವಿದ್ಯಾರ್ಥಿಗಳಿಗಿದ್ದಿರಲಿಲ್ಲ.

ಮೋಹನದಾಸನಿಗಿಂತ ಒಂದು ತರಗತಿ ಮೇಲಿದ್ದ ಅವನ ಕಿರಿಯಣ್ಣ ಕರ್ಸನ್‌ದಾಸನಿಗೆ ಷೇಖ್ ಮೆಹತಾಬ್ ಎಂಬ ಗೆಳೆಯನಿದ್ದನು. ಮೆಹತಾಬನ ಬಗ್ಗೆ ಗಾಂಧಿಕುಟುಂಬದಲ್ಲಿ ಒಳ್ಳೆಯ ಅಭಿಪ್ರಾಯವಿದ್ದಿರಲಿಲ್ಲ. ಮೆಹತಾಬನ ಮನೆಯವರು ಬಹಳ ಸಿರಿವಂತರಾಗಿದ್ದರು. ಮೆಹತಾಬನು ಕಾಣಲು ಧೃಢಕಾಯನಾಗಿ ಸುಂದರನಾಗಿದ್ದನು. ನೀಲಬಣ್ಣದ ಅವನ ಕಣ್ಣುಗಳಲ್ಲಿ ಯಾರನ್ನೂ ಮೋಡಿ ಮಾಡಬಲ್ಲ ಬೆಳಕಿತ್ತು. ಆದರೆ ಮೋಹನದಾಸನ ಮನೆಯವರಿಗೆ ಅವನ ಮಾತುಕತೆ, ವರ್ತನೆಗಳು ಇಷ್ಟವಾಗುತ್ತಿರಲಿಲ್ಲ. ಮೆಹತಾಬನ ಜತೆ ಗೆಳೆತನ ಮುಂದುವರಿಸಬಾರದು ಎಂಬುದಾಗಿ ಕರ್ಸನ್‌ದಾಸನಿಗೆ ಮನೆಯಲ್ಲಿ ತಾಯಿ ಮತ್ತು ದೊಡ್ಡಣ್ಣ ಲಕ್ಷ್ಮೀದಾಸನವರು ಹಲವಾರು ಬಾರಿ ಎಚ್ಚರಿಕೆ ನೀಡಿದ್ದರು.

ಆದರೆ, ಇವೇ ಕಾರಣಗಳು ಮೋಹನದಾಸನಿಗೆ ಮೆಹತಾಬನ ಬಗ್ಗೆ ಆಸಕ್ತಿ ಹುಟ್ಟಿಸಿದ್ದವು. ಮೆಹತಾಬನನ್ನು ಒಳ್ಳೆಯ ದಾರಿಗೆ ತರುವ ಉದ್ದೇಶದಿಂದ ಮೋಹನದಾಸನು, ಅವನನ್ನು ತನ್ನ ಗೆಳೆಯನನ್ನಾಗಿ ಮಾಡಿಕೊಂಡಿದ್ದನು.

ಮೆಹತಾಬನ ಜತೆ ತನ್ನ ಗಂಡ ಗೆಳೆತನ ಮಾಡಿದ್ದಾರೆ ಎಂಬುದು ಹೆಂಡತಿಯಾದ ಕಸ್ತೂರಿಗೆ ಬಲು ಬೇಗ ಗೊತ್ತಾಗಿಬಿಟ್ಟಿತ್ತು. ಆಕೆ ಗಂಡನ ವರ್ತನೆಯಿಂದ ಹೆದರಿಬಿಟ್ಟಿದ್ದಳು. ತಾವು ಮಾಡುತ್ತಿರುವುದು ಸರಿಯಲ್ಲವೆಂಬುದನ್ನು ಅವಳು ಸೂಚ್ಯವಾಗಿ ಗಂಡನಿಗೆ ತಿಳಿಸಲು ಪ್ರಯತ್ನಿಸಿದ್ದಳು. ಆದರೆ ಮೋಹನದಾಸನು ಒಮ್ಮೆ ನಿರ್ಧರಿಸಿದನೆಂದರೆ, ಆ ನಿರ್ಧಾರವನ್ನು ಸುಲಭವಾಗಿ ಬದಲಿಸುವುದಿಲ್ಲ ಎಂಬುದು ಕಸ್ತೂರಿಗೆ ಗೊತ್ತಿತ್ತು. ಕೊನೆಗೆ, ಬೇರೆ ದಾರಿ ಕಾಣದ ಕಸ್ತೂರಿಯು ತನ್ನ ಅತ್ತೆಯವರಿಗೆ ವಿಷಯ ತಿಳಿಸಿದಳು.

ಗಾಬರಿಗೊಂಡ ಪುತಲೀಬಾಯಿಯವರು ತಮ್ಮ ಗಂಡ ಕರಮಚಂದ್ ಗಾಂಧಿಯವರಿಗೇನಾದರೂ ಈ ಸಂಗತಿ ತಿಳಿದರೆ ದೊಡ್ಡ ರಾದ್ಧಾಂತವಾಗಬಹುದೆಂದು ಹೆದರಿದರು. ತಮ್ಮ ಹಿರಿಮಗ ಲಕ್ಷ್ಮಿದಾಸನ ಮೂಲಕ ಮೋಹನದಾಸನಿಗೆ ತಿಳುವಳಿಕೆ ಹೇಳಲು ಪ್ರಯತ್ನಿಸಿದರು. ಅಂತೆಯೇ ಲಕ್ಷ್ಮಿದಾಸನವರು ಒಂದು ದಿನ ಮೋಹನದಾಸನನ್ನು ಕರೆದು ಮೆಹತಾಬನ ಜತೆಗೆ ಸ್ನೇಹವನ್ನು ಮುಂದುವರಿಸಬಾರದೆಂದು ಬುದ್ಧಿವಾದ ಹೇಳಿದರು.

ಹಿರಿಯಣ್ಣನ ಎಲ್ಲ ಮಾತುಗಳನ್ನೂ ಶಾಂತವಾಗಿ ಆಲಿಸಿದ ಮೋಹನದಾಸನು ಬಳಿಕ ಹೀಗೆಂದನು: 'ಮೆಹತಾಬನ ಅವಗುಣಗಳು ಮಾತ್ರ ನಮಗೆ ಈಗ ಗೊತ್ತಾಗಿದೆ. ಅವನಲ್ಲೂ ಇರಬಹುದಾದ ಒಳ್ಳೆಯ ಗುಣಗಳನ್ನು ನಾನು ಕಂಡುಹಿಡಿಯಬೇಕಾಗಿದೆ. ಮೆಹತಾಬನ ಸಹವಾಸದಿಂದ ನಾನು ಕೆಟ್ಟವನಾಗಲಾರೆ ಎಂಬ ಧೈರ್ಯ ನನಗಿದೆ. ನನ್ನ ಸಹವಾಸದಿಂದ ಅವನು ಒಳ್ಳೆಯವನಾಗುತ್ತಾನೆ ಎಂಬ ಭರವಸೆ ನನಗಿದೆ. ನನ್ನ ವಿಷಯದಲ್ಲಿ ನೀವು ಯಾರೂ ಚಿಂತೆ ಮಾಡುವ ಅಗತ್ಯವಿಲ್ಲ.' ಎಂದು ಹೇಳಿ ಅವರನ್ನು ಸಮಾಧಾನಪಡಿಸಲು ಯತ್ನಿಸಿದ್ದನು.

ಆಗ ಪುತಳೀಬಾಯಿಯವರು ತನ್ನ ಹಿರಿಯ ಅನುಭವದಿಂದ ಅರಿತ ಸತ್ಯವನ್ನು ಮಗನಿಗೆ ತಿಳಿಸಿ ಉಪದೇಶಿಸಿದರು:

'ಗೆಳೆತನದ ನಡುವೆ ಸುಧಾರಣೆ ಸಾಧ್ಯವಾಗುವುದಿಲ್ಲ. ಯಾಕೆಂದರೆ, ಗೆಳೆಯರ ನಡುವೆ ಅನನ್ಯವಾದ ಸಲಿಗೆಯ ಭಾವ ಇರುತ್ತದೆ. ಆದರೆ, ಸುಧಾರಕನು ತಾನು ಯಾರನ್ನು ಸುಧಾರಿಸ ಬೇಕೆಂದು ಬಯಸುತ್ತಾನೆಯೋ ಆತನ ಜತೆಗೆ ಸಂಪೂರ್ಣ ಸಲಿಗೆಯಿಂದ ಇರಬಾರದು. ಸಮಾನವಾದ ಗುಣಶೀಲಗಳುಳ್ಳವರ ನಡುವೆ ಮಾತ್ರ ಗೆಳೆತನ ಶೋಭಿಸುತ್ತದೆ, ಯಶಸ್ವಿಯಾಗಿ ಮುಂದುವರಿಯುತ್ತದೆ. ಒಬ್ಬ ಗೆಳೆಯನ ಪ್ರಭಾವ ಮತ್ತೊಬ್ಬ ಗೆಳೆಯನ ಮೇಲೆ ಬೀಳುವುದು ನಿಜವಾದರೂ, ಒಬ್ಬನಿಂದ ಇನ್ನೊಬ್ಬನ ಸುಧಾರಣೆಯಾಗುವ ಸಂಭವ ಕಡಿಮೆ. ಏಕೆಂದರೆ ಒಬ್ಬ ಮನುಷ್ಯನು ಮತ್ತೊಬ್ಬನ ದೋಷಗಳನ್ನು ಅನುಕರಿಸುವಷ್ಟು ಸುಲಭವಾಗಿ ಅವನ ಗುಣಗಳನ್ನು ಅನುಕರಿಸುವುದಿಲ್ಲ.'

ಮೋಹನದಾಸನಿಗೆ ತನ್ನ ತಾಯಿಯ ಮಾತುಗಳೆಲ್ಲವೂ ಸರಿಯೆಂದು ಅನ್ನಿಸಿದ್ದರೂ, ತಾನು ಮೆಹತಾಬನನ್ನು ಹೇಗಾದರೂ ಮಾಡಿ ಸರಿದಾರಿಗೆ ತಂದೇ ತರುತ್ತೇನೆಂದು ಅದಾಗಲೇ ನಿರ್ಧರಿಸಿಬಿಟ್ಟಿದ್ದರಿಂದ, ತನಗೆ ಒಂದು ಅವಕಾಶ ನೀಡುವಂತೆ ತಾಯಿಯನ್ನು ಪ್ರಾರ್ಥಿಸಿದ್ದನು. ಮೋಹನದಾಸನ ಹಠವನ್ನು ಚೆನ್ನಾಗಿ ತಿಳಿದಿದ್ದ ಅವರು, ಇಷ್ಟವಿಲ್ಲದ ಮನಸ್ಸಿನಿಂದ ಸುಮ್ಮನಿದ್ದರು.

ಆ ದಿನಗಳಲ್ಲಿ ರಾಜಕೋಟೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಮಾಜಸುಧಾರಕರ ಸಂಘ ವೊಂದು, ಸಾಮಾಜಿಕ ಸಮಸ್ಯೆಗಳ ವಿರುದ್ಧ ಜನಜಾಗೃತಿ ಉಂಟು ಮಾಡಲು ಉತ್ಸಾಹದಿಂದ ಕೆಲಸ ಮಾಡುತ್ತಿತ್ತು. ಮೋಹನದಾಸನು ಕಲಿಯುತ್ತಿದ್ದ ಪ್ರೌಢಶಾಲೆಯ ಕೆಲವು ಶಿಕ್ಷಕರೂ ಆ ಸಂಘಟನೆಯ ಸದಸ್ಯರಾಗಿರುವುದು ಮೆಹತಾಬನಿಗೆ ತಿಳಿದಿತ್ತು. ಪ್ರತಿ ತಿಂಗಳ ಕೊನೆಯ ಶನಿವಾರದ ಸಂಜೆಯ ಹೊತ್ತು ಸ್ಥಳೀಯ ವಾಚನಾಲಯದ ಪಕ್ಕದ ಹೋಟೆಲಿನ ಅಟ್ಟದ ಮೇಲಿನ ಪುಟ್ಟ ಕೊಠಡಿಯನ್ನು ಆವರಿಸಿರುವ ನಸುಗತ್ತಲಲ್ಲಿ, ಬಹುಗಂಭೀರವಾಗಿ ನಡೆಯುತ್ತಿದ್ದ ಸಭೆಗಳಿಗೆ ಕುತೂಹಲದಿಂದ ಮೆಹತಾಬನೂ ಒಂದೆರಡು ಬಾರಿ ಹೋಗಿಬಂದಿದ್ದನು.

ಸುಧಾರಕರ ಗುಪ್ತಸಭೆಗಳ ಬಗ್ಗೆ ಮೆಹತಾಬನಿಂದ ಮಾಹಿತಿಪಡೆದ ಮೋಹನದಾಸನಿಗೂ ಸುಧಾರಕರ ಸಂಘದ ಬಗ್ಗೆ ಆಸಕ್ತಿ ಹುಟ್ಟಿತ್ತು. ಒಂದು ಶನಿವಾರ ಸಂಜೆ ಮೋಹನದಾಸನೂ ಮೆಹತಾಬನೊಂದಿಗೆ ಸುಧಾರಕರ ಸಭೆಗೆ ಹೋದನು.

ಹೋಟೆಲಿನ ಅಟ್ಟದ ಕೊಠಡಿಯಲ್ಲಿ ಅದಾಗಲೇ ಹತ್ತು ಹನ್ನೆರಡು ಮಂದಿ ಸೇರಿದ್ದರು. ಕೊಠಡಿಯೊಳಗೆ ಗೋಡೆಗೊರಗಿಸಿ ಇರಿಸಲಾಗಿದ್ದ ಮರದ ಬೆಂಚುಗಳಲ್ಲಿ ಕುಳಿತಿದ್ದ ಸುಧಾರಕರ ಮುಖದ ಭಾವನೆಗಳನ್ನು ಸಿಗರೇಟಿನ ದಟ್ಟ ಹೊಗೆ ಮರೆಮಾಚಿತ್ತು. ಮೋಹನದಾಸನು ಮೆಹತಾಬನ ಜತೆ ಕೊಠಡಿಯೊಳಗೆ ಹೆಜ್ಜೆಯಿರಿಸಿದಾಗ ಒಂದಿಬ್ಬರು ಹೊಸಬರತ್ತ ಕುತೂಹಲದಿಂದ ನೋಡಿದರಾದರೂ, ನಂತರ ಇವರ ಇರುವಿಕೆಯನ್ನು ಮರೆತವರಂತೆ ತಮ್ಮ ತಮ್ಮ ಮಾತಿನಲ್ಲಿ ಮುಳುಗಿ ಹೋದರು. ಮೆಹತಾಬನು ಕಂದುಮೀಸೆಯ ಸೂಟುಧಾರಿಯೊಬ್ಬನತ್ತ ಪರಿಚಯದ ನೋಟ ಬೀರಿ ನಮಸ್ತೆ ಎಂದುದನ್ನೂ ಅವನು ಗಮನಿಸಿದಂತಿರಲಿಲ್ಲ.

ಮೋಹನದಾಸನು ಬಾಗಿಲ ಬಳಿಯ ಬೆಂಚಿನ ಮೇಲೆ ಮೆಹತಾಬನ ಪಕ್ಕದಲ್ಲಿ ಕುಳಿತು ಸುತ್ತಲೂ ಕುತೂಹಲದ ಕಣ್ಣು ಹಾಯಿಸಿದನು. ಸೇರಿದ್ದವರು ಎಲ್ಲರೂ ಗಂಡಸರೆ. ಒಂದಿಬ್ಬರು ಸೂಟು ಬೂಟು ಹಾಕಿಕೊಂಡಿದ್ದರೆ, ಉಳಿದವರಲ್ಲಿ ಹೆಚ್ಚಿನವರು ಧೋತಿ ಉಟ್ಟು ಅಂಗಿ ತೊಟ್ಟುಕೊಂಡವರು.

ಕೊಠಡಿಯ ಬಲಮೂಲೆಯಲ್ಲಿ ಕುಳಿತಿದ್ದ ಉರುಟು ಮುಖದ ಮಧ್ಯವಯಸ್ಕರೊಬ್ಬರು ತಾವು ತೊಟ್ಟಿದ್ದ ಅಂಗಿಯಮೇಲೆ ತೋಳಿಲ್ಲದ ಕರಿಕೋಟು ಧರಿಸಿದ್ದರು. ಅವರ ಕಣ್ಣುಗಳಲ್ಲಿ ಮಿನುಗುತಿದ್ದ ಉತ್ಸಾಹದ ಬೆಳಕು ಅ ಮಬ್ಬುಗತ್ತಲಲ್ಲೂ ಮೋಹನದಾಸನಿಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಉಳಿದವರು ಮಾತನಾಡುವಾಗ ಅವರನ್ನು ಗೌತಮ್ ಭಾಯಿ ಎಂದು ಸಂಬೋಧಿಸುತ್ತಿದ್ದರು. ಗೌತಮ್ ಭಾಯಿಯವರೇ ಆ ಸುಧಾರಕಸಂಘದ ಸಂಚಾಲಕರೆಂಬುದಾಗಿ ಮೆಹತಾಬನು ಪರಿಚಯಿಸಿದ್ದನು.

ಕರಿಬೂಟು ಸೂಟು ತೊಟ್ಟು ಬಲಗೈಯಲ್ಲಿ ಬಂಗಾರದ ಕೈಗಡಿಯಾರ ಧರಿಸಿದ್ದ ಸುಮಾರು ಮೂವತ್ತರ ವಯಸ್ಸಿನ ಅಗಲ ಮುಖದ, ಪೈಲವಾನನಂತೆ ಕಾಣಿಸುತಿದ್ದ ಯುವಕನೊಬ್ಬನು ಬೇರೆಯವರ ಮಾತುಗಳು ಯಾರಿಗೂ ಕೇಳಿಸದಂತೆ ಗಟ್ಟಿಯಾಗಿ ತನ್ನ ಅಭಿಪ್ರಾಯವನ್ನು ಸಭೆಯ ಮುಂದಿಡುತ್ತಿದ್ದನು:

'ಬ್ರಿಟಿಷರು ನಮ್ಮ ಮೇಲೆ ಅಧಿಕಾರ ಸ್ಥಾಪಿಸಲು ಸಾಧ್ಯವಾದದ್ದು ಅವರ ಶಾರೀರಿಕ ಸಾಮರ್ಥ್ಯದಿಂದಲೇ ಹೊರತು ಅವರ ಬುದ್ಧಿವಂತಿಕೆಯಿಂದಲ್ಲ. ಸಾವಿರಾರು ವರ್ಷಗಳಿಂದ ಜಗತ್ತಿಗೆ ಜ್ಞಾನವನ್ನು ಹಂಚಿದ ದೇಶ ನಮ್ಮದು. ನಾವು ಬುದ್ಧಿವಂತಿಕೆಯಲ್ಲಿ ಜಗತ್ತಿನ ಯಾರಿಗೂ ಕಡಿಮೆಯವರಲ್ಲ. ನಾವು ಸೋತಿರುವುದು ನಮ್ಮ ದೈಹಿಕ ಸಾಮರ್ಥ್ಯದಲ್ಲಿ. ಬ್ರಿಟಿಷರೆಲ್ಲರೂ

ಮಾಂಸಾಹಾರಿಗಳು. ಆದ್ದರಿಂದಲೇ ಅವರು ಭಾರತೀಯರಾದ ನಮಗಿಂತ ಹೆಚ್ಚು ಗಟ್ಟಿ ಮುಟ್ಟಾಗಿದ್ದಾರೆ. ಆದ್ದರಿಂದಲೇ ಅವರು ನಮ್ಮನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದ್ದಾರೆ.'

ಯುವಕನ ಮಾತುಗಳನ್ನು ನಡುವೆಯೇ ತಡೆದ ಗೌತಮ್ ಭಾಯಿಯವರು ನಸುನಗುತ್ತಲೇ ಹೇಳಿದ್ದರು, 'ಮಗೂ, ನಿನ್ನ ಮಾತನ್ನು ವಾದದ ದೃಷ್ಟಿಯಿಂದ ಒಂದೆರಡು ನಿಮಿಷ ನಿಜವೆಂದೇ ಒಪ್ಪಿಕೊಳ್ಳೋಣ. ಈಗ ನೀನೇ ಹೇಳು, ನಮ್ಮ ದೇಶದಲ್ಲಿ ನೂರಕ್ಕೆ ತೊಂಬತ್ತು ಪಾಲು ಜನರು ಮಾಂಸಾಹಾರಿಗಳೇ ಆಗಿದ್ದಾರೆಂಬುದನ್ನು ನೀನು ಇಲ್ಲವೆಂದು ಹೇಳುತ್ತೀಯಾ? ನಾವು ಕೆಲವರು ಸಸ್ಯಾಹಾರಿಗಳಾಗಿದ್ದ ಮಾತ್ರಕ್ಕೆ ಭಾರತೀಯರೆಲ್ಲ ದುರ್ಬಲರು, ಮಾಂಸ ತಿನ್ನುವ ಬ್ರಿಟಿಷರು ನಮಗಿಂತ ಹೆಚ್ಚು ಶಕ್ತಿಶಾಲಿಗಳು, ಆದ್ದರಿಂದಲೇ ಅವರು ನಮ್ಮನ್ನು ತಮ್ಮ ಶಕ್ತಿಯಿಂದ ಆಳುತ್ತಿದ್ದಾರೆಂದು ಹೇಳುವುದು ಸರಿಯಾದ ವಾದವಲ್ಲ.'

ಗೌತಮ್ ಭಾಯಿಯವರ ಮಾತುಗಳಿಂದ ಉದ್ರೇಕಗೊಂಡ ಸೂರಜ್ ಸಿಂಘ್ ಮತ್ತಷ್ಟು ಗಟ್ಟಿಯಾಗಿ ಪ್ರಶ್ನಿಸಿದ್ದ, 'ಭಾಯಿ ಸಾಬ್, ಹಾಗಾದರೆ ನೀವೇ ಹೇಳಿ, ದೇಶದ ಬಗ್ಗೆ ಪ್ರೀತಿ ಇಟ್ಟು ಇಲ್ಲಿಗೆ ಬಂದಿರುವ ಜನರಲ್ಲಿ ನನ್ನನ್ನು ಹೊರತುಪಡಿಸಿ ಮಾಂಸ ತಿನ್ನುವವರು ಎಷ್ಟು ಮಂದಿಯಿದ್ದಾರೆ? ಒಬ್ಬರೋ ಇಬ್ಬರೋ ಇರಬಹುದು, ಉಳಿದವರೆಲ್ಲ ನಿಮ್ಮಂತೆ ಹಸಿರೆಲೆ ತಿನ್ನುವ ಜಾತಿಯವರು.'

ಗೌತಮ್ ಭಾಯಿಯವರು ಕೋಪಗೊಳ್ಳಲಿಲ್ಲ; ಬಹಳ ನಿಧಾನವಾಗಿ ನೋವಿನಿಂದೆಂಬಂತೆ ಉತ್ತರಿಸಿದ್ದರು, 'ಮಗೂ, ನನ್ನ ಕಾಳಜಿಯಿರುವುದೂ ಅದರಲ್ಲೇ. ಬ್ರಿಟಿಷರ ವಿರುದ್ಧದ ನಮ್ಮ ಹೋರಾಟದಲ್ಲಿ, ನಾವು ಹಸಿರೆಲೆ ತಿನ್ನುವ ಜಾತಿಯವರು ಮಾತ್ರವಲ್ಲ, ಮಾಂಸ ತಿನ್ನುವ ಎಲ್ಲ ಜಾತಿಯವರೂ ಭಾಗವಹಿಸುವಂತಾಗಬೇಕು. ಆಗ ಮಾತ್ರ ನಾವು . . . ., ಅದೇ, ನಿನ್ನದೇ ಭಾಷೆಯಲ್ಲಿ ಹೇಳುವುದಾದರೆ, ಹಸಿರೆಲೆ ತಿನ್ನುವ ನಾವೆಲ್ಲ ಗಟ್ಟಿಯಾಗಿ ಬ್ರಿಟಿಷ್ ಸರಕಾರದ ವಿರುದ್ಧ ಹೋರಾಡಿ ವಿಜಯ ಸಾಧಿಸಬಹುದು. ಆದರೆ ನೀನು ಹೇಳುವಂತೆ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಗೆಲ್ಲಲು ನಾವೆಲ್ಲರೂ ಮಾಂಸಾಹಾರಿಗಳಾಗುವ ಅಗತ್ಯವಿದೆಯೆಂದು ನನಗಂತೂ ಅನ್ನಿಸುವುದಿಲ್ಲ'

'ಅದು ನಿಜ, ಅದು ನಿಜ', ಮೆಹತಾಬನ ಪಕ್ಕದಲ್ಲೇ ಕುಳಿತು ಸಿಗರೇಟಿನ ಹೊಗೆಯನ್ನು ಬಿಡುವಿಲ್ಲದೆ ಉಗುಳುತ್ತಿದ್ದ ಕೋಲುಮುಖದ ನಿಸ್ತೇಜ ಕಣ್ಣುಗಳ ಪೀಚಲು ಶರೀರದ ನಡುವಯಸ್ಸಿನ ಒಬ್ಬರು ಲೊಚಗುಟ್ಟಿದರು.

'ಆದರೆ ಸಿಗರೇಟು ಸೇದುವುದು ಮಾತ್ರ ಮುಖ್ಯ.. , ಅಲ್ಲವೇ ಶರ್ಮಾಜೀ ?' ಗೌತಮ್ ಭಾಯಿಯವರು ನಗುತ್ತ ವಾತಾವರಣವನ್ನು ತಿಳಿಯಾಗಿಸಿದ್ದರು.

# ಮಾಂಸ ತಿಂದ ಮೋಹನದಾಸ !

ತಿನ್ನುವನವನು ಪರಂಗಿ ಜಗಿಜಗಿದು ಕೆಂಪುಕುರಿ ಮಾಂಸವನು,
ಧಾಂಡಿಗನು ಅವನು, ಬಹು ಬಲಿತ ಕಡು ಕೆಂಪು ಹೋರಿ.
ತೋಳ್ಬಲದಿ ಆಳುವನು ಬಲಹೀನ ಬಡ ಭಾರತೀಯರನು,
ಶಕ್ತಿಯೆಲ್ಲಿದೆ ಹೇಳು, ಎಲೆತಿನ್ನುವ ಪೇತಲ ಗುಲಾಮನಲಿ.
– ನರ್ಮದ ಕವಿ

ಷೇಖ್ ಮೆಹತಾಬನ ಜತೆ ಮೋಹನದಾಸನ ಗೆಳೆತನ ಕ್ರಮೇಣ ಗಾಢವಾಯಿತು. ಬಿಡುವಿನ ವೇಳೆಯಲ್ಲೆಲ್ಲ ಅವರಿಬ್ಬರೂ ಜತೆಯಲ್ಲೇ ಓಡಾಡತೊಡಗಿದರು. ಮೆಹತಾಬನನ್ನು ಮನೆಗೆ ಕರೆದುಕೊಂಡು ಬರುವುದನ್ನು ಕಸ್ತೂರಿಯು ಖಂಡತುಂಡವಾಗಿ ವಿರೋಧಿಸಿದ್ದರಿಂದಾಗಿ ಮೋಹನದಾಸನು ಅವನೊಂದಿಗೇ ಸಂಜೆಯ ಹೆಚ್ಚಿನ ಸಮಯ ಕಳೆದು, ಕತ್ತಲಾದ ಬಳಿಕವಷ್ಟೇ ಮನೆಗೆ ಬರುತ್ತಿದ್ದನು. ಈ ಬಗ್ಗೆ ಕಸ್ತೂರಿಯು ತನ್ನ ಗಂಡನ ಜತೆ ಜಗಳಾಡಿದ್ದೂ ವ್ಯರ್ಥ ವಾಯಿತು. ಮೋಹನದಾಸನು ತನ್ನ ನಡವಳಿಕೆಯನ್ನು ಬದಲಿಸಲಿಲ್ಲ. ತನ್ನ ಗಂಡನು ತೆಗೆದು ಕೊಳ್ಳುವ ನಿರ್ಧಾರಗಳನ್ನು, ಅದು ಸರಿ ಇರಲಿ ಅಥವಾ ತಪ್ಪೇ ಇರಲಿ, ಬೇರೆ ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ ಎಂಬುದನ್ನು ಬಲು ಬೇಗ ಅರ್ಥ ಮಾಡಿಕೊಂಡ ಕಸ್ತೂರಿಯು, ಕ್ರಮೇಣ ಗಂಡನನ್ನು ಆಕ್ಷೇಪಿಸುವುದನ್ನೇ ಬಿಟ್ಟುಬಿಟ್ಟಳು.

ಮೋಹನದಾಸನಿಗೆ ಸುಧಾರಕ ಸಂಘದ ಸಭೆಯ ಗುಂಗಿನಿಂದ ಬಿಡಿಸಿಕೊಳ್ಳುವುದು ಸಾಧ್ಯವೇ ಆಗಲಿಲ್ಲ. ಮುಂದಿನ ತಿಂಗಳು ಕೂಡಾ ಸುಧಾರಕರ ಸಂಘದಲ್ಲಿ ನಡೆದ ಸಭೆಗೂ ಮೆಹತಾಬನ ಜತೆಗೆ ಹೋಗಿದ್ದನು. ಆ ದಿನದಲ್ಲಿ ಚರ್ಚೆ ನಡೆದದ್ದು ವಿಧವಾ ವಿಹಾಹದ ಬಗ್ಗೆ. ಆದರೆ, ಅಂದು ಅಂತಹ ಸ್ವಾರಸ್ಯಕರವಾದ ಮಾತುಕತೆಯೇನೂ ನಡೆಯಲಿಲ್ಲ. ಅನಾರೋಗ್ಯದ ಕಾರಣದಿಂದ ಗೌತಮ್ ಭಾಯಿಯವರು ಬಂದಿರದಿದ್ದದ್ದೂ ಇದಕ್ಕೆ ಕಾರಣವಿದ್ದಿರಬಹುದು. ಬೇರೆಯವರು ಸೇದಿ ಉಗುಳಿದ ಹೊಗೆ ಕುಡಿದದ್ದೊಂದೇ ಲಾಭ.

ಮೆಹತಾಬನ ಜತೆಗಿನ ಮಾತುಕತೆಗಳಲ್ಲಿ ಸಂಘದಲ್ಲಿ ನಡೆದ ಚರ್ಚೆಯ ತುಣುಕುಗಳು ಸದಾ ಇಣುಕುತ್ತಿದ್ದವು. ಮೆಹತಾಬನು ಮುಖ್ಯವಾಗಿ ಸೂರಜ್ ಸಿಂಗ್ ಹೇಳಿದ ಮಾತುಗಳನ್ನೇ ಸಮರ್ಥಿಸಿದರೆ, ಮೋಹನದಾಸನು ಗೌತಮ್ ಭಾಯಿಯವರ ಪರ ವಾದಿಸುತಿದ್ದನು.

ತನಗಿಂತ ಮೂರು ಅಥವಾ ನಾಲ್ಕು ವರ್ಷ ಹಿರಿಯವನಾದ, ಮಾತಿಗಿಳಿದರೆ ಯಾರನ್ನೂ ಸೋಲಿಸುವಂತೆ ಮಾತನಾಡಬಲ್ಲ ನೀಲಿಗಣ್ಣಿನ ಮೆಹತಾಬನ ವಾದವನ್ನು ವಿರೋಧಿಸಲು ಮೋಹನದಾಸನಿಂದ ಸುಲಭದಲ್ಲಿ ಸಾಧ್ಯವಾಗುತ್ತಿರಲಿಲ್ಲ.

ಮಾಂಸ ತಿನ್ನುವುದರಿಂದ ದೇಹವು ಗಟ್ಟಿಯಾಗುತ್ತದೆ ಎಂಬುದನ್ನು ಸಮರ್ಥಿಸುವಾಗ ಮೆಹತಾಬನು, ತನ್ನ ತೋಳನ್ನೆತ್ತಿ ನರಗಳನ್ನು ಬಿಗಿ ಹಿಡಿದು ತನ್ನ ರಟ್ಟೆಯ ಮಾಂಸ

ಖಂಡಗಳನ್ನು ಕಬ್ಬಿಣದ ತುಂಡಿನಂತೆ ಮಾಡಿ, 'ಇಕೋ, ಮುಟ್ಟಿ ನೋಡು' ಎನ್ನುತ್ತಿದ್ದ. ಬೇರೆ ಉಪಾಯ ಕಾಣದೆ, ಅವನ ತೋಳು ಮುಟ್ಟಿ ಮಾಂಸ ಖಂಡಗಳ ಗಟ್ಟಿತನವನ್ನು ಅನುಭವಿಸು ತ್ತಿದ್ದ ಮೋಹನದಾಸನಿಗೆ, ವಾದವನ್ನು ಮುಂದುವರಿಸಲು ಸಾಧ್ಯವಾಗದಂತೆ ತನ್ನ ತೆಳುವಾದ ಬಲಹೀನ ತೋಳುಗಳ ಮಿದು ರಬ್ಬರಿನಂತಹ ಮಾಂಸಖಂಡಗಳು ಅಣಕಿಸುತ್ತಿದ್ದವು.

ಮೆಹತಾಬನು ಉತ್ಸಾಹದಿಂದಲೇ ತನ್ನ ವಾದವನ್ನು ಮುಂದುವರಿಸುತ್ತಿದ್ದನು; 'ಗೌತಮ್ ಭಾಯಿ ಯವರ ಮಾತನ್ನು ನಾನು ಪೂರ್ತಿಯಾಗಿ ನಿರಾಕರಿಸುವುದಿಲ್ಲ ಮೋಹನ. ಬ್ರಿಟಿಷ್ ಸರಕಾರದ ವಿರುದ್ಧದ ಹೋರಾಟದಲ್ಲಿ ಮಾಂಸ ತಿನ್ನುವ ಜಾತಿಯವರ ಜತೆಗೆ ಅದನ್ನು ತಿನ್ನದ ಜಾತಿ ಯವರೂ ಒಟ್ಟಾಗಿ ಭಾಗವಹಿಸಬೇಕೆಂಬ ಅವರ ಮಾತು ನಿಜ. ಆದರೆ ನೀನೇ ಅಲ್ಲಿ ನೋಡಿದೆ ಯಲ್ಲ. ಅಲ್ಲಿ ಇದ್ದವರು, ಇದ್ದು ಮಾತನಾಡುವವರು ಯಾರೂ? ಬಹುಪಾಲು ಮಂದಿ ಮಾಂಸ ತಿನ್ನದ ಜಾತಿಗೆ ಸೇರಿದವರು. ಯಾಕೆ ಹೇಳೂ? ಮಾಂಸ ತಿನ್ನುವ ಜಾತಿಯ ಜನರಲ್ಲಿ ವಿದ್ಯಾವಂತರು ಕಡಿಮೆ. ಅವರಿಗೆ ಮಾತನಾಡಲು ಬರುವುದೂ ಇಲ್ಲ. ಅಷ್ಟು ಮಾತ್ರವಲ್ಲ, ಅವರಿಗೆ ಸಭೆಗೆ ಬರಲು ಪುರುಸೊತ್ತೂ ಇರುವುದಿಲ್ಲ. ಯಾಕೆ ಹೇಳೂ? ಅವರೆಲ್ಲ ಹೊಟ್ಟೆ ಪಾಡಿಗಾಗಿ ಮೈಬಗ್ಗಿಸಿ ದುಡಿಯುವ ಜನರು. ಅವರಿಗೆ ವಾರದ ರಜ ಇರುವುದಿಲ್ಲ. ಅವರಿಗೆ ಶನಿವಾರ, ಆದಿತ್ಯವಾರ ಅಥವಾ ಸೋಮವಾರಗಳ ನಡುವೆ ಯಾವ ವ್ಯತ್ಯಾಸವೂ ಕಾಣಿಸುವು ದಿಲ್ಲ. ಆದರೆ ನಮಗೆ ಈ ಅವಕಾಶವಿದೆ. ನಮಗೆ ಅನುಕೂಲವಿದೆ. ದೇಶದ ಬಗ್ಗೆ ಯೋಚಿಸಲು ಪುರುಸೊತ್ತಿದೆ.'

ಮೋಹನದಾಸನಿಗೆ ಕಳೆದ ಮಳೆಗಾಲದಲ್ಲಿ ಮಳೆಯಿಂದ ತಪ್ಪಿಸಿಕೊಳ್ಳಲು ಅಂಗಡಿಯ ಸೂರಿನಡಿ ಯಲ್ಲಿ ನಿಂತಿದ್ದ ಘಟನೆ ನೆನಪಾಯಿತು. ನೀಚಕುಲದಲ್ಲಿ ಹುಟ್ಟಿದ ಎಂಬ ಒಂದೇ ಕಾರಣಕ್ಕೆ ಮಳೆಯಿಂದ ರಕ್ಷಣೆ ಪಡೆಯಲು ಮೇಲ್ಜಾತಿಯವರ ಅಂಗಡಿ ನೆರಳಿಗೂ ಬರಲು ಹಿಂಜರಿಯುವ, ಆದರೆ ಮನಸ್ಸು ಮಾಡಿದ್ದರೆ ಇಡೀ ಅಂಗಡಿಯನ್ನು ತನ್ನ ಬಲಿಷ್ಠವಾದ ಮುಷ್ಟಿಗಳಿಂದ ಜಜ್ಜಿ ಪುಡಿಮಾಡಬಲ್ಲಷ್ಟು ಶಕ್ತಿಯಿದ್ದ ಮಾಂಸ ತಿನ್ನುವ ಜಾತಿಯ ಆ ಕಪ್ಪು ಯುವಕ ನೆನಪಾದನು. ಮೆಹತಾಬನು ಹೇಳುವ ಮಾತುಗಳಲ್ಲಿ ಶಕ್ತಿಯಿದೆಯೆಂದು ಅನ್ನಿಸಿತ್ತು.

ಆ ದಿನದ ಘಟನೆಯನ್ನು ವಿವರವಾಗಿ ಮೆಹತಾಬನಿಗೆ ವಿವರಿದ ಮೋಹನದಾಸನು, ' ನಮ್ಮ ನೆರಳಿಗೇ ಬರಲು ಒಪ್ಪದ ಅ ಜನರು ದೇಶದ ಸಲುವಾಗಿ ನಾವು ನಡೆಸುವ ಹೋರಾಟಕ್ಕೆ ಬಂದಾರೆಯೇ?' ಎಂಬ ಅನುಮಾನ ಮುಂದಿಟ್ಟಿದ್ದನು.

'ಬಂದೇ ಬರುತ್ತಾರೆ ಮೋಹನ. ಈ ಹೋರಾಟ ನಮ್ಮ ಅನುಕೂಲಕ್ಕೆ ಮಾತ್ರವಲ್ಲ. ಅವರ ಲಾಭಕ್ಕೆ ಕೂಡಾ ಎಂದು ನಾವು ಅವರಿಗೆ ಮನವರಿಕೆ ಮಾಡಿ ಕೊಡಬೇಕು. ಅವರು ಹೋರಾಟದ ನಾಯಕರಾಗಲು ಅಸಮರ್ಥರಿರಬಹುದು. ಆದರೆ ಹೋರಾಡುವ ಶಕ್ತಿ ನಮಗಿಂತ ಅವರಲ್ಲೇ ಹೆಚ್ಚಾಗಿದೆ. ಆದ್ದರಿಂದ, ನಾವು ಈ ಹೋರಾಟದ ಮುಂಚೂಣಿಯಲ್ಲಿದ್ದು

ನಾಯಕತ್ವ ನೀಡಿದರೆ ಸಾಕು. ನಮ್ಮ ಹೋರಾಟವು ಬೆಳೆದು ಮುಂದೆ ರಸ್ತೆಗಿಳಿದಾಗ ನಮಗೆ ಅವರ ಬೆಂಬಲ ಖಂಡಿತವಾಗಿ ಬೇಕೇ ಬೇಕಾಗುತ್ತದೆ. ಅವರನ್ನು ಹೋರಾಟಕ್ಕೆ ಹುರಿದುಂಬಿಸಲು ನಮಗೆ ಶಕ್ತಿ ಬೇಕಾಗುತ್ತದೆ. ನಾವು ಗಟ್ಟಿಯಾದಾಗ ಮಾತ್ರ ನಮಗೆ ಶಕ್ತಿ ಬರುತ್ತದೆ. ಅಂದರೆ, ನಾವು ಮೊದಲು ಗಟ್ಟಿಯಾಗಬೇಕು. ಗಟ್ಟಿಯಾಗುವುದು ಅಂದರೆ, ಮಾನಸಿಕವಾಗಿ ಗಟ್ಟಿಯಾಗುವ ಜತೆಯಲ್ಲಿ ದೈಹಿಕವಾಗಿಯೂ ಗಟ್ಟಿಯಾಗಬೇಕು. ದೈಹಿಕವಾಗಿ ಗಟ್ಟಿಯಾಗಬೇಕಾದರೆ ನಮ್ಮ ಆಹಾರ ಪದ್ಧತಿಯನ್ನು ಸುಧಾರಿಸಿಕೊಳ್ಳಬೇಕು. ನೀನೇ ಹೇಳು ಮೋಹನ, ಮಾಂಸವನ್ನು ತಿನ್ನುವುದು ಅಪರಾಧವೆಂದು ಯಾವ ಶಾಸ್ತ್ರ ಹೇಳಿದೆ?'

ಮೋಹನದಾಸನಿಗೆ ಏನು ಹೇಳಬೇಕು ಎಂಬುದೇ ಹೊಳೆಯುತ್ತಿರಲಿಲ್ಲ. ತನ್ನ ಮನೆಯವರು ಇಷ್ಟಪಡದ, ತನ್ನ ಹೆಂಡತಿಯು ದ್ವೇಷಿಸುವ ಮತ್ತು ವಯಸ್ಸಿನಲ್ಲಿ ತನಗಿಂತ ಕೇವಲ ಎರಡು ಮೂರು ವರ್ಷ ಹಿರಿಯವನಾದ ಮೆಹತಾಬನ ನಿರರ್ಗಳವಾದ ವಾದಶಕ್ತಿಯ ಎದುರು ಮೋಹನದಾಸನು ನಿಬ್ಬೆರಗಾಗಿ ಪೂರ್ತಿಯಾಗಿ ಶರಣಾಗಿಬಿಟ್ಟಿದ್ದನು. ಮೋಹನದಾಸನಿಗೆ ಮೆಹತಾಬನು ಹೇಳಿದ ಪ್ರತಿಯೊಂದು ಮಾತೂ ನಿಜವೆಂದು ಅನ್ನಿಸಲಾರಂಭಿಸಿತ್ತು.

ಮೋಹನದಾಸನು ಸಂಕೋಚ ಸ್ವಭಾವದವನಾಗಿದ್ದರೆ, ಮೆಹತಾಬನು ಕಲ್ಲನ್ನೂ ಕರೆದು ಮಾತನಾಡಿಸಬಲ್ಲ ಉತ್ಸಾಹಿಯಾಗಿದ್ದನು. ಮೆಹತಾಬನಿಗೆ ಎಷ್ಟು ದೂರ ಓಡಿದರೂ ಆಯಾಸವೆಂಬುದಿರಲಿಲ್ಲ. ಮೋಹನದಾಸನಿಗೆ ಅವನ ಜತೆ ನೂರು ಮಾರು ಓಡಿದರೂ ಏದುಬ್ಬಸ ಶುರುವಾಗುತ್ತಿತ್ತು.

ಮೋಹನದಾಸನಿಗೆ ಕತ್ತಲೆಯೆಂದರೆ ಭಯ. ಕಳ್ಳರೆಂದರೆ ಹೆದರಿಕೆ. ದೆವ್ವ ಭೂತಗಳೆಂದರೆ ಅಳುಕು. ಆದರೆ ಮೆಹತಾಬನಿಗೆ ಭಯವೆಂದರೇನೆಂಬುದೂ ಗೊತ್ತಿಲ್ಲ. ನಡುರಾತ್ರಿಯಲ್ಲಿ, ಶ್ಮಶಾನ ನುಗ್ಗಿ, ಅಲ್ಲಿ ಚಿತೆಯ ಮೇಲೆ ಉರಿಯುತ್ತಿರುವ ದೇಹದ ಬೆರಳಿನಲ್ಲಿರುವ ಉಂಗುರವನ್ನು ಕಿತ್ತು ಕೊಂಡು ಬರುವಷ್ಟು ಧೈರ್ಯಶಾಲಿ. ಜೀವಂತ ಹಾವುಗಳನ್ನು ಬರಿಗೈಯಲ್ಲಿ ಹಿಡಿದೆತ್ತಬಲ್ಲ ಸಾಹಸಿ.

ಮೆಹತಾಬನ ಜತೆಗಿನ ಒಡನಾಟದಲ್ಲಿ ಮೋಹನದಾಸ ಕ್ರಮೇಣ ಬದಲಾಗತೊಡಗಿದನು. ಅವನ ನೀಲಿ ಕಣ್ಣಿನ ನೋಟಕ್ಕೆ ಶರಣಾದನು. ಮೆಹತಾಬನನ್ನು ಬದಲಿಸಲು ಹೊರಟವನು ತಾನೇ ಬದಲಾದನು. ಮೋಹನದಾಸನಿಗೆ ಮೆಹತಾಬನ ಮಾತುಗಳೇ ವೇದವಾಕ್ಯಗಳಾದವು. ಅವನ ವರ್ತನೆಗಳೇ ಆದರ್ಶಗಳಾದವು.

ಮೆಹತಾಬ ಹೇಳಿದಂತೆ ಮಾಂಸ ತಿನ್ನುವುದರಿಂದ ಮಾತ್ರ ತನ್ನ ದೈಹಿಕ ಸಾಮರ್ಥ್ಯವು ಹೆಚ್ಚಿ ತಾನು ಕತ್ತಲೆಯ ಭಯದಿಂದ, ಕಳ್ಳಕಾಕರ ಹೆದರಿಕೆಯಿಂದ, ದೆವ್ವ ಭೂತಗಳ ಅಳುಕಿನಿಂದ ಮುಕ್ತನಾಗಲು ಸಾಧ್ಯ ಎಂದು ಮೋಹದಾಸನು ಯೋಚಿಸಿದನು. ಇಡೀ ದೇಶದ ಜನರೆಲ್ಲ

ಮಾಂಸ ತಿನ್ನುವುದರಿಂದ, ಬ್ರಿಟಿಷರನ್ನು ಸುಲಭದಲ್ಲಿ ಓಡಿಸಬಹುದು ಎಂಬ ಮೆಹತಾಬನ ವಾದದಲ್ಲಿ ಸತ್ವವಿದೆ ಎಂದು ಪ್ರಾಮಾಣಿಕವಾಗಿ ನಂಬಿದನು.

ತನ್ನ ಕಿರಿಯಣ್ಣ ಮಾಂಸದ ಅಡುಗೆಯನ್ನು ಗುಟ್ಟಾಗಿ ತಿನ್ನುತ್ತಿದ್ದಾನೆ ಎಂಬ ಸಂಗತಿಯು ಮೋಹನದಾಸನಿಗೆ ಗೊತ್ತಿತ್ತು. ಆದ್ದರಿಂದ, ಕಿರಿಯಣ್ಣನ ಹಾದಿಯಲ್ಲಿ ನಡೆದು ಮಾಂಸ ತಿಂದರೆ ಮಹಾಪರಾಧವಾಗಲಾರದು ಎಂದು ತನ್ನನ್ನೇ ತಾನು ಸಮರ್ಥಿಸಿಕೊಳ್ಳುತ್ತ, ಮಾಂಸ ತಿನ್ನಲು ತಾನು ಸಿದ್ಧನಿದ್ದೇನೆ ಎಂದು ಮೋಹನದಾಸನು ಒಂದು ದಿನ ತನ್ನ ಒಪ್ಪಿಗೆ ಸೂಚಿಸಿದನು.

ಮಾಂಸ ಭಕ್ಷಣೆಯ ದಿನ ನಿಶ್ಚಯವಾಯಿತು. ಮುಹೂರ್ತವೂ ನಿಗದಿಯಾಯಿತು. ನದಿಯ ತೀರದಲ್ಲಿ ಯಾರಿಗೂ ಸುಲಭದಲ್ಲಿ ಕಣ್ಣಿಗೆ ಬೀಳದ ಜಾಗದಲ್ಲಿ ವೇದಿಕೆಯೂ ಸಿದ್ಧವಾಯಿತು. ಎಲ್ಲದರ ಉಸ್ತುವಾರಿಯನ್ನು ಮೆಹತಾಬನು ಬಹಳ ಅಚ್ಚುಕಟ್ಟಾಗಿ, ಆದರೆ ಅಷ್ಟೇ ಗುಟ್ಟಾಗಿ ನೋಡಿಕೊಂಡಿದ್ದನು. ಯಾಕೆಂದರೆ, ಮೋಹನದಾಸನು ಮಾಂಸ ತಿನ್ನುವುದು ಸಾಮಾನ್ಯ ವಿಷಯವಾಗಿದ್ದಿರಲಿಲ್ಲ. ಮೋಹನದಾಸನ ಕಿರಿಯಣ್ಣ ಕರ್ಸನ್‌ದಾಸನು ಕದ್ದು ಮುಚ್ಚಿ ಮಾಂಸ ತಿನ್ನುತ್ತಿರುವುದು ನಿಜವಾದರೂ, ವೈಷ್ಣವ ಪಂಥಕ್ಕೆ ಸೇರಿದ್ದ ಗಾಂಧಿ ಕುಟುಂಬದವರು ಮಾಂಸದ ಹೆಸರನ್ನು ಕೇಳಿದರೇ ಬೆಚ್ಚಿಬೀಳುವ ಜಾತಿಗೆ ಸೇರಿದವರಾಗಿದ್ದರು.

ಮೋಹನದಾಸನು ಅದುವರೆಗೆ ಬೇಯಿಸಿದ ಮಾಂಸವನ್ನು ನೋಡಿಯೂ ಇದ್ದಿರಲಿಲ್ಲ. ಹಸಿರಾದ ಎಲೆಯ ಮೇಲೆ ಇರಿಸಿದ್ದ ಬ್ರೆಡ್ ಪಕ್ಕದಲ್ಲಿ ಕೆಂಪಾಗಿ ಕಾಣಿಸುತ್ತಿದ್ದ ಮಾಂಸದ ಎರಡು ತುಂಡುಗಳನ್ನು ಮೋಹನದಾಸನು ಭಯ ಮಿಶ್ರಿತ ಕುತೂಹಲದಿಂದ ನೋಡಿದನು. ಅದನ್ನು ತಿನ್ನಲು ತನ್ನಿಂದ ಸಾಧ್ಯವೇ? ಎಂಬ ಅನುಮಾನ ಎದುರಾಯಿತು. ಆದರೆ ನೀರಿಗೆ ಇಳಿದದ್ದಾಗಿದೆ; ಕೈಕಾಲು ಬಡಿಯದೆ ಅನ್ಯ ಮಾರ್ಗವಿದ್ದಿರಲಿಲ್ಲ. ಬ್ರಿಟಿಷರ ವಿರುದ್ಧ ದೇಶದ ಜನರ ಹೋರಾಟದಲ್ಲಿ ಶಕ್ತಿ ತುಂಬುವ ಮಾಂಸವನ್ನು ಬೇಯಿಸಿ ತಂದಿದ್ದ ಮೆಹತಾಬನ ವಾದದ ಎದುರು ಪ್ರತಿಸಲವೂ ಸೋಲುತ್ತಿದ್ದ ಮೋಹನದಾಸನಿಗೆ, ಇಂದು ತಿನ್ನುವ ಕೆಲಸ ದಲ್ಲಾದರೂ ಗೆಲ್ಲಬೇಕೆಂಬ ಹಟವಿತ್ತು.

ಮೋಹನದಾಸನು ತನ್ನ ಇದ್ದೆಲ್ಲಾ ಧೈರ್ಯವನ್ನು ಜೋಡಿಸಿಕೊಂಡು, ಬ್ರೆಡ್ಡಿನ ದೊಡ್ಡ ತುಂಡೊಂದರ ಜತೆಗೆ ಮಾಂಸದ ಸಣ್ಣ ತುಂಡೊಂದನ್ನು ಸೇರಿಸಿಕೊಂಡು ಬಾಯೊಳಗೆ ತೂರಿಸಿ ಜಗಿದೇ ಬಿಟ್ಟನು. ಅಷ್ಟೇ: ಹೊಟ್ಟೆಯೆಲ್ಲ ತೊಳೆಸಿಕೊಂಡು ಬಂದಂತಾಯಿತು. ಮಳೆಯಲ್ಲಿ ಒದ್ದೆಯಾದ ಬೂಟಿನ ತುಂಡನ್ನು ಜಗಿದಂತೆ ಅನ್ನಿಸಿ ಬಾಯೆಲ್ಲ ಕಿವುಚಿದಂತಾಯಿತು!!

ಮೆಹತಾಬನ ಮನಸ್ಸಿಗೆ ನೋವಾಗುತ್ತದೆ ಅಥವಾ ಬ್ರಿಟಿಷರ ವಿರುದ್ಧದ ತನ್ನ ಹೋರಾಟದಲ್ಲಿ ಸೋಲಾಗುತ್ತದೆ, ಇತ್ಯಾದಿ ಯಾವುದನ್ನೂ ಲೆಕ್ಕಿಸದೆ, ಮೋಹನದಾಸನು ಬಾಯೊಳಗಿದ್ದುದೆಲ್ಲ ವನ್ನೂ ವ್ಯಾಕರಿಸಿ ಉಗುಳಿ ಬಿಟ್ಟನು. ಮೆಹತಾಬನ ಯಾವ ಮಾತುಗಳಿಗೂ ಕಿವಿಗೊಡದೆ ಕುಳಿತಲ್ಲಿಂದ ಎದ್ದು, ಮನೆಯತ್ತ ಓಡತೊಡಗಿದನು.

ರಾತ್ರಿಯೆಲ್ಲ ಮೋಹನದಾಸನು ನಿದ್ರೆಯಿಲ್ಲದೆ ಚಡಪಡಿಸಿದನು. ಹೊಟ್ಟೆಯೊಳಗೆ ಜೀವಂತ ಆಡಿನ ಮರಿಯೊಂದು, ರಾತ್ರಿಯಿಡೀ ಕಿರುಚಿದಂತೆ ಭಾಸವಾಗುತ್ತಿತ್ತು. ಹೆಂಡತಿ ತವರಿಗೆ ಹೋಗಿದ್ದುದರಿಂದ ಅವನ ಹೊಯ್ದಾಟ ಮನೆಯವರಿಗೆ ಗೊತ್ತಾಗಿದ್ದಿರಲಿಲ್ಲ.

ಮಾಂಸ ತಿಂದದ್ದರಿಂದ ತನ್ನ ಜಾತಿ ನಾಶವಾಯಿತು ಎಂಬ ಯೋಚನೆ ಮೋಹನದಾಸನನ್ನು ಎಳ್ಳಷ್ಟೂ ಕಾಡಿದ್ದಿರಲಿಲ್ಲ. ದೇಶದ ಒಳಿತಿಗಾಗಿ ಮಾಂಸ ತಿನ್ನುವುದು ಸರಿಯಾದ ಕ್ರಮವೆಂದೇ ಅವನು ತನ್ನನ್ನು ತಾನು ಸಮರ್ಥಿಸಿಕೊಂಡಿದ್ದನು. ಅವನನ್ನು ರಾತ್ರಿಯಿಡೀ ಹಿಂಸಿಸುತ್ತಿದ್ದ ಚಿಂತೆಯೆಂದರೆ: ತಾನು, ತನ್ನ ತಂದೆ ತಾಯಿಗಳಿಗೆ ಇಷ್ಟವಾಗದ ಕೆಲಸವನ್ನು ಮಾಡಿದ್ದು ಎಷ್ಟು ಸರಿ? ತಾನು ಮಾಂಸ ತಿಂದ ಸಂಗತಿಯನ್ನು ಅವರಿಗೆ ಹೇಳಬೇಕೇ ಬೇಡವೇ?; ಹೇಳಿದರೆ ಅವರು ಎದೆಯೊಡೆದು ಸತ್ತು ಹೋದಾರೆಯೇ?; ಹೇಳದಿದ್ದರೆ ತಾನು ಸುಳ್ಳು ಹೇಳುವುದಿಲ್ಲ ಎಂಬ ವ್ರತವನ್ನು ಮುರಿದಂತಾಗುತ್ತದೆಯೆ?

ಕೊನೆಯಲ್ಲಿ ಮೋಹನದಾಸನು ಹೀಗೆ ತೀರ್ಮಾನಕ್ಕೆ ಬಂದನು: 'ಬ್ರಿಟಿಷರನ್ನು ಈ ದೇಶದಿಂದ ಓಡಿಸಲು ನಾವೆಲ್ಲ ಗಟ್ಟಿಯಾಗಬೇಕು. ಅದಕ್ಕಾಗಿ ಎಲ್ಲರೂ ಮಾಂಸವನ್ನು ತಿನ್ನಬೇಕು. ಹೀಗೆಂದು ಪ್ರಚಾರ ಮಾಡಿ ದೇಶದಲ್ಲಿ ಸುಧಾರಣೆ ತರುವುದೂ ಅಗತ್ಯ. ಆದರೆ ತಂದೆ ತಾಯಿಗಳಿಗೆ ಮೋಸ ಮಾಡುವುದು, ಸುಳ್ಳು ಹೇಳುವುದು ದೊಡ್ಡ ತಪ್ಪು. ಆದ್ದರಿಂದ ತಂದೆ ತಾಯಿಗಳು ಬದುಕಿರುವವರೆಗೆ ತಾನು ಮಾಂಸವನ್ನು ಮುಟ್ಟಲಾರೆ. ಅವರು ತೀರಿಕೊಂಡ ಮೇಲೆ, ತಾನು ಸ್ವತಂತ್ರನಾದಾಗ ಬಹಿರಂಗವಾಗಿ ಮಾಂಸ ತಿನ್ನುತ್ತೇನೆ. ಅಲ್ಲಿಯವರೆಗೆ ಮಾಂಸ ಮುಟ್ಟುವುದಿಲ್ಲ.'

ತನ್ನ ಈ ನಿರ್ಧಾರವನ್ನು ಮೋಹನದಾಸನು ಮರುದಿನ ತನ್ನ ಜೀವದ ಗೆಳೆಯ ಮೆಹತಾಬನಿಗೂ ತಿಳಿಸಿದನು. ಮೋಹನದಾಸನು ಒಮ್ಮೆ ನಿರ್ಧರಿಸಿದನೆಂದರೆ ಆ ನಿರ್ಧಾರವನ್ನು ಬದಲಿಸಲು ಯಾರಿಂದಲೂ ಸಾಧ್ಯವಾಗದು ಎಂಬ ಸತ್ಯ ಮೆಹತಾಬನಿಗೂ ತಿಳಿದಿತ್ತು. ಅವನೂ ಮೋಹನದಾಸನ ನಿರ್ಧಾರಕ್ಕೆ ತನ್ನ ಸಮ್ಮತಿ ಸೂಚಿಸಿದನು.

## ಬಂಗಾರದ ಕಡಗ

ಬೇಸಿಗೆಯ ರಜಾದಿನಗಳು. ತಂದೆಯವರ ಕಾಲಿನ ಗಾಯಕ್ಕೆ ಔಷದಿ ತರಲೆಂದು ಪಂಡಿತರ ಮನೆಗೆ ಹೋಗಿದ್ದ ಮೋಹನದಾಸನು ಮರಳುವಾಗ ಕತ್ತಲಾಗಿತ್ತು. ಮೋಹನದಾಸನು ಪಂಡಿತರ ಮನೆಗೆ ಸಂಜೆಯ ಹೊತ್ತಿಗೇ ಹೋಗಿದ್ದನಾದರೂ, ಬೇರೆಲ್ಲಿಗೋ ಹೋಗಿದ್ದ ಪಂಡಿತರು ವಾಪಸು ಬಂದು ಗಿಡಮೂಲಿಕಾ ಔಷಧಿಯನ್ನು ತಯಾರಿಸಿ ಕೊಡುವಾಗ ತಡವಾಗಿತ್ತು.

ಮೋಹನದಾಸನಿಗೆ ಕತ್ತಲೆಯೆಂದರೆ ಮೊದಲೇ ಭಯ. ಆ ದಿನಗಳಲ್ಲಿ ಎಲ್ಲ ರಸ್ತೆಗಳನ್ನೂ

ವಿದ್ಯುತ್ ದೀಪಗಳು ಬೆಳಗಿಸುತ್ತಿರಲಿಲ್ಲ. ಮ್ಯಾಜಿಸ್ಟ್ರೇಟರ ಕಚೇರಿಯ ಎದುರಿನ ರಸ್ತೆಯಲ್ಲಿ ಮಾತ್ರ ಆ ಸೌಲಭ್ಯವಿತ್ತು. ಉಳಿದಂತೆ ಹೆಚ್ಚಿನ ಮುಖ್ಯ ರಸ್ತೆಗಳಲ್ಲಿ ಎಣ್ಣೆ ದೀಪಗಳನ್ನು ಉರಿಸಿ ಬೆಳಗಿಸುತ್ತಿದ್ದರು. ಆದರೆ ನೌಕರರ ಬೇಜವಾಬ್ದಾರಿಯಿಂದಾಗಿ ಕೆಲವು ದೀಪಗಳು ಎಣ್ಣೆ ತೀರಿ ಬಲು ಬೇಗನೆ ಆರಿ ಹೋಗುತ್ತಿದ್ದವು. ಮೋಹನದಾಸನ ಮನೆಯ ದಾರಿಯ ಎರಡು ದೀಪಗಳೂ ಆರಿ ಹೋಗಿದ್ದುದರಿಂದ ಊರೆಲ್ಲ ಕತ್ತಲೆಯಲ್ಲಿ ಮುಳುಗಿದಂತೆ ಭಾಸವಾಗುತ್ತಿತ್ತು.

ಮೂಲಿಕೆಯ ಚೀಲವನ್ನು ಎದೆಗೊತ್ತಿಕೊಂಡ ಮೋಹನದಾಸನು, ತನಗೇನೂ ಭಯವಿಲ್ಲ ವೆಂಬುದನ್ನು ತನಗೆ ತಾನೇ ಹೇಳಿಕೊಳ್ಳುವವನಂತೆ, ಹಿಂದೆಲ್ಲೋ ಒಂದು ದಿನ ರಾಮ ಮಂದಿರ ದಲ್ಲಿ ಹರಿದಾಸರೊಬ್ಬರು ಹಾಡಿದ ರಾಮ ಭಜನೆಯ ಸಾಲುಗಳನ್ನು ನೆನಪಿಸಿಕೊಂಡು ಗುಣುಗುಣಿಸುತ್ತಾ ಮನೆಯತ್ತ ದಾಪುಗಾಲು ಹಾಕುತ್ತಿದ್ದನು.

ಅಂಚೆಕಚೇರಿಯ ತಿರುವು ದಾಟಿ ಎರಡು ಹೆಜ್ಜೆ ಮುಂದಿಟ್ಟಿದ್ದನಷ್ಟೆ; ಬೆನ್ನ ಹಿಂದೆ ಯಾರೋ ಹಿಂಬಾಲಿಸಿಕೊಂಡು ಬರುತ್ತಿದ್ದಾರೆಂದು ಭಾಸವಾಯಿತು. ಹಿಂದೆ ತಿರುಗಿ ನೋಡಲು ಹೆದರಿಕೆ ಯಾಗಿ, ಭಜನೆಯ ಸಾಲುಗಳನ್ನು ಮತ್ತಷ್ಟು ಗಟ್ಟಿಯಾಗಿ ಹಾಡುತ್ತಾ ನಡಿಗೆಯ ವೇಗವನ್ನು ಹೆಚ್ಚು ಮಾಡಿದ್ದನು.

ಹಿಂಬಾಲಿಸಿ ಬರುತ್ತಿರುವವರ ಹೆಜ್ಜೆಯ ಸಪ್ಪಳ ತೀರಾ ಹತ್ತಿರವಾದಂತೆ ಅನ್ನಿಸಿದ ಜತೆಗೇ ಬೆನ್ನ ಮೇಲೆ ಯಾರೋ ಕೈಯಿರಿಸಿದಂತಾದಾಗ, ಎದೆ ಧಸಕ್ಕೆಂದಿತು. ಬೆಚ್ಚಿಬಿದ್ದ ಮೋಹನದಾಸ ಗಕ್ಕನೆ ನಿಂತುಬಿಟ್ಟನು. ಅವನ ಕಾಲುಗಳೆರಡೂ ತರತರನೆ ನಡುಗಲಾರಂಭಿಸಿದ್ದವು.

ಭಯದಿಂದ ನಡುಗುತ್ತ ಹಿಂತಿರುಗಿ ನೋಡಿದರೆ ಧಾಂಡಿಗರಿಬ್ಬರು ಎದುರು ನಿಂತಿದ್ದರು. ಔಷಧಿಯ ಚೀಲವನ್ನು ರಕ್ಷಣೆಗೆಂಬಂತೆ ಎದೆಗೆ ಮತ್ತಷ್ಟು ಬಿಗಿಯಾಗಿ ಅವಚಿ ಹಿಡಿದುಕೊಂಡ ಮೋಹನದಾಸ ಸುಮ್ಮನೇ ನಿಂತುಬಿಟ್ಟನು. ಎದುರು ನಿಂತಿದ್ದವರಲ್ಲಿ ಒಬ್ಬನನ್ನು ಈ ಹಿಂದೊಮ್ಮೆ ಕಿರಿಯಣ್ಣನ ಜೊತೆ ಕಂಡ ಅಸ್ಪಷ್ಟ ನೆನಪು ಮೂಡಿದಾಗ ಮೋಹನದಾಸನು ಸ್ವಲ್ಪ ಗೆಲುವಾದನು.

'ನಿನ್ನ ಸಣ್ಣಣ್ಣ ಈಗ ಮನೆಯಲ್ಲಿರುತ್ತಾನೋ?' ಇಬ್ಬರೂ ಜತೆಯಲ್ಲಿ ಪ್ರಶ್ನಿಸಿದಂತಿತ್ತು.

'ನಾನು ಮನೆ ಬಿಟ್ಟು ಬಹಳ ಹೊತ್ತಾಯಿತು. ಖಂಡಿತವಾಗಿ ಹೇಳಲಾರೆ. ಆದರೆ ಇಷ್ಟು ಹೊತ್ತಿಗೆ ಸಾಮಾನ್ಯವಾಗಿ ಅವನು ಮನೆಯಲ್ಲಿರುತ್ತಾನೆ.' ಮೋಹನದಾಸನು ಧೈರ್ಯದಿಂದಲೇ ಉತ್ತರಿಸಿ, ತನಗಿನ್ನು ಇಲ್ಲಿ ನಿಮ್ಮ ಜತೆ ಕೆಲಸವಿಲ್ಲ, ಎಂಬಂತೆ ಹೊರಡಲು ಅನುವಾದನು.

ಮೋಹನದಾಸನ ರಟ್ಟೆ ಹಿಡಿದು ಅವನನ್ನು ತಡೆದ ಒಬ್ಬಾತ, ತನ್ನ ಅಂಗಿಯನ್ನು ಸ್ವಲ್ಪ ಮೇಲಕ್ಕೆತ್ತಿ, ಸೊಂಟದಲ್ಲಿ ಇರುಕಿಸಿಕೊಂಡಿದ್ದ ಚಾಕುವಿನತ್ತ ಮೋಹನದಾಸನ ಗಮನ ಸೆಳೆದು, 'ಇದು ಏನು ಎಂಬುದು ಗೊತ್ತು ತಾನೆ?' ಎಂದು ಪ್ರಶ್ನಿಸಿದ್ದ. ಆ ಕತ್ತಲಿನ ಕ್ಷೀಣ ಬೆಳಕಿನಲ್ಲೂ ಮಿರಿಮಿರಿ ಮಿಂಚಿದ ಚಾಕುವನ್ನು ಕಂಡು ಮೋಹನದಾಸನ ರಕ್ತವೆಲ್ಲ ಹೆಪ್ಪಾಗಿಬಿಟ್ಟಿತ್ತು. ಆದರೆ ಎದುರು

ನಿಂತ ರಾಕ್ಷಸರಿಬ್ಬರಿಗೆ ತನ್ನಿಂದ ಅಥವಾ ತನ್ನ ಕಿರಿಯಣ್ಣನಿಂದ ಏನುಬೇಕೆಂಬುದು ಹೊಳೆಯದಿದ್ದರೂ, ಇವರಿಬ್ಬರಿಂದ ಸದ್ಯದಲ್ಲಿಯೇ ತಮಗಿಬ್ಬರಿಗೂ ಅಪಾಯ ಕಾದಿದೆಯೆಂಬುದು ಮಾತ್ರ ಅರ್ಥವಾಗಿತ್ತು.

ಪಕ್ಕದವನ ಸೊಂಟದಿಂದ ಚೂರಿಯನ್ನು ಗಬಕ್ಕನೆ ಹೊರಗೆಳೆದುಕೊಂಡ ಮತ್ತೊಬ್ಬ, 'ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೋ. ನಿನ್ನ ಅಣ್ಣ ಇದ್ದಾನಲ್ಲ; ಇಡಿಯ ಕೋಳಿಯನ್ನು ಒಬ್ಬನೇ ಜಗಿದು ತಿನ್ನುವ ಬಕಾಸುರ. ಅವನಿಗೆ ಸರಿಯಾಗಿ ಹೇಳಿಬಿಡು. ಆರು ತಿಂಗಳ ಹಿಂದೆ ನಮ್ಮಿಂದ ಸಾಲವಾಗಿ ತೆಗೆದುಕೊಂಡ ಇಪ್ಪತ್ತೈದು ರೂಪಾಯಿಗಳನ್ನು ನಾಳೆ ಸಂಜೆಯ ಒಳಗೆ ಮರಳಿ ಕೊಡದಿದ್ದರೆ, ಅವನ ಬಲಗೈಯ ಐದೂ ಬೆರಳುಗಳನ್ನು ಕತ್ತರಿಸಿ ಬಟ್ಟೆಯಲ್ಲಿ ಕಟ್ಟಿ ನಿನ್ನ ತಾಯಿಯ ಹೆಸರಿಗೆ ಅಂಚೆಯಲ್ಲಿ ಕಳುಹಿಸುತ್ತೇವೆ. ಇದು ಅವನಿಗೆ ನಾವು ನೀಡುವ ಕೊನೆಯ ಎಚ್ಚರಿಕೆ.' ಚೂರಿಯನ್ನು ಝಳಪಿಸುತ್ತಲೇ ತಾನು ಬೆರಳುಗಳನ್ನು ಯಾವ ಬಗೆಯಲ್ಲಿ ಕತ್ತರಿಸುತ್ತೇನೆ, ಅದನ್ನು ಯಾವ ರೀತಿಯಲ್ಲಿ ಪೊಟ್ಟಣ ಕಟ್ಟಿ ಅಂಚೆಯಲ್ಲಿ ಕಳುಹಿಸುತ್ತೇನೆ ಎಂಬುದನ್ನು ಅಭಿನಯಿಸುತ್ತಾ ಹೇಳಿದ್ದನು.

ಆ ಗಾಬರಿಯ ನಡುವೆಯೂ ಮೋಹನದಾಸ ಪ್ರಶ್ನಿಸಿದ್ದ, 'ನೀನು ನನ್ನ ಅಣ್ಣನ ಗೆಳೆಯನಲ್ಲವೇ? ನಿನ್ನನ್ನು ನಾನು ಅವನ ಜತೆ...'

'ಗೆಳೆತನದ ಕಾಲವೆಲ್ಲ ಕಳೆದು ಹೋಯಿತು. ಗೆಳೆತನ ಇರುವುದು ನೀಯತ್ತು ಇರುವವರ ನಡುವೆ ಮಾತ್ರ. ನಿನ್ನ ಅಣ್ಣನಿಗೆ ನೀಯತ್ತು ಎಂದರೇನೆಂಬುದೇ ತಿಳಿದಿಲ್ಲ. ತೆಗೆದುಕೊಂಡ ಸಾಲವನ್ನು ಮರಳಿ ಕೊಡಬೇಕೆಂಬ ನೆನಪು ಕೂಡಾ ಅವನಿಗಿರುವುದಿಲ್ಲ. ನಾಳೆ ಸಂಜೆಯತನಕ ನಾವು ಕಾಯುತ್ತೇವೆ. ದುಡ್ಡು ಹಿಡಿದುಕೊಂಡು ಎಲ್ಲಿಗೆ ಬರಬೇಕೆಂಬುದು ಅವನಿಗೆ ಚೆನ್ನಾಗಿ ಗೊತ್ತಿದೆ. ಒಂದು ವೇಳೆ ನಾಳೆಯೂ ಅವನು ದುಡ್ಡು ಹಿಡಿದುಕೊಂಡು ಬಾರದೇ ಇದ್ದರೆ, ನಾವು ನಮ್ಮ ದಾರಿ ನೋಡಿಕೊಳ್ಳುತ್ತೇವೆ. ಹೇಳುವುದೊಂದು, ಮಾಡುವುದೊಂದು ಮಾಡುವ ಮನುಷ್ಯರು ನಾವಲ್ಲ. ಬೆರಳು ಕತ್ತರಿಸಲು ಒಮ್ಮೆ ನಿರ್ಧರಿಸಿದ ಬಳಿಕ ಕತ್ತರಿಸುವುದೇ; ಗೊತ್ತಾಯಿತಲ್ಲವೇ?'

'ಆಯಿತು, ನಾನು ಅಣ್ಣನಿಗೆ, ನೀವು ಹೇಳಿದ ಮಾತನ್ನು ಹೇಳುತ್ತೇನೆ. ಆದರೆ ನೀವು ಯಾರು ಎಂದು ಅವನು ಕೇಳಿದರೆ ಏನೆಂದು ಹೇಳಬೇಕೂ?'

'ಅವನ ಪಾಲಿನ ಯಮದೂತರೆಂದು ಹೇಳು. ಅವನಿಗೆ ಅರ್ಥವಾಗುತ್ತದೆ.' ತಟ್ಟನೆ ಉತ್ತರಿಸಿದ್ದ ಚಾಕು ಹಿಡಿದುಕೊಂಡಿದ್ದವನು.

ಇವರಿಬ್ಬರೊಡನೆ ಚರ್ಚೆಯನ್ನು ಮುಂದುವರಿಸುವುದು ಕತ್ತಲಿಗಿಂತಲೂ ಅಪಾಯವೆಂದು ಯೋಚಿಸಿದ ಮೋಹನದಾಸನು 'ಆಯಿತು, ನೀವು ಹೇಳಿದ್ದೆಲ್ಲವನ್ನೂ ಅಣ್ಣನಿಗೆ ಹೇಳುತ್ತೇನೆ. ನಾನಿನ್ನು ಹೋಗಬಹುದೇ?' ಎಂದು ಅನುಮತಿ ಯಾಚಿಸಿದನು.

'ಹೋಗುಪಿಯಂತೆ, ಹೋಗಲು ನಮ್ಮದೇನೂ ಅಡ್ಡಿಯಿಲ್ಲ. ಒಂದುವೇಳೆ ಅವನು ನಾಳೆಯ ದಿನ ದುಡ್ಡಿನ ಸಹಿತ ಬಾರದಿದ್ದರೆ, ನೀನು ಅವನಿಗೆ ಸರಿಯಾಗಿ ತಿಳಿಸಿಹೇಳಲಿಲ್ಲವೆಂದೇ ನಾವು ಭಾವಿಸಬೇಕಾಗುತ್ತದೆ. ಅವನ ಜತೆಗೆ ನೀನು ಕೂಡಾ ಶಿಕ್ಷೆ ಅನುಭವಿಸಬೇಕಾಗುತ್ತದೆ. ಅರ್ಥ ವಾಯಿತಾ?'

ಈ ಕಟುಕರ ಕೈಯಿಂದ ಒಮ್ಮೆ ಪಾರಾದರೆ ಸಾಕು ಎಂಬ ಯೋಚನೆಯಿಂದ, 'ಆಯಿತು, ನಾಳೆ ಸಂಜೆಯ ಒಳಗೆ ನಿಮಗೆ ಅವನು ದುಡ್ಡು ತಂದು ಕೊಡುವಂತೆ ಹೇಳುತ್ತೇನೆ. ಈಗ ನನಗೆ ಮನೆಗೆ ಹೋಗಲು ಬಿಡಿರಿ. ನನ್ನ ಬಳಿ ತಂದೆಗೆ ಇಂದು ರಾತ್ರಿ ನೀಡಬೇಕಾದ ಔಷಧಿಯಿದೆ. ಅವರೆಲ್ಲ ನನ್ನನ್ನೇ ಕಾಯುತ್ತಿದ್ದಾರೆ.' ಎಂಬುದಾಗಿ ಒಂದೇ ಉಸಿರಿಗೆ ಗಡಬಡಿಸಿದ ಮೋಹನ ದಾಸನು, ಅವರ ಪ್ರತಿಕ್ರಿಯೆಗೂ ಕಾಯದೆ 'ಬದುಕಿದೆಯ ಬಡಜೀವವೇ' ಎನ್ನುವಂತೆ ಅಲ್ಲಿಂದ ತಪ್ಪಿಸಿಕೊಂಡು ಮನೆಯತ್ತ ಧಾವಿಸಿದನು.

ರಾತ್ರಿಯ ಊಟವಾದ ನಂತರ ಚಿಕ್ಕಣ್ಣನನ್ನು ಗುಟ್ಟಾಗಿ ಅಂಗಳದ ಮೂಲೆಗೆ ಕರೆದುಕೊಂಡು ಹೋದ ಮೋಹನದಾಸನು, ರಸ್ತೆಯ ಕತ್ತಲಿನಲ್ಲಿ ನಡೆದು ಹೋದ ಭಯಾನಕ ಘಟನೆಯನ್ನು ಅಷ್ಟೇ ಭಯಾನಕವಾಗಿ ವಿವರಿಸಿದನು.

ಈಗ ಭಯಪಡುವ ಸರದಿ ಅಣ್ಣನದಾಗಿತ್ತು.

ಮೋಹನದಾಸನನ್ನು ದಾರಿಯಲ್ಲಿ ಅಡ್ಡಗಟ್ಟಿ ಬೆದರಿಸಿದವರು ಯಾರು ಎಂಬುದು ಚಿಕ್ಕಣ್ಣನಿಗೆ ಗೊತ್ತಾಗಿತ್ತು. ಅವನು ಅವರಿಂದ ಸಾಲ ಪಡೆದದ್ದು ನಿಜವಾಗಿತ್ತು. ಅವನು ಕೆಲವು ತಿಂಗಳ ಹಿಂದೆ ಸಾಲ ತೆಗೆದುಕೊಂಡಿದ್ದ ಇಪ್ಪತ್ತೈದು ರೂಪಾಯಿಗಳನ್ನು ಮರಳಿಸುವಂತೆ ಕಳೆದ ಒಂದು ತಿಂಗಳಿನಿಂದ ಅವರಿಬ್ಬರೂ ಸಾಕಷ್ಟು ಬಾರಿ ಬೆದರಿಸಿದ್ದರು. ಸಿಗರೇಟು ಸೇದಲು, ಮಾಂಸ ತಿನ್ನಲು ಕಲಿಸಿದವರೇ ಅವರು. ಗೆಳೆತನದ ಆರಂಭದ ದಿನಗಳಲ್ಲಿ ಜೀವಕ್ಕೆ ಜೀವ ಕೊಡಲು ಸಿದ್ಧರಿದ್ದ ಗೆಳೆಯರೆಂದೇ ತೋರ್ಪಡಿಸಿಕೊಂಡವರು ಅವರು. ತಿನ್ನುವುದು, ಕುಡಿಯುವುದು, ಸಿಗರೇಟು ಸೇದುವುದು ಎಲ್ಲವೂ ಜತೆಯಲ್ಲೇ. ಆದರೀಗ ಎಲ್ಲಾವೂ ತಿರುವು ಮುರುವಾಗಿದೆ. ಸಾಲದ ಹಣ ಗೆಳೆತನವನ್ನು ಹಾಳು ಮಾಡಿದೆ.

ಸಹೋದರರಿಬ್ಬರೂ ಅಂಗಳದ ಕತ್ತಲಲ್ಲಿ ಪರಸ್ಪರ ಧೈರ್ಯ ತುಂಬಿಕೊಳ್ಳುತ್ತ ನಾಳಿನ ದುರಂತ ವನ್ನೆದುರಿಸುವ ದಾರಿಗಳನ್ನು ಹುಡುಕಲೆತ್ನಿಸಿದರು.

ಇಂಗ್ಲಿಷ್ ಭಾಷೆಯ ತರಗತಿಯಲ್ಲಿ ಷೇಕ್ಸ್ಪಿಯರ್‌ನ ನಾಟಕವೊಂದನ್ನು ಪಾಠ ಮಾಡುತ್ತಿರುವಾಗ, ಶಿಕ್ಷಕರು ದುಡ್ಡಿನ ವ್ಯವಹಾರವು ಅದೆಷ್ಟು ಒಳ್ಳೆಯ ಗೆಳೆತನವನ್ನೂ ಹಾಳು ಮಾಡುತ್ತದೆ ಎಂಬುದನ್ನು ಹಲವಾರು ಉದಾಹರಣೆಗಳ ಮೂಲಕ ಎಚ್ಚರಿಸಿದ್ದು ನೂರಕ್ಕೆ ನೂರರಷ್ಟು ನಿಜವಾಗಿ ಹೋಗಿತ್ತು. ನಾಳೆ ಸಂಜೆಯ ವೇಳೆಗೆ ಹಣ ಹೊಂದಿಸಿಕೊಂಡು ಹೋಗದಿದ್ದರೆ, ಧಾಂಡಿಗರಿಬ್ಬರು ಬೆರಳುಗಳನ್ನು ಕಡಿದು ಪೊಟ್ಟಣ ಕಟ್ಟದಿದ್ದರೂ, ದೊಡ್ಡ ರಾದ್ಧಾಂತ

ಮಾಡುವುದಂತೂ ನಿಶ್ಚಿತವಾಗಿತ್ತು. ಆದರೆ, ಅಷ್ಟು ಬೇಗ ದುಡ್ಡು ಹೊಂದಿಸುವುದು ಹೇಗೇ? ಯಾರು ಕೊಡುತ್ತಾರೇ?

ಕದಿಯಬೇಕಷ್ಟೆ !.

ದೂರದ ರಸ್ತೆ ತಿರುವಿನಲ್ಲಿ ಬಲಕ್ಕೆ ತಿರುಗಿದ ಗಸ್ತಿನ ಪೋಲೀಸ್ ವಾಹನದ ಕ್ಷೀಣ ಬೆಳಕು ಚಿಕ್ಕಣ್ಣನ ಬಲಗೈಯಲ್ಲಿದ್ದ ಬಂಗಾರದ ಕಡಗವನ್ನು ಫಳಫಳನೆ ಹೊಳೆಯಿಸಿತು. ಇಬ್ಬರಿಗೂ ಕತ್ತಲಲ್ಲಿ ಬೆಳಕಿನ ಕಿರಣವೊಂದು ಕಂಡಂತಾಗಿತ್ತು.

ಬೇರೆ ಯಾವ ದಾರಿಯೂ ಇಲ್ಲವೆಂಬುದು ಮನದಟ್ಟಾದಾಗ, ಒಲ್ಲದ ಮನಸ್ಸಿನಿಂದಲೇ ಇಬ್ಬರು ಸಹೋದರರು ನಿರ್ಧರಿಸಿಯೇ ಬಿಟ್ಟಿದ್ದರು: ನಾಳೆ ಮುಂಜಾನೆ ಯಾರಿಗೂ ಗೊತ್ತಾಗದಂತೆ ಇಬ್ಬರೂ ಅಂಚೆ ಕಚೇರಿಯ ಹಿಂಭಾಗದಲ್ಲಿರುವ ಚಿನಿವಾರನ ಅಂಗಡಿಗೆ ಹೋಗಿ, ಚಿಕ್ಕಣ್ಣ ತೊಟ್ಟುಕೊಂಡಿರುವ ಬಂಗಾರದ ಕಡಗದಿಂದ ಇಪ್ಪತ್ತೈದು ರೂಪಾಯಿಗಾಗುವಷ್ಟು ತುಂಡು ತೆಗೆದು ಮಾರಾಟ ಮಾಡುವುದು ಮತ್ತು ಸಂಜೆಯ ಹೊತ್ತು ಚಿಕ್ಕಣ್ಣನೊಬ್ಬನೇ ಹೋಗಿ, ಹಿಂದೆ ಅವನ ಜೀವದ ಗೆಳೆಯರಾಗಿದ್ದವರ ಮತ್ತು ಈಗ ಜೀವ ತೆಗೆಯಲು ಸಿದ್ಧರಾಗಿದ್ದವರ ಸಾಲ ದಿಂದ ಮುಕ್ತನಾಗುವುದು. ಮರುದಿನ ಹಾಗೆಯೇ ಮಾಡಿದರು; ಸಾಲದಿಂದ ಮುಕ್ತರಾದರು.

## ಅಪರಾಧ ಮತ್ತು ಶಿಕ್ಷೆ

ಸ್ನೇಹಿತರಿಂದ ಪಡೆದಿದ್ದ ಸಾಲದಿಂದ ಮುಕ್ತನಾದ ಬಳಿಕ, ಚಿಕ್ಕಣ್ಣ ಆ ವಿಷಯವನ್ನು ಮರೆತೇ ಬಿಟ್ಟಿದ್ದನು. ಆ ಬಗ್ಗೆ ಅವನು ಮೋಹನದಾಸನೊಂದಿಗೆ ಮತ್ತೊಮ್ಮೆ ಚರ್ಚಿಸಿದ್ದಿರಲಿಲ್ಲ. ಮೋಹನದಾಸನೂ, ಚಿಕ್ಕಣ್ಣನ ಬಂಗಾರದ ಕಡಗ ಮಾರುವ ಸಂದರ್ಭದಲ್ಲಿ ಹಾಗೆಯೇ ಭಾವಿಸಿದ್ದನು. ಕಷ್ಟವೆಲ್ಲ ಕಳೆದು ಹೋಗಿ ನಿರಾಳವಾಗಿ ಉಸಿರಾಡಬಹುದೆಂದು ನಂಬಿದ್ದನು.

ಆದರೆ, ದಿನಗಳೆದಂತೆ ತಾನಂದು ಮುಂಜಾನೆ ಚಿನಿವಾರನ ಅಂಗಡಿಯೆದುರು ಚಿಕ್ಕಣ್ಣನ ಜತೆ ಸೇರಿ ಕಳ್ಳತನದಿಂದ ಕಡಗದ ತುಂಡೊಂದನ್ನು ಮಾರಾಟ ಮಾಡಿದ ಘಟನೆಯ ತುಣುಕುಗಳೆಲ್ಲವೂ ಮತ್ತೆ ಮತ್ತೆ ನೆನಪಾಗುತ್ತ ನೆಮ್ಮದಿಯನ್ನು ಹಾಳುಮಾಡಿದ್ದವು. ನಿಂತಲ್ಲಿ, ಕುಳಿತಲ್ಲಿ, ಶಾಲೆಯ ಪಾಠಗಳ ನಡುವೆ, ತಂದೆಯ ಕಾಲೊತ್ತುವ ಸೇವೆಯ ನಡುವೆ, ಮಲಗುವ ಕೋಣೆಯಲ್ಲಿ ಕಸ್ತೂರಿಯ ಜತೆ ಪ್ರೀತಿಯ ಮಾತಾಡುವ ನಡುವೆ, ನೂರಾರು ಪ್ರಶ್ನೆಗಳು ಹುಟ್ಟಿಕೊಂಡು ಮೋಹನದಾಸನನ್ನು ಹಿಂಸಿಸುತ್ತಿದ್ದವು.

ಯಾವನೇ ಒಬ್ಬ ಮಗನು ತನ್ನ ಹಿರಿಯವರು ಪ್ರೀತಿಯಿಂದ ತೊಡಿಸಿರುವ ಆಭರಣವನ್ನು, ಅದು

ಅವನಿಗೆಂದೇ ಮೀಸಲಾಗಿರಿಸಿದ್ದರೂ, ಹಿರಿಯರ ಅನುಮತಿಯಿಲ್ಲದೆ ತನ್ನ ಸ್ವಾರ್ಥಕ್ಕಾಗಿ ಮಾರಾಟ ಮಾಡುವುದು ಸರಿಯೇ ? ಎಂಬ ಪ್ರಶ್ನೆಯು, ಕತ್ತಲಲ್ಲಿ ತಡೆದ ಧಾಂಡಿಗರ ಚಾಕುವಿಗಿಂತಲೂ ಹೆಚ್ಚು ಭಯಾನಕವಾಗಿ ಕಾಡಲಾರಂಭಿಸಿತ್ತು.

ಆಭರಣಗಳನ್ನು ಮನುಷ್ಯರು ಹಾಕಿಕೊಳ್ಳುವುದಾದರೂ ಯಾತಕ್ಕೆ? ಸುಂದರವಾಗಿ ಕಾಣಲು ಎಂಬುದೇ ಉತ್ತರವಾಗಿದ್ದರೆ, ಅಣ್ಣನ ಕಡಗದಿಂದ ಒಂದು ತುಂಡು ತೆಗೆದದ್ದು ತಪ್ಪಾಗುವುದಿಲ್ಲ; ಯಾಕೆಂದರೆ ಚಿನಿವಾರನು ಅದೆಷ್ಟು ಚೆನ್ನಾಗಿ ಕಡಗದಿಂದ ತುಂಡೊದನ್ನು ಕತ್ತರಿಸಿದ್ದನೆಂದರೆ, ಅದನ್ನು ಹಾಗೆಂದು ಯಾರೂ ಹೇಳದಿದ್ದರೆ ಇನ್ನೊಬ್ಬ ಚಿನಿವಾರನಿಗೂ ಗೊತ್ತಾಗಲು ಸಾಧ್ಯವಿದ್ದಿರಲಿಲ್ಲ. ಹಾಗಿದ್ದ ಮೇಲೆ ಚಿಕ್ಕಣ್ಣನ ರೂಪದ ಮೇಲೆ ಆ ಘಟನೆ ಯಾವುದೇ ಪರಿಣಾಮ ಬೀರಿಲ್ಲವೆಂದಾಯಿತು. ಆದ್ದರಿಂದ ಕಡಗದ ತುಂಡು ಮಾರಾಟ ಮಾಡಿದ್ದು ಅಪರಾಧವಾಗುವುದಿಲ್ಲ.

ಬಂಗಾರದ ಆಭರಣಗಳನ್ನು ಕಷ್ಟಕಾಲದಲ್ಲಿ ಮಾರಿಕೊಳ್ಳುವ ಆಪದ್ಧನವೆಂದು ಭಾವಿಸಿದರೆ ಕೂಡಾ, ಚಿಕ್ಕಣ್ಣ ಕಡಗದ ತುಂಡು ಮಾರಿದ್ದು ಅಪರಾಧವಾಗುವುದಿಲ್ಲ. ಯಾಕೆಂದರೆ ಚಿಕ್ಕಣ್ಣನಿಗೆ ಅದಕ್ಕಿಂತ ದೊಡ್ಡ ಆಪತ್ತು ಬೇರೆ ಬರಲು ಸಾಧ್ಯವಿದ್ದಿರಲಿಲ್ಲ.

ಹಾಗಾದರೆ ಚಿಕ್ಕಣ್ಣನ ಕಡಗದಲ್ಲಿದ್ದ ಬಂಗಾರದ ತುಂಡು ಮಾರಾಟ ಮಾಡಿದ್ದು ಸರಿಯಾದ ಕ್ರಮವೆ?

ಸರಿಯಾದ ಕ್ರಮವಾಗಿದ್ದರೆ ತಾವೇಕೆ ಅದನ್ನು ಕದ್ದು ಮುಚ್ಚಿ ಮಾಡಬೇಕಾಗಿತ್ತು? ತಂದೆಯವರಲ್ಲೋ, ತಾಯಿಯವರಲ್ಲೋ ಅಥವಾ ಕನಿಷ್ಠ ಹಿರಿಯಣ್ಣನವರಲ್ಲಾದರೂ ಹೇಳಬಹುದಿತ್ತಲ್ಲವೇ? ಯಾಕೆ ಹೇಳಲಿಲ್ಲ? ಹೇಳಿದರೆ ಅವರು ಸಮ್ಮತಿ ನೀಡುತಿದ್ದರೇ? ಖಂಡಿತವಾಗಿ ಇಲ್ಲ. ಅಂದ ಮೇಲೆ ತಾವು ಮಾಡಿದ ಕೃತ್ಯಕ್ಕೆ ಯಾವ ಸಮರ್ಥನೆಯೂ ಇಲ್ಲ. ತಾವಿಬ್ಬರೂ ಮಾಡಿದ್ದು ಅಪರಾಧ.

ಅಪರಾಧವೆಂದ ಬಳಿಕ ಅದಕ್ಕೆ ತಕ್ಕ ಶಿಕ್ಷೆಯಾಗಲೇಬೇಕು. ಶಿಕ್ಷೆ ಕೊಡುವವರಾರು? ಶಾಲೆಯಲ್ಲಾದರೆ ಶಿಕ್ಷಕರು. ಇದು ಶಾಲೆಗೆ ಸಂಬಂಧಿಸಿದ ಸಂಗತಿಯಲ್ಲ; ಮನೆಗೆ ಸಂಬಂಧಿಸಿದ್ದು. ಶಿಕ್ಷಿಸಬೇಕಾದರೆ ತಂದೆ ತಾಯಿಗಳೇ ಶಿಕ್ಷಿಸಬೇಕು. ಶಿಕ್ಷಿಸುವುದಾದರೆ ಇಬ್ಬರಿಗೂ ಶಿಕ್ಷಿಸಬೇಕು.

ಯೋಚನೆಯಲ್ಲೇ ತಲೆ ಚಿಟ್ಟು ಹಿಡಿದು ಹೋಗಿತ್ತು.

ಷೇಕ್ ಮೆಹತಾಬನಾದರೂ ಊರಲ್ಲಿ ಇದ್ದಿದ್ದರೆ ಅವನಲ್ಲಾದರೂ ಸಲಹೆ ಪಡೆಯಬಹುದಿತ್ತು. ಎಂತಹ ಕಠಿಣ ಸಮಸ್ಯೆಗೂ ಅವನಲ್ಲಿ ಪರಿಹಾರವಿತ್ತು. ಆದರೆ ಬೇಸಿಗೆಯ ರಜೆಯಲ್ಲಿ ಕಲಕತ್ತಾದ ತನ್ನ ಅಜ್ಜಿಯ ಮನೆಗೆ ಹೋಗಿದ್ದ ಮೆಹತಾಬನು, ರಜೆ ಮುಗಿದು ತರಗತಿಗಳು ಆರಂಭವಾಗಿ ತಿಂಗಳೇ ಕಳೆದಿದ್ದರೂ ಮರಳಿ ಬಂದಿರಲಿಲ್ಲ. ಅವನು ಬರುವನೋ ಇಲ್ಲವೋ

ಎಂಬುದೂ ಖಚಿತವಿಲ್ಲವೆಂದು ಚಿಕ್ಕಣ್ಣ ತಿಳಿಸಿದ್ದ. ಅದ್ಯಾವುದೋ ಕ್ರಾಂತಿಕಾರಿ ಸಂಘಟನೆಯಲ್ಲಿ ತರಬೇತಿ ಪಡೆಯಲು ಮೆಹತಾಬನು ರಂಗೂನ್ ಪ್ರಾಂತ್ಯಕ್ಕೆ ಹೋಗಿದ್ದಾನಂತೆ, ಇನ್ನೆಂದೂ ಶಾಲೆಗೆ ಬರುವುದಿಲ್ಲವಂತೆ ಎಂಬ ಸುದ್ದಿಯೂ ಇತ್ತು.

ಮೆಹತಾಬನ ಒಡನಾಟವಿಲ್ಲದೆ ಮೋಹನದಾಸನು ಒಂಟಿಯಾಗಿಬಿಟ್ಟಿದ್ದನು. ಶಾಲೆ ಮುಗಿದ ತಕ್ಷಣ ಮನೆಗೆ ಮರಳಿ ತಂದೆಯ ಸೇವೆಗೆ ತೊಡಗುತ್ತಿದ್ದನು. ಅವರ ಕಾಲಿನ ಹುಣ್ಣು ದಿನದಿಂದ ದಿನಕ್ಕೆ ದೊಡ್ಡದಾಗುತ್ತಿತ್ತೇ ಹೊರತು, ಪಂಡಿತರ ಗಿಡಮೂಲಿಕೆಯ ಔಷಧದ ಯಾವ ಪರಿಣಾಮವೂ ಕಾಣಿಸುತ್ತಿರಲಿಲ್ಲ.

ಹಾಸಿಗೆಯಲ್ಲಿ ಅತ್ತಿತ್ತ ಸರಿಯಲೂ ಕಷ್ಟಪಡುವ ತಂದೆಯವರ ಕಾಲು ಒತ್ತುವ ಮೋಹನದಾಸನ ಸಂಜೆಯ ದಿನಚರಿ ಯಥಾಪ್ರಕಾರವಾಗಿ ಮುಂದುವರಿದಿತ್ತು. ಆದರೆ ಬಂಗಾರದ ಕಡಗದ ತುಂಡನ್ನು ಮಾರಿದ್ದ ಘಟನೆಯ ನಂತರದ ದಿನಗಳಲ್ಲಿ, ಮೋಹನದಾಸನಿಗೆ ತಂದೆಯ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಿಸುವ ಧೈರ್ಯವಿದ್ದಿರಲಿಲ್ಲ. ಅವರ ನೋವು ತುಂಬಿದ ಕಣ್ಣುಗಳಲ್ಲಿ ಕೂಡಾ ತನ್ನ ಕಳ್ಳತನವು ಪ್ರತಿಬಿಂಬಿಸುತ್ತಿದೆಯೆಂದೇ ಅವನಿಗೆ ಭಾಸವಾಗುತ್ತಿತ್ತು.

ತನ್ನ ಕಳ್ಳತನದ ಕೆಲಸವನ್ನು ತಂದೆಗೆ ತಿಳಿಸದೆ ಮುಚ್ಚಿಟ್ಟುಕೊಳ್ಳುವುದು ತನ್ನಿಂದ ಸಾಧ್ಯವೇ ಇಲ್ಲ ಎಂದು ಮೋಹನದಾಸನಿಗೆ ಅನ್ನಿಸತೊಡಗಿತು. ಆದರೆ ಅದನ್ನು ತಂದೆಯ ಮುಂದೆ ನಿಂತು ಹೇಳುವ ಧೈರ್ಯ ಮಾತ್ರ ಅವನಲ್ಲಿದ್ದಿರಲಿಲ್ಲ. ಅವರು ಹೊಡೆಯುತ್ತಾರೆ ಎಂಬ ಭಯ ಅವನಿಗಿದ್ದಿರಲಿಲ್ಲ. ಹೊಡೆದಿದ್ದರೂ ಅವನಿಗೆ ಬೇಸರವಾಗುತ್ತಿರಲಿಲ್ಲ. ಆದರೆ, ಅವನಿಗೆ ತಂದೆಯವರು ಎಂದೂ ಹೊಡೆದವರಲ್ಲ.

ಒಂದು ಮಧ್ಯರಾತ್ರಿಯ ಹೊತ್ತು ಇದ್ದಕ್ಕಿದ್ದಂತೆ ಮೋಹನದಾಸನಿಗೆ ಎಚ್ಚರವಾಯಿತು. ಬಹಳ ಹೊತ್ತು ಹಾಗೆಯೇ ಹಾಸಿಗೆಯಲ್ಲಿ ಮಲಗಿ ನಿದ್ರಿಸಲು ಯತ್ನಿಸಿದ್ದನು. ನಿದ್ರೆ ಹತ್ತಿರ ಸುಳಿಯಲು ನಿರಾಕರಿಸುತಿತ್ತು. ಏನನ್ನೋ ನಿರ್ಧರಿಸಿದವನಂತೆ ಎದ್ದು ಕುಳಿತ ಮೋಹನದಾಸ, ಮೇಜಿನ ಎದುರು ಕುಳಿತು, ಉದ್ದವಾದ ಬಿಳಿಯ ಹಾಳೆಯೊಂದರಲ್ಲಿ ನಡೆದದ್ದನ್ನೆಲ್ಲ ವಿವರವಾಗಿ ಬರೆಯತೊಡಗಿದನು. ಚಿಕ್ಕಣ್ಣನಿಗೆ ಧಾಂಡಿಗ ಹುಡುಗರಿಂದ ಅಪಾಯವಾಗುವ ಭಯವಿದ್ದುದರಿಂದ ಅಂತಹ ತಪ್ಪು ಮಾಡಬೇಕಾಗಿ ಬಂತು ಎಂಬುದನ್ನೂ ಸೇರಿಸಿದನು. ಇನ್ನು ಮುಂದೆ ಇಂತಹ ತಪ್ಪನ್ನು ಎಂದೂ ಮಾಡುವುದಿಲ್ಲ ಎಂಬುದನ್ನು ಒಂದರ ಕೆಳಗೊಂದು ಸಾಲಿನಂತೆ ಮೂರು ಬಾರಿ ಬರೆದನು. ತಮ್ಮಿಬ್ಬರ ತಪ್ಪುಗಳನ್ನು ದಯವಿಟ್ಟು ಕ್ಷಮಿಸಬೇಕೆಂದು ಮತ್ತೆ ಮೂರು ಸಲ ಬರೆದನು. ತಾನು ಬರೆದದ್ದನ್ನೆಲ್ಲ ಮತ್ತೊಮ್ಮೆ ಓದಿ ಸಮಾಧಾನಪಟ್ಟು, ಮುಂಜಾನೆ ಶಾಲೆಗೆ ಹೋಗುವ ಮೊದಲು ಪತ್ರವನ್ನು ತಂದೆಯವರಿಗೆ ಕೊಡುವುದೆಂದು ನಿರ್ಧರಿಸಿ ಹಾಸಿಗೆ ಸೇರಿ ಶಾಂತವಾಗಿ ನಿದ್ರಿಸಿದನು.

ಕಾಲಿನ ಹುಣ್ಣಿನ ಕಾರಣದಿಂದ ತಂದೆಯವರು ಹಾಸಿಗೆಯಲ್ಲಿ ಮಲಗುತ್ತಿರಲಿಲ್ಲ. ಅವರು ಮರದ ಐರಿಹಲಗೆಯ ಮೇಲೆ ಹಾಗೆಯೇ ಮಲಗಿಕೊಳ್ಳುತ್ತಿದ್ದರು.

ಶಾಲೆಗೆ ಹೊರಟು ನಿಂತ ಮೋಹನದಾಸನು, ಮೊದಲೇ ನಿರ್ಧರಿಸಿದ್ದಂತೆ ತಂದೆಯವರು ಮಲಗಿದ್ದ ಕೋಣೆಗೆ ನಡೆದನು. ತಂದೆಯವರ ದೇಹವನ್ನು ದಾದಿಯೊಬ್ಬಳು ಒದ್ದೆ ಬಟ್ಟೆಯಿಂದ ಒರಸಿ ಸ್ನಾನ ಮಾಡಿಸುತ್ತಿದ್ದಳು. ಅವಳ ಕೆಲಸ ಮುಗಿಯುವವರೆಗೂ ಮೋಹನದಾಸನು ಬಾಗಿಲ ಹೊರಗೆಯೇ ನಿಂತು, ಆಕೆ ಹೊರಗೆ ಬಂದ ಬಳಿಕ ಒಳಗೆ ಕಾಲಿಟ್ಟನು.

ಕಾಲುಗಳು ನಡುಗುತ್ತಿದ್ದುದರಿಂದ ಮೋಹನದಾಸನಿಂದ ನಿಂತುಕೊಳ್ಳಲು ಸಾಧ್ಯವಾಗಲಿಲ್ಲ. ತಂದೆಯವರ ಕಾಲ ಬಳಿ ಮರದ ಹಲಗೆಯ ಮೇಲೆ ಕುಳಿತನು.

ಸಾಮಾನ್ಯವಾಗಿ ಶಾಲೆಗೆ ಹೊರಡುವ ಹೊತ್ತಲ್ಲಿ ಮೋಹನದಾಸನು ತಂದೆಯ ಕೋಣೆಗೆ ಹೋಗುತ್ತಿರಲಿಲ್ಲ. ಇಂದು ಅನಿರೀಕ್ಷಿತವಾಗಿ ಬಂದು ಕಾಲ ಬಳಿ ಕುಳಿತ ತಮ್ಮ ಪ್ರೀತಿಯ ಮಗನನ್ನು ಕರಮಚಂದ್ ಗಾಂಧಿಯವರು ಕುತೂಹಲದಿಂದ ದಿಟ್ಟಿಸಿ ನೋಡಿದರು. ಅವನ ಮುಖದ ತುಂಬೆಲ್ಲ ನೋವಿನ ಗೆರೆಗಳಿರುವುದನ್ನು ಕಂಡು ಅವರು ಆತಂಕಗೊಂಡಿದ್ದರು.

ಮೋಹನದಾಸನು ತನ್ನ ಜೇಬಿನಿಂದ ಪತ್ರವೊಂದನ್ನು ಹೊರಗೆಳೆಯುತ್ತಿದ್ದಾಗ ಅವನ ಕೈ ಬೆರಳುಗಳು ನಡುಗುತ್ತಿರುವುದೂ ಅವರ ಸೂಕ್ಷ್ಮದೃಷ್ಟಿಗೆ ಗೋಚರವಾಗಿತ್ತು. ಮೋಹನದಾಸನು ಯಾವುದೋ ಬಹಳ ದೊಡ್ಡ ಸಮಸ್ಯೆಯ ಮೂಟೆಯನ್ನೇ ಹೊತ್ತುಕೊಂಡು ಬಂದಿದ್ದಾನೆಂಬುದನ್ನು ಅವರು ಊಹಿಸಿದ್ದರು.

ತಮ್ಮ ದಿವಾನಗಿರಿಯ ಕೆಲಸದಲ್ಲಿ ಬೆಟ್ಟದಂತಹ ಜಟಿಲವಾಗಿದ್ದ ಅದೆಷ್ಟೋ ಸಮಸ್ಯೆಗಳನ್ನು ಮಂಜಿನಂತೆ ಸುಲಭವಾಗಿ ಪರಿಹರಿಸಿ ಗೆದ್ದು ನಿಂತಿದ್ದ ತಮಗೆ, ತಮ್ಮದೇ ಮಗನ ಸಮಸ್ಯೆಯನ್ನು ಪರಿಹರಿಸುವುದು ನೀರು ಕುಡಿದಷ್ಟೇ ಸುಲಭ ಎಂದು ಭಾವಿಸಿದ್ದರು. ವ್ಯವಹಾರ ಕುಶಲರಾದ ಅವರು ಮೋಹನದಾಸನೇ ಬಾಯಿ ಬಿಡಲಿ ಎಂದು ಯೋಚಿಸಿ, ಮೌನವಾಗಿ ಅವನತ್ತಲೇ ಕಣ್ಣು ನೆಟ್ಟಿದ್ದರು. ತನ್ನೆರಡೂ ಕೈಗಳ ಮಧ್ಯೆ ಹುದುಗಿ ಹೋಗಿದ್ದ ಪತ್ರವನ್ನು ತಂದೆಯವರತ್ತ ಚಾಚಿದ ಮೋಹನದಾಸನು, ಅವರು ಪತ್ರವನ್ನು ಸ್ವೀಕರಿಸುತ್ತಲೇ ತಲೆ ತಗ್ಗಿಸಿ ಕುಳಿತುಬಿಟ್ಟನು.

ಮೋಹನದಾಸನ ಎಡಗಣ್ಣಿನ ಕೊನೆಯಿಂದ ಜಿನುಗಿದ ನೀರ ಹನಿಯೊಂದು, ತಂದೆಯವರ ಕಾಲ ಮೇಲೆ ಬಿದ್ದು ಒಡೆದು ಹೋದದ್ದನ್ನು ಇಬ್ಬರೂ ಗಮನಿಸಿದ್ದಿರಲಿಲ್ಲ.

ಕರಮಚಂದ್ ಗಾಂಧಿಯವರು ಪತ್ರವನ್ನು ಕುತೂಹಲದಿಂದ ಓದಲಾರಂಭಿಸಿದರು. ಮೊದಲ ಸಾಲು ಓದುತ್ತಲೇ, ಗಾಬರಿಗೊಂಡವರಂತೆ ಪತ್ರವನ್ನು ಬದಿಗಿಟ್ಟು ಎದ್ದು ಕುಳಿತು 'ಇದೆಲ್ಲ ಏನೋ?' ಎಂದು ಆತಂಕದಿಂದ ಪ್ರಶ್ನಿಸಿದ್ದರು. ಮೋಹನದಾಸನು ಮಿಸುಕಾಡಲಿಲ್ಲ.

ಪುನಃ ಪತ್ರವನ್ನು ಎತ್ತಿಕೊಂಡ ಅವರು, ನಿಧಾನವಾಗಿ ಅರಂಭದಿಂದ ಓದತೊಡಗಿದರು.

ಕ್ರಮೇಣ ಅವರ ಮುಖವು ಕಳಾಹೀನವಾಗತೊಡಗಿತು. ಹಣೆಯ ಮೇಲೆ ನೆರಿಗೆಯ ಗೆರೆಗಳು ಸಾಲುಗಟ್ಟಿದವು. ಅವರ ಕಣ್ಣುಗಳಿಂದ ಕಣ್ಣೀರ ಧಾರೆಯೇ ಇಳಿಯಲಾರಂಭಿಸಿತು. ಪತ್ರವನ್ನು ಪೂರ್ತಿಯಾಗಿ ಓದಿದ ಬಳಿಕ, ತಲೆಯೆತ್ತಿ, ತನ್ನೆದುರು ತಲೆ ತಗ್ಗಿಸಿ ಕುಳಿತ ಮಗನನ್ನು ಅಚ್ಚರಿ ಮತ್ತು ಅಭಿಮಾನದಿಂದ ಮೌನವಾಗಿ ಸ್ವಲ್ಪ ಹೊತ್ತು ದಿಟ್ಟಿಸುತ್ತಾ ತಮ್ಮ ಒದ್ದೆ ಕಣ್ಣುಗಳಲ್ಲಿ ತುಂಬಿಕೊಂಡರು. ಅನಂತರ ಆವೇಶ ಬಂದವರಂತೆ ಪತ್ರವನ್ನು ಹರಿದು ಚೂರು ಚೂರು ಮಾಡಿ ಪಕ್ಕಕ್ಕೆಸೆದು , ಮಂಚದ ಮೇಲೆ ಅಂಗಾತ ಮಲಗಿ ಸೂರು ದಿಟ್ಟಿಸತೊಡಗಿದರು.

ನೀರು ತುಂಬಿದ್ದ ಅವರ ಕಣ್ಣುಗಳಿಗೆ ಮನೆಯ ಸೂರು ಕಾಣಿಸುತ್ತಿರಲಿಲ್ಲ. ಅಯೋಧ್ಯೆಯ ರಾಜಸಭೆಯಲ್ಲಿ ದಶರಥ ಮಹಾರಾಜನ ತೊಡೆಯ ಮೇಲೆ ಕುಳಿತಿದ್ದ ಶ್ರೀರಾಮಚಂದ್ರ ಸ್ಪಷ್ಟ ವಾಗಿ ಕಾಣಿಸುತ್ತಿದ್ದ. ಆ ಚಿತ್ರ ಇದ್ದಕ್ಕಿದ್ದಂತೆ ಬದಲಾಯಿತು: ಸಿಂಹಾಸನದಲ್ಲಿ ತಾವು ಕುಳಿತಿದ್ದಂತೆಯೂ, ತಮ್ಮ ತೊಡೆಯ ಮೇಲೆ ಮೋಹನದಾಸನು ಕುಳಿತಿರುವಂತೆಯೂ ಕಾಣಿಸ ತೊಡಗಿತು. • ಜನರೆಲ್ಲರೂ ಶ್ರೀರಾಮಚಂದ್ರನಿಗೆ ಜಯಘೋಷ ಹಾಕುತ್ತಿದ್ದರು. ತಂದೆ ಮತ್ತು ಮಗನ ನಡುವಿನ ಬಾಂಧವ್ಯ ಹೇಗಿರುತ್ತದೆ ಎಂಬುದನ್ನು ಜಗದ ಜನರು ಇವರನ್ನು ನೋಡಿ ಕಲಿಯಲಿ, ಎಂಬರ್ಥ ನೀಡುವ ಹಾಡನ್ನು ರಾಜಸಭೆಯಲ್ಲಿ ಸೇರಿದ್ದ ಸಾವಿರಾರು ಜನರು ಒಕ್ಕೊರಲಿನಿಂದ ಹಾಡುತಿದ್ದರು.

ಮೋಹನದಾಸನು ತಂದೆಯವರ ಮೌನದಿಂದ ಗಾಬರಿಗೊಂಡನು. ಅವರು ಸಿಟ್ಟಿನಿಂದ ಜೋರಾಗಿ ಎರಡು ಬೈಗುಳದ ಮಾತನ್ನಾದರೂ ಆಡಿಯಾರು ಎಂದು ನಿರೀಕ್ಷೆ ಮಾಡಿದ್ದನು. ಆದರೆ ತಂದೆಯವರು ನಿದ್ರೆ ಹೋದವರಂತೆ ಸುಮ್ಮನೇ ಮಲಗಿದ್ದರು.

ಮೋಹನದಾಸನು ಅವರ ಕಾಲನ್ನು ನಿಧಾನವಾಗಿ ಸವರಿದನು.

ಕಣ್ಣು ಮುಚ್ಚಿಕೊಂಡೇ ಇದ್ದ ತಂದೆಯವರು, ಮಲಗಿದ್ದಲ್ಲಿಂದಲೇ ತನ್ನ ಎರಡೂ ಕೈಗಳನ್ನು ಚಾಚಿದ್ದರು. ಹಲವಾರು ವರ್ಷಗಳಿಂದ ತಂದೆಯವರ ಆಲಿಂಗನದಿಂದ ವಂಚಿತನಾಗಿದ್ದ ಮೋಹನದಾಸನಿಗೆ ರೋಮಾಂಚನವಾಗಿತ್ತು. ಕೂಡಲೇ ಎದ್ದು ತಂದೆಯವರ ಎದೆಯ ಮೇಲೆ ತಲೆಯಿರಿಸಿ ನೆಮ್ಮದಿಯ ನಿಟ್ಟುಸಿರಿಟ್ಟನು. ಅವರ ಬಲಹೀನ ಕೈಗಳು ತನ್ನ ಬೆನ್ನ ಮೇಲೆ ನಿಧಾನವಾಗಿ ಚಲಿಸುತ್ತಿದ್ದಂತೆ, ದುಃಖ ಉಮ್ಮಳಿಸಿ ಬಂದಂತಾಗಿ ಮಲಗಿದಲ್ಲಿಯೇ ಬಿಕ್ಕಿ ಬಿಕ್ಕಿ ಅತ್ತುಬಿಟ್ಟನು. ತಂದೆಯವರೂ ಬಿಕ್ಕಿ ಬಿಕ್ಕಿ ಅಳುತ್ತಿರುವುದನ್ನು ಮಲಗಿದಲ್ಲಿಂದಲೇ ಕೇಳಿಸಿಕೊಂಡ ಮೋಹನದಾಸನು ಮತ್ತಷ್ಟು ಬಿಕ್ಕಿ ಬಿಕ್ಕಿ ಅಳತೊಡಗಿದನು.

ಬಹಳ ಹೊತ್ತು ಇಬ್ಬರೂ ಅತ್ತು ಪರಸ್ಪರ ಮೈದಡವುತ್ತ ಸಮಾಧಾನ ಮಾಡಿಕೊಂಡರೇ ಹೊರತು ಯಾರೊಬ್ಬರೂ ತುಟಿ ತೆರೆಯಲಿಲ್ಲ. ತಂದೆ ಮಗನ ನಡುವೆ ಆಗ ನಡೆಯುತಿದ್ದ ಮೌನಕ್ಕೆ ಮಾತಿನ ಸದ್ದು ನೀಡುವ ಶಕ್ತಿ ಎಂತಹಾ ಪಳಗಿದ ನಾಲಗೆಗೂ ಸಾಧ್ಯವಿದ್ದಿರಲಾರದು.

ಮೋಹನದಾಸನಿಗೆ ತಂದೆಯವರ ಮೌನವು ಹೊಸದೊಂದು ಪಾಠವನ್ನು ಕಲಿಸಿತ್ತು.

ತಪ್ಪು ಮಾಡಿದವನಿಗೆ ಶಿಕ್ಷೆಯಿರುವುದು ಬರಿಯ ಶಿಕ್ಷಿಸುವುದಕ್ಕಲ್ಲ. ಅದು ಶಿಕ್ಷೆಗೊಳಗಾದವನ ತಪ್ಪನ್ನು ಸರಿಪಡಿಸುವ ಒಂದು ಸಾಧನ. ತಂದೆಯವರು ಮನಸ್ಸು ಮಾಡಿದ್ದಿದ್ದರೆ ಮೋಹನ ದಾಸನಿಗೆ ಕಠಿಣವಾದ ಶಿಕ್ಷೆಯನ್ನೇ ಕೊಡಬಹುದಾಗಿತ್ತು. ಅವನು ಮಾಡಿದ್ದ ಅಪರಾಧವು ಸಾಮಾನ್ಯ ಅಪರಾಧವಾಗಿದ್ದಿರಲಿಲ್ಲ.

ತನ್ನ ಮನೆಯ ಸಾಮಾನುಗಳನ್ನು ಕದ್ದು ಮಾರುವವನು ಮುಂದೆ ಬೇರೆಯವರ ಮನೆಯ ಸಾಮಾನುಗಳನ್ನೂ ಕದ್ದು ಮಾರಲೂ ಹಿಂಜರಿಯಲಾರ. ಅದಕ್ಕಾಗಿ ಮನೆಯ ಹಿರಿಯರು ಅಂತಹ ತಪ್ಪು ಮಾಡಿದವನನ್ನು ದಂಡಿಸಲೇಬೇಕು. ಆದರೆ ಮನೆಯೊಳಗಿನ ಕಳ್ಳನನ್ನು ಅತಿ ಯಾಗಿ ದಂಡಿಸುವ ಮೂಲಕ ಅವನಿಗೆ ದಂಡಿಸುವವರ ವಿರುದ್ಧ ಹಗೆ ಬೆಳೆಯುವ ಹಾಗೆ ಮಾಡಿದರೆ, ಅವನು ಕಳ್ಳತನದ ಜತೆಗೆ ಕೊಲೆಯನ್ನೂ ಮಾಡಲು ಹೇಸಲಾರ.

ಮೋಹನದಾಸನ ಮನಸ್ಸು ಈಗ ತಿಳಿಯಾಗಿತ್ತು. ತಂದೆಯವರ ಕ್ಷಮೆಯ ಜೊತೆಯಲ್ಲಿ ಅವರ ಪ್ರೀತಿಯ ಅಪ್ಪುಗೆಯೂ ಸಿಕ್ಕಿಬಿಟ್ಟಿತ್ತು. ಆ ಸುಖವನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಅನುಭವಿಸಿಯೇ ಅರಿಯಬೇಕು.

ಮೋಹನದಾಸನಿಗೆ ಚಿಕ್ಕಂದಿನಲ್ಲಿ ರಂಭತ್ತೆ ಹೇಳಿಕೊಟ್ಟಿದ್ದ ರಾಮಾಯಣದ ಹಾಡೊಂದು ನೆನಪಾಯಿತು. ರಾಮನನ್ನು ಈದಿನ ಖಂಡಿತವಾಗಿ ಹಿಡಿದು ತರುತ್ತೇನೆಂಬುದಾಗಿ ಹೆಂಡತಿ ಮಂಡೋದರಿಗೆ ಭಾಷೆ ಕೊಟ್ಟು, ರಾವಣನು ರಣರಂಗಕ್ಕೆ ಹೋಗಿರುತ್ತಾನೆ. ಯುದ್ಧದ ಕೊನೆಯಲ್ಲಿ ರಾಮನು ಬಿಟ್ಟ ಬಾಣ ರಾವಣನ ಎದೆಗೆ ನುಗ್ಗುತ್ತದೆ. ತನ್ನ ಎದೆ ಹೊಕ್ಕ ರಾಮಬಾಣವನ್ನು, ರಾಮನೆಂದೇ ಗ್ರಹಿಸಿ, ಅದನ್ನು ಹೆಮ್ಮೆಯಿಂದ ಹಾಗೆಯೇ ಎದೆಗವಚಿ ಹಿಡಿದುಕೊಡು ಮನೆಗೆ ಬಂದು ಹೆಂಡತಿಗೆ ಕೊಡುತ್ತಾ, 'ನೋಡು ಮಂಡೋದರಿ. ನೋಡು, ನಿನ್ನ ರಾಮನ' ಎನ್ನುತ್ತಲೇ ಅವಳ ಮಡಿಲಲ್ಲಿ ಕುಸಿದು ನೆಮ್ಮದಿಯಿಂದ ಪ್ರಾಣ ಬಿಡುತ್ತಾನೆ.

ರಾಮಬಾಣ ಹೊಕ್ಕ ರಾವಣನು ಮಾತ್ರ ಅದರ ಮಹತ್ವವನ್ನು ಅರಿಯಬಲ್ಲ. ಮೋಹನದಾಸನ ಅನುಭವವೂ ಅದುವೇ ಆಗಿಬಿಟ್ಟಿತ್ತು. ಬದುಕಿನುದ್ದಕ್ಕೂ ನೆನಪಿನಲ್ಲಿ ಇರುವಂತಹ ಶಿಕ್ಷೆಯನ್ನೇ ತಂದೆಯವರು ನೀಡಿದ್ದರು. ಅನಂತರದ ಕೆಲವೇ ದಿನಗಳಲ್ಲಿ ಮೋಹನದಾಸನ ತಂದೆ, ಕರಮ ಚಂದ್ ಗಾಂಧಿಯವರು ತೀರಿಕೊಂಡರು.

# ಕಡಲು ದಾಟಿದರೆ ಬಹಿಷ್ಕಾರ

ಮೋಹನದಾಸನು ಮ್ಯಾಟ್ರಿಕ್ ಪರೀಕ್ಷೆ ಬರೆದು ಪಾಸಾದನು. ಗಾಂಧಿ ಕುಟುಂಬದಲ್ಲಿ ಮೋಹನದಾಸನೇ ಮ್ಯಾಟ್ರಿಕ್ ಪರೀಕ್ಷೆ ಬರೆದು ಪಾಸಾದ ಮೊದಲ ವ್ಯಕ್ತಿಯಾಗಿದ್ದುದರಿಂದ ಮನೆಯವರಿಗೆಲ್ಲ ಬಹಳ ಸಂಭ್ರಮವಾಗಿತ್ತು. ತನ್ನ ಮಗ ಕಾಲೇಜು ಓದಿ ಬಿ. ಎ. ಪದವಿ

ಗಳಿಸಬೇಕೆಂಬ ತಾಯಿಯ ಆಸೆಯಂತೆ ಮೋಹನದಾಸನು, ರಾಜಕೋಟೆಯಿಂದ ಬಲು ದೂರದಲ್ಲಿದ್ದ ಅಹಮದಾಬಾದಿನ ಭಾವನಗರದ ಸಾಮಲ್ದಾಸ್ ಕಾಲೇಜಿಗೆ ಸೇರಿದನು.

ಆದರೆ ಯಾಕೋ, ಆ ಕಾಲೇಜಿನ ಗಜಿಬಿಜಿಯ ವಾತಾವರಣವು ಶಾಂತಮೂರ್ತಿಯಂತಿದ್ದ ಮೋಹನದಾಸನಿಗೆ ಹಿಡಿಸಲಿಲ್ಲ. ಅಲ್ಲಿ ನಡೆಯುತ್ತಿದ್ದ ತರಗತಿಯ ಪಾಠಗಳಲ್ಲಿ ಆಸಕ್ತಿಯೇ ಹುಟ್ಟುತ್ತಿರಲಿಲ್ಲ. ಹಾಗೂ ಹೀಗೂ ನಾಲ್ಕು ತಿಂಗಳು ಹೇಗೋ ಕಳೆದು ರಜೆಯಲ್ಲಿ ಊರಿಗೆಂದು ಬಂದಿದ್ದವನಿಗೆ, ಪುನಃ ಅಹಮದಾಬಾದಿಗೆ ಹೋಗಲೇ ಮನಸ್ಸಿರಲಿಲ್ಲ. ಮೋಹನದಾಸನು ಕಾಲೇಜು ಓದಿನ ಬಗ್ಗೆ ಹೆಚ್ಚು ಆಸಕ್ತಿ ತೋರಿಸದಿರುವುದು ತಾಯಿಗೆ ನಿರಾಸೆಯನ್ನುಂಟು ಮಾಡಿದ್ದರೂ, ಮಗನ ನಿರ್ಧಾರಗಳು ಎಂದೂ ತಪ್ಪಾಗಿರುವುದಿಲ್ಲ, ಎಂಬುದನ್ನು ಅದಾಗಲೇ ಕಂಡುಕೊಂಡಿದ್ದರಿಂದ ಅವರೂ ಸುಮ್ಮನಾಗಿದ್ದರು.

ಕರಮಚಂದ್ ಗಾಂಧಿಯವರ ಸ್ನೇಹಿತರು ಮಾತ್ರವಲ್ಲ, ಗಾಂಧಿ ಕುಟುಂಬದ ಹಿತೈಷಿಯೂ ಆಗಿದ್ದ ಮಾವಜೀ ದವೆ ಎಂಬವರು ಕರಮಚಂದ್ ಗಾಂಧಿಯವರು ತೀರಿಕೊಂಡ ಬಳಿಕವೂ ಆಗಾಗ್ಗೆ ಮನೆಗೆ ಬಂದು ಕುಶಲ ವಿಚಾರಿಸಿಕೊಂಡು ಹೋಗುತ್ತಿದ್ದರು. ಬಹಳ ದೊಡ್ಡ ವಿದ್ವಾಂಸರು ಮಾತ್ರವಲ್ಲ, ವ್ಯವಹಾರ ಕುಶಲರೂ ಆಗಿದ್ದ ದವೆಯರಿಗೆ, ಗಾಂಧಿ ಕುಟುಂಬದಲ್ಲಿ ಮೊತ್ತ ಮೊದಲ ಬಾರಿಗೆ ಮ್ಯಾಟ್ರಿಕ್ ಪರೀಕ್ಷೆ ಬರೆದು ಪಾಸಾದ ಮೋಹನದಾಸನ ಬೆಳವಣಿಗೆಯ ಬಗ್ಗೆ ವಿಶೇಷವಾದ ಕಾಳಜಿಯಿತ್ತು.

ಕರಮಚಂದ್ ಗಾಂಧಿಯವರಿಗೆ ವಂಶ ಪಾರಂಪರ್ಯವೆಂಬ ಕಾರಣಕ್ಕೆ ಬ್ರಿಟಿಷರು ಉದಾರ ವಾಗಿ ನೀಡಿದ್ದ ದಿವಾನ ಪದವಿಯನ್ನು ಅಷ್ಟೇ ಸುಲಭವಾಗಿ ಅವರ ಕುಟುಂಬದ ಮುಂದಿನ ತಲೆಮಾರಿಗೂ ಕೊಡುತ್ತಾರೆ ಎಂಬ ನಂಬಿಕೆ, ದವೆಯವರಿಂದ ಹೊರಟು ಹೋಗಿತ್ತು. ಬ್ರಿಟಿಷರು ಅವರಿಗೆ ಸಿಗುವ ಲಾಭಕ್ಕೆ ಮಾತ್ರ ಈ ದೇಶ ಆಳುತ್ತಿದ್ದರೇ ಹೊರತು, ಈ ದೇಶದ ಜನರ ಬಗ್ಗೆ ಬ್ರಿಟಿಷರಿಗೆ ಎಳ್ಳಷ್ಟೂ ಕಾಳಜಿ ಇಲ್ಲವೆಂಬುದು ಅದಾಗಲೇ ಅರ್ಥವಾಗಿಬಿಟ್ಟಿತ್ತು.

ರಜದಲ್ಲಿ ಬಂದಿದ್ದ ಮೋಹನದಾಸನನ್ನು ಮಾತನಾಡಿಸಿಕೊಂಡು ಹೋಗಲು ಬಂದಿದ್ದವರು, ಹೊರಡುವ ಮೊದಲು ಮೋಹನದಾಸನ ತಾಯಿ ಮತ್ತು ಹಿರಿಯಣ್ಣನವರನ್ನು ಕುಳ್ಳಿರಿಸಿಕೊಂಡು, ಸುಮಾರು ಒಂದು ತಾಸಿನ ಕಾಲ, ಮೋಹನದಾಸನ ಮುಂದಿನ ಓದಿನ ಬಗ್ಗೆ ತಮ್ಮ ಅಭಿಪ್ರಾಯ ವನ್ನು ಸ್ಪಷ್ಟವಾಗಿ ತಿಳಿಯಹೇಳಿದ್ದರು. ಅವರು ಹೇಳಿದ್ದುದರ ಒಟ್ಟಾರೆ ಸಾರಾಂಶ ಇಷ್ಟೆ:

ಮೋಹನದಾಸನು ನಾಲ್ಕೈದು ವರ್ಷ ಕಷ್ಟ ಪಟ್ಟು ಓದಿ, ಬಿ. ಎ., ಪದವಿ ಪಡೆದು ಬಂದರೂ ಅವನಿಗೆ ದಿವಾನ ಪದವಿ ಸಿಗಲಾರದು. ಮೋಹನದಾಸನು ಬಿ.ಎ. ಪಾಸಾದರೆ ಬಹಳವೆಂದರೆ ಒಂದೈವತ್ತು ರೂಪಾಯಿ ಸಂಬಳ ತರುವ ಗುಮಾಸ್ತನ ಕೆಲಸ ಸಿಗಬಹುದು. ಅಥವಾ, ಪದವಿ ಮುಗಿಸಿ ನಂತರ ಕಾನೂನು ಪರೀಕ್ಷೆ ಬರೆಯುವುದಾದರೆ ಮತ್ತೂ ಮೂರು ವರ್ಷ ಮುಂದೆ ಹೋಗುತ್ತದೆ. ಅಷ್ಟರೊಳಗೆ ಅದೆಷ್ಟೋ ಮಂದಿ ವಕೀಲಿ ಪರೀಕ್ಷೆ ಪಾಸಾಗಿ ಬಂದಿರುತ್ತಾರೆ.

ಅಲ್ಲಿಯವರೆಗೆ ದಿವಾನರ ಹುದ್ದೆ ಕಾಯುತ್ತಾ ಇರುವುದಿಲ್ಲ. ಆದ್ದರಿಂದ ಮೋಹನದಾಸನು ಕಡಲು ದಾಟಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಮೂರು ವರ್ಷದೊಳಗೆ ಮುಗಿಸಲು ಸಾಧ್ಯವಾಗುವ 'ಬ್ಯಾರಿಸ್ಟರ್' ಕಾನೂನು ಪದವಿ ಪಡೆದುಕೊಂಡು ಬಂದರೆ, ದಿವಾನಗಿರಿ ಬೇಡ ಬೇಡವೆಂದರೂ ಕಾಲಿಗೆ ಬಂದು ಬೀಳುತ್ತದೆ.

ಮನೆತನದ ಹಿರಿಮೆ ಮಾತ್ರವಲ್ಲ, ಉತ್ತಮ ಆದಾಯ ತರುವ ಹುದ್ದೆಯಾಗಿರುವ ದಿವಾನ ಪದವಿಯನ್ನು ಮನೆತನಕ್ಕೇ ಉಳಿಸಿಕೊಳ್ಳುವ ಆಸೆಯಿದ್ದ ಹಿರಿಯಣ್ಣನವರಿಗೆ ದವೆಯವರ ಸಲಹೆ ಹಿತವಾಗಿ ಅನ್ನಿಸಿದರೂ, ಮೋಹನದಾಸನನ್ನು ಇಂಗ್ಲೆಂಡಿಗೆ ಕಳುಹಿಸಿ ಓದಿಸಲು ತಗಲಬಹುದಾದ ಖರ್ಚಿಗೇನು ಮಾಡುವುದು ಎಂಬ ಚಿಂತೆ ಆವರಿಸಿಕೊಂಡುಬಿಟ್ಟಿತ್ತು. ಮೋಹನದಾಸನಿಗೋ ಒಳಗೊಳಗೇ ಅಳುಕು, ಒಂದು ಬಗೆಯ ರೋಮಾಂಚನ, ಜತೆಯಲ್ಲಿ ಸಂತಸ; ಭಾವನಗರದಲ್ಲಿದ್ದ ಸಾಮಲ್ದಾಸ್ ಕಾಲೇಜಿನಿಂದ ಅವನಿಗೆ ಯಾವುದೇ ಬಗೆಯಲ್ಲಾದರೂ ಬಿಡುಗಡೆ ಬೇಕಾಗಿತ್ತು.

ಆದರೆ, ಮೋಹನದಾಸನು ಓದುವ ಕಾರಣಕ್ಕೆ ಪರದೇಶಕ್ಕೆ ಹೋಗುವುದು ತಾಯಿಗೆ-ಇಷ್ಟವಿದ್ದಿರಲಿಲ್ಲ. ಹಾಗೆಂದು, ಕುಟುಂಬದ ಹಿತೈಷಿಯಾಗಿರುವ ದವೆಯವರ ಮಾತನ್ನು ಇದ್ದಕ್ಕಿದ್ದ ಹಾಗೆಯೇ ವಿರೋಧಿಸಲೂ ಅವರಿಗೆ ಸಾಧ್ಯವಾಗಲಿಲ್ಲ. ಉಪಾಯವೆಂಬಂತೆ ಅವರು, 'ಪೋರ್ಬಂದರಿನಲ್ಲಿರುವ ಮೋಹನದಾಸನ ಚಿಕ್ಕಪ್ಪನವರಲ್ಲಿ ಒಂದು ಮಾತು ಕೇಳುವುದು ಒಳ್ಳೆಯದಲ್ಲವೇ ?' ಎಂದು ಮಾತು ಮುಗಿಸಿದ್ದರು.

ಚಿಕ್ಕಪ್ಪನವರು ಸುಲಭದಲ್ಲಿ ಒಪ್ಪಲಿಲ್ಲ. ಕಡಲು ದಾಟುವುದೆಂದರೆ ಧರ್ಮಭ್ರಷ್ಟರಾಗುವುದೆಂದೇ ಆ ದಿನಗಳಲ್ಲಿ ಎಲ್ಲ ಸಂಪ್ರದಾಯಸ್ಥ ಕುಟುಂಬದವರು ನಂಬಿದ್ದರು. ಹೊರದೇಶಕ್ಕೆ ಹೋದವರು ತಮ್ಮ ಧರ್ಮವನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲವೆಂಬುದೇ ಚಿಕ್ಕಪ್ಪನವರ ವಿಚಾರವಾಗಿತ್ತು. ಆದರೂ ಮೋಹನದಾಸನ ತಾಯಿ ಒಪ್ಪಿದರೆ ತನ್ನದೇನೂ ಅಡ್ಡಿಯಿಲ್ಲ ಎನ್ನುತ್ತಾ, ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ತಮ್ಮ ಸಮ್ಮತಿ ಸೂಚಿಸಿದ್ದರು.

ತಾಯಿಯನ್ನು ಒಪ್ಪಿಸುವುದೇ ಕಠಿಣವಾದ ಕೆಲಸವಾಗಿತ್ತು. ಪರದೇಶದಲ್ಲಿ ಎಲ್ಲರೂ ಜತೆಯಲ್ಲಿ ಕುಳಿತು ಮದ್ಯಪಾನ ಮಾಡುತ್ತಾರೆಂದು ಅವರು ಕೇಳಿ ತಿಳಿದಿದ್ದರು. ತನ್ನ ಮಗನೂ ಅಲ್ಲಿ ಮದ್ಯಪಾನ ಮಾಡುವುದಿಲ್ಲವೆಂದು ಏನು ಗ್ಯಾರಂಟೀ ? ಪರದೇಶಕ್ಕೆ ಹೋದವನು ಕುಡಿತದ ಜತೆ ಮಾಂಸ ಸೇವಿಸಿದರೇ? ಹೆಂಡತಿಯನ್ನು ಮೂರು ವರ್ಷಗಳ ಕಾಲ ಇಲ್ಲಿ ಬಿಟ್ಟು ಹೋದವನು ಅಲ್ಲಿ ಬೇರೆ ಹೆಣ್ಣಿನ ಜತೆ ಸ್ನೇಹ ಮಾಡಿಕೊಂಡರೇ?

ಆದರೆ, ಮೋಹನದಾಸನು ಅದಾಗಲೇ ನಿರ್ಧರಿಸಿ ಆಗಿತ್ತು. ಒಮ್ಮೆ ನಿರ್ಧರಿಸಿದ ಬಳಿಕ ಅದನ್ನು ಕಾರ್ಯರೂಪಕ್ಕೆ ತರಲು ಬೇಕಾದ ಎಲ್ಲ ಕೆಲಸಗಳನ್ನೂ ಚುರುಕಾಗಿ ಮಾಡತೊಡಗಿದನು. ಪೋರ್ಬಂದರಿನ ಅಡ್ಮಿನಿಸ್ಟ್ರೇಟರ್ ಆಗಿದ್ದ ಲೇಲಿ ಸಾಹೇಬರು ಖಂಡಿತವಾಗಿ ಇಂತಹ

ಸಂದರ್ಭದಲ್ಲಿ ಹಣದ ವ್ಯವಸ್ಥೆ ಮಾಡಬಹುದೆಂಬ ಆಸೆಯಿಂದ ಅವರ ಎದುರು ಹೋಗಿ ವಿನಂತಿಸಿದ್ದು ವ್ಯರ್ಥವಾಗಿ ಹೋದರೂ ಮೋಹನದಾಸನು ಸೋಲೊಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಹಣವನ್ನು ಹೇಗಾದರೂ ಮಾಡಿ ಹೊಂದಿಸಿಯೆ ಸಿದ್ಧ ಎಂದು ನಿರ್ಧರಿಸಿಬಿಟ್ಟಿದ್ದನು.

ಮೋಹನದಾಸನ ಆಸೆಯನ್ನು ಗಮನಿಸಿದ ಹಿರಿಯಣ್ಣನವರು ಅವರ ಗೆಳೆಯರಿಂದ ಸಾಲ ಪಡೆಯಲು ಒಪ್ಪಿಕೊಂಡಿದ್ದರು. ತೀರಾ ಅಗತ್ಯ ಅನ್ನಿಸಿದರೆ, ಕಸ್ತೂರಿಗೆ ಮದುವೆಯ ಕಾಲದಲ್ಲಿ ಅವಳ ಮನೆಯವರು ತೊಡಿಸಿದ್ದ ಬಂಗಾರದ ಒಡವೆಗಳನ್ನು ಮಾರಾಟ ಮಾಡಲೂ ಮೋಹನದಾಸನು ತಯಾರಾಗಿದ್ದನು. ತನ್ನ ಬ್ಯಾರಿಸ್ಟರ್ ಓದಿನ ಖರ್ಚಿಗೆ ಬೇಕಾಗಿರುವ ಸುಮಾರು ನಾಲ್ಕೈದು ಸಾವಿರ ರೂಪಾಯಿಗಳನ್ನು ಹೇಗಾದರೂ ಮಾಡಿ ಈಗ ಹೊಂದಿಸಿ ಕೊಂಡರೆ, ಮುಂದೆ ದಿವಾನ ಪದವಿಯ ತನ್ನ ಸಂಪಾದನೆಯಲ್ಲಿ ಸಾಲ ತೀರಿಸುವುದೋ, ಹೆಂಡತಿಗೆ ಒಡವೆ ಮಾಡಿಸುವುದೋ ಕಷ್ಟದ ವಿಷಯವಲ್ಲ ಎಂಬುದು ಅವನ ಯೋಚನೆ ಯಾಗಿತ್ತು. ಹಣ ಹೊಂದಿಸಲು ಮೋಹನದಾಸನು ಪಡುವ ಪಾಡನ್ನು ಕಂಡ ಅವನ ಬಾವ ನೆಂಟನು, ಹಣದ ಎಲ್ಲ ಜವಾಬ್ದಾರಿಯನ್ನು ತಾನು ಹೊರುವುದಾಗಿ ವಾಗ್ದಾನವಿತ್ತು ಮೋಹನ ದಾಸನನ್ನು ಸಮಾಧಾನಪಡಿಸಿದ್ದನು.

ಮೋಹನದಾಸನ ಸಮಸ್ಯೆ ಅಲ್ಲಿಗೇ ಮುಗಿದಿರಲಿಲ್ಲ. ಅವನ ವಿದೇಶಯಾತ್ರೆಗೆ ತಾಯಿಯವರು ಇನ್ನೂ ಮನಃಪೂರ್ವಕವಾಗಿ ಸಮ್ಮತಿಸಿದ್ದಿರಲಿಲ್ಲ.

ಅದಕ್ಕೂ ಮೋಹನದಾಸನು ಉಪಾಯ ಹೂಡಿದನು. ತಾನು ಇಂಗ್ಲೆಂಡಿಗೆ ಹೋಗಿ ಕಲಿತು ಬರುವುದರಿಂದ ಮುಂದೆ ಮನೆಗೆ ಸಿಗಬಹುದಾದ ಲಾಭಗಳನ್ನು ತನ್ನ ತಾಯಿಗೆ ಮನವರಿಕೆ ಮಾಡುವಂತೆ ಆಕೆಯ ಆಪ್ತರಾದ ಕೆಲವರಿಗೆ ಒತ್ತಾಯಿಸಿದನು. ಅವರಲ್ಲಿ ಬೇಚರಜೀ ಸ್ವಾಮೀಜಿ ಎಂಬವರು ಪ್ರಮುಖರು. ಬೇಚರಜೀ ಸ್ವಾಮೀಜಿಯವರು ಶ್ರೀ ದವೆಯವರಂತೆಯೇ ಗಾಂಧಿ ಕುಟುಂಬದ ಹಿತಚಿಂತಕರಲ್ಲಿ ಒಬ್ಬರಾಗಿದ್ದರು. ಅವರೇ ನೇರವಾಗಿ ಮನೆಗೆ ಬಂದು ಮೋಹನದಾಸನ ಪರವಾಗಿ ತಿಳಿಯ ಹೇಳಿದಾಗ ತಾಯಿಯ ಬಾಯಿ ಕಟ್ಟಿದಂತಾಗಿತ್ತು. ತಾಯಿ ಯವರ ಮನಸ್ಸಿನ ಹೊಯ್ದಾಟವನ್ನು ಗಮನಿಸಿದ ಬೇಚರಜೀ ಸ್ವಾಮೀಜಿಯವರು, ಕಟ್ಟ ಕಡೆಯ ಪ್ರಯತ್ನವೆಂಬಂತೆ ತಾಯಿಯ ಎದುರೇ ಮೋಹನದಾಸನಿಂದ 'ವಿದೇಶದಲ್ಲಿರುವಾಗ ಮದ್ಯ, ಮಾಂಸ ಮತ್ತು ಹೆಣ್ಣು ಮುಟ್ಟುವುದಿಲ್ಲ' ಎಂಬ ಪ್ರತಿಜ್ಞೆಯನ್ನೂ ಮಾಡಿಸಿಬಿಟ್ಟರು. ತಾಯಿಗೆ ಆಗ ಸಮಾಧಾನವಾಗಿತ್ತು. ಮಗನನ್ನು ಪರದೇಶಕ್ಕೆ ಕಳುಹಿಸಿಕೊಡಲು ಆಕೆ ಮನಸಾರೆ ಸಮ್ಮತಿ ನೀಡಿದರು.

ಮೋಹನದಾಸನು ಬೊಂಬಾಯಿ ಬಂದರದಿಂದ ಹಡಗು ಮಾರ್ಗವಾಗಿ ಇಂಗ್ಲೆಂಡಿಗೆ ಹೋಗ ಬೇಕಾಗಿತ್ತು. ಗುರುಹಿರಿಯರಿಂದೆಲ್ಲ ಆಶೀರ್ವಾದ ಪಡೆದು ಅಣ್ಣನವರ ಜತೆಗೆ ಹೊರಟ ಮೋಹನದಾಸನು ಬೊಂಬಾಯಿ ತಲುಪಿಯಾಗಿತ್ತು. ಜುಲೈ ತಿಂಗಳಲ್ಲಿ ಸಮುದ್ರ ಪ್ರಯಾಣ ಅಪಾಯಕಾರಿಯಾಗಿರುವುದರಿಂದ ದೀಪಾವಳಿಯ ಬಳಿಕವೇ ಹೋಗುವುದುತ್ತಮ ಎಂದು

ಕೆಲವರು ಅಣ್ಣನವರಿಗೆ ಸಲಹೆ ನೀಡಿದ್ದರು. ಆ ಮಾತುಗಳನ್ನು ನಂಬಿದ ಅಣ್ಣನವರು ಮೋಹನದಾಸನನ್ನು ಅವರ ಗೆಳೆಯನೊಬ್ಬನ ಮನೆಯಲ್ಲಿ ಬಿಟ್ಟು ರಾಜಕೋಟೆಗೆ ಹಿಂತಿರುಗಿ ಹೋಗಿದ್ದರು.

ನಂತರ, ಇನ್ನೊಂದು ಬಗೆಯ ಸಮಸ್ಯೆ ಎದುರಾಯಿತು. ಗಾಂಧಿಕುಟುಂಬದ ಹುಡುಗನೊಬ್ಬನು ಕಡಲು ದಾಟಲು ಹೊರಟಿರುವ ಸುದ್ದಿ ಅವರ ಜಾತಿಯ ಜನರ ನಡುವೆ ಬಿರುಗಾಳಿಯನ್ನೇ ಎಬ್ಬಿಸಿತ್ತು. ಅದುವರೆಗೆ ಯಾರೂ ಮಾಡಿರದಿದ್ದ, ಧರ್ಮಬಾಹಿರವೆಂದು ಅವರೆಲ್ಲ ನಂಬಿದ್ದ ಕಡಲುದಾಟುವ ಸಾಹಸವನ್ನು ಮಾಡಲು ಹೊರಟಿರುವ ಮೋಹನದಾಸನ ಮತ್ತು ಅವನ ಮನೆಯವರ ವಿರುದ್ಧ ಅವರೆಲ್ಲ ತಿರುಗಿಬಿದ್ದರು. ಅವರ ಯಾವುದೇ ಸಲಹೆಗೆ ಮೋಹನದಾಸನು ಕಿವಿಗೊಡದಿದ್ದಾಗ, ಕೋಪಗೊಂಡ ಜಾತಿಯ ಮುಖಂಡರೆಲ್ಲ ಸಭೆ ಸೇರಿ ಮೋಹನದಾಸನನ್ನು ಜಾತಿಗೆಟ್ಟವನೆಂದು ಪರಿಗಣಿಸಿ ಅವನನ್ನು ಜಾತಿಯಿಂದಲೇ ಬಹಿಷ್ಕರಿಸುವ ಆದೇಶ ಹೊರಡಿಸಿ ಬಿಟ್ಟಿದ್ದರು. ಅಷ್ಟೇ ಮಾತ್ರವಲ್ಲ, ಮೋಹನದಾಸನಿಗೆ ವಿದೇಶ ಪ್ರಯಾಣಕ್ಕೆ ಸಹಾಯ ಮಾಡುವವರು, ಅವನನ್ನು ಬೀಳ್ಕೊಡಲು ಬೊಂಬಾಯಿ ಬಂದರಿಗೆ ಹೋಗುವವರು, ಎಲ್ಲರನ್ನೂ ಅಪರಾಧಿಗಳೆಂದು ಪರಿಗಣಿಸಿ ಅವರಿಗೆಲ್ಲ ಒಂದು ರೂಪಾಯಿ ನಾಲ್ಕುಆಣೆ (ನೂರ ಇಪ್ಪತ್ತೈದು ಪೈಸೆ) ದಂಡ ವಿಧಿಸುವುದಾಗಿ ಘೋಷಿಸಿದ್ದರು.

ಹಿರಿಯಣ್ಣನವರು, ಜಾತಿ ಮುಖಂಡರ ಎಲ್ಲ ಆದೇಶಗಳನ್ನೂ ನಯವಾಗಿ ಧಿಕ್ಕರಿಸಿ, ಮೋಹನದಾಸನ ಬೆಂಬಲಕ್ಕೆ ನಿಂತದ್ದು ಮೋಹನದಾಸನಿಗೆ ನೂರಾನೆ ಬಲ ತಂದು ಕೊಟ್ಟಿತ್ತು. ಆದರೆ, ಪರದೇಶದಲ್ಲಿ ಓದುವ ಕಾಲಕ್ಕೆ ಅಗತ್ಯವಿರುವ ಹಣವನ್ನು ಒದಗಿಸುವುದಾಗಿ ವಾಗ್ದಾನವಿತ್ತಿದ್ದ ಮೋಹನದಾಸನ ಬಾವನೆಂಟನು ಮಾತ್ರ , ಜಾತಿಬಾಂಧವರ ಒತ್ತಡಕ್ಕೆ ಹೆದರಿ ಕೊನೆಯ ಘಳಿಗೆಯಲ್ಲಿ ತನ್ನ ವಾಗ್ದಾನದಿಂದ ಹಿಂದಕ್ಕೆ ಸರಿದುಬಿಟ್ಟಿದ್ದನು.

ಇಂಗ್ಲೆಂಡಿಗೆ ಹೊರಡುವ ದಿನ ಹತ್ತಿರ ಹತ್ತಿರ ಬರುತ್ತಿತ್ತು. ಹಡಗು ಪ್ರಯಾಣದ ಟಿಕೇಟನ್ನು ಇನ್ನೂ ಕೊಂಡಿರಲಿಲ್ಲ. ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಓದುವ ದಿನಗಳಲ್ಲಿ ಬಳಸಲು ಅಗತ್ಯವಾಗಿದ್ದ ವಿದೇಶೀ ಉಡುಪುಗಳನ್ನೂ ಖರೀದಿಸಿರಲಿಲ್ಲ. ಯಾವುದನ್ನು ಖರೀದಿಸಲೂ ದುಡ್ಡಿರಲಿಲ್ಲ. ಎಲ್ಲ ಖರ್ಚುಗಳಿಗೂ ಬಾವನೆಂಟನೊಬ್ಬನನ್ನೇ ನಂಬಿ ಕೂತದ್ದು ತಪ್ಪಾಗಿ ಹೋಗಿತ್ತು. ಇವೆಲ್ಲವನ್ನೂ ಗಮನಿಸುತ್ತಿದ್ದ ಗಾಂಧಿ ಕುಟುಂಬದ ನಿಜವಾದ ಹಿತೈಷಿಗಳಾಗಿದ್ದ ಹಿರಿಯರೊಬ್ಬರು ಸಾಲದ ನೆರವು ನೀಡಲು ಮುಂದೆ ಬರದಿದ್ದರೆ, ಮೋಹನದಾಸನ ಕನಸುಗಳೆಲ್ಲವೂ ನೀರಿನಲ್ಲಿಟ್ಟ ಹೋಮದಂತಾಗುತ್ತಿತ್ತು.

ಎಲ್ಲ ಎಡರು ತೊಡರುಗಳನ್ನು ಶಾಂತವಾಗಿಯೇ ಎದುರಿಸಿ ಗೆದ್ದ ಹದಿನೆಂಟು ವಯಸ್ಸಿನ ಯುವಕ ಮೋಹನದಾಸನು ಇಂಗ್ಲೆಂಡಿಗೆ ಹೊರಟುನಿಂತಿದ್ದ ಹಡಗಿಗೆ ಕಾಲಿಟ್ಟನು.

# ಸ್ನೇಹದ ಕಡಲಲ್ಲಿ

ಹಡಗಿನ ಪ್ರಯಾಣದ ಮಜವನ್ನು ಅನುಭವಿಸಿಯೇ ಅರಿಯಬೇಕು. ಅದೆಷ್ಟು ವಿವರಿಸಿದರೂ ಅದು ವಿಶಾಲವಾದ ಸಮುದ್ರದಿಂದ ಒಂದು ತಂಬಿಗೆ ನೀರನ್ನು ತಂದು ತೋರಿಸಿ ಇದೇ ಕಡಲು ಎಂದಂತಾದೀತು.

ಹಡಗಿನ ಮೇಲ್ಭಾಗದಲ್ಲಿ ಹೋಗಿ ನಿಂತರೆ, ಸುತ್ತಲೂ ಕಣ್ಣಿಗೆ ಕಾಣಿಸುವಷ್ಟು ದೂರಕ್ಕೂ ಕಡು ನೀಲಿಯಾಗಿ, ಕೊನೆ ಕೊನೆಗೆ ಕಪ್ಪಾಗಿ ಕಾಣಿಸುವ ಬರಿಯ ನೀರು; ನೀರರಾಶಿ. ಎತ್ತ ನೋಡಿದರತ್ತ ಒಂದೇ ಬಗೆಯ, ಆದರೆ ಮತ್ತೆ ಮತ್ತೆ ಅದನ್ನೇ ನೋಡಬೇಕೆನ್ನಿಸುವ, ನಿರಂತರ ವಾಗಿ ಉಬ್ಬೇರಿ ಇಳಿಯುತ್ತಿರುವ ನೀರಮೆತ್ತೆಯ ಹಾಸಿಗೆಗಳ ಸಾಲುಗಳು. ತಲೆಯೆತ್ತಿ ಗಗನ ದಿಟ್ಟಿಸಿದರೆ ಕವುಚಿ ಹಾಕಿದ ಉರುಟು ಬಾಣಲೆಯಂತೆ ಕಾಣಿಸುವ ಆಕಾಶ.

ಕಡಲಿನ ನಡುವೆ ಹಡಗಿನ ಚಾವಣಿಯನ್ನೇರಿ ನಿಂತರೆ, ಮುಂಜಾನೆಯ ಸೂರ್ಯ ಹುಟ್ಟುವು ದನ್ನು ನೆಲದ ಮೇಲಿರುವವರಿಗಿಂತ ಮುಂಚಿತವಾಗಿ ನೋಡಲು ಸಾಧ್ಯ ಎಂಬ ಯೋಚನೆಯು ಮೋಹನದಾಸನನ್ನು ಅವನ ಬಾಲ್ಯಕ್ಕೆ ಕರೆದೊಯ್ದಿತ್ತು. ಚಾತುರ್ಮಾಸದ ದಿನಗಳಲ್ಲಿ, ಬೇಗ ಎದ್ದು ಹೋರಗೋಡಿ ಎತ್ತರದ ದಿಣ್ಣೆಯೇರಿ ನಿಂತು ಸೂರ್ಯೋದಯವನ್ನು ಎಲ್ಲರಿಗಿಂತ ಮೊದಲು ನೋಡಿ, ಅದನ್ನು ತಾಯಿಗೆ ತಿಳಿಸಲೆಂದು ಮನೆಯತ್ತ ಓಡೋಡಿ ಹೋಗುತ್ತಿದ್ದ ದಿನಗಳು ನೆನಪಾಗಿ ಮೈ ಪುಳಕಗೊಂಡಿತು. ಅದರ ಜತೆಯಲ್ಲೇ, ಇನ್ನು ಬಹಳ ದಿನಗಳ ಕಾಲ ಮನೆಯವರೆಲ್ಲರಿಂದ, ಅದರಲ್ಲೂ ಮುಖ್ಯವಾಗಿ ಕಸ್ತೂರಿಯಿಂದ ದೂರವಿರಬೇಕಾದ ಪರಿಸ್ಥಿತಿ ಯನ್ನು ಯೋಚಿಸಿ ಮುಖ ಸಣ್ಣದಾಯಿತು. ಆದರೆ ತಾನು ಬ್ಯಾರಿಸ್ಟರ್ ಪದವಿ ಗಳಿಸಿ ಊರಿಗೆ ಮರಳುವ ದಿನದಲ್ಲಿ ಅವರೆಲ್ಲರೂ ಸಂತೋಷ ಪಡಲಿದ್ದಾರೆ ಎಂಬ ಒಂದೇ ಒಂದು ಕಾರಣಕ್ಕೆ ತನ್ನ ಬೇಸರವನ್ನು ಮರೆಯತೊಡಗಿದನು.

ಹಡಗಿನ ಕ್ಯಾಬಿನಿನಲ್ಲಿ ಮೋಹನದಾಸನಿಗೆ ಜತೆಗಾರರಾಗಿದ್ದ, ಜುನಾಘಡದ ಹಿರಿಯ ವಕೀಲ ತ್ರಯಂಬಕ ರಾಯ್ ಮುಜುಮ್ದಾರ್ ಎಂಬವರು, ತಮ್ಮ ವಕೀಲಿಯ ಅನುಭವಗಳನ್ನೆಲ್ಲ ರೋಚಕವಾಗಿ ವಿವರಿಸುತ್ತ ಮೋಹನದಾಸನ ಬೇಸರವನ್ನು ಕಳೆಯಲು ಯತ್ನಿಸುತ್ತಿದ್ದರು.

ಹಡಗಿನಲ್ಲಿ ಪ್ರಯಾಣಿಸುವವರಲ್ಲಿ ಬಹುಪಾಲು ಜನರು ವಿದೇಶೀಯರು. ಅವರು ಇಂಗ್ಲಿಷ್ ಬಿಟ್ಟರೆ ಬೇರೆ ಭಾಷೆಯಲ್ಲಿ ಮಾತನಾಡುತ್ತಿರಲಿಲ್ಲ. ಮೋಹನದಾಸನಿಗೆ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದೆಂದರೆ ತುಟಿ ಒಣಗುತ್ತಿತ್ತು, ಎದೆ ಡವ ಡವ ಎಂದು ಹೊಡೆದುಕೊಳ್ಳುತ್ತಿತ್ತು. ತನಗೆ ಹಡಗಿನಲ್ಲಿ ನೀಡಲಾಗುತ್ತಿದ್ದ ಆಹಾರದಲ್ಲಿ ಮಾಂಸವನ್ನು ಬೆರೆಸಲಾಗಿದೆಯೇ ಇಲ್ಲವೇ ಎಂಬುದನ್ನು ಕೇಳಲೂ ನಾಲಗೆ ತಡವರಿಸುತ್ತಿತ್ತು. ತ್ರಯಂಬಕ ರಾಯ್ ಮುಜುಮ್ದಾರ್ ಇಂಗ್ಲಿಷರಿಗೆ ತಾವೇನೂ ಕಡಿಮೆಯಿಲ್ಲದವರಂತೆ ಟಸ್ಕ್ ಪುಸ್ಕ್ ಅಂತ, ಎಲ್ಲರ ಜತೆಗೆ

ಸಂಭಾಷಣೆಯಲ್ಲಿ ನಿರತರಾಗಿದ್ದಾಗ ಮೋಹನದಾಸನು ಅವಾಕ್ಕಾಗಿ ನೋಡುತ್ತ ನಿಂತು ಬಿಡುತ್ತಿದ್ದನು.

ಇಂಗ್ಲಿಷ್ ಭಾಷೆಯ ಬಗ್ಗೆ ಮೋಹನದಾಸನಲ್ಲಿದ್ದ ಕೀಳರಿಮೆಯನ್ನು ಗುರುತಿಸಿದ್ದ ಮುಜುಮ್ದಾರ್ ಅವರು ಮೋಹನದಾಸನನ್ನು ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಲು ಹುರಿದುಂಬಿಸುತ್ತಿದ್ದರು.

'ನೋಡು ಮಿಸ್ಟರ್ ಗಾಂಧಿ, ನಾನು ಕೂಡಾ ಆರಂಭದಲ್ಲಿ ನಿನ್ನಂತೆಯೇ ಇಂಗ್ಲಿಷ್ ಎಂದರೆ ಬೆಚ್ಚಿಬೀಳುತ್ತಿದ್ದೆ. ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಲು ನನ್ನಿಂದ ಎಂದು ಕೂಡಾ ಸಾಧ್ಯವಾಗದು ಎಂದೇ ಭಾವಿಸಿದ್ದೆ. ಆದರೆ ಇಂಗ್ಲಿಷ್ ಮಾತನಾಡದಿದ್ದರೆ ನಾನು ವಕೀಲಿ ಕೆಲಸ ಮಾಡುವುದೇ ಸಾಧ್ಯವಿದ್ದಿರಲಿಲ್ಲ. ತಪ್ಪೋ, ಸರಿಯೋ, ಧೈರ್ಯ ವಹಿಸಿ ನನಗೆ ಅನ್ನಿಸಿದಂತೆ ನಾನು ತಿಳಿದಿರುವಷ್ಟು ಪದಗಳನ್ನು ಬಳಸಿ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಲು ಶುರುಮಾಡಿಬಿಟ್ಟೆ. ಆರಂಭದ ದಿನಗಳಲ್ಲಿ ಕೆಲವರು ನನ್ನ ಇಂಗ್ಲಿಷ್ ಭಾಷೆಯಲ್ಲಿರುತ್ತಿದ್ದ ತಪ್ಪುಗಳನ್ನು ಕೇಳಿ ಮುಸಿಮುಸಿ ನಗುತ್ತಿದ್ದರು. ನಾನು ಅದನ್ನೆಲ್ಲ ಗಮನಿಸಲು ಹೋಗಲೇ ಇಲ್ಲ. ಮಾತಾಡುತ್ತ ಮಾತಾಡುತ್ತಾ, ನನ್ನ ಇಂಗ್ಲಿಷ್ ಭಾಷೆ ಶುದ್ಧವಾಗತೊಡಗಿತು. ಈಗ ನೀನೇ ನೋಡಿದೆಯಲ್ಲ; ಸ್ವತಹ ವಿಕ್ಟೋರಿಯಾ ಮಹಾರಾಣಿಯವರು ಕೂಡಾ ನನ್ನಷ್ಟು ಶುದ್ಧವಾಗಿ ಇಂಗ್ಲಿಷ್ ಮಾತನಾಡಲಾರರು. ಹ್ಹಹ್ಹಾ. . ., ವ್ಹಾಟ್ ಡೂ ಯೂ ಸೇ, ಮೈ ಯಂಗ್ ಫ್ರೆಂಡ್?'

ಮುಜುಮ್ದಾರ್ ಅವರ ಮಾತುಗಳಿಂದ ಮೋಹನದಾಸನಿಗೆ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಲು ಉತ್ಸಾಹ ಹುಟ್ಟಿದ್ದೇನೋ ನಿಜ. ಆದರೆ ಇಂಗ್ಲಿಷಿನವರೇನಾದರೂ ಎದುರಾದರೆ, ಯಾರಾದರೂ ಮಾತನಾಡಿಸಲು ಪ್ರಯತ್ನಿಸಿದರೆ ಯೆಸ್, ನೋ, ಥ್ಯಾಂಕ್ಸ್ ಎಂಬ ಮೂರು ಪದಗಳಲ್ಲಿಯೇ ಬೆವರು ಸುರಿಸಿ, ಅಲ್ಲಿಂದ ತಪ್ಪಿಸಿಕೊಳ್ಳುತ್ತಿದ್ದ.

ಮೋಹನದಾಸನಿಗೆ, ಅವನು ಹಡಗು ಪ್ರಯಾಣದ ಸಮಯದಲ್ಲಿ ಮಾಂಸಾಹಾರ ಸೇವಿಸಿಲ್ಲ ಎಂಬುದಾಗಿ ಬರೆದ ಪ್ರಮಾಣಪತ್ರದ ಆವಶ್ಯಕತೆಯಿತ್ತು. ಅದನ್ನು ಅವನು ತನ್ನ ಮನೆಗೆ ಕಳುಹಿಸಬೇಕಾಗಿತ್ತು. ಅದನ್ನು ಬರೆದುಕೊಡಬಲ್ಲ ಆಂಗ್ಲ ಗೃಹಸ್ಥರಿಗಾಗಿ ಮೋಹನದಾಸನು ಆರಂಭದ ದಿನದಿಂದಲೇ ಹುಡುಕುತ್ತಿದ್ದನು. ಕೊನೆಗೊಬ್ಬರು ಸಿಕ್ಕಿಯೇ ಬಿಟ್ಟರು. ತಪ್ಪು ತಪ್ಪು ಭಾಷೆಯಲ್ಲಿ ಮೋಹನದಾಸನು ಸಂಕೋಚದಿಂದಲೇ ಹೇಳಿದುದನ್ನೆಲ್ಲ ಅರ್ಥ ಮಾಡಿಕೊಂಡ ಆ ಹಿರಿಯರು ಅವನಿಗೆ ಬೇಕಾದ ಪತ್ರವನ್ನು ಬರೆದು ಕೊಟ್ಟರು. ಜತೆಯಲ್ಲಿ ಮೋಹನದಾಸನಿಗೆ ಎರಡು ಸಲಹೆಗಳನ್ನೂ ನೀಡಿದರು.

'ನೀನು ನನ್ನ ಜತೆ ಕುಳಿತು ದಿನವೂ ಮಾಂಸ ತಿಂದಿದ್ದರೂ, ನಿನ್ನ ತಾಯಿಯವರ ಸಮಾಧಾನ ಕ್ಕಾಗಿ ನೀನು ಮಾಂಸ ತಿಂದಿಲ್ಲವೆಂದೇ ನಾನು ಪತ್ರ ಬರೆದು ಕೊಡುತ್ತಿದ್ದೆ. ಆದರೆ ಒಂದು ಮಾತು ಹೇಳುತ್ತಿದ್ದೇನೆ; ನೀನು ಹೋಗಿ ವಾಸಿಸಲಿರುವ ಜಾಗದಲ್ಲಿ ಬಹಳ ಚಳಿಯಿರುತ್ತದೆ. ಚಳಿ ಪ್ರದೇಶದಲ್ಲಿ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಹಿತಮಿತವಾಗಿ ಮದ್ಯ ಕುಡಿಯುವುದು,

ಅಗತ್ಯಕ್ಕೆ ತಕ್ಕಷ್ಟು ಮಾಂಸಾಹಾರ ಸೇವಿಸುವುದು ಒಳ್ಳೆಯದು. ಇಲ್ಲದಿದ್ದರೆ ಆರೋಗ್ಯ ಕಾಪಾಡಿ ಕೊಳ್ಳಲು ತುಂಬಾ ಕಷ್ಟವಾಗುತ್ತದೆ. ನೀನು ಮದ್ಯಪಾನ ಮಾಡಲೇಬೇಕೆಂದು ನಾನು ಒತ್ತಾಯಿಸ ಲಾರೆ. ಆದರೆ ಮಾಂಸ ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದು.'

ಮೋಹನದಾಸನು ತತ್‌ಕ್ಷಣದಲ್ಲಿ ಉತ್ತರಿಸಿದ್ದನು. 'ಕ್ಷಮಿಸಿ. ನಾನು ತಾಯಿಗೆ ಕೊಟ್ಟಿರುವ ವಚನವನ್ನು ಯಾವುದೇ ಕಾರಣಕ್ಕೂ ಮೀರಲಾರೆ.' ಇಂಗ್ಲೆಂಡಿನಲ್ಲಿ ಮಾಂಸ ತಿನ್ನದೆ ಬದುಕು ವುದೇ ಸಾಧ್ಯವಿಲ್ಲವೆಂದು ಅನ್ನಿಸಿದ ದಿನ, ಹಿಂದೂಸ್ಥಾನಕ್ಕೆ ಹೊರಡುವ ಮೊದಲ ಹಡಗು ಹತ್ತುವೆ.'

ಮೋಹನದಾಸನ ಕಟುವಾದ ಆದರೆ ನೇರ ಮಾತುಗಳಿಂದ ಆ ಹಿರಿಯರಿಗೆ ಬೇಸರವಾಗಲಿಲ್ಲ; ಆಶ್ಚರ್ಯವಾಗಿತ್ತು. ಅವನನ್ನು ಹೊಸದಾಗಿ ನೋಡುವವರಂತೆ ಇಡಿಯಾಗಿ ದಿಟ್ಟಿಸುತ್ತಾ 'ವೆರಿಗುಡ್, ನೀನು ಮುಂದೆ ಬಹಳ ದೊಡ್ಡ ಮನುಷ್ಯನಾಗುತ್ತೀಯ, ಐ ವಿಶ್ ಯು ಗುಡ್ ಲಕ್' ಎಂದು ಎದೆ ತುಂಬಿ ಹಾರೈಸಿದ್ದರು.

ಸೂರ್ಯ ಮುಳುಗದ ದೇಶವೆಂದೇ ಕರೆಯಲ್ಪಡುತ್ತಿದ್ದ ಇಂಗ್ಲೆಂಡಿನ ತೀರವಾದ ಸೌತ್ ಹ್ಯಾಂಪ್ಟನ್ ನೆಲದ ಮೇಲೆ ಮೋಹನದಾಸನು ಕಾಲಿಟ್ಟಾಗ, ಸೆಪ್ಟೆಂಬರ್ ತಿಂಗಳಿನ ಕೊನೆಯ ಶನಿವಾರದ ಸೂರ್ಯ ಮುಳುಗುವ ತಯಾರಿಯಲ್ಲಿದ್ದ.

ಹಡಗಿನಲ್ಲಿ ಯಾರೋ ಮಾಡಿದ ಸಲಹೆಯಂತೆ ಮೋಹನದಾಸನು, ಮುಜುಮ್ದಾರರ ಜತೆಗೆ ಹೋಗಿ ಲಂಡನ್ ನಗರದ ವಿಕ್ಟೋರಿಯಾ ಹೋಟೆಲಿನಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಪಡೆದು ಅಲ್ಲಿ ಉಳಿದುಕೊಂಡಿದ್ದನು. ಆದರೆ, ಆ ಹೋಟೆಲು ಬಹಳ ದುಬಾರಿಯಾಗಿದ್ದುದ ರಿಂದ, ಎರಡೇ ದಿನಗಳಲ್ಲಿ ಹತ್ತಿರದ ಸಾಧಾರಣ ಕೊಠಡಿಯೊಂದಕ್ಕೆ ತನ್ನ ನಿವಾಸವನ್ನು ಸ್ಥಳಾಂತರಿಸಿಕೊಂಡಿದ್ದನು. ಆದರೆ, ಮೋಹನದಾಸನಿಗೆ ಆ ಕೊಠಡಿಯೂ ಹಿಡಿಸಿದ್ದಿರಲಿಲ್ಲ. ಬಳಿಕ ಕೆಲವೇ ದಿನಗಳೊಳಗೆ, ಗಾಂಧಿ ಕುಟುಂಬದ ಪರಿಚಯಸ್ಥ ಡಾಕ್ಟರ್ ಮೆಹತಾರವರ ಸಹಾಯದಿಂದ, ಲಂಡನ್ನಿನಿಂದ ಸ್ವಲ್ಪ ದೂರದಲ್ಲಿದ್ದ ರಿಚ್‌ಮಂಡ್ ಎಂಬ ಊರಿನ ಆಂಗ್ಲ ಗೃಹಸ್ಥರೊಬ್ಬರ ಮನೆಗೆ ತನ್ನ ನಿವಾಸವನ್ನು ಬದಲಾಯಿಸಿಕೊಂಡಿದ್ದನು.

ಆ ಗೃಹಸ್ಥರು ಮೋಹನದಾಸನನ್ನು ತನ್ನ ಒಡಹುಟ್ಟಿದ ತಮ್ಮನಂತೆಯೇ ಪರಿಗಣಿಸಿ ಕೆಲದಿನಗಳ ಕಾಲ ತಮ್ಮ ಮನೆಯಲ್ಲಿರಿಸಿಕೊಂಡು ಲಂಡನ್ ನಗರದ ನಾಗರಿಕ ಬದುಕಿನ ಬಾಲಪಾಠ ಮಾಡಿದ್ದರು. ಡಾಕ್ಟರ್ ಮೆಹತಾರವರಂತೂ ಮೊದಲೇ ಎಚ್ಚರಿಕೆ ನೀಡಿದ್ದರು. ಇಂಗ್ಲೆಂಡಿನಲ್ಲಿ ಗಟ್ಟಿಯಾಗಿ ಮಾತನಾಡುವುದು ನಾಗರಿಕರ ಲಕ್ಷಣವಲ್ಲ. ಅದು ಅಸಭ್ಯ ವರ್ತನೆ. ಭಾರತದಲ್ಲಿದ್ದಂತೆ ಬಿಳಿಯರನ್ನೆಲ್ಲ 'ಸರ್' ಎಂದು ಸಂಬೋಧಿಸಬೇಕಾಗಿದ್ದಿರಲಿಲ್ಲ. ಮೇಲಧಿಕಾರಿಗಳಿಗೆ ಮಾತ್ರ ಅವರ ಕೆಳಗಿನ ನೌಕರರು 'ಸರ್' ಎನ್ನುತ್ತಿದ್ದರು.

ಮೋಹನದಾಸನಿಗೆ ಆ ಗೃಹಸ್ಥರ ಪ್ರತಿಯೊಂದು ಮಾತೂ ವೇದವಾಕ್ಯವಾಗಿತ್ತು. ಅವರು

ಹೇಳಿದ್ದನ್ನೆಲ್ಲ ಚಾಚೂ ತಪ್ಪದೆ ಅನುಸರಿಸಲು, ಅನುಕರಿಸಲು ಸಿದ್ಧನಿದ್ದನು. ಆದರೆ ಆಹಾರದ ವಿಷಯಕ್ಕೆ ಬಂದಾಗ ಮಾತ್ರ ಮೋಹನದಾಸ ತನ್ನ ಹಠ ಸಾಧಿಸುತ್ತಿದ್ದನು.

ಮನೆಯ ಗೃಹಿಣಿಗಂತೂ ಮೋಹನದಾಸನಿಗೆ ಯಾವ ಬಗೆಯಲ್ಲಿ ಅಡುಗೆ ಮಾಡಿ ಬಡಿಸುವು ವೆಂದೇ ತಿಳಿಯುತ್ತಿರಲಿಲ್ಲ. ಮೋಹನದಾಸನಿಗೆ ಮೊದಲೇ ಸ್ವಲ್ಪ ಸಂಕೋಚ. ಆದರೆ ಹಸಿವು ಮಾತ್ರ ಹೆಚ್ಚು. ಆ ಹೆಂಗಸು ಬಡಿಸಿದ್ದರಲ್ಲಿ ಅವನಿಂದ ತಿನ್ನಲು ಸಾಧ್ಯವಾಗುತ್ತಿದ್ದದ್ದು ಅಂಬಲಿ ಮತ್ತು ರೊಟ್ಟಿಗಳನ್ನು ಮಾತ್ರ. ಆದರೆ ಅದೊಂದನ್ನೇ ಮತ್ತೆ ಮತ್ತೆ ಬೇಕು ಎನ್ನಲು ನಾಚಿಕೆ. ಮಧ್ಯಾಹ್ನದ ಊಟದಲ್ಲಿ ಆಕೆ ಬಡಿಸುತ್ತಿದ್ದ ಎರಡು ತುಂಡು ರೊಟ್ಟಿಗಳು ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತಾಗುತ್ತಿತ್ತು. ಊರಲ್ಲಿದ್ದಾಗ ಮಧ್ಯಾಹ್ನ ಮತ್ತು ರಾತ್ರಿ ಎರಡೂ ಹೊತ್ತು ಊಟದ ಜತೆಗೆ ಹಾಲು ಕುಡಿಯುವ ಅಭ್ಯಾಸವಿತ್ತು. ಆದರೆ ಆ ಮನೆಯಲ್ಲಿ ಹಾಲು ಇರುವುದು ಪುಟ್ಟ ಮಕ್ಕಳಿಗೆ ಮಾತ್ರ. ಮಾಂಸಾಹಾರ ತಿನ್ನುವುದಾಗಿದ್ದರೆ ಮೋಹನದಾಸನಿಗೆ ಹಸಿವೆ ಯೆಂಬುದು ಸಮಸ್ಯೆಯೇ ಆಗಿರುತ್ತಿರಲಿಲ್ಲ. ಮಾಂಸದಿಂದ ತಯಾರಿಸಿದ ಬಗೆ ಬಗೆಯ ಖಾದ್ಯ ಗಳು ಊಟದ ಮೇಜಿನ ಮೇಲೆ ಸದಾ ಇರುತ್ತಿದ್ದವು. ಆದರೆ ಮೋಹನದಾಸನು ಅವುಗಳತ್ತ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ.

ಮೋಹನದಾಸನ ಹಟವನ್ನು ಗಮನಿಸುತಿದ್ದ ಆ ಗೃಹಸ್ಥರಿಗೆ ಒಮ್ಮೆ ರೋಸಿಹೋಯಿತು. ತಾಳ್ಮೆ ಯನ್ನು ಕಳೆದುಕೊಂಡ ಅವರು ಒಂದು ದಿನ ಮೋಹನದಾಸನ ಪ್ರತಿಜ್ಞೆಯ ಔಚಿತ್ಯವನ್ನೇ ಪ್ರಶ್ನಿಸಿದ್ದರು.

'ನೀನು ಕಾನೂನು ಕಲಿಯಲು ಬಂದಿರುವವನು. ನಿನ್ನ ತಾಯಿ ಅನಕ್ಷರಸ್ಥೆ. ಅನಕ್ಷರಸ್ಥರ ಎದುರು ಮಾಡಿರುವ ಪ್ರತಿಜ್ಞೆಗೆ ಕಾನೂನಿನಲ್ಲಿ ಯಾವ ಬೆಲೆಯೂ ಇಲ್ಲವೆಂಬುದನ್ನು ನೀನು ತಿಳಿದಿರ ಬೇಕು. ಏನೂ ತಿಳಿಯದ ನಿನ್ನ ಸಂಪ್ರದಾಯಸ್ಥೆ ತಾಯಿಯ ಅಭಿಪ್ರಾಯವನ್ನು ನಾನು ಗೌರವಿಸುವೆ. ಅವರ ನಂಬಿಕೆಯನ್ನು ನಾನು ಪ್ರಶ್ನಿಸಲಾರೆ. ನೀನು ಮಾಂಸ ತಿನ್ನುವುದರಿಂದ ಅವಳಿಗೆ ನೋವಾಗುವುದಿದ್ದರೆ ಅವಳಿಗೆ ಹೇಳದಿದ್ದರೆ ಆಯಿತು. ನೀನೇನೂ ಮಾಂಸವನ್ನು ಒಮ್ಮೆಯೂ ಮುಟ್ಟದವನಲ್ಲವೆಂದು ನೀನೇ ಹೇಳಿದ್ದೀಯಾ. ಅಲ್ಲದೆ, ನಿನ್ನ ಚಿಕ್ಕಣ್ಣನಿಗೆ ಅದು ಅತ್ಯಂತ ಪ್ರಿಯವಾದ ಖಾದ್ಯವೆಂಬುದನ್ನೂ ನೀನು ಒಪ್ಪಿಕೊಂಡಿದ್ದೀಯಾ. ಆದರೆ ನೀನು, ಬ್ಯಾರಿಸ್ಟರ್ ಪದವಿ ಪಡೆದು ಮುಂದೆ ನಾಗರಿಕ ಸಮಾಜದಲ್ಲಿ ಮಾಂಸ ತಿನ್ನುವ ಸಭ್ಯರ ನಡುವೆಯೂ ಬದುಕಬೇಕಾಗಿರುವವನು'.

'ನಿನ್ನ ದೇಶದಲ್ಲಿ ನಿನ್ನ ಹಸಿವೆಯನ್ನು ನೀಗಿಸಲು ಯಾವಾಗ ನಿನಗೆ ಮಾಂಸದ ಅಗತ್ಯ ವಿದ್ದಿರಲಿಲ್ಲವೋ ಆ ದಿನಗಳಲ್ಲಿ ನೀನು ಮಾಂಸವನ್ನು ಗುಟ್ಟಾಗಿ ತಿಂದಿರುವೆ. ಆದರೆ, ಈಗ ಈ ದೇಶದಲ್ಲಿ ಬದುಕಲು ಅದು ತೀರಾ ಅಗತ್ಯವೆಂದು ಗೊತ್ತಿರುವಾಗಲೂ, ಅದು ಬೇಡವೆನ್ನುವು ದರಲ್ಲಿ ನನಗಂತೂ ನ್ಯಾಯ ಕಾಣಿಸುವುದಿಲ್ಲ. ನಾನು ಮದ್ಯಪಾನ ಮಾಡುತ್ತಿರುವುದನ್ನು ನೀನು ನೋಡಿರುವೆ. ಸಿಗರೇಟು ಸೇದುತ್ತಿರುವೆ. ಆದರೆ ಇವೆರಡನ್ನು ನೀನೂ ಮಾಡಬೇಕೆಂದು ನಾನು

ಒತ್ತಾಯಿಸುವುದಿಲ್ಲ. ಆದರೆ ಮಾಂಸಾಹಾರ ಇಲ್ಲಿ ಬದುಕಿನ ಭಾಗ. ತಿನ್ನುವುದೇ ಇಲ್ಲ ಎಂದು ಹಟ ಹಿಡಿಯುವುದು ಮೂರ್ಖತನವಾಗುತ್ತದೆ.'

ಮೋಹನದಾಸನು ನಗುತ್ತಾ ಪ್ರತಿಕ್ರಿಯಿಸಿದ್ದನು, 'ನನ್ನನ್ನು ನಿಮ್ಮ ಮೂರ್ಖಗೆಳೆಯರಲ್ಲೊಬ್ಬ ಎಂದು ಭಾವಿಸಿ ಕ್ಷಮಿಸಿಬಿಡಿ'.

ಮೋಹನದಾಸನಿಗೆ ಮಾಂಸದ ಅಡುಗೆಯ ಬಗ್ಗೆ ಅಂತಹ ದ್ವೇಷವೇನೂ ಇದ್ದಿರಲಿಲ್ಲ. ಅದನ್ನು ತಿನ್ನುವವರ ಬಗ್ಗೆ ತಿರಸ್ಕಾರವೂ ಇದ್ದಿರಲಿಲ್ಲ. ಜಗತ್ತಿನಲ್ಲಿ ಬದುಕುತ್ತಿರುವ ಎಲ್ಲರೂ ಮಾಂಸ ತಿನ್ನುವುದನ್ನು ಒಂದು ದಿನ ನಿಲ್ಲಿಸಿ ಬಿಟ್ಟರೆ, ಜಗತ್ತಿನ ಅರ್ಧಕ್ಕರ್ಧ ಜನರು ಹಸಿವೆಯಿಂದ ಸತ್ತು ಹೋದಾರೆಂಬುದೂ ಅವನಿಗೆ ಗೊತ್ತಿತ್ತು. ಯಾಕೆಂದರೆ, ಅಷ್ಟೂ ಜನರಿಗೆ ತಿನ್ನಲು ಬೇಕಾಗುವಷ್ಟು ಸಸ್ಯಾಹಾರವನ್ನು ಇದ್ದಕ್ಕಿದ್ದಂತೆ ಎಲ್ಲಿಂದ ತರುವುದೂ? ಆದರೆ ತಾನು ಇಂಗ್ಲೆಂಡಿಗೆ ಹೊರಡುವ ಮುನ್ನ ತಾಯಿಗೆ ವಚನ ಕೊಟ್ಟಿದ್ದೇನೆ.

ಕೊಟ್ಟಿರುವ ವಚನವನ್ನು ಮುರಿಯಲಾರೆ. ಆದ ಕಾರಣ ತನಗೆ ಮಾಂಸಾಹಾರ ಬೇಡ.

## ಸೊಗಸುಗಾರ ಪುಟ್ಸಾಮಿ

ಎಲ್ಲದಕ್ಕೂ ಕಾರಣ ಆ ನಿಲುವುಗನ್ನಡಿ. ಆದರೆ ತಪ್ಪು ಕನ್ನಡಿಯದ್ದಲ್ಲ. ಬೆಲ್ಜಿಯಂ ದೇಶದಿಂದ ತರಿಸಿ ಕೊಠಡಿಯ ಗೋಡೆಗೆ ತೂಗುಹಾಕಲಾಗಿದ್ದ ಆ ಕನ್ನಡಿ ಸ್ಫಟಿಕದಂತೆ ಪ್ರತಿಫಲಿಸುತಿತ್ತು. ಅದರೆದುರು ನಿಂತರೆ ಕಾಲವೆಂಬುದು ಕಾಲಿನ ಕಸ.

ಮಾಂಸ ತಿಂದು ನವನಾಗರಿಕನಾಗುವುದನ್ನು ಖಂಡತುಂಡವಾಗಿ ನಿರಾಕರಿಸಿದ್ದ ಹದಿನೆಂಟರ ನೆತ್ತಿಯ ಮೇಲೆ ನಿಂತಿದ್ದ ಮೋಹನದಾಸನಿಗೆ, ಇದ್ದಕ್ಕಿದ್ದಂತೆ ಒಂದು ದಿನ ತಾನು ಉಡುವ ಧಿರಸಿನಲ್ಲಾದರೂ ಲಂಡನ್ ನಗರದ 'ಜಂಟಲ್ ಮ್ಯಾನಿ'ನಂತೆ ಕಾಣಿಸಿಕೊಳ್ಳಬೇಕೆಂಬ ಆಸೆ ಹುಟ್ಟಿಬಿಟ್ಟಿತ್ತು. ಮೀಸೆ ಹುಟ್ಟುವಾಗ ದೇಶ ಕಾಣುವುದಿಲ್ಲವಂತೆ. ಮೋಹನದಾಸನಿಗೆ ಮೀಸೆ ಅರಳುತ್ತಿದ್ದ ಕಾಲದಲ್ಲಿ ಕಾಕತಾಳೀಯವೆಂಬಂತೆ ಅವನಿಗೆ ಸ್ವಂತ ದೇಶ ನಿಜವಾಗಿಯೂ ಕಾಣಿಸು ತ್ತಿರಲಿಲ್ಲ. ಪರಿಚಿತರೆಂಬವರಾರೂ ಎದುರಿಗಿಲ್ಲ. ಕಣ್ಣಿಗೆ ಕಾಣಿಸುತ್ತಿದ್ದವರೆಲ್ಲ ನವನಾಗರಿಕತೆಯನ್ನು ಪ್ರದರ್ಶಿಸುತ್ತಿರುವ ಬೊಂಬೆಗಳಂತೆ ಉಡುಪು ಧರಿಸುವವರು.

ಮೋಹನದಾಸನು ಒಮ್ಮೆ ನಿರ್ಧರಿಸಿದ ಬಳಿಕ ಆ ನಿರ್ಧಾರವನ್ನು ಕೈಗೂಡಿಸಲು ಸಾಧ್ಯವಾಗುವ ಎಲ್ಲವನ್ನೂ ಮಾಡುವವನು ತಾನೇ?. ಮರುದಿನವೇ ಬಾಂಡ್ ಸ್ಟ್ರೀಟ್‌ನ ಪ್ರತಿಷ್ಠಿತ ಜವುಳಿ ಅಂಗಡಿಗೆ ಹೋಗಿ, ಹತ್ತು ಪೌಂಡ್ ತೆತ್ತು ಸುಂದರವಾದ ಹೊಸ 'ಸೂಟ್' ಖರೀದಿಸಿಯೇ

ಬಿಟ್ಟನು. ಅದುವರೆಗೆ ಧರಿಸುತಿದ್ದ ರೆಡಿಮೇಡ್ ಟೈಯನ್ನು ಎಸೆದು, ಪ್ರತಿಬಾರಿಯೂ ಕಟ್ಟಿಕೊಳ್ಳುವ ಟೈ ಕೊಂಡನು. ೧೯ ಷಿಲ್ಲಿಂಗ್ ಕೊಟ್ಟು ದುಬಾರಿ ಬೆಲೆಯ ಟೊಪ್ಪಿಗೆಯೊಂದನ್ನೂ ಖರೀದಿಸಿದನು. ಬಾಚಣಿಗೆ, ಪೌಡರು, ತಲೆಗೆ ಹಾಕುವ ಪರಿಮಳದ ತೈಲ ಎಲ್ಲವೂ ಹೊಸದೆ.

ಎಲ್ಲವನ್ನೂ ಖರೀದಿಸಿಕೊಂಡು ಮನೆಗೆ ಬಂದು ಅವನ್ನು ಒಪ್ಪವಾಗಿ ಧರಿಸಿ ಕನ್ನಡಿಯ ಎದುರು ನಿಂತದ್ದೇ ತಡ, ಹೊಸದೊಂದು ಸಮಸ್ಯೆ ಅವನ ತಲೆ ಕೊರೆಯಲಾರಂಭಿಸಿತ್ತು.

ಮೋಹನದಾಸನದು ಒರಟು ತಲೆಗೂದಲು. ಊರಲ್ಲಿರುವಾಗ ಅದನ್ನು ಅವನು ಗಂಭೀರವಾಗಿ ಪರಿಗಣಿಸಿದ್ದಿರಲೇ ಇಲ್ಲ. ಮನೆಯಲ್ಲಿ ಅವನ ಕೋಣೆಯಲ್ಲಿದ್ದ ಕನ್ನಡಿ ಅವನ ಅಜ್ಜನ ಕಾಲದ್ದು. ಅದರಲ್ಲೂ ಕೋಣೆಯೊಳಗೆ ಹಗಲಲ್ಲೂ ಮಬ್ಬು ಬೆಳಕು. ಆ ಕನ್ನಡಿಯನ್ನು ನೋಡುತ್ತ ತಲೆ ಬಾಚಿದರೆ ಒರಟು ಕೂದಲು ಅಷ್ಟಾಗಿ ಕಾಣಿಸುತ್ತಿರಲಿಲ್ಲ. ಆದ್ದರಿಂದ ಕನ್ನಡಿಯ ಎದುರು ನಿಲ್ಲುವ ಆಸೆ ಅಷ್ಟೊಂದು ಇದ್ದಿರಲಿಲ್ಲ. ಶಾಲೆಗೆ ಹೊರಡುವ ಮುನ್ನ ಒಮ್ಮೆ ಕನ್ನಡಿಯೆದುರು ಬಂದರೆ ಕ್ಷಣ ನಿಂತು ತಲೆ ಬಾಚುವ ಶಾಸ್ತ್ರ ಮಾಡಿದರೆ ಅದೇ ಹೆಚ್ಚು. ಆದರೆ ಈಗ ಹಾಗಲ್ಲ. ಮುಖಕ್ಕೆ ಪೌಡರು ಮೆತ್ತಿಕೊಳ್ಳುವಾಗ, ಕುತ್ತಿಗೆಗೆ ಟೈ ಸುತ್ತಿಕೊಳ್ಳುವಾಗ, ತಲೆಗೆ ಟೊಪ್ಪಿಗೆಯನ್ನು ಒಪ್ಪವಾಗಿ ಇರಿಸುವಾಗ ಕನ್ನಡಿಯನ್ನು ಸರಿಯಾಗಿ ದಿಟ್ಟಿಸಿ ನೋಡಬೇಕಾಗುತ್ತಿತ್ತು.

ಮೋಹನದಾಸನಿಗೆ ಕನ್ನಡಿ ನೋಡಿಕೊಳ್ಳುತ್ತಿರುವಾಗ ತನ್ನ ಮುಖವೇನೋ ಪರವಾಗಿಲ್ಲ ಅನ್ನಿಸುತ್ತಿತ್ತು. ಬಲ ಕೆನ್ನೆಯ ಮೇಲೆ ಗುಲಗಂಜಿ ಗಾತ್ರದಲ್ಲಿ ಕೆಂಪಾಗಿ ಇಣುಕುತ್ತಿರುವ ಒಂದು ಮುದ್ದಣ ಮುಖದ ಅಂದಕ್ಕೇನೂ ಅಡ್ಡಿಯಾಗಿದ್ದಿರಲಿಲ್ಲ. ಆದರೆ ಒರಟು ತಲೆಗೂದಲೂ? ಅದನ್ನು ಎಣ್ಣೆ ಹಚ್ಚಿ ಒಪ್ಪ ಮಾಡುವುದೆಂದರೆ ಹತ್ತು ನಿಮಿಷಗಳ ಹೋರಾಟ. ಎಷ್ಟೇ ತಿದ್ದಿ ತೀಡಿದರೂ ನಡು ನೆತ್ತಿಯ ಮೇಲೆ ಒಂದಷ್ಟು ಕೂದಲುಗಳು ಮುಳ್ಳುಹಂದಿಯ ಮುಳ್ಳುಗಳಂತೆ ನೆಟ್ಟಗೆ ನಿಂತು ಮೋಹನದಾಸನನ್ನು ಅಣಕಿಸುತ್ತಿದ್ದವು. ಕೂದಲುಗಳನ್ನು ಪರಸ್ಪರ ಅಂಟಿಸಿ ಜೋಡಿಸುವ ವಿಶೇಷವಾದ ಪರಿಮಳದ ಅಂಟುಮುಲಾಮು ಲಂಡನಿನಲ್ಲಿ ಸಿಗುತ್ತದೆಂದು ಗೊತ್ತಿತ್ತು. ಆದರೆ ಯಾವ ಅಂಗಡಿಯಲ್ಲಿ ಸಿಗುತ್ತದೆಂದು ಗೊತ್ತಿರಲಿಲ್ಲ.

ತನಗೆ ಟೈ ಕಟ್ಟುವುದನ್ನು ಕಲಿಸಿದ್ದ, ತಾನು ವಾಸಿಸುವ ಮನೆಯ ಗೃಹಸ್ಥರ ಜತೆ ವಿಚಾರಿಸಬೇಕೆಂದು ಹಲವು ಬಾರಿ ಯೋಚಿಸಿದ್ದರೂ ನಾಚಿಗೆಯಿಂದ ಸುಮ್ಮನಾಗಿದ್ದನು. ಲಂಡನ್ನಿನ ಬಾಂಡ್ ಸ್ಟ್ರೀಟ್‌ನಲ್ಲಿರುವ ಅಂಗಡಿಗಳಿಗೆಲ್ಲ ಹೋಗಿ ತನಗೆ ಬೇಕಾದ ಅಂಟಿನ ವಸ್ತುವಿನ ಬಗ್ಗೆ ವಿಚಾರಿಸಬೇಕೆಂದು ಆಸೆಯಿದ್ದರೂ, ಅಂಗಡಿಯವರಿಗೆ ಇಂಗ್ಲಿಷ್‌ಭಾಷೆ ಬಿಟ್ಟರೆ ಬೇರೆ ಭಾಷೆಯಲ್ಲಿ ಅಳುವುದಕ್ಕೂ ಬರುವುದಿಲ್ಲ.

ನೀರಲ್ಲಿ ಕೈ ಅದ್ದಿ ತಲೆಗೆ ತಿಕ್ಕಿಕೊಂಡು ಒಪ್ಪ ಮಾಡಿದ ಕೂದಲು, ಟೊಪ್ಪಿಗೆ ತೆಗೆದ ಕೂಡಲೇ ತನ್ನ ಹುಟ್ಟುಗುಣ ತೋರಿಸುತಿತ್ತು. ದೊಡ್ಡ ಮನುಷ್ಯರೆದುರು ಟೊಪ್ಪಿಗೆ ತೆಗೆದೇ ವಂದನೆ ಹೇಳುವುದು

ಅಲ್ಲಿಯು ಕ್ರಮ. ಪ್ರತಿಬಾರಿ ವಂದಿಸಿದಾಗಲೂ ತಲೆಗೂದಲನ್ನು ಒಪ್ಪಮಾಡಲೆಂದು ಮೋಹನದಾಸನ ಎಡಗೈ ತಲೆಗೇರುತಿತ್ತು. ಅದು ಅಸಭ್ಯ ವರ್ತನೆಯೆಂದು ಗೊತ್ತಿದ್ದರೂ ಮೋಹನ ದಾಸನ ಎಡಗೈ ಅಭ್ಯಾಸಬಲದಿಂದ ತನ್ನ ಕಸುಬು ಮಾಡುತ್ತಿತ್ತು.

ಇಂಗ್ಲಿಷರಂತೆ ಸಭ್ಯನಾಗುವ ಆಸೆಯು ಮೋಹನದಾಸನನ್ನು ಇನ್ನೂ ಮುಂದಕ್ಕೆ ಕರೆದುಕೊಂಡು ಹೋಯಿತು. ಸಭ್ಯ ನಾಗರಿಕರ ನಡುವೆ ವ್ಯವಹರಿಸಬೇಕಾದರೆ ಡ್ಯಾನ್ಸು ಮಾಡಲು ಗೊತ್ತಿರಬೇಕು, ಪಟಪಟನೆ ಇಂಗ್ಲಿಷ್ ಭಾಷೆಯಲ್ಲಿ ಭಾಷಣ ಮಾಡಲು ತಿಳಿದಿರಬೇಕು, ಫ್ರೆಂಚ್ ಭಾಷೆ ಕಲಿತಿರಬೇಕು.

ಹಾಗೆಲ್ಲಾ ಅನ್ನಿಸಿದ್ದೇ ತಡ. ಮೋಹನದಾಸನು ಮೊದಲಿಗೆ ಹತ್ತಿರದಲ್ಲೇ ಇದ್ದ ಡ್ಯಾನ್ಸು ಸ್ಕೂಲಿಗೆ ಸೇರಿದ. ಆದರೆ ಮೂರು ಪೌಂಡ್ (ಸುಮಾರು ಇನ್ನೂರು ರೂಪಾಯಿ) ತೆತ್ತು ಮೂರುವಾರದ ಅವಧಿಯಲ್ಲಿ ಆರು ಬಾರಿ ಕುಣಿದದ್ದು ವ್ಯರ್ಥವಾಗಿ ಹೋಯಿತು. ಪಿಯಾನೋ (ಒಂದು ಬಗೆಯ ವಿದೇಶೀ ವಾದ್ಯ) ವಾದ್ಯದ ಗುಟ್ಟೇ ತಿಳಿಯಲಾಗಲಿಲ್ಲ. ವಿದೇಶೀ ಡ್ಯಾನ್ಸು ಕಲಿಯುವುದಕ್ಕಿಂತ ಮೊದಲು ಅವರ ಸಂಗೀತ ಅರ್ಥಮಾಡಿಕೊಳ್ಳುವುದು ಅಗತ್ಯವೆಂದು ಅನ್ನಿಸಿತ್ತು. ಮತ್ತೆ ಮೂರು ಪೌಂಡ್ ಕೊಟ್ಟು ಪಿಟೀಲು ಖರೀದಿಸಿ ಮನೆಗೆ ತಂದ. ಆದರೆ ಅದನ್ನು ಮೀಟಿದರೆ ಗರಗರ ಸದ್ದೇ ಕೇಳಿಸಿದಾಗ ಅಳುವೇ ಬಂದು ಬಿಟ್ಟಿತ್ತು.

ಆದರೆ ನೀರಿಗಿಳಿದದ್ದಾಗಿದೆ, ಈಜಾಡದಿದ್ದರೆ ಹೇಗೆ? ಹಟದಿಂದ ಮತ್ತೆ ಆರು ಪೌಂಡ್ ತೆತ್ತು ಸಂಗೀತ ಶಾಲೆ ಸೇರಿ ಪಿಟೀಲು ಮೀಟುವುದನ್ನು ಕಲಿಯಲೆತ್ನಿಸಿದ. ಮೋಹನದಾಸನಿಗೆ ಪಿಟೀಲಿನಲ್ಲಿ 'ವ್ಯೇಂ. . .ವ್ಯೇಂ' ಸದ್ದು ಕೇಳಿಸಿದಾಗ ಸ್ವರ್ಗಕ್ಕೆ ಮೂರೇ ಗೇಣು. ಆದರೆ, ಎಷ್ಟೇ ಹೊತ್ತು ಕುಯ್ದರೂ ಪಿಟೀಲು ಬೇರೆ ಬೇರೆ ಬಗೆಯ ಸ್ವರ ಹೊರಡಿಸಲು ನಿರಾಕರಿಸುತ್ತಿತ್ತು. ನವನಾಗರಿಕರ ಜತೆ ಏಗಲು ಸಂಗೀತ ಮತ್ತು ನೃತ್ಯ ಶಾಲೆಗೆ ದಾಖಲಾಗಿದ್ದ ಮೋಹನದಾಸನು ಅವುಗಳ ಜತೆಗೆ ನಾಗರಿಕ ಸಮಾಜದಲ್ಲಿ ವ್ಯವಹರಿಸಲು ಅಗತ್ಯವಾಗಿದ್ದ, ಭಾಷಣ ಕಲೆ ಕಲಿಸುವ ತರಗತಿಗೂ ಸೇರಿಕೊಂಡನು.

ಇಂಗ್ಲಿಷರಂತೆ ಸಭ್ಯನಾಗರಿಕನಾಗಲು ಸುಮಾರು ಮೂರುತಿಂಗಳ ಕಾಲ ಹಗಲೆಲ್ಲ ಒದ್ದಾಡಿದ ಮೋಹನದಾಸನಿಗೆ ಒಂದು ಮಧ್ಯರಾತ್ರಿಯ ಹೊತ್ತು ಇದ್ದಕ್ಕಿದ್ದಂತೆ ಬೆಚ್ಚಿಬಿದ್ದಂತಾಗಿ ಎಚ್ಚರವಾಗಿತ್ತು. ಹಾಸಿಗೆಯಿಂದ ಎದ್ದ ಮೋಹನದಾಸನು ಮೆಲ್ಲನೆ ನಡೆದು ಕಿಟಿಕಿಯ ಬಳಿಗೆ ಬಂದು ನಿಂತನು. ಸೂರ್ಯ ಮುಳುಗದ ನಾಡಿನ ರಸ್ತೆಯುದ್ದಕ್ಕೂ ಕತ್ತಲು ಕಪ್ಪಾಗಿ ಮಲಗಿತ್ತು. ಸಭ್ಯ ಇಂಗ್ಲಿಷರೆಲ್ಲ ಗಾಢ ನಿದ್ರೆಯಲ್ಲಿ ಮುಳುಗಿದ್ದರು.

ಮೋಹನದಾಸನ ಮೆದುಳು ಪ್ರಶ್ನೆಗಳ ಕೊಪ್ಪರಿಗೆಯಾಗಿತ್ತು. ಇಂಗ್ಲಿಷರಂತೆ ಕಾಣಿಸಿಕೊಳ್ಳಲು ತಾನು ಕೆಲವು ದಿನಗಳಿಂದ ಒದ್ದಾಡುತ್ತಿರುವುದು ಎಷ್ಟು ಸರೀ? ಈ ಬಗೆಯ ಸಭ್ಯತೆಯ ಸೋಗು ತನಗೆ ಅಗತ್ಯವೇ ಎಂಬುದಾಗಿ ತನ್ನನ್ನು ತಾನೇ ಪ್ರಶ್ನಿಸಿಕೊಂಡನು.

ತಾನು ಲಂಡನ್ನಿಗೆ ಬಂದಿರುವುದು ಬ್ಯಾರಿಸ್ಟರ್ ಪದವಿ ಪಡೆಯಲು; ವಿದೇಶೀ ಸಂಗೀತ, ಡ್ಯಾನ್ಸು ಕಲಿತು ಇಲ್ಲಿಯ ಕ್ಲಬ್ಬುಗಳಲ್ಲಿ ಮನರಂಜನೆ ನೀಡುವ ಕೆಲಸ ಮಾಡಲು ಬಂದವನಲ್ಲ. ಜೀವನ ಪೂರ್ತಿ ತಾನೇನೂ ಇಂಗ್ಲೆಂಡಿನಲ್ಲೇ ಉಳಿಯಬೇಕಾದವನಲ್ಲ. ಪದವಿ ಪರೀಕ್ಷೆ ಮುಗಿದ ಮರುದಿನವೇ ಭಾರತಕ್ಕೆ ಹೊರಡಲಿರುವ ಮೊದಲ ಹಡಗು ಹತ್ತಲಿರುವವನು. ಹಾಗಿರುವಾಗ ತಾನು ಸಂಗೀತ ನೃತ್ಯ ಎಂದು ಹಣ ಮತ್ತು ಸಮಯ ವ್ಯರ್ಥ ಮಾಡಿಕೊಳ್ಳುತ್ತಿರುವುದು ಸರಿಯೇ?

ಇಲ್ಲ,

ಮೋಹನದಾಸನು ತನಗೆ ತಾನೇ ಉತ್ತರಿಸಿಕೊಂಡನು, 'ಇಲ್ಲ, ನಾನು ಸರಿಯಾದ ದಾರಿಯಲ್ಲಿ ನಡೆಯುತ್ತಿಲ್ಲ. ನಾಳೆಯಿಂದ ನನ್ನ ಗಮನವೆಲ್ಲ ಬ್ಯಾರಿಸ್ಟರ್ ಪದವಿ ಪಡೆಯುವುದರತ್ತಲೇ ಇರಬೇಕು. ಪಿಟೀಲು, ಡ್ಯಾನ್ಸು ನಾಳೆಯಿಂದ ಬಂದ್. ಇದು ಇಂದು ನನ್ನ ನಿರ್ಧಾರ'.

ಒಮ್ಮೆ ನಿರ್ಧರಿಸಿದ ಬಳಿಕ ಮೋಹನದಾಸನನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಹಾಗೆಯೇ ಆಯಿತು.

ಮರುದಿನದಿಂದ ಮೋಹನದಾಸನ ದಿನಚರಿಯೇ ಬದಲಾಯಿತು. ಕಾಲೇಜಿಗೆ ಸುಮಾರು ಐದು ಮೈಲು ದೂರದಲ್ಲಿದ್ದ ಕೊಟಡಿಯೊಂದನ್ನು ಬಾಡಿಗೆಗೆ ಪಡೆದ ಮೋಹನದಾಸನು, ತನ್ನ ನಿವಾಸವನ್ನು ಅಲ್ಲಿಗೆ ಬದಲಾಯಿಸಿಕೊಂಡನು. ಮುಂಜಾನೆ ಮತ್ತು ಸಂಜೆಯ ಹೊತ್ತಲ್ಲಿ ಕಾಲೇಜಿಗೆ ನಡೆದುಕೊಂಡೇ ಹೋಗಿಬರತೊಡಗಿದನು. ಹೋಟೆಲಿನ ಊಟದಿಂದಾಗಿ ಖರ್ಚು ಹೆಚ್ಚಾಗುತ್ತದೆಂಬ ಯೋಚನೆಯಿಂದ, ಸೀಮೆಎಣ್ಣೆಯ ಸ್ಟವ್ ಖರೀದಿಸಿ ಸ್ವತಹ ಅಡುಗೆ ಮಾಡಿಕೊಳ್ಳತೊಡಗಿದನು. ಸ್ವಂತ ಅಡುಗೆಯ ಊಟವೆಂದರೆ ಸರಳ ಜೀವನಕ್ಕೆ ಮೊದಲ ಪಾಠವಿದ್ದಂತೆ. ನಂತರ, ಮೋಹನದಾಸನು ತನ್ನ ಆಹಾರ ಪದ್ಧತಿಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡನು. ಪ್ರಯೋಗಾರ್ಥವಾಗಿ ಮೊದಲು ಸಿಹಿ, ಮಸಾಲೆ ಪದಾರ್ಥಗಳನ್ನು ತಿನ್ನುವುದನ್ನು ಕಡಿಮೆ ಮಾಡಿದನು. ಕ್ರಮೇಣ ಉಪ್ಪು ಹುಳಿ ಮತ್ತು ಖಾರವಾದ ತಿನಿಸುಗಳಿಂದ ದೂರ ಉಳಿದನು. ಚಹ, ಕಾಫಿ ಸೇವನೆಯು ದೇಹಕ್ಕೆ ಒಳ್ಳೆಯದಲ್ಲ ಎಂಬ ಕಾರಣದಿಂದ ಅವುಗಳನ್ನು ಕುಡಿಯುವ ಅಭ್ಯಾಸವನ್ನೇ ನಿಲ್ಲಿಸಿ ಬಿಟ್ಟನು.

ಆಹಾರಪದ್ಧತಿಯ ಪ್ರಯೋಗಗಳಿಗೆ ತನ್ನ ದೇಹವನ್ನು ಒಡ್ಡಿಕೊಳ್ಳುತ್ತಾ ಅದರಲ್ಲಿ ಸಫಲನಾಗು ತ್ತಿದ್ದಂತೆಯೇ ಮೋಹನದಾಸನಿಗೆ ತನ್ನ ಆತ್ಮನಿಗ್ರಹದ ಬಗ್ಗೆ ಅಭಿಮಾನ ಮೂಡತೊಡಗಿತು. ಆರಂಭದಲ್ಲಿ ಸ್ವಲ್ಪ ಕಷ್ಟ ಅನ್ನಿಸಿದ್ದರೂ, ದಿನಗಳೆದಂತೆ, ರುಚಿಗಳೆಲ್ಲವೂ ನಾಲಗೆಗಷ್ಟೇ ಸಂಬಂಧಿಸಿದ ಆಕರ್ಷಣೆಗಳು; ದೇಹದ ಬೆಳವಣಿಗೆಗೆ ಅವುಗಳ ಅಗತ್ಯವೇ ಇಲ್ಲ ಎಂಬ ಸತ್ಯದ ಅರಿವು ಅವನಿಗುಂಟಾಯಿತು.

ಈ ಎಲ್ಲ ಬದಲಾವಣೆಗಳಿಂದಾಗಿ ಖರ್ಚು ವೆಚ್ಚಗಳು ತನ್ನಿಂದ ತಾನೇ ಕಡಿಮೆಯಾಗಿದ್ದವು.

ಊರಿನಿಂದ ಅಣ್ಣನು ಕಳುಹಿಸುತ್ತಿದ್ದ ದುಡ್ಡಿನಲ್ಲಿ ಉಳಿತಾಯವಾಗತೊಡಗಿತು. ಮಾತ್ರವಲ್ಲ, ಪ್ರತಿದಿನ ಎಂಟು ಹತ್ತು ಮೈಲು ನಡಿಗೆಯ ವ್ಯಾಯಾಮದಿಂದಾಗಿ ಆರೋಗ್ಯವೂ ಉತ್ತಮ ವಾಗತೊಡಗಿತು. ವ್ಯಾಸಂಗದತ್ತ ಹೆಚ್ಚು ಗಮನ ಕೊಡಲು ಸುಲಭಸಾಧ್ಯವಾಯಿತು.

ಬ್ಯಾರಿಸ್ಟರ್ ಪದವಿಯ ಕಾನೂನು ಪರೀಕ್ಷೆಗೆ ಹೆಚ್ಚು ಓದುವ ಅಗತ್ಯವಿಲ್ಲವೆಂಬ ಗುಟ್ಟನ್ನು ಮೋಹನದಾಸನು ಬಲು ಬೇಗ ಕಂಡುಕೊಂಡಿದ್ದನು. ತನ್ನ ಕಾನೂನು ಓದಿನೊಂದಿಗೇ ಫ್ರೆಂಚ್ ಭಾಷೆಯನ್ನೂ, ಜತೆಗೆ ಕಾನೂನು ಕಲಿಕೆಗೆ ಲ್ಯಾಟಿನ್ ಭಾಷೆಯ ಅಗತ್ಯವಿದೆಯೆಂದು ಕಂಡು ಬಂದದ್ದರಿಂದ ಆ ಭಾಷೆಯನ್ನೂ ಕಲಿಯಲಾರಂಭಿಸಿದನು. ಅಷ್ಟು ಮಾತ್ರವಲ್ಲ, ಖಾಸಗಿಯಾಗಿ ಲಂಡನ್ನಿನ ಮೆಟ್ರಿಕ್ಯುಲೇಷನ್ ಪರೀಕ್ಷೆಗೂ ಕಟ್ಟಿದನು.

ಆದರೆ, ಆಹಾರದ ವಿಷಯದಲ್ಲಿ ಎಲ್ಲ ಮೋಹಗಳನ್ನೂ ಗೆದ್ದ ಮೋಹನದಾಸನಿಗೆ, ನಾಲ್ಕು ಜನರ ಎದುರು ನಿಂತು ಮಾತನಾಡುವ ಭಾಷಣದ ಕಲೆಯಲ್ಲಿ ಮಾತ್ರ ಸೋಲು ಸದಾ ಕಟ್ಟಿಟ್ಟ ಬುತ್ತಿಯಾಗಿತ್ತು.

ಶಾಖಾಹಾರದ ಬಗೆಗಿನ ವಿಶೇಷ ಆಸಕ್ತಿಯಿಂದಾಗಿ, ಅವನು ವಾಸಿಸುತ್ತಿದ್ದ ಮನೆಯ ಪಕ್ಕದಲ್ಲೇ ಸಭೆಸೇರುತ್ತಿದ್ದ ಶಾಖಾಹಾರಿ ಸಂಘದ ಸದಸ್ಯನಾಗಿ, ಬಳಿಕ ಅದರ ಕಾರ್ಯಕಾರೀ ಸಮಿತಿಯ ಸದಸ್ಯನೂ ಆಗಿ ಮೋಹನದಾಸನು ಚುನಾಯಿಸಲ್ಪಟ್ಟಿದ್ದನು. ಅಲ್ಲಿ ನಡೆಯುತ್ತಿರುವ ಚರ್ಚೆಯ ಸಂದರ್ಭಗಳಲ್ಲಿ ಮಾತನಾಡುತ್ತಿದ್ದವರ ಅಭಿಪ್ರಾಯಗಳು ಸರಿಯಿಲ್ಲವೆಂದೆನ್ನಿಸಿದಾಗಲೆಲ್ಲ, ಅದನ್ನು ಖಂಡಿಸಿ ತನ್ನ ವಾದವನ್ನು ಮಂಡಿಸಬೇಕೆಂಬ ಆಸೆಯಾಗುತ್ತಿತ್ತು. ಆದರೆ, ಬಾಯಿ ತೆರೆಯುತ್ತಿದ್ದಂತೆ ನಾಲಗೆಯ ತೇವವೆಲ್ಲ ಆರಿ ಹೋಗುತ್ತಿದ್ದುದರಿಂದ ಮಾತುಗಳೆಲ್ಲವೂ ಗಂಟ ಲೊಳಗೇ ಉಳಿದುಕೊಂಡು ಬಿಡುತ್ತಿದ್ದವು. ಮುಂದಿನ ಸಭೆಯಲ್ಲಾದರೂ ಮಾತನಾಡಬೇಕೆಂಬ ಹಟದಿಂದ, ತನ್ನ ಅಭಿಪ್ರಾಯಗಳನ್ನು ಕಾಗದದಲ್ಲಿ ಬರೆದಿಟ್ಟುಕೊಂಡು ಹೋದರೂ, ಸಭೆಯಲ್ಲಿ ಅದನ್ನು ಓದಲು ಹಿಡಿದುಕೊಂಡರೆ ಬೆರಳುಗಳೆಲ್ಲವೂ ತರತರನೆ ನಡುಗಲಾರಂಭಿಸುತ್ತಿದ್ದವು. ಮೊದಲ ಸಾಲು ಓದುತ್ತಿದ್ದಂತೆ ಕಣ್ಣು ಕತ್ತಲೆ ಬಂದಂತಾಗಿ ಅಕ್ಷರಗಳೆಲ್ಲ ಮಂಜಾಗಿ, ಎರಡನೆಯ ಸಾಲು ಕರಗಿದಂತೆ ಕಾಣಿಸುತ್ತಿತ್ತು.

ಇಂಗ್ಲೆಂಡಿಗೆ ಓದಲೆಂದು ಹೋಗುವ ಭಾರತೀಯ ಹುಡುಗರಿಗೆಲ್ಲ ಹೆಚ್ಚಾಗಿ ಮದುವೆ ಮಾಡಿಯೇ ಕಳುಹಿಸುತ್ತಿದ್ದರು. ಇಲ್ಲದೇ ಹೋದರೆ ಆ ಹುಡುಗರು ತಮ್ಮ ಓದಿನ ನಡುವೆ, ಪರಂಗಿ ಹುಡುಗಿಯರ ಜತೆ ಸ್ನೇಹ ಬೆಳೆಸಿ ಅವರನ್ನೇ ಮದುವೆಯಾಗಿ ಕರೆದುಕೊಂಡು ಬಂದಾರೇನೋ ಎಂಬ ಭಯ ಮನೆಯವರಿಗೆ. ಆದರೆ, ಈ ಭಾರತೀಯ ಮದುವಣಿಗರ ಆಂಗ್ಲ ಸಹಪಾಠಿಗಳೆಲ್ಲರೂ ಮದುವೆಯಾಗದ ಬ್ರಹ್ಮಚಾರಿಗಳು. ಆದ್ದರಿಂದ ಭಾರತದ ಹುಡುಗರಿಗೆ, ತಮಗೆ ಮದುವೆಯಾಗಿದೆಯೆಂದು ಹೇಳಿಕೊಳ್ಳಲು ನಾಚಿಕೆಯಾಗುತ್ತಿತ್ತು. ತಮಗೆ ಮದುವೆಯಾಗಿದೆಯೆಂದು ಗೊತ್ತಾಗಿಬಿಟ್ಟರೆ, ಅಲ್ಲಿಯ ಸಭ್ಯ ಸಮಾಜದ ಹುಡುಗಿಯರ ಜತೆ ಚಕ್ಕಂದವಾಡಲು ಸಾಧ್ಯವಿರುತ್ತಿರಲಿಲ್ಲ.

ಇಂಗ್ಲೆಂಡಿನಲ್ಲಿ ಹುಡುಗ ಹುಡುಗಿಯರು ಜತೆಯಲ್ಲಿ ಕೂತು ನಕ್ಕು ಮಾತನಾಡಿದರೆ, ಹೋಟೆಲಿಗೆ ಹೋಗಿ ಕಾಫಿ ಕುಡಿದರೆ, ಜತೆಯಲ್ಲಿ ಕುಳಿತು ನಾಟಕ ನೋಡಿದರೆ ಯಾರೂ ತಪ್ಪಾಗಿ ಭಾವಿಸುವುದಿಲ್ಲ. ಅಲ್ಲಿಯ ಹಿರಿಯರೂ ಕೂಡಾ ತಮ್ಮ ಹೆಣ್ಣು ಮಕ್ಕಳ ಈ ಬಗೆಯ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುತ್ತಿದ್ದದ್ದು ಸಭ್ಯ ನಾಗರಿಕತೆಯ ಗುರುತೇ ಆಗಿತ್ತು. ಮೋಹನದಾಸನು ಕೂಡಾ, ಭಾರತೀಯ ಹುಡುಗರು ಆಚರಿಸುತ್ತಿದ್ದ ಸಂಪ್ರದಾಯವನ್ನು ಮುರಿಯಲಿಲ್ಲ. ಆ ಹೊತ್ತಿಗಾಗಲೇ ಒಂದು ಮಗುವಿನ ತಂದೆಯೂ ಆಗಿದ್ದ ಹದಿನೆಂಟರ ಹುಡುಗ ಮೋಹನದಾಸನು, ಇನ್ನಿತರ ಭಾರತೀಯ ಹುಡುಗರಂತೆಯೇ ತನಗೆ ಮದುವೆಯಾಗಿರುವ ವಿಷಯವನ್ನು ಗುಟ್ಟಾಗಿಯೇ ಇರಿಸಿದ್ದನು.

ನಾಲ್ಕು ಮಂದಿಯ ಎದುರು ವೇದಿಕೆಯೇರಿ ಭಾಷಣ ಮಾಡುವ ಧೈರ್ಯ ಹುಟ್ಟಬೇಕಾದರೆ, ಮೊದಲು ಹುಡುಗಿಯರ ಜತೆ ಸ್ನೇಹ ಸಂಪಾದಿಸಿ, ಅವರೊಂದಿಗೆ ಧೈರ್ಯದಿಂದ ಮಾತನಾಡಬೇಕು ಎಂಬುದು ಗೆಳೆಯನೊಬ್ಬನ ಸಲಹೆಯಾಗಿತ್ತು. ಆದರೆ, ಹುಡುಗಿಯರ ಜತೆಗೆ ಮಾತನಾಡದೆ ಭಾಷಣ ಮಾಡುವುದನ್ನು ಕಲಿಯಲು ಸಾಧ್ಯವಿಲ್ಲವಾದರೆ, ಭಾಷಣ ಮಾಡದಿರುವುದೇ ಲೇಸು ಎಂಬುದು ಮೋಹನದಾಸನ ಅಭಿಪ್ರಾಯವಾಗಿತ್ತು.

ಮೋಹನದಾಸನ ಸಂಕೋಚ ಸ್ವಭಾವ ಮತ್ತು ಸಭ್ಯತನವನ್ನು ಮೆಚ್ಚಿಕೊಂಡಿದ್ದ ಸಭ್ಯ ಮನೆತನದ ಹಿರಿಯ ಹೆಂಗಸೊಬ್ಬಳು ಮೋಹನದಾಸನ ಅಂಜುಬುರುಕತನವನ್ನು ನಿವಾರಿಸಲು, ತನ್ನ ಪರಿಸರದ ಹಲವಾರು ಹುಡುಗಿಯರಿಗೆ ಮೋಹನದಾಸನ ಜತೆ ಮಾತನಾಡಲು ಒತ್ತಾಯಿಸುತ್ತಿದ್ದಳು. ಮಾತ್ರವಲ್ಲ ತನ್ನ ಮಗಳನ್ನು ಅವನ ಜತೆಗೆ ಗೆಳೆತನ ಮಾಡಲು ಪ್ರೋತ್ಸಾಹಿಸುತ್ತಿದ್ದಳು. ಆ ಹುಡುಗಿಯೂ ಮೋಹನದಾಸನ ನೇರ ನಡೆ ನುಡಿಗಳಿಂದ ಆಕರ್ಷಿತಳಾಗಿದ್ದಳು. ಮೋಹನದಾಸನಿಗೂ, ತನ್ನ ಸಂಕೋಚವನ್ನು ನಿವಾರಿಸಿಕೊಳ್ಳಲು ನೆರವಾಗುವ ಆಕೆಯ ಮಾತುಕತೆಗಳು ಇಷ್ಟವಾಗಲಾರಂಭಿಸಿತ್ತು. ಆದರೆ ದಿನಗಳೆದಂತೆ ಆ ಹುಡುಗಿ ಮತ್ತು ಆಕೆಯ ತಾಯಿ, ತನ್ನ ಬಗ್ಗೆ ಹೆಚ್ಚು ಹೆಚ್ಚು ಆಸಕ್ತಿ ತೋರಿಸುತ್ತಿದ್ದಂತೆ ಮೋಹನದಾಸನಿಗೆ ಭಯವಾಗತೊಡಗಿತು.

ಇನ್ನು ತಡ ಮಾಡಿದರೆ ಕೆಲಸ ಕೆಟ್ಟೀತೆಂದು ನಿರ್ಧರಿಸಿದ ಮೋಹನದಾಸನು ಪತ್ರವೊಂದರಲ್ಲಿ 'ತನಗೆ ಈಗಾಗಲೇ ಮದುವೆಯಾಗಿದೆಯೆಂದೂ, ತನಗೊಂದು ಮಗು ಇದೆಯೆಂದೂ,' ವಿವರವಾಗಿ ಬರೆದು ಅವರಿಗೆ ತಿಳಿಸಿಬಿಟ್ಟಿದ್ದನು.

ಮೋಹನದಾಸನಿಗೆ ಮದುವೆಯಾಗಿದೆಯೆಂಬ ವಿಷಯವು ಅವರಿಬ್ಬರಿಗೂ ನಿರಾಸೆಯನ್ನುಂಟು ಮಾಡಿದ್ದು ನಿಜವಾದರೂ, ಅವನ ಪ್ರಾಮಾಣಿಕತೆಯನ್ನು ಮೆಚ್ಚಿ ಅವನನ್ನು ಮೊದಲಿಗಿಂತಲೂ ಹೆಚ್ಚು ಗೌರವದಿಂದ ಕಂಡಿದ್ದರು.

# ಊಟದ ಬ್ಯಾರಿಸ್ಟರ್

ಆ ದಿನಗಳಲ್ಲಿ, ಭಾರತ ದೇಶದಲ್ಲಿ ವಿಶೇಷ ಮನ್ನಣೆ ಗಳಿಸಿದ್ದ ಇಂಗ್ಲೆಂಡಿನ 'ಬ್ಯಾರಿಸ್ಟರ್' ಪದವಿ ಪಡೆಯುವುದು ಊಟ ಮಾಡಿದಷ್ಟೇ ಸುಲಭದ ಕೆಲಸವಾಗಿತ್ತು.

ಬ್ಯಾರಿಸ್ಟರ್ ಕಲಿಕೆಯ ಮೂರು ವರ್ಷದ ಅವಧಿಯಲ್ಲಿ, ಪ್ರತಿಯೊಂದು ವರ್ಷದಲ್ಲೂ ತಲಾ ಮೂರುತಿಂಗಳ ನಾಲ್ಕು 'ಅವಧಿ'ಗಳಿದ್ದವು. ಮೂರುವರ್ಷಗಳಲ್ಲಿ, ಒಟ್ಟು ಮೂರು ತಿಂಗಳುಗಳ ಹನ್ನೆರಡು 'ಅವಧಿ'ಗಳು ಇರುತ್ತಿದ್ದವು. ಪ್ರತಿಯೊಂದು ಮೂರುತಿಂಗಳ ಅವಧಿಯಲ್ಲಿ ಇಪ್ಪತ್ತ ನಾಲ್ಕು ಅಧಿಕೃತ ಭೋಜನಕೂಟಗಳನ್ನು ಏರ್ಪಡಿಸಲಾಗುತ್ತಿತ್ತು. ಇಂತಹ ಇಪ್ಪತ್ತನಾಲ್ಕು ಭೋಜನಕೂಟಗಳಲ್ಲಿ, ಕಡಮೆಯೆಂದರೆ ಆರು ಕೂಟಗಳಲ್ಲಾದರೂ ಭಾಗವಹಿಸದ ವಿದ್ಯಾರ್ಥಿಗೆ ಪದವಿ ಪತ್ರ ನಿರಾಕರಿಸಲಾಗುತ್ತಿತ್ತು.

ಆದರೆ, ಎರಡೂವರೆಯಿಂದ ಮೂರೂವರೆ ಶಿಲಿಂಗ್‌ನಷ್ಟು (ಸುಮಾರು ಎರಡರಿಂದ ಮೂರು ರೂಪಾಯಿಗಳಷ್ಟು) ಅಗ್ಗದಲ್ಲಿ ಸಿಗುತ್ತಿರುವ ಭರ್ಜರಿ ಊಟದ ಸಿಹಿ, ಆ ಊಟದ ಜತೆಗೆ ಸಿಗುತ್ತಿದ್ದ ಮದ್ಯ ಮತ್ತು ಆ ಊಟದ ಹಾಜರಾತಿಯ ಮೂಲಕ ನಿರ್ಧರಿಸಲಾಗುತ್ತಿದ್ದ ಬ್ಯಾರಿಸ್ಟರ್ ಪದವಿಯ ಸವಿಯನ್ನು ಕಳೆದುಕೊಳ್ಳಲು ಯಾವುದೇ ವಿದ್ಯಾರ್ಥಿಯೂ ಸಿದ್ಧನಿದ್ದಿರಲಿಲ್ಲ. ಬ್ಯಾರಿಸ್ಟರ್ ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯನ್ನು, ಅತಿ ಕಡಿಮೆ ಖರ್ಚಿನಲ್ಲಿ, ಅತಿ ಹೆಚ್ಚು ಭೋಜನ ಕೂಟಗಳಲ್ಲಿ ಭಾಗವಹಿಸಿ, ಅತಿ ಹೆಚ್ಚು ಊಟ ಮಾಡಿ, ಅತಿ ಹೆಚ್ಚು ಕುಡಿದವನು ಎಂದೂ ಗೆಳೆಯರು ಅಣಕಿಸುತ್ತಿದ್ದುದುಂಟು.

ಕೇವಲ ಎರಡು ರೊಟ್ಟಿ, ಒಂದಿಷ್ಟು ಬೇಯಿಸಿದ ಬಟಾಟೆ ತುಂಡುಗಳು ಅಥವಾ ಕೋಸುಗೆಡ್ಡೆ ಗಳಲ್ಲೇ ಹಸಿವೆಯನ್ನು ಇಂಗಿಸಿಕೊಳ್ಳಲು ಅಭ್ಯಾಸ ಮಾಡಿಕೊಂಡಿದ್ದ ಮೋಹನದಾಸನಿಗೆ, ಈ ರೀತಿಯ ಊಟದ ಪಾಠ ಆಸಕ್ತಿಯ ಸಂಗತಿಯಾಗಿದ್ದಿರಲಿಲ್ಲ. ಮೂರು ತಿಂಗಳ ಅವಧಿಯಲ್ಲಿ ಕೇವಲ ಆರು ಬಾರಿ ಭೋಜನಕೂಟಕ್ಕೆ ಹಾಜರಿ ಹಾಕಿದರೆ ಕೂಡಾ ಬ್ಯಾರಿಸ್ಟರ್ ಆಗಲು ಸಾಧ್ಯವಿರುವುದರಿಂದ ಮೋಹನದಾಸನು ಮಿಕ್ಕುಳಿದ ಭೋಜನಕೂಟಗಳಿಗೆ ಹೋಗುವುದರಿಂದ ತಪ್ಪಿಸಿಕೊಳ್ಳಲು ಬಯಸುತ್ತಿದ್ದ. ಆದರೆ, ಮೋಹನದಾಸನನ್ನು ಭೋಜನಕೂಟಕ್ಕೆ ಹೊತ್ತುಕೊಂಡು ಹೋಗಲು ಅವನ ಸಹಪಾಠಿಗಳಲ್ಲಿ ಸ್ಪರ್ಧೆ ಏರ್ಪಡುತ್ತಿತ್ತು.

ಯಾಕೆಂದರೆ, ಭೋಜನಕೂಟದಲ್ಲಿ ನಾಲ್ಕು ವಿದ್ಯಾರ್ಥಿಗಳ ಒಂದು ತಂಡಕ್ಕೆ ಎರಡು ಬಾಟಲು ಗಳಂತೆ ಮದ್ಯವನ್ನು ವಿತರಿಸುತ್ತಿದ್ದರು. ಮೋಹನದಾಸನನ್ನು ಒತ್ತಾಯದಿಂದ ಕರೆದುಕೊಂಡು ಬಂದು ಜತೆಯಲ್ಲಿ ಕುಳ್ಳಿರಿಸಿಕೊಂಡರೆ, ಅವನ ಪಾಲಿನ ಅರ್ಧ ಬಾಟಲು ಮದ್ಯವನ್ನು ಭೋಜನ ಕೂಟದ ಕಾನೂನಿನಂತೆ ಉಳಿದ ಮೂವರೇ ಹಂಚಿಕೊಂಡು ಕುಡಿಯಲು ಸಾಧ್ಯವಾಗುತ್ತಿತ್ತು. ಆದ್ದರಿಂದ ಪ್ರತಿಯೊಂದು ಭೋಜನಕೂಟದ ಸಂಜೆಯ ಹೊತ್ತಲ್ಲಿ ಎಲ್ಲರಿಗೂ ಮೋಹನದಾಸನ ಬಗ್ಗೆ ವಿಪರೀತ ಕಾಳಜಿ ಉಕ್ಕುತ್ತಿತ್ತು. ಎಲ್ಲರಿಗೂ ಅವನ ಗೆಳೆಯರಾಗುವ ಆಸೆ ಹುಟ್ಟುತ್ತಿತ್ತು.

ಬ್ಯಾರಿಸ್ಟರ್ ಪಾಠದ ಕ್ರಮವೂ ಅತ್ಯಂತ ಸುಲಭವಾಗಿತ್ತು. ಆ ಪರೀಕ್ಷೆಗಳನ್ನು ವಿದ್ಯಾರ್ಥಿಗಳಾಗಲೀ, ಅವರ ಅಧ್ಯಾಪಕರುಗಳೇ ಆಗಲೀ ಅಷ್ಟೊಂದು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಮೋಹನ ದಾಸನು ಕಲಿಯುತ್ತಿದ್ದ ಕಾಲದಲ್ಲಿ ಒಟ್ಟು ಎರಡು ಪ್ರಧಾನ ವಿಷಯಗಳಲ್ಲಿ ಪರೀಕ್ಷೆಗಳಿದ್ದವು. ಮೊದಲನೆಯದು ರೋಮನ್ ಕಾನೂನು. ಎರಡನೆಯದು ಸಾಮಾನ್ಯ ಕಾನೂನು. ಅವುಗಳಿಗೆ ನಿಗದಿತವಾದ ಪಠ್ಯ ಪುಸ್ತಕಗಳು ಕೂಡಾ ಇದ್ದವು. ಆದರೆ ಆ ಪಠ್ಯ ಪುಸ್ತಕಗಳನ್ನು ಮೂರು ವರ್ಷಗಳ ಕಾಲ ಇಡಿಯಾಗಿ ಓದುವುದಕ್ಕಿಂತ, ಪ್ರತಿ ಮೂರು ತಿಂಗಳಲ್ಲಿ ನಡೆಸಲಾಗುತ್ತಿದ್ದ ಪರೀಕ್ಷೆಗಳಿಗೆ ಮುನ್ನ ಐದಾರು ದಿನಗಳ ಕಾಲ, ಪಠ್ಯಪುಸ್ತಕಗಳ ಬಗ್ಗೆ ಬರೆದಿರುವ ಸಿದ್ಧನೋಟ್ಸು ಗಳನ್ನು ಉರು ಹೊಡೆದರೆ ಪರೀಕ್ಷೆಗಳಲ್ಲಿ ತೇರ್ಗಡೆ ಗ್ಯಾರಂಟಿಯಾಗಿತ್ತು. ಪ್ರಶ್ನೆ ಪತ್ರಿಕೆಗಳು ಬಹಳ ಸುಲಭವಾಗಿರುತ್ತಿದ್ದದ್ದು ಮಾತ್ರವಲ್ಲ ಅದನ್ನು ತಿದ್ದುವ ಪರೀಕ್ಷಕರು ಕೂಡಾ ಬಹಳ ಉದಾರ ಮನಸ್ಸಿನವರಾಗಿದ್ದದ್ದು ಅದಕ್ಕೆ ಕಾರಣ.

ಆದರೆ, ಮೋಹನದಾಸನು ಸಿದ್ಧನೋಟ್ಸುಗಳನ್ನು ಉರುಹೊಡೆದು ಪರೀಕ್ಷೆ ಬರೆಯುವ ಸುಲಭದ ದಾರಿಯನ್ನು ನಿರಾಕರಿಸಿದ್ದನು. ತಾನು ಬಂದಿರುವುದು ಬರಿಯ ಬ್ಯಾರಿಸ್ಟರ್ ಪದವಿಪತ್ರ ಪಡೆದು ಕೊಂಡು ಹೋಗುವುದಕ್ಕಲ್ಲ; ಬ್ಯಾರಿಸ್ಟರ್ ಕಾನೂನಿನ ವ್ಯಾಸಂಗ ಮಾಡಲು ಬಂದವನು. ಬರಿಯ ಸಿದ್ಧ ನೋಟ್ಸ್ ಪುಸ್ತಕಗಳನ್ನು ಓದಿದರೆ, ಮುಂದೆ ವಕೀಲಿಯ ಕೆಲಸ ಮಾಡುವಾಗ ವಿಷಯದ ಬಗೆಗಿನ ಅಜ್ಞಾನದಿಂದ ಕಷ್ಟ ಪಡಬೇಕಾಗಬಹುದು. ಕಕ್ಷಿದಾರರ ಪರವಾಗಿ ನ್ಯಾಯಾಲಯದಲ್ಲಿ ವಾದ ಮಾಡುವಾಗ ಕಾನೂನಿನ ಸೂಕ್ಷ್ಮಗಳು ಹೊಳೆಯದೆ ಹೋಗಬಹುದು.

ನಿಗದಿಯಾಗಿರುವ ಪಠ್ಯ ಪುಸ್ತಕವನ್ನೇ ನೇರವಾಗಿ ಓದಿಕೊಂಡು ಪರೀಕ್ಷೆಗೆ ಬರೆಯುತ್ತೇನೆ ಎಂಬ ಮೋಹನದಾಸನ ಹಟ ಸುಲಭದ ದಾರಿಯಾಗಿದ್ದಿರಲಿಲ್ಲ. ಪಠ್ಯ ಪುಸ್ತಕಗಳಿಗಾಗಿ ಹೆಚ್ಚು ಹಣ ಮಾತ್ರವಲ್ಲ, ಅವುಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಹೆಚ್ಚು ಸಮಯವನ್ನೂ ವ್ಯಯ ಮಾಡಬೇಕಾಗಿತ್ತು. ಆದರೆ ಆ ಬಗ್ಗೆ ಮೋಹನದಾಸನು ಪಶ್ಚಾತ್ತಾಪ ಪಡಲಿಲ್ಲ; ತನ್ನ ದಾರಿ ಸರಿಯಾದುದೆಂಬ ಬಗ್ಗೆ ಹೆಮ್ಮೆ ಪಟ್ಟನು. ತಾನು ಕೇವಲ ಊಟದ ಬ್ಯಾರಿಸ್ಟರ್ ಆಗದೆ ನಿಜವಾದ ಓದಿನ ಬ್ಯಾರಿಸ್ಟರ್ ಆಗಲಿದ್ದೇನೆ ಎಂದು ತನ್ನನ್ನು ತಾನೇ ಅಭಿನಂದಿಸಿಕೊಂಡಿದ್ದನು.

ಮೋಹನದಾಸನು ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನು. ಮರುದಿನವೇ ಇಂಗ್ಲೆಂಡಿನ ಹೈಕೋರ್ಟಿನಲ್ಲಿ, ಬ್ಯಾರಿಸ್ಟರ್ ಮೋಹನದಾಸ ಕರಮಚಂದ್ ಗಾಂಧಿ, ಬಾರ್ ಎಟ್ ಲಾ; ಎಂಬುದಾಗಿ ಹೆಮ್ಮೆಯಿಂದ ತನ್ನ ಹೆಸರನ್ನು ದಾಖಲಿಸಿದನು. ಮತ್ತು ಅದರ ಮಾರನೆಯ ದಿನ, ಭಾರತದ ಬೊಂಬಾಯಿ ಬಂದರಿಗೆ ಹೊರಟು ನಿಂತಿದ್ದ ಎಸ್. ಎಸ್. ಅಸ್ಸಾಂ ಎಂಬ ಹೆಸರಿನ ಹಡಗು ಹತ್ತಿ, ಇಂಗ್ಲೆಂಡಿನ ನೆಲಕ್ಕೆ ವಿದಾಯ ಹೇಳಿದನು.

ಹಡಗು ಹೊರಡುವಾಗಲೇ ಕೆಟ್ಟ ಸುದ್ದಿಯ ಸೂಚನೆಯೆಂಬಂತೆ ಅಲೆಗಳ ಅರ್ಭಟ ಜೋರಾ ಗಿತ್ತು. ಬೊಂಬಾಯಿ ತಲುಪುವಷ್ಟರಲ್ಲಿ ಸಮುದ್ರ ಅಲ್ಲೋಲ ಕಲ್ಲೋಲವಾಗಿತ್ತು. ಬೊಂಬಾಯಿ

ಬಂದರು ತಲುಪಿದ ಮೋಹನದಾಸನನ್ನು ಸ್ವಾಗತಿಸಲು ಬಂದಿದ್ದ ಹಿರಿಯಣ್ಣನವರು; ಬಹಳ ದಿನಗಳ ಹಿಂದೆಯೇ ತೀರಿಕೊಂಡಿದ್ದ ತಾಯಿಯ ಮರಣ ವಾರ್ತೆಯನ್ನು ಹೊತ್ತುಕೊಂಡೇ ಬಂದಿದ್ದರು.

ಮೋಹನದಾಸನು, ಯಾರ ಸಲುವಾಗಿ ಕಾಣದ ಸೂರ್ಯನನ್ನು ಕೂಡಾ ಕಂಡೆ ಎಂದು ಸುಳ್ಳು ಹೇಳಿದ್ದನೋ, ಯಾರ ಸಲುವಾಗಿ ಸೂರ್ಯ ಮುಳುಗದ ದೇಶದಲ್ಲಿ ಮೂರು ವರ್ಷಗಳುದ್ದಕ್ಕೂ ಮದ್ಯ, ಮಾಂಸ ಮತ್ತು ಹೆಣ್ಣುಗಳಿಂದ ದೂರವಿದ್ದನೋ, ಯಾರ ಮಡಿಲಲ್ಲಿ ತಲೆಯಿಟ್ಟು ತನ್ನ ಸಾಧನೆಗಳನ್ನೆಲ್ಲ ಹೇಳಿಕೊಳ್ಳಬೇಕೆಂದು ಕಾತುರನಾಗಿದ್ದನೋ ಆ ಅಮ್ಮ ಇಲ್ಲವಾಗಿದ್ದಳು.

ಮೋಹನದಾಸನನ್ನು 'ಪಾಪೂ' ಎಂದು ಪ್ರೀತಿಯಿಂದ ಕರೆಯುತ್ತಿದ್ದ ಅಮ್ಮ ಇನ್ನಿಲ್ಲವಾಗಿದ್ದಳು.

❑



ಗಾಂಧಿ

# ಕೆಲಸ ಖಾಲಿ ಇದೆ

ಮೋಹನದಾಸ ಕರಮಚಂದ್ ಗಾಂಧಿಯ ಬಗಲ ಚೀಲದಲ್ಲಿ ಬ್ಯಾರಿಸ್ಟರ್ ಪದವಿಯ ದಾಖಲೆಗಳು ತುಂಬಿದ್ದವು. ಆದರೆ, ಅವರ ಮೆದುಳಿನ ಚೀಲದಲ್ಲಿ ಭಾರತದ ಕಾನೂನಿನ ಜ್ಞಾನವಿರಬೇಕಾಗಿದ್ದ ಭಾಗ ಖಾಲಿಯಿತ್ತು.

ಊಟದ ಬ್ಯಾರಿಸ್ಟರ್ ಆಗಲೊಲ್ಲದೆ, ನಿಜವಾದ ಬ್ಯಾರಿಸ್ಟರ್ ಅನ್ನಿಸಿಕೊಳ್ಳಲು ಇಂಗ್ಲೆಂಡಿನಲ್ಲಿ ಹಗಲು ರಾತ್ರಿ ಓದಿ, 'ಬಾರ್ ಎಟ್ ಲಾ' ಪದವಿ ಗಳಿಸುವಾಗ ಓದಿಕೊಂಡಿದ್ದ ವಿಷಯಗಳು, ಇಲ್ಲಿ, ಭಾರತದಲ್ಲಿ ವಕೀಲಿ ವೃತ್ತಿ ನಡೆಸುವಾಗ ಯಾವ ಉಪಯೋಗಕ್ಕೂ ಬರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ಗಾಂಧಿಗೆ ಬಹಳ ದಿನಗಳು ಬೇಕಾಗಲಿಲ್ಲ. ಬ್ಯಾರಿಸ್ಟರ್ ಪಠ್ಯಕ್ರಮದಲ್ಲಿದ್ದ 'ಸಾಮಾನ್ಯ ಕಾನೂನಿನ' ಕೆಲವೊಂದು ಸಂಗತಿಗಳು ಭಾರತದ ನ್ಯಾಯಾಲಯಗಳಲ್ಲೂ ಅನ್ವಯವಾಗುವುದಿದ್ದರೂ, ಅವುಗಳನ್ನು ತನ್ನ ಕಕ್ಷಿದಾರರ ಪರವಾಗಿ ಜಾಣತನದಿಂದ ಬಳಸುವ ತಂತ್ರವನ್ನು ಗಾಂಧಿ ಕಲಿಯಬೇಕಾಗಿತ್ತಷ್ಟೆ.

ಭಾರತದ ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ನಡೆಸಲು ತೀರಾ ಅಗತ್ಯವಿದ್ದ 'ಭಾರತೀಯ ಕಾನೂನು,' 'ಹಿಂದೂ ಕಾನೂನು,' 'ಮಹಮ್ಮದೀಯ ಕಾನೂನು' ಇತ್ಯಾದಿಗಳನ್ನು ಗಾಂಧಿ ಇನ್ನೂ ಕಲಿತಿದ್ದಿರಲಿಲ್ಲ. ಭಾರತ ದೇಶದಲ್ಲಿ ವಕೀಲಿ ವೃತ್ತಿ ನಡೆಸಲು ತೀರಾ ಅಗತ್ಯವಾಗಿರುವ ಕಾನೂನುಗಳೇನನ್ನೂ ಇಂಗ್ಲೆಂಡಿನ ಬ್ಯಾರಿಸ್ಟರ್ ಕಲಿಕೆಯಲ್ಲಿ ಕಲಿಸುವುದಿಲ್ಲ ಎಂಬ ಸತ್ಯ ಗಾಂಧಿಗೆ ಮೊದಲೇ ಗೊತ್ತಿರುತ್ತಿದ್ದಲ್ಲಿ, ಇಷ್ಟೆಲ್ಲ ಕಷ್ಟಪಟ್ಟು, ಹೆಂಡತಿ ಮತ್ತು ಮಗುವನ್ನು ಬಿಟ್ಟು, ಹೆತ್ತ ತಂದೆ ತಾಯಿಗಳಿಂದ ದೂರವಾಗಿ ಮೂರು ವರ್ಷಗಳ ಕಾಲ ಓದಲೆಂದು ಇಂಗ್ಲೆಂಡಿಗೆ ಹೋಗುತ್ತಿರಲಿಲ್ಲವೇನೋ.

ಬಾಲ್ಯದಿಂದಲೇ ತನ್ನ ಬೆನ್ನು ಹತ್ತಿ ಬಂದಿರುವ ತನ್ನ ಸಂಕೋಚದ ಸ್ವಭಾವ ಮತ್ತು ಇದಿಷ್ಟು ಓದಿಕೊಂಡ ಬಳಿಕವೂ ನಾಲ್ಕು ಮಂದಿಯ ಎದುರು ಮಾತನಾಡಲು ತನಗಿರುವ ಅಂಜಿಕೆಯಿಂದಾಗಿ ತನಗೆಂದೂ ವಕೀಲಿ ವೃತ್ತಿ ಸರಿಹೊಂದಲಾರದೇನೋ ಎಂಬ ಅನುಮಾನಗಳು ಗಾಂಧಿಯನ್ನು ಇಂಗ್ಲೆಂಡಿನಲ್ಲಿ ಓದುತ್ತಿರುವಾಗಲೂ ಕಾಡಿದ್ದುಂಟು. ಈ ಭಯವನ್ನು ಗಾಂಧಿ ತನ್ನ ಕೆಲವು ಗೆಳೆಯರಲ್ಲೂ ಹಂಚಿಕೊಂಡಿದ್ದರು. ಅವರಲ್ಲೊಬ್ಬ ನೀಡಿದ್ದ ಸಲಹೆಯಂತೆ, ಮಿ. ಫ್ರೆಡ್ರಿಕ್ ಪಿನ್ಕಟ್ ಎಂಬ ಹಿರಿಯ ಸಲಹೆಗಾರರನ್ನು ಕಂಡು ತನ್ನ ಸಮಸ್ಯೆಯನ್ನು ತೋಡಿಕೊಂಡಿದ್ದರು. ಮಿ. ಪಿನ್ಕಟ್ ಅವರು ಕಟ್ಟಾ ಸಂಪ್ರದಾಯವಾದಿಯಾಗಿದ್ದರೂ ಭಾರತದಿಂದ

ಓದಲೆಂದು ಬಂದಿರುವ ವಿದ್ಯಾರ್ಥಿಗಳ ಬಗ್ಗೆ ವಿಶೇಷವಾದ ಕುತೂಹಲವನ್ನೂ, ಪ್ರಾಮಾಣಿಕವಾದ ಪ್ರೀತಿಯನ್ನೂ ಇಟ್ಟುಕೊಂಡವರು. ಆದುದರಿಂದಲೇ ಭಾರತದಿಂದ ಇಂಗ್ಲೆಂಡಿಗೆ ಹೋಗುತ್ತಿದ್ದ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಅವರನ್ನು ಭೇಟಿಯಾಗಿ ಅಗತ್ಯದ ಸಲಹೆಗಳನ್ನು ಪಡೆಯುತ್ತಿದ್ದರು.

ಗಾಂಧಿಯ ಸಮಸ್ಯೆಯನ್ನು ಕೇಳಿ ಗೊಳ್ಳನೆ ನಕ್ಕು ಬಿಟ್ಟ ಅವರು, 'ಇಷ್ಟೇನಾ...? ಇದು ಒಂದು ಸಮಸ್ಯೆಯೇ ಅಲ್ಲ.' ಎನ್ನುತ್ತಾ, 'ಇದು ಎಲ್ಲರಲ್ಲೂ ಇರುವ ಸಾಮಾನ್ಯ ಖಾಯಿಲೆ. ಕೆಲವರಲ್ಲಿ ಈ ಖಾಯಿಲೆ ಹೆಚ್ಚಿರುತ್ತದೆ, ಕೆಲವರಲ್ಲಿ ಕಡಿಮೆ ಇರುತ್ತದೆ. ಯಾರು ತಮಗೆ ಈ ಖಾಯಿಲೆ ಇಲ್ಲವೇ ಇಲ್ಲ ಎಂದು ಹೇಳುತ್ತಾರೋ, ಅವರು ದೊಡ್ಡ ಸುಳ್ಳು ಹೇಳುತ್ತಿದ್ದಾರೆಂದೇ ಅರ್ಥ. ಆದರೆ ನೀನು ಸುಳ್ಳುಗಾರನಲ್ಲವೆಂಬುದು ನನಗೆ ಗೊತ್ತಾಯಿತು. ಅದಕ್ಕಾಗಿ ಮೊದಲು ನನ್ನ ಅಭಿನಂದನೆಗಳನ್ನು ಸ್ವೀಕರಿಸು' ಎಂದು ಹೇಳಿ ಧೈರ್ಯ ತುಂಬಿದ್ದರು.

ಮಿ. ಪಿನ್ಕಟ್ ಅವರು ಗಾಂಧಿಯನ್ನು ಸಾಂತ್ವನಗೊಳಿಸುತ್ತಾ, ಆ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಬಹಳ ಹೆಸರುವಾಸಿಯಾಗಿದ್ದ ಭಾರತೀಯ ವಕೀಲ ಶ್ರೀ ಫಿರೋಝ್ ಶಾ ಮೆಹತಾರನ್ನು, ಉದಾಹರಿಸಿದ್ದರು.

'ಅವರಂತಹ ಅಪರೂಪದ ವಕೀಲನಾಗಲು ಬಹಳ ಬುದ್ಧಿಶಕ್ತಿ ಬೇಕಾಗುತ್ತದೆ ಎಂಬುದೇನೋ ನಿಜ. ಅದರೆ ಎಲ್ಲರೂ ಅಪರೂಪದವರಾದರೆ ಅಪರೂಪವೆಂಬ ಶಬ್ದವೇ ತನ್ನ ಅರ್ಥ ಕಳೆದು ಕೊಳ್ಳುತ್ತದೆ. ಹಾಗೆಂದು ನೀನೂ ಅಪರೂಪದ ಬುದ್ಧಿಶಕ್ತಿಯುಳ್ಳವನಾಗಲು ಪ್ರಯತ್ನಿಸಿದರೆ ನಿನ್ನನ್ನು ತಡೆಯಲು ಯಾರಿಗೂ ಅಧಿಕಾರವಿಲ್ಲ. ಒಂದು ವೇಳೆ ನಿನ್ನ ಪ್ರಯತ್ನಗಳ ಬಳಿಕ ನಿನಗೆ ಮೆಹತಾರಷ್ಟು ಎತ್ತರಕ್ಕೆ ಏರಲು ಸಾಧ್ಯವಾಗದೆ ಹೋದರೂ, ನೀನು ಒಳ್ಳೆಯ ವಕೀಲನಾಗುವಷ್ಟು ಎತ್ತರಕ್ಕೆ ಬೆಳೆದಿರುತ್ತಿ. ಒಳ್ಳೆಯ ವಕೀಲನಾಗುವವನಿಗೆ ಬೇಕಾಗಿರುವುದು ಅಸಾಧಾರಣ ಬುದ್ಧಿಶಕ್ತಿಯಲ್ಲ, ಅವನಲ್ಲಿರಬೇಕಾದದ್ದು ಯೋಗ್ಯ ನಡತೆ ಮತ್ತು ಓದಿದ್ದನ್ನು ನೆನಪಿನಲ್ಲಿ ಉಳಿಸಿ ಕೊಳ್ಳುವ ಸ್ಮರಣಶಕ್ತಿ ಮಾತ್ರ. ಅವೆರಡೂ ನಿನ್ನಲ್ಲಿವೆಯೆಂದು ನಾನು ಊಹಿಸಬಲ್ಲೆ. ನೀನು ಅವೆರಡನ್ನು ಉಳಿಸಿ ಬೆಳೆಸಿಕೊಂಡರೆ ಸಾಕು. ನಿನ್ನ ಸಮಸ್ಯೆಗಳೆಲ್ಲವೂ ಪರಿಹಾರವಾಗುತ್ತವೆ.'

ಮಿ. ಪಿನ್ಕಟ್ ಅವರ ಸಲಹೆಯನ್ನು ಗಾಂಧಿ ತನ್ನ ಓದಿನ ದಿನಗಳಲ್ಲಿ ಯಾವಾಗಲೂ ನೆನಪಿಟ್ಟು ಕೊಂಡು ಹೆಚ್ಚು ಓದಲು ಮತ್ತು ಓದಿದ್ದನ್ನೆಲ್ಲ ನೆನಪಿಟ್ಟುಕೊಳ್ಳಲು ಪ್ರಯತ್ನಿಸಿದ್ದರು. ಆ ಪ್ರಯತ್ನದಲ್ಲಿ ಸಫಲರೂ ಅಗಿದ್ದರು. ಆದರೆ, ಬ್ಯಾರಿಸ್ಟರ್ ಕಲಿಕೆಗಾಗಿ ಅವರು ಓದಿ ನೆನಪಿಟ್ಟು ಕೊಂಡ ವಿಷಯಗಳಾವುವೂ ಭಾರತೀಯ ವೃತ್ತಿಜೀವನದಲ್ಲಿ ಉಪಯೋಗಕ್ಕೆ ಬರುವಂತಿರಲಿಲ್ಲ.

ಯೋಗ್ಯ ನಡತೆ ಮತ್ತು ಸ್ಮರಣ ಶಕ್ತಿಗಳಿಂದ ಸಂಸಾರ ನಡೆಸಲು ಅಗತ್ಯವಿರುವಷ್ಟು ಆದಾಯ ಬರುವುದು ಸಾಧ್ಯವಿದ್ದಿರಲಿಲ್ಲ. ಎಂಟನೇ ಕ್ಲಾಸು ಓದಿರುವ ನ್ಯಾಯಾಲಯದ ಗುಮಾಸ್ತನೂ ಸುಲಭದಲ್ಲಿ ಬರೆಯಬಲ್ಲ ಸಾಮಾನ್ಯ ದಾವೆಯ ಅರ್ಜಿಯನ್ನು ಕೂಡಾ ಬರೆಯಲು ಬಾರದ

ಬ್ಯಾರಿಸ್ಟರ್ ಗಾಂಧಿಗೆ, ತನ್ನ ಹೆಂಡತಿ ಮತ್ತು ನಾಲ್ಕು ವರ್ಷ ವಯಸ್ಸಿನ ಮಗುವಿನ ಜತೆಗೆ ಯಾವುದೇ ಸಂಪಾದನೆಯಿಲ್ಲದೆ ಸಂಸಾರ ನಡೆಸುವುದೇ ಬಲು ದೊಡ್ಡ ಸವಾಲಾಗಿತ್ತು.

ಆದರೆ, ಗಾಂಧಿಯನ್ನು ಬ್ಯಾರಿಸ್ಟರ್ ಓದಿಸಲೆಂದು ಇಂಗ್ಲೆಂಡಿಗೆ ಕಳುಹಿಸಿದ್ದ ಹಿರಿಯಣ್ಣ ಲಕ್ಷ್ಮೀದಾಸರಿಗೆ, ತಮ್ಮನ ವೃತ್ತಿಜೀವನದ ಬಗ್ಗೆ ದೊಡ್ಡ ದೊಡ್ಡ ಆಸೆಗಳಿದ್ದವು. ನೂರಾರು ನಿರೀಕ್ಷೆಗಳಿದ್ದವು. ತಮ್ಮ ಕಿರಿಯ ಸಹೋದರನ ವಕೀಲಿ ವೃತ್ತಿಯ ಮೂಲಕ ಸಿಗಬಹುದಾದ ಹಣ, ಕೀರ್ತಿ ಮತ್ತು ಪದವಿಗಳಿಗಾಗಿ ಅವರು ತುದಿಗಾಲಲ್ಲಿ ನಿಂತಿದ್ದರು. ಹಿರಿಯಣ್ಣನವರಿಗೆ ಅವರ ಉದಾರವಾದ ಗುಣದ ಕಾರಣದಿಂದ ಸ್ನೇಹಿತರ ಸಂಖ್ಯೆಯೂ ಹೆಚ್ಚು. ಆ ಸ್ನೇಹಿತರನ್ನು ಬಳಸಿಕೊಂಡು ತಮ್ಮ ಬ್ಯಾರಿಸ್ಟರ್ ಸಹೋದರನಿಗೆ ಮೊಕದ್ದಮೆಗಳನ್ನು ಒದಗಿಸಲು ಅವರು ಅದಾಗಲೇ ಪ್ರಯತ್ನ ಆರಂಭಿಸಿದ್ದರು.

ತಮ್ಮ ಸಹೋದರನ ವಕೀಲ ವೃತ್ತಿಯ ಬೆಳವಣಿಗೆಗೆ ಅಡ್ಡಿಯಾಗಲಿರುವ, ತಮ್ಮದೇ ಜಾತಿಯೊಳಗಿನ ಶತ್ರುಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅಗತ್ಯವಿದೆಯೆಂದು ಅಣ್ಣನವರಿಗೆ ಹೊಳೆದಿತ್ತು.

ಕಡಲು ದಾಟಿರುವನೆಂಬ ಕಾರಣಕ್ಕೆ ಗಾಂಧಿಯನ್ನು ಜಾತಿಯಿಂದ ಬಹಿಷ್ಕಾರ ಮಾಡಿದ್ದ ಹಿರಿಯರು ಈಗಲೂ ಗುಸು ಗುಸು ಮಾತನಾಡುವುದು ಹಿರಿಯಣ್ಣನವರಿಗೆ ಗೊತ್ತಿತ್ತು. ತಮ್ಮ ಜಾತಿಯ ಹಿರಿಯರ ಮನಸ್ಸನ್ನು ಸಮಾಧಾನಪಡಿಸಲು ಅವರೊಂದು ಉಪಾಯ ಮಾಡಿದರು. ಗಾಂಧಿಯನ್ನು ಮತ್ತೆ ಜಾತಿಗೆ ಸೇರಿಸಿಕೊಳ್ಳುವ ಮೊದಲ ಹಂತವೆಂಬಂತೆ, ಅವರನ್ನು ನಾಸಿಕ್‌ಗೆ ಕರೆದುಕೊಂಡು ಹೋಗಿದ್ದ ಹಿರಿಯಣ್ಣ, ಅಲ್ಲಿ ನದಿಯಲ್ಲಿ ಪವಿತ್ರ ಸ್ನಾನವನ್ನೂ ಮಾಡಿಸಿದ್ದರು. ಮಾತ್ರವಲ್ಲ, ರಾಜಕೋಟೆಗೆ ಕರೆದುಕೊಂಡು ಹೋಗಿ ತಮ್ಮ ಜಾತಿಬಾಂಧವರಿಗೆ ಭರ್ಜರಿ ಊಟ ಹಾಕಿಸಿ ಸ್ನೇಹಿತರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದರು. ಅಣ್ಣನವರಲ್ಲಿ ಪ್ರೀತಿ ಮತ್ತು ಅದಕ್ಕಿಂತಲೂ ಹೆಚ್ಚಿನ ಭಕ್ತಿಯನ್ನು ಇಟ್ಟುಕೊಂಡಿದ್ದ ಗಾಂಧಿ, ತನಗಿಷ್ಟವಿಲ್ಲದಿದ್ದರೂ ಅಣ್ಣನವರ ಎಲ್ಲ ಆಜ್ಞೆಗಳನ್ನೂ ಯಾಂತ್ರಿಕವಾಗಿ ಪಾಲಿಸಿದ್ದರು.

ಅಣ್ಣನವರ ಪ್ರಯತ್ನ ಅಲ್ಲಿಗೇ ಮುಗಿದಿದ್ದಿರಲಿಲ್ಲ. ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಕಲಿತು ಬಂದಿರುವ ವಕೀಲರ ಮನೆಯಲ್ಲಿ ಸ್ವಲ್ಪವಾದರೂ ಇಂಗ್ಲಿಷ್ ವಾತಾವರಣವಿರಬೇಕಲ್ಲವೆ?

ಅದಕ್ಕಾಗಿಯೂ ಏರ್ಪಾಡು ಮಾಡಿದರು. ಹಬ್ಬ ಹರಿದಿನಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಸುವ ಸಲುವಾಗಿ, ಒಳಕೋಣೆಯ ಮರದ ದೊಡ್ಡ ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿದ್ದ ಚೈನಾ ದೇಶದ ಊಟದ ಪಾತ್ರೆಗಳೆಲ್ಲವನ್ನೂ ಹೊರತೆಗೆದ ಅಣ್ಣನವರು, ಅವುಗಳನ್ನು ದಿನನಿತ್ಯದ ಬಳಕೆಗೆ ಉಪಯೋಗಿಸಲು ಮನೆಯವರಿಗೆಲ್ಲ ಸೂಚಿಸಿದ್ದರು. ಗಾಂಧಿಗೆ ಇಷ್ಟದ ಕೋಕೋ ದ ಜತೆಗೆ ಕಾಫಿ, ಟೀ ಕುಡಿತಗಳು ಮನೆಯವರೆಲ್ಲರ ದಿನಚರಿಯಾದವು. ಇವೆಲ್ಲ ಬದಲಾವಣೆಗಳಿಂದಾಗಿ ಮನೆಯ ಖರ್ಚು ಜಾಸ್ತಿಯಾಯಿತೇ ಹೊರತು ಆದಾಯ ತರಬಲ್ಲ ಮೊಕದ್ದಮೆಗಳಾವುವೂ ಹೊಸಿಲು ದಾಟಿ ಒಳಗೆ ಬರಲಿಲ್ಲ.

ದಿನ ಕಳೆದಂತೆ ರಾಜಕೋಟೆಯಲ್ಲಿ ವಕೀಲ ವೃತ್ತಿ ನಡೆಸಿದರೆ ಊಟಕ್ಕೇ ಕಷ್ಟ ಎಂದು ಅರಿತುಕೊಂಡ ಗಾಂಧಿ, ಬೊಂಬಾಯಿಯ ಹೈಕೋರ್ಟಿನಲ್ಲಿ ತನ್ನ ಅದೃಷ್ಟ ಪರೀಕ್ಷೆ ಮಾಡಲು ಬೊಂಬಾಯಿ ಸೇರಿದರು. ಅಲ್ಲಿ ಮನೆ ಮಾಡಿದ ಗಾಂಧಿ, ರವಿಶಂಕರನೆಂಬ ಬ್ರಾಹ್ಮಣನೊಬ್ಬನನ್ನು ಅಡುಗೆಯವನನ್ನಾಗಿ ನೇಮಿಸಿಕೊಂಡರು.

ಆದರೆ, ತನ್ನಂತೆಯೇ ತನ್ನ ಅಡುಗೆಯವನು ಕೂಡಾ ಅವನ ವೃತ್ತಿಯಲ್ಲಿ ಅಪ್ರಯೋಜಕನು ಎಂಬುದನ್ನು ತಿಳಿಯಲು ಗಾಂಧಿಗೆ ಬಹಳ ದಿನಗಳು ಬೇಕಾಗಲಿಲ್ಲ. ಗಾಂಧಿಗೆ ಅದರಿಂದ ಬೇಸರವೂ ಆಗಲಿಲ್ಲ. ಅಡುಗೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳಲು ಅವರಿಗೆ ಯಾವ ಮುಜುಗರವೂ ಇರಲಿಲ್ಲ. ತನ್ನ ಅಡುಗೆ ಕೆಲಸಗಳ ನಡುವಿನ ಬಿಡುವಿನ ವೇಳೆಯಲ್ಲಿ ಗಾಂಧಿ ಭಾರತದ ಕಾನೂನು ಗ್ರಂಥಗಳನ್ನೂ ಅಭ್ಯಾಸ ಮಾಡತೊಡಗಿದ್ದರು. ಆದರೆ 'ಸಾಕ್ಷಿ ನಿಯಮ'(ಎವಿಡೆಂನ್ಸ್ ಏಕ್ಟ್) ಕ್ಕೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ, ಇತರ ಯಾವುದೇ ಭಾರತೀಯ ಕಾನೂನುಗಳನ್ನು ಓದುವುದು 'ಅಡುಗೆ ಕೆಲಸ'ದಷ್ಟು ರುಚಿಸುತ್ತಿರಲಿಲ್ಲ. ಕಕ್ಷಿಗಾರರ ಉಪಟಳವು ಹೆಚ್ಚಾಗಿ ಇರುತ್ತಿರಲಿಲ್ಲವಾದದ್ದರಿಂದ ಸಾಕಷ್ಟು ಸಮಯದ್ದ ಉಳಿತಾಯ ವಾಗುತ್ತಿದ್ದು, ಅಡುಗೆಯ ಕೆಲಸವನ್ನು ತಾನೇ ವಹಿಸಿಕೊಳ್ಳುವುದು ಗಾಂಧಿಗೆ ಕಷ್ಟವಾಗಲಿಲ್ಲ. ಗಾಂಧಿ ಬೇಯಿಸಿದ ಇಂಗ್ಲಿಷ್‌ಶೈಲಿಯ  ಶಾಖಾಹಾರವಾದ ಅಡುಗೆಯನ್ನು, ಸಹಪಂಕ್ತಿಯಲ್ಲಿ ಕುಳಿತು ಉಣ್ಣಲು ಬ್ರಾಹ್ಮಣನಾದ ರವಿಶಂಕರನಿಗೂ ಅಭ್ಯಂತರವಿರಲಿಲ್ಲ. ಹೀಗೆ ನಾಲ್ಕೈದು ತಿಂಗಳ ಕಾಲ ಇಬ್ಬರೂ ಒಂದೇ ಕುಟುಂಬದ ಸದಸ್ಯರಂತೆ ಜತೆಯಲ್ಲಿ ಉಂಡು ಸಂತಸ ದಿಂದಿದ್ದರು.

ನಿದ್ರೆಯೆಂಬುದು ಗಾಂಧಿಗೆ ಬಹಳ ಇಷ್ಟದ ಸಂಗತಿ. ತಾನೇ ಮಾಡಿದ ಅಡುಗೆಯನ್ನು, ಅದು ರೊಟ್ಟಿಯಿರಲಿ, ಬಟಾಟೆಯ ಪಲ್ಯವಿರಲಿ ಅದನ್ನೇ ಮೃಷ್ಟಾನ್ನ ಭೋಜನವೆಂದೇ ಭಾವಿಸಿ ಊಟ ಮಾಡುತ್ತಿದ್ದ ಗಾಂಧಿಗೆ, ಹೊಟ್ಟೆ ತುಂಬಿದ ಕೂಡಲೆ ನಿದ್ರೆ ಆವರಿಸುತ್ತಿತ್ತು. ಬೊಂಬಾಯಿಯ ಹೈಕೋರ್ಟಿನಲ್ಲಿ, ತಮ್ಮದಲ್ಲದ  ಮೊಕದ್ದಮೆಗಳು ನಡೆಯುತ್ತಿರುವಂತೆಯೇ ವಕೀಲರುಗಳು ಕುಳಿತಿರುವ ಕುರ್ಚಿಗಳಲ್ಲೇ ನಿದ್ರಿಸುವುದು ಸಾಮಾನ್ಯ ಸಂಗತಿಯಾಗಿತ್ತು. ತಲೆಯ ಮೇಲೆ ತಿರುಗುವ ಫ್ಯಾನಿನಿಂದ ಹೊರಹೊಮ್ಮುತ್ತಿದ್ದ ಗರಗರ ಸದ್ದು ವಕೀಲರುಗಳ ನಿದ್ರೆಗೆ ಜೋಗುಳ ಹಾಡುತ್ತಲಿರುತ್ತಿತ್ತು. ಗಾಂಧಿಯ ಬೊಂಬಾಯಿ ಮನೆಯಲ್ಲಿ ಫ್ಯಾನು ಇದ್ದಿರಲಿಲ್ಲ. ಹೈಕೋರ್ಟಿ ನಲ್ಲಿ ಫ್ಯಾನು ಸೇವೆ ಉಚಿತವಾಗಿತ್ತು. ಗಾಂಧಿಯ ನಿದ್ರೆಗೆ ಅಲ್ಲಿಗಿಂತ ಒಳ್ಳೆಯ ಜಾಗ ಬೇರೆಲ್ಲಿ ಸಿಕ್ಕೀತೂ?

ಗಾಂಧಿ ನಿದ್ರೆಯ ಬಗ್ಗೆ ತನ್ನದೇ ಆದ ಪ್ರಯೋಗಗಳನ್ನು ಮಾಡಲಾರಂಭಿಸಿದ್ದರು. ನ್ಯಾಯಾಲಯದ ಕುರ್ಚಿಯಲ್ಲಿ ಕುಳಿತಿದ್ದಂತೆಯೇ, ನ್ಯಾಯಾಧೀಶರ ಮೂಗಿಗೆದುರಾಗಿ ಗೋಡೆಯಲ್ಲಿ ನೇತಾಡುತಿದ್ದ ಗೋಡೆ ಗಡಿಯಾರದಲ್ಲಿ ಸಮಯವನ್ನು ನೋಡಿಕೊಳ್ಳುತ್ತ, ಹತ್ತು ನಿಮಿಷದ ನಿದ್ರೆ, ಹದಿನೈದು ನಿಮಿಷದ ನಿದ್ರೆ ಮತ್ತು ಇಪ್ಪತ್ತು ನಿಮಿಷದ ನಿದ್ರೆ– ಹೀಗೆ ಮೂರು

ವಿಭಾಗಗಳಲ್ಲಿ ತನ್ನ ನಿದ್ರೆಯನ್ನು ಹಂಚಿಕೊಂಡು, ನಿರ್ಧರಿಸಿದ ಸಮಯಕ್ಕೆ ಸರಿಯಾಗಿ ನಿದ್ರೆಯಿಂದ ಎಚ್ಚರಗೊಳ್ಳುವ ಅಭ್ಯಾಸ ಮಾಡಿಕೊಂಡರು. ತನ್ನ ನಿದ್ರಾಸಮಯದ ಮೇಲೆ ತನಗಿರುವ ನಿಯಂತ್ರಣದ ಬಗ್ಗೆ ಗಾಂಧಿಗೆ ಹೆಮ್ಮೆಯುಂಟಾಗುತ್ತಿತ್ತು.

ಗಾಂಧಿ ಮನಸ್ಸು ಮಾಡಿದ್ದರೆ ದಲ್ಲಾಳಿಗಳ ಮೂಲಕ ದೊಡ್ಡ ದೊಡ್ಡ ಮೊಕದ್ದಮೆಗಳನ್ನು ಪಡೆದು ತಿಂಗಳಿಗೆ ಐದಾರು ಸಾವಿರ ರೂಪಾಯಿಗಳನ್ನು ಸುಲಭವಾಗಿ ಸಂಪಾದಿಸಬಹುದಾಗಿತ್ತು. ಅವರ ಜತೆಗೆ ಅದೇ ನ್ಯಾಯಾಲಯದಲ್ಲಿ ವ್ಯವಹರಿಸುತ್ತಿದ್ದ ಇತರ ವಕೀಲರುಗಳು ದಲ್ಲಾಳಿಗಳ ಮೂಲಕ ಮೊಕದ್ದಮೆಗಳನ್ನು ಪಡೆಯುವುದನ್ನು ತಪ್ಪೆಂದು ಭಾವಿಸುತ್ತಿರಲಿಲ್ಲ. ಕೇವಲ ಅರ್ಜಿ ಬರೆದು ಕೊಡುವುದರಲ್ಲೇ ಜೀವನ ನಿರ್ವಹಣೆಗೆ ಅಗತ್ಯವಾದ ಬಿಡಿಗಾಸು ಸಂಪಾದಿಸುತ್ತಿದ್ದ ಗಾಂಧಿ, ಕೆಲವು ಗೆಳೆಯರು ಈ ಬಗ್ಗೆ ನೀಡಿದ್ದ ಸಲಹೆಗಳನ್ನು ಖಂಡತುಂಡವಾಗಿ ನಿರಾಕರಿಸಿದ್ದರು. ತನಗೆ ತಿಂಗಳಿಗೆ ಮುನ್ನೂರು ರೂಪಾಯಿ ಸಂಪಾದನೆಯಾದರೂ ಪರವಾಗಿಲ್ಲ, ಮೊಕದ್ದಮೆ ತರಲೆಂದು ದಲ್ಲಾಳಿಗಳಿಗೆ ಒಂದು ಕಾಸು ಕೂಡಾ ಕೊಡಲಾರೆ ಎಂಬ ಹಟ ಅವರದ್ದು.

ಈ ನಡುವೆ ದಲ್ಲಾಳಿಗೆ ಕಾಸು ಕೊಡದೆಯೂ ಮೂವತ್ತು ರೂಪಾಯಿ ಶುಲ್ಕ ತರುವ ಮೊಕದ್ದಮೆಯೊಂದು ಅದು ಹೇಗೋ ಗಾಂಧಿಗೆ ಸಿಕ್ಕಿಯೇಬಿಟ್ಟಿತು. ಮಾಮಿಬಾಯಿ ಎಂಬವರು ತಂದಿದ್ದ ಸಣ್ಣ ಮಟ್ಟದ ದುಡ್ಡಿನ ಮೊಕದ್ದಮೆಯು ಬ್ಯಾರಿಸ್ಟರ್ ಮೋಹನದಾಸ ಕರಮಚಂದ್ ಗಾಂಧಿಯ ವಕೀಲಿ ವೃತ್ತಿಯ ಮೊದಲ ಮೊಕದ್ದಮೆಯೂ ಆಗಿತ್ತು.

ಮೊಕದ್ದಮೆಯನ್ನು ಮತ್ತು ಅದರ ಶುಲ್ಕವಾಗಿದ್ದ ಮೂವತ್ತು ರೂಪಾಯಿಗಳನ್ನು ಅನುಮಾನದಿಂದಲೇ ಸ್ವೀಕರಿಸಿ ಮೊದಲ ಬಾರಿಗೆ 'ಸಣ್ಣ ನ್ಯಾಯಾಲಯ'ದ ಕೊಠಡಿಗೆ ಅಳುಕುತ್ತಾ ಹೆಜ್ಜೆಯಿಟ್ಟಿದ್ದ ಗಾಂಧಿಗೆ, ಎದುರುವಾದಿಯಾಗಿದ್ದ ಪೊದೆಮೀಸೆಯ ಯುವಕ, ಎದೆಯುಬ್ಬಿಸುತ್ತಾ ನಡೆದು ಬಂದು, ಕಟಕಟೆಯಲ್ಲಿ ನಿಂತು 'ಪಾಟೀಸವಾಲಿಗೆ ಸಿದ್ಧ, ಏನು ಕೇಳುತ್ತೀಯೋ, ಬೇಗ ಕೇಳು' ಎಂಬಂತೆ ಗಾಂಧಿಯ ಕಣ್ಣೊಳಗೆ ಕಣ್ಣಿಟ್ಟು ನೇರವಾಗಿ ದಿಟ್ಟಿಸಿದ್ದನು.

ಅವನ ನೇರ ನೋಟವನ್ನು ಕಾಣುತ್ತಿದ್ದಂತೆಯೇ ಗಾಂಧಿಗೆ ಮೈಯೆಲ್ಲ ನಡುಕ ಶುರುವಾಗಿತ್ತು. ಪಾಟೀ ಸವಾಲು ಮಾಡಲೆಂದು ಉರುಹೊಡೆದುಕೊಂಡು ಬಂದಿದ್ದ ಯಾವ ಪ್ರಶ್ನೆಗಳೂ ನೆನಪಿಗೆ ಬರಲಿಲ್ಲ. ಇಡೀ ನ್ಯಾಯಾಲಯ, ನ್ಯಾಯಾಲಯದಲ್ಲಿದ್ದ ನ್ಯಾಯಾಧೀಶರು, ನ್ಯಾಯವಾದಿಗಳು, ಕಕ್ಷಿದಾರರು, ಅವರ ಜತೆ ಬಂದಿದ್ದ ಅವರ ಸಂಬಂಧಿಕರು ಎಲ್ಲರೂ ತನ್ನ ಸುತ್ತ ಗರಗರನೆ ತಿರುಗುತ್ತಿರುವಂತೆ ಅನ್ನಿಸಿತು. ತಾನು ಯಾರು, ತಾನು ಈಗ ಮಾಡ ಬೇಕಾಗಿರುವುದೇನು ಎಂಬುದೆಲ್ಲವೂ ಗಾಂಧಿಗೆ ಮರೆತುಹೋದಂತಾಗಿತ್ತು. ಕಣ್ಣು ಕತ್ತಲೆ ಬಂದಂತಾಗಿ ನಿಂತಲ್ಲಿಯೇ ಕುಸಿದ ಗಾಂಧಿ, ಬಲು ಪ್ರಯಾಸದಿಂದ ಕುರ್ಚಿಯಲ್ಲಿ ಕುಳಿತು ಬಿಟ್ಟರು. ಗಾಂಧಿಯ ಪುಕ್ಕಲುತನ ಕಂಡ ಎಲ್ಲರೂ ನಕ್ಕಿದ್ದಿರಬಹುದು.

ಗಾಂಧಿ ಅದಾವುದನ್ನೂ ಗಮನಿಸುವ ಸ್ಥಿತಿಯಲ್ಲಿದ್ದಿರಲಿಲ್ಲ. 'ನನ್ನಿಂದ ಸಾಧ್ಯವಿಲ್ಲ. ನಾನು ಪಡೆದಿರುವ ಶುಲ್ಕವನ್ನು ನನ್ನ ಕಕ್ಷಿದಾರರಿಗೆ ಮರಳಿಸುತ್ತೇನೆ' ಎಂದಷ್ಟೇ ಹೇಳಿದ ಗಾಂಧಿ ನ್ಯಾಯಾಲಯದಿಂದ ಹೊರಗೆ ನಡೆದುಬಿಟ್ಟರು. ಅನಂತರ ಗಾಂಧಿ ಬಹುದಿನಗಳ ಕಾಲ ನ್ಯಾಯಾಲಯದ ದಿಕ್ಕಿನತ್ತ ತಲೆಯಿಟ್ಟು ಮಲಗಿದಾಗಲೂ ಬೆಚ್ಚಿ ಬೀಳುತ್ತಿದ್ದರು.

ಈ ನಡುವೆಯೂ ಅಡುಗೆ ಮತ್ತು ಸರಳ ಆಹಾರದ ಬಗೆಗಿನ ಗಾಂಧಿಯ ಪ್ರಯೋಗಗಳು ನಡೆದೇ ಇತ್ತು. ಒಂದು ದಿನ ಅಂಗಡಿಯಿಂದ ತಂದಿದ್ದ ಕೋಕೋವನ್ನು ಭರಣಿಗೆ ಸುರಿಯುತ್ತಿರುವಾಗ, ಗಾಂಧಿಯ ದೃಷ್ಟಿ ಕೋಕೋವನ್ನು ಕಟ್ಟಿ ತಂದಿದ್ದ ಕಾಗದದ ಮೇಲೆ ಬಿತ್ತು. ಸ್ಥಳೀಯವಾಗಿ ಬಹಳ ಪ್ರಸಿದ್ಧವಾಗಿದ್ದ ಶಾಲೆಯ ಜಾಹೀರಾತೊಂದು ಆ ಕಾಗದದಲ್ಲಿ ಅಚ್ಚಾಗಿತ್ತು. ಆ ಶಾಲೆಗೆ ತಿಂಗಳಿಗೆ ಎಪ್ಪತ್ತೈದು ರೂಪಾಯಿ ಸಂಬಳ ಪಡೆದು, ದಿನಕ್ಕೊಂದು ಗಂಟೆ ಇಂಗ್ಲಿಷ್ ಪಾಠ ಹೇಳಬಲ್ಲ ಮಾಸ್ತರನೊಬ್ಬನ ಅಗತ್ಯವಿತ್ತು.

ಗಾಂಧಿ ಅದಾಗಲೇ ಅರ್ಜಿ ಬರೆಯುವ ಕಲೆ ಕಲಿತುಕೊಂಡಿದ್ದರು. ಇಂಗ್ಲಿಷ್ ಭಾಷೆಯನ್ನು ಅದರ ತವರೂರಾದ ಇಂಗ್ಲೆಂಡಿನಲ್ಲಿಯೇ ಕಲಿತಿದ್ದುದರಿಂದ ತನಗೆ ಇಂಗ್ಲಿಷ್ ಪಾಠ ಹೇಳುವ ಅರ್ಹತೆಯು, ಭಾರತದಲ್ಲಿ ಆ ಭಾಷೆಯನ್ನು ಕಲಿತವರಿಗಿಂತ ಹೆಚ್ಚು ಇದೆ ಎಂಬುದು ಅವರ ನಂಬಿಕೆಯಾಗಿತ್ತು. ಕೆಲಸದ ಅರ್ಜಿಯನ್ನು ಬರೆದು ಶಾಲೆಯ ವಿಳಾಸಕ್ಕೆ ಕಳುಹಿಸಿಯೇ ಬಿಟ್ಟರು.

ಗಾಂಧಿಯ ಅರ್ಜಿಯಲ್ಲಿದ್ದ ಇಂಗ್ಲಿಷ್ ಭಾಷೆಯನ್ನು ಮೆಚ್ಚಿಕೊಂಡ ಶಾಲೆಯವರು ಅವರನ್ನು ಸಂದರ್ಶನಕ್ಕೂ ಕರೆದರು. ಆದರೆ ಸಂದರ್ಶನದ ಸಮಯದಲ್ಲಿ ಗಾಂಧಿಯ ಇಂಗ್ಲಿಷ್ ಭಾಷಾಶಕ್ತಿಗೆ ಅವರಿಗೆ ಕೆಲಸ ಗಳಿಸಿ ಕೊಡುವ ಶಕ್ತಿ ಇದ್ದಿರಲಿಲ್ಲ.

ಸಂದರ್ಶನ ನಡೆಸಿದವರು ಖಡಾಖಂಡಿತವಾಗಿ ಹೇಳಿಬಿಟ್ಟಿದ್ದರು,

'ಮಿ. ಗಾಂಧಿ, ನಿಮಗಿರುವ ಇಂಗ್ಲಿಷ್ ಭಾಷೆಯ ಪ್ರಭುತ್ವವನ್ನು ನಾವು ಮೆಚ್ಚಿಕೊಂಡಿದ್ದೇವೆ. ಆದರೆ, ಅದೊಂದರಿಂದಲೇ ನಾವು ನಿಮ್ಮನ್ನು ಆಯ್ಕೆ ಮಾಡಲು ಸಾಧ್ಯವಾಗುವುದಿಲ್ಲ. ಯಾಕೆಂದರೆ, ನಿಮ್ಮ ಬಳಿ ಪದವಿ ಪರೀಕ್ಷೆ ಪಾಸಾದ ಬಗ್ಗೆ ಅಧಿಕೃತ ದಾಖಲೆಗಳಿಲ್ಲ. ಪದವೀಧರರಲ್ಲದವರು ನಮ್ಮ ಶಾಲೆಯಲ್ಲಿ ಪಾಠ ಹೇಳುವುದು ನಮಗೆ ಒಪ್ಪಿಗೆಯಿಲ್ಲ. ನಮ್ಮ ಶಾಲೆಯ ಶಿಕ್ಷಕರುಗಳು ಪದವೀಧರರಲ್ಲವೆಂಬುದು ಹೊರಗೆ ಗೊತ್ತಾದರೆ ಇಲ್ಲಿಗೆ ಬಂದು ಸೇರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಬಹುದು. ಆದ್ದರಿಂದ ನಮ್ಮನ್ನು ಕ್ಷಮಿಸಿ.'

ಗಾಂಧಿ ಭಾರತದ ಪದವಿ ಪರೀಕ್ಷೆ ಪಾಸಾಗಿದ್ದಿರಲಿಲ್ಲ. ಅವರು ಲಂಡನ್ ಮೆಟ್ರಿಕ್ಯುಲೇಶನ್ ಪಾಸಾಗಿರುವುದು ಕೂಡಾ ಅವರಿಗೆ ಸಹಾಯ ಮಾಡಲಿಲ್ಲ. ಗಾಂಧಿಗೆ ಬಹಳ ಬೇಸರವಾಯಿತು.

ಅವರ ಅಣ್ಣನವರಿಗೂ ಬಹಳ ನಿರಾಸೆಯಾಗಿತ್ತು. ಅವರು ತಮ್ಮನ ಬಗ್ಗೆ ಕಟ್ಟಿಕೊಂಡಿದ್ದ ಆಶಾಗೋಪುರದ ಕಂಭಗಳು, ಒಂದೊಂದಾಗಿ ಕುಸಿದು ಬೀಳುತ್ತಿರುವುದನ್ನು, ಕಳೆದ ಐದಾರು ತಿಂಗಳುಗಳಿಂದ ಅವರು ಅಸಹಾಯಕರಾಗಿ ನೋಡುತ್ತಿದ್ದರು.

ಮೋನು ಸಣ್ಣವನಿದ್ದಾಗ ಬಹಳ ಹೆದರುಪುಕ್ಕ ಎಂಬುದು ಅವರಿಗೆ ಗೊತ್ತಿರದ ಸ್ಥಗತಿಯೇನೂ ಅಲ್ಲ. ಕತ್ತಲಾಗುತ್ತಿದ್ದಂತೆ ಮೋನು ಒಳಕೋಣೆ ಸೇರಿಕೊಳ್ಳುತ್ತಿದ್ದುದನ್ನು ಮನೆಯವರೆಲ್ಲ ಗೇಲಿ ಮಾಡುತ್ತಿದ್ದರು. ರಾತ್ರಿಯ ಹೊತ್ತು ಮೂತ್ರ ಮಾಡಲು ಹೊರಗೆ ಹೋಗಬೇಕಾದರೆ ಕೂಡಾ ಅವನಿಗೊಬ್ಬ ಜತೆಗಾರನನ್ನು ಕಳುಹಿಸಿ ಕೊಡಬೇಕಾಗಿತ್ತು. ದೊಡ್ಡವನಾದ ಬಳಿಕ ಸರಿ ಹೋದಾನು ಎಂದು ಸಮಾಧಾನ ಪಟ್ಟುಕೊಂಡದ್ದು ಕೂಡಾ ವ್ಯರ್ಥವಾಗಿತ್ತು. ಮೋಹನ ದಾಸನಿಗೆ ಮದುವೆ ಮಾಡಿಸಿದ ಬಳಿಕ, ಅವನಿಗೆ ಕಸ್ತೂರಿ ಅಂತಹ ಜತೆ ನೀಡುತಿದ್ದುದನ್ನೂ ಕಂಡು ಬೇಸರಪಟ್ಟುಕೊಂಡಿದ್ದರು. ಬೊಂಬಾಯಿಯಲ್ಲಿ ಗಾಂಧಿಯ ವಕೀಲಿ ವೃತ್ತಿ ಅಭಿವೃದ್ಧಿ ಹೊಂದುವ ಬಗ್ಗೆ ಅವರಿಗೆ ಯಾವ ಭರವಸೆಯೂ ಉಳಿದಿದ್ದಿರಲಿಲ್ಲ. ಸಣ್ಣ ಊರಲ್ಲಿ ಸಣ್ಣಮಟ್ಟ ದಲ್ಲಿ ವಕೀಲಿ ವೃತ್ತಿಯನ್ನು ಮುಂದುವರಿಸಿದರಾಯಿತು, ಎಂದೆಲ್ಲ ಯೋಚಿಸಿದ ಅವರು, ಗಾಂಧಿಯನ್ನು ರಾಜಕೋಟೆಗೆ ವಾಪಸು ಕರೆಸಿಕೊಂಡರು. ಗಾಂಧೀಜಿಯ ಬೊಂಬಾಯಿ ವಾಸ ಆರು ತಿಂಗಳಲ್ಲೇ ಮೊಟಕಾಯಿತು.

ಅಣ್ಣನ ನಿರ್ಧಾರ ಹುಸಿಯಾಗಲಿಲ್ಲ. ರಾಜಕೋಟೆಯಲ್ಲಿ ಕಚೇರಿ ತೆರೆದ ಗಾಂಧಿ, ಚೆನ್ನಾಗಿಯೇ ಸಂಪಾದನೆ ಮಾಡಲಾರಂಭಿಸಿದ್ದರು. ಆದರೆ ಅವರಿಗೆ ಸಂಪಾದನೆಯಾಗುತ್ತಿದ್ದದ್ದು ಮೊಕದ್ದಮೆ ಗಳನ್ನು ಪಡೆದು, ನ್ಯಾಯಾಲಯದಲ್ಲಿ ವಾದಿಸಿ ಗೆಲ್ಲುತ್ತಿದ್ದುದರಿಂದ ಅಲ್ಲ. ಕಕ್ಷಿದಾರರಿಗೆ ಅರ್ಜಿ ಬರೆದು ಕೊಡುವುದರಿಂದಲೇ ತಿಂಗಳಿಗೆ ಮುನ್ನೂರು ರೂಪಾಯಿ ಬರುತ್ತಿರುವಾಗ ನ್ಯಾಯಾಲಯಕ್ಕೆ ಹೋಗಿ ಎಲ್ಲರೆದುರು ಬೆವರಿಳಿಸಿಕೊಳ್ಳುವ ಅಗತ್ಯವಾದರೂ ಯಾಕಿರುತ್ತದೆ? ಗಾಂಧಿ ಸುಖವಾಗಿದ್ದರು.

ಅದರೆ ಮುನ್ನೂರು ರೂಪಾಯಿಗಳ ಸುಖ ಬಹಳ ದಿನ ಉಳಿಯಲಿಲ್ಲ

ಪೋರ್‌ಬಂದರಿನಲ್ಲಿ ಬ್ರಿಟಿಷರ ಪ್ರತಿನಿಧಿಯಾಗಿದ್ದ ಅಧಿಕಾರಿಯೊಬ್ಬರು, ಯಾರದೋ ಚಾಡಿ ಮಾತನ್ನು ಕೇಳಿ, ಗಾಂಧೀಜಿಯ ಅಣ್ಣ ಲಕ್ಷ್ಮೀದಾಸನವರ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಹೊಂದಿದ್ದರು. ಈ ಅಧಿಕಾರಿಯ ಪರಿಚಯವು ಗಾಂಧೀಜಿಗೆ ಇಂಗ್ಲೆಂಡಿನಲ್ಲಿ ಓದುತ್ತಿರುವ ದಿನಗಳಲ್ಲೇ ಇದ್ದಿತ್ತು. ರಜಾದಿನಗಳಲ್ಲಿ ಇಂಗ್ಲೆಂಡಿಗೆ ಬಂದಾಗಲೆಲ್ಲ ಗಾಂಧೀಜಿಯನ್ನು ಕಂಡು ಮಾತನಾಡಿಸಿಕೊಂಡು ಹೋಗುತ್ತಿದ್ದ ಅಧಿಕಾರಿ ಅವರು. ಈ ಅಧಿಕಾರಿಯ ಪರಿಚಯ ತನ್ನ ತಮ್ಮನಿಗೆ ಇದೆಯೆಂಬುದು ಅಣ್ಣನವರಿಗೂ ಗೊತ್ತಾದಾಗ, ಅಧಿಕಾರಿಗೆ ತಮ್ಮ ಬಗ್ಗೆ ಇದ್ದ ತಪ್ಪು ಅಭಿಪ್ರಾಯವನ್ನು ತಮ್ಮನ ಮೂಲಕ ಹೋಗಲಾಡಿಸುವ ಆಸೆ ಹುಟ್ಟಿತು.

ಗಾಂಧಿಗೆ ತನ್ನ ವೈಯಕ್ತಿಕ ಸ್ನೇಹವನ್ನು ಆಡಳಿತದ ವ್ಯವಹಾರಗಳಿಗೆ ಬಳಸಿಕೊಳ್ಳುವುದು ಇಷ್ಟದ ಸಂಗತಿಯೇನೂ ಆಗಿದ್ದಿರಲಿಲ್ಲ. ಆದರೆ ಹಿರಿಯಣ್ಣನ ವಿನಂತಿಗೆ ಇಲ್ಲವೆನ್ನಲಾಗಲಿಲ್ಲ. ಒಂದು ದಿನ ಆ ಅಧಿಕಾರಿಯನ್ನು ಕಾಣಲೆಂದು ಹೋಗಿ ಅವರ ಕಛೇರಿಯ ಬಾಗಿಲು ಬಡಿದಿದ್ದರು. ಆ ಬ್ರಿಟಿಷ್ ಅಧಿಕಾರಿಗೆ ಗಾಂಧಿಯ ಗುರುತು ಸಿಕ್ಕಿತ್ತು. ಆದರೆ ಗಾಂಧಿ ತನ್ನ ಬಳಿಗೆ ಬಂದಿರುವ ಕಾರಣ ತಿಳಿದಕೂಡಲೇ ಅಪರಿಚಿತನಂತೆ ವರ್ತಿಸಿದ್ದರು. ತಾನು ಇಷ್ಟಪಡದ ಲಕ್ಷ್ಮೀದಾಸನ

ಪರವಾಗಿ ವಶೀಲಿ ನಡೆಸಲು ಬಂದ ಗಾಂಧಿಯನ್ನು ಹೀನಾಯ ಮಾತುಗಳಿಂದ ಅವಮಾನಿಸಿದ್ದರು. ಬ್ರಿಟಿಷ್ ಅಧಿಕಾರಿಯು ಅದೆಷ್ಟೇ ಅವಮಾನದ ಮಾತುಗಳನ್ನಾಡಿದರೂ ತಾಳ್ಮೆ ಕಳೆದುಕೊಳ್ಳದ ಗಾಂಧಿ, ವಿನಯದಿಂದಲೇ ತನ್ನ ಅಣ್ಣನ ಪರವಾಗಿ ಕೆಲವು ಮಾತುಗಳನ್ನು ನಿವೇದಿಸಲು ಯತ್ನಿಸಿದ್ದರು. ಆದರೆ ಗಾಂಧಿಯ ಸೌಜನ್ಯಕ್ಕೂ ಬೆಲೆಕೊಡದೆ ಆ ಅಧಿಕಾರಿಯು ತನ್ನ ಜವಾನನ ಸಹಾಯದಿಂದ ಗಾಂಧಿಯನ್ನು ತನ್ನ ಕೋಣೆಯಿಂದ ಹೊರಗೆ ದಬ್ಬಿಸಿಬಿಟ್ಟಿದ್ದರು.

ಗಾಂಧಿಗೆ ಇಂಗ್ಲಿಷ್ ಅಧಿಕಾರಿಯ ಅನಿರೀಕ್ಷಿತ ವರ್ತನೆಯಿಂದ ಆಘಾತವಾಗಿತ್ತು. ಯಾವುದೇ ಬಲವಾದ ಕಾರಣವಿಲ್ಲದೆ ಪರಿಚಿತ ಮನುಷ್ಯನೊಬ್ಬ, ತನ್ನ ಪರಿಚಿತ ವ್ಯಕ್ತಿಯೊಬ್ಬನ ವಿರುದ್ಧ ಇಷ್ಟೊಂದು ಕಠಿಣವಾಗಿ ವರ್ತಿಸಬಲ್ಲನೆಂಬುದನ್ನು ಊಹಿಸುವುದೂ ಕಷ್ಟವಾಗುತ್ತಿತ್ತು. ತಾನೇನೂ ಜಗಳ ಮಾಡಲೆಂದು ಅವರ ಕಛೇರಿಗೆ ಹೋದವನಲ್ಲ. ಪರಿಚಯದ ವ್ಯಕ್ತಿ ಎಂಬ ಸಲಿಗೆಯಿಂದ, ತನ್ನ ಅಣ್ಣನವರ ಪರವಾಗಿ ಒಂದೆರಡು ಮಾತುಗಳನ್ನು ಹೇಳಿ, ಅಣ್ಣನವರ ಬಗ್ಗೆ ಆ ಇಂಗ್ಲಿಷ್ ಅಧಿಕಾರಿಗೆ ಇದ್ದ ತಪ್ಪು ಕಲ್ಪನೆಯನ್ನು ಹೋಗಲಾಡಿಸುವುದಷ್ಟೇ ಉದ್ದೇಶವಾಗಿದ್ದದ್ದು.

ಸರಕಾರಿ ಅಧಿಕಾರಿಯೊಬ್ಬನ ಜತೆಗಿನ ಪರಿಚಯವನ್ನು ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಳ್ಳಬಾರದು ಎಂಬುದೇ ಆತನ ನೀತಿಯಾಗಿದ್ದರೆ ಗಾಂಧಿಗೆ ಆಕ್ಷೇಪವಿದ್ದಿರಲಿಲ್ಲ. ಆತ ಅಪರಿಚಿತನೇನೂ ಅಲ್ಲ; ಅದನ್ನು ನೇರವಾಗಿ ತಿಳಿಸಿ ಹೇಳಬಹುದಾಗಿತ್ತು. ಅಷ್ಟೊಂದು ವಿನಯದಿಂದ ನಿವೇದಿಸಿಕೊಳ್ಳುತ್ತಿದ್ದ ತನ್ನನ್ನು, ಜವಾನನ ಮೂಲಕ ಹೊರಗೆ ದಬ್ಬುವ ಅಗತ್ಯವಿದ್ದಿರಲಿಲ್ಲ.

ಆ ಕ್ಷಣಗಳಲ್ಲಿ ಬ್ರಿಟಿಷ್ ಅಧಿಕಾರಿಯ ಕೆಂಪು ಕಣ್ಣುಗಳಲ್ಲಿ ಗಾಂಧಿಗೆ ಕಾಣಿಸುತ್ತಿದ್ದದ್ದು ಭಾರತೀಯರ ಬಗ್ಗೆ ಬ್ರಿಟಿಷರಿಗೆ ಇದ್ದ ತಿರಸ್ಕಾರ ಮಾತ್ರ. ಗಾಂಧಿಗೆ ತನ್ನ ದೇಶದಲ್ಲಿ ಬ್ರಿಟಿಷನೊಬ್ಬನಿಂದ ಆಗಿದ್ದ ಪ್ರಪ್ರಥಮ ಅವಮಾನ ಇದು. ಆ ಅಧಿಕಾರಿಯ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿಯೇ ತೀರಬೇಕೆಂದು ಗಾಂಧಿ ಹಟ ಹಿಡಿದಿದ್ದರು. ತಮ್ಮನನ್ನು ಸಮಾಧಾನ ಪಡಿಸುವ ಸಲುವಾಗಿ ಅಣ್ಣನವರು ಬೇರೆ ಕೆಲವು ಹಿರಿಯ ವಕೀಲರುಗಳನ್ನು ಸಂಪರ್ಕಿಸಿದ್ದರೂ ಎಲ್ಲರ ಸಲಹೆಯೂ ಒಂದೇ ಬಗೆಯದ್ದಾಗಿತ್ತು. ಬ್ರಿಟಿಷ್ ಅಧಿಕಾರಿಯ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಿ ಗೆಲ್ಲುವುದು ಕನಸಿನ ಗಂಟು ಎಂಬುದಾಗಿ ಫ಼ಿರೋಜ್ ಷಾ ಮೆಹತಾರಂತಹ ಹಿರಿಯ ವಕೀಲರು ಕೂಡಾ ಸಲಹೆ ನೀಡಿದ್ದರು. ಗಾಂಧೀಜಿಗೆ ಈ ಘಟನೆಯಿಂದ ಬಹಳ ಬೇಸರವಾಗಿತ್ತು. ಎಲ್ಲಾದರೂ ದೂರ ಓಡಿ ಹೋಗಬೇಕೆನ್ನಿಸಿತ್ತು.

ಅನ್ನಿಸಿದಂತೆಯೇ, ಊರು ಬಿಟ್ಟು ದೂರ ಹೋಗುವ ಅವಕಾಶವೊಂದು ಮನೆಬಾಗಿಲಿಗೆ ಹುಡುಕಿಕೊಂಡು ಬಂದಿತ್ತು. ಆ ದಿನಗಳಲ್ಲಿ ಪೋರ್ಬಂದರಿನ ಪ್ರತಿಷ್ಠಿತ 'ಮೆಮನ್' ಎಂಬ

ಸಂಸ್ಥೆಯಿಂದ ಗಾಂಧೀಜಿಯ ಅಣ್ಣನವರಿಗೆ ಒಂದು ಪತ್ರ ಬಂದಿತ್ತು. ದಕ್ಷಿಣ ಆಫ್ರಿಕಾದಲ್ಲೂ ವ್ಯವಹಾರವಿರುವ ಆ ಸಂಸ್ಥೆಗೆ, ಆ ಸಂಸ್ಥೆಯ ಪರವಾಗಿ ಕೆಲಸ ಮಾಡುತ್ತಿರುವ ಹಿರಿಯ ವಕೀಲರುಗಳಿಗೆ ಸಹಾಯ ಮಾಡಲು ಯುವಕರಾದ ವಕೀಲರುಗಳು ಬೇಕಾಗಿದ್ದರು. ಬ್ಯಾರಿಸ್ಟರ್ ಗಾಂಧಿಯನ್ನು ಕಳುಹಿಸಿಕೊಟ್ಟರೆ ಅವರಿಗೆ ಎಲ್ಲ ಖರ್ಚು ಕಳೆದು ೧೦೫ ಪೌಂಡ್ ಸಂಭಾವನೆ ಕೊಡುತ್ತೇವೆ ಎಂದು ಬರೆಯಲಾಗಿತ್ತು.

ಇಪ್ಪತ್ತನಾಲ್ಕು ವರ್ಷದ ಯುವಕನಿಗೆ ನೋವು ಕೊಟ್ಟ ತನ್ನೂರು ಬಿಡುವ ಹಟ; ಹೊಸ ಊರು ನೋಡುವ ಆಸೆ. ಗಾಂಧಿ ಮರುಮಾತಿಲ್ಲದೆ ಒಪ್ಪಿಗೆ ಸೂಚಿಸಿದರು; ದಕ್ಷಿಣ ಆಫ್ರಿಕಾ ಪ್ರಯಾಣದ ತಯಾರಿ ನಡೆಸಿದರು.

## ತಲೆಗೊಂದು ಮುಂಡಾಸು

ಬಿಳಿಯರ ಆಳ್ವಿಕೆಯಲ್ಲಿದ್ದ ಕಪ್ಪು ಜನರ ದೇಶವಾದ ದಕ್ಷಿಣ ಆಫ್ರಿಕಾಕ್ಕೆ ಹೊರಟು ನಿಂತ ಬ್ಯಾರಿಸ್ಟರ್ ಗಾಂಧಿಗೆ, ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಬಿಟ್ಟು ಹೋಗುವುದು ಅಷ್ಟೇನೂ ಸಂತಸದ ಸಂಗತಿಯಾಗಿದ್ದಿರಲಿಲ್ಲ.

ತಾನು ಊರಲ್ಲಿಯೇ ವಕೀಲಿ ವೃತ್ತಿಯನ್ನು ಮುಂದುವರಿಸುವುದಾದರೆ, ಅದೇ ಅಧಿಕಾರಿಯ ಜತೆ ಬೇರೆ ಬೇರೆ ಕಾರಣಗಳಿಗಾಗಿ ವ್ಯಾವಹಾರಿಕ ಸಂಬಂಧವನ್ನು ಉಳಿಸಿಕೊಳ್ಳಲೇಬೇಕಾಗಿತ್ತು. ಅಷ್ಟೊಂದು ಅವಮಾನ ಮಾಡಿದ ದುಷ್ಟ ಅಧಿಕಾರಿಯ ಜತೆಗೆ ವ್ಯವಹಾರ ಮುಂದುವರಿಸಿ ಮತ್ತಷ್ಟು ಅವಮಾನಿತನಾಗುವುದರಿಂದ ತಪ್ಪಿಸಿಕೊಳ್ಳಲು ಗಾಂಧಿಗೆ ಹೊಸ ದಾರಿಯೊಂದರ ಅಗತ್ಯವಿತ್ತು. ಗಾಂಧಿಯ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಕಸ್ತೂರಿಬಾಯಿ, ಗಂಡನನ್ನು ಬೀಳ್ಕೊಡುವಾಗ ತನ್ನ ನೋವನ್ನೆಲ್ಲ ನುಂಗಿಕೊಂಡಿದ್ದರು. ಬ್ಯಾರಿಸ್ಟರ್ ಓದಲೆಂದು ಗಾಂಧಿ ಇಂಗ್ಲೆಂಡಿಗೆ ಹೋಗಿದ್ದಾಗ ಮೂರುವರ್ಷಗಳಷ್ಟು ಕಾಲವನ್ನು ಒಬ್ಬನೇ ಮಗನ ಜತೆ ಕಳೆದ ಕಸ್ತೂರಿಬಾಯಿಗೆ, ಈಗ ಕಾಲ ಕಳೆಯಲು ಎರಡು ಮಕ್ಕಳಿದ್ದವು.

ಬ್ಯಾರಿಸ್ಟರ್ ಗಾಂಧಿಗೆ ಹಡಗು ಪ್ರಯಾಣವು ಹೊಸತಲ್ಲ. ಆದರೆ ಹಲವು ದಿನಗಳ ಹಡಗು ಪ್ರಯಾಣದ ನಡುವೆ ನಡೆದು ಹೋದ ಹಲವಾರು ಘಟನೆಗಳು ಗಾಂಧಿಯ ಅನುಭವವನ್ನು ಹೆಚ್ಚು ಮಾಡಿದ್ದವು. ದಕ್ಷಿಣ ಆಫ್ರಿಕಾದ ನೆಟಾಲ್ ಪಟ್ಟಣದ ಡರ್ಬನ್ ಬಂದರಿನಲ್ಲಿ ಹಡಗಿನಿಂದ ನೆಲಕ್ಕಿಳಿದ ಗಾಂಧಿಗೆ ಕಾಣಿಸಲಾರಂಭಿಸಿದ ನೋಟಗಳೂ ಹೊಸದಾಗಿದ್ದವು, ಮಾತ್ರವಲ್ಲ ಅವರಿಗೆ ಹೊಸ ನೋಟವನ್ನೂ ನೀಡಿದ್ದವು.

ಗಾಂಧಿಯನ್ನು ಸ್ವಾಗತಿಸಲು ಸ್ವತಃ ಅಬ್ದುಲ್ಲಾ ಸೇಠರೇ ಬಂದಿದ್ದರು. ಅಬ್ದುಲ್ಲಾ ಸೇಠರಿಗೆ

ಗಾಂಧೀಜಿಯ ಇಂಗ್ಲೆಂಡಿನ ಇಂಗ್ಲಿಷ್ ಅರ್ಥವಾಗುತ್ತಿರಲಿಲ್ಲ. ಸೇಠರು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದಾರೆಂಬುದು ಗಾಂಧಿಗೆ ತಿಳಿಯುತ್ತಿರಲಿಲ್ಲ. ಮೋಟು ಅಂಗಿ ಮತ್ತು ಬಂಗಾಳೀ ಮಾದರಿಯ ಮುಂಡಾಸನ್ನು ತಲೆಗೆ ಸುತ್ತಿಕೊಂಡಿದ್ದ ಗಾಂಧಿ, ಅಲ್ಲಿದ್ದವರಿಗೆಲ್ಲ ಯಾವುದೋ ಹಗಲುವೇಷದವನಂತೆ ಕಾಣಿಸಿದ್ದಿರಬೇಕು. ಮೃಗಾಲಯದಿಂದ ತಪ್ಪಿಸಿಕೊಂಡು ಬಂದ ಪ್ರಾಣಿಯನ್ನು ನೋಡುವಂತೆ ಎಲ್ಲರೂ ಗಾಂಧಿಯತ್ತ ಕಣ್ಣು ನೆಟ್ಟಿದ್ದರು.

ತನಗೆ ಬಹಳ ಜನರು ಗೊತ್ತು ಎಂಬುದನ್ನು ಗಾಂಧಿಯ ಗಮನಕ್ಕೆ ತರಲೆಂಬಂತೆ ಅಬ್ದುಲ್ಲಾ ಸೇಠರು, ಅತ್ತಿತ್ತ ನಡೆದಾಡುತ್ತಿದ್ದ ಕೆಂಪು ಮೋರೆಯ ಸೂಟುಧಾರಿಗಳತ್ತ ಪರಿಚಯದ ನೋಟ ಬೀರಿ 'ಗುಡ್ಮಾರ್ನಿಂಗ್' ಎನ್ನುತ್ತಿದ್ದರು. ಆದರೆ, ಸೇಠರ ವಂದನೆಯನ್ನು ಅವರೆಲ್ಲರೂ ತಮ್ಮ ಹಕ್ಕು ಎಂಬಂತೆ ಗಂಭೀರವಾಗಿ ಸ್ವೀಕರಿಸಿ ಮುಂದುವರಿಯುತ್ತಿದ್ದರು. ಸೇಠರು ಮಾತ್ರ ಅದ್ಯಾವುದನ್ನೂ ಗಮನಿಸದವರಂತೆ, ಬಿಳಿಯರ ಸೊಕ್ಕು ತೀರಾ ಸಾಮಾನ್ಯ ಸಂಗತಿಯೆಂಬಂತೆ ವರ್ತಿಸುತ್ತಿದ್ದರು.

ಕೇವಲ ವಂದನೆ ಸ್ವೀಕರಿಸುವ ಆತ್ಮೀಯ ಸಂದರ್ಭದಲ್ಲಿ ಕೂಡಾ ಬಿಳಿಯರ ಕೆಂಪು ಮೋರೆಗಳಲ್ಲಿ ಚಿಗುರುತ್ತಿದ್ದ ಕೆಟ್ಟ ಕಜ್ಜಿಯಂತಹ ಅಹಂಕಾರವನ್ನು ಗುರುತಿಸಿಬಿಟ್ಟಿದ್ದ ಗಾಂಧಿಗೆ, ತನ್ನನ್ನು ಈ ಹಿಂದೆ ಅವಮಾನಿಸಿ ಕಛೇರಿಯಿಂದ ಹೊರಗೆ ದಬ್ಬಿಸಿದ್ದ ಇಂಗ್ಲಿಷ್ ಅಧಿಕಾರಿಯ ನೆನಪಾಯಿತು.

ಈ ಬಿಳಿಯರ ಈ ಸೊಕ್ಕನ್ನು ಮುರಿಯುವ ಶಕ್ತಿ ತನಗೆ ಇರುತ್ತಿದ್ದರೇ? ತನಗೆ ಮಾಂಸ ತಿನ್ನಲು ಒತ್ತಾಯಿಸಿದ್ದ ಮೆಹತಾಬನಂತೆ ತನಗೆ ಧೈರ್ಯವಿದ್ದಿದ್ದರೇ? ಎಂಬ ಆಸೆಗಳು ಹುಟ್ಟಿ ಮೈಯೆಲ್ಲ ರೋಮಾಂಚನದಿಂದ ನಡುಗಿತು. ಜತೆಯಲ್ಲಿ, ತನ್ನ ಯೋಚನೆಯನ್ನು ತನ್ನ ಸುತ್ತಲೂ ಇರುವ ಬಿಳಿಯರೇನಾದರೂ ತಿಳಿದುಬಿಟ್ಟಾರೆಂಬ ಭಯವೂ ಆಯಿತು. ಮೆಹತಾಬ ಇಲ್ಲೇ ಬಿಳಿಯರ ನಡುವೆ ಅಡಗಿ ಕುಳಿತು ತನ್ನನ್ನು ಅಣಕಿಸುತ್ತಿರುವಂತೆ ಭಾಸವಾಯಿತು.

ಎರಡು ದಿನಗಳ ವಿಶ್ರಾಂತಿಯ ಬಳಿಕ ಬ್ಯಾರಿಸ್ಟರ್, ಬಾರ್ ಎಟ್ ಲಾ, ಮೋಹನದಾಸ ಕರಮಚಂದ್ ಗಾಂಧಿ, ಡರ್ಬನ್ ನ್ಯಾಯಾಲಯಕ್ಕೆ ಹೊರಡಲು ತಯಾರಿ ನಡೆಸಿದರು. ಅಪ್ಪನಿಂದ ಕಲಿತ ಕರ್ತವ್ಯನಿಷ್ಠೆ, ಅಮ್ಮನಿಂದ ಬಳುವಳಿಯಾಗಿ ಬಂದಿದ್ದ ಸತ್ಯ ಮತ್ತು ಅಹಿಂಸೆಯ ಪಾಠ ಗಾಂಧಿಯ ನರನಾಡಿಗಳಲ್ಲಿ ಸದ್ದಿಲ್ಲದೆ ಹರಿಯುತ್ತಿದ್ದವು. ಆದರೆ, ಬೆನ್ನು ಬಿಡದ ಬೇತಾಳನಂತೆ ಬಾಲ್ಯದಿಂದಲೇ ಹಿಂಬಾಲಿಸಿಕೊಂಡು ಬಂದಿದ್ದ ಅಂಜುಬುರುಕತನ ಮತ್ತು ನಾಲ್ಕು ಮಂದಿಯ ಎದುರು ನಿಂತು ಮಾತನಾಡುವಾಗ ಹಿಂಸಿಸುತಿದ್ದ ಕೀಳರಿಮೆಯ ಸ್ವಭಾವವು ಗಾಂಧಿಯ ಆತ್ಮವಿಶ್ವಾಸವನ್ನು ನುಂಗಿ ಹಾಕಿದ್ದವು.

ಮೋಟು ಅಂಗಿ ತೊಟ್ಟು, ತಲೆಗೆ ಮುಂಡಾಸು ಸುತ್ತಿಕೊಳ್ಳುತ್ತಿರುವಾಗ ಜೀವದ ಗೆಳೆಯ ಮೆಹತಾಬ ನೆನಪಾದ. ನಿಲುವುಗನ್ನಡಿಯಲ್ಲಿ ಕಾಣಿಸುತ್ತಿರುವ ತನ್ನ ಪ್ರತಿಬಿಂಬವನ್ನು

ಮೆಹತಾಬನ ಬಿಂಬವೆಂದು ಚಿತ್ರಿಸಿಕೊಂಡ ಗಾಂಧಿ, 'ನೋಡು ಮೆಹತಾಬ್, ನಾನು ನಿನ್ನಂತೆ ಶಕ್ತಿವಂತನಾಗಬೇಕೆಂದು ಮಾಂಸ ತಿನ್ನಲು ಸಾಧ್ಯವಿಲ್ಲ. ನಾನು ನನ್ನ ಅಮ್ಮನಿಗೆ ನೀಡಿದ್ದ ವಚನದಿಂದ ಹಿಂದೆ ಸರಿಯಲಾರೆ. ದಯವಿಟ್ಟು ನನ್ನ ಬಗ್ಗೆ ಕೋಪಗೊಳ್ಳಬೇಡ. ನಿನ್ನಲ್ಲಿ ನಿನಗಿರಬೇಕಾಗಿರುವುದಕ್ಕಿಂತಲೂ ಹೆಚ್ಚು ಶಕ್ತಿ ಇದೆ. ಧೈರ್ಯವಿದೆ. ನಾನು ನಿನ್ನ ಒಳ್ಳೆಯ ಗೆಳೆಯನಲ್ಲವೇ? ಅಂದಮೇಲೆ, ನೀನು ನನಗಿಂದು ನಿನ್ನ ಶಕ್ತಿಯಲ್ಲಿ ಒಂದು ಪಾಲು ಕೊಡಲೇ ಬೇಕು. ನನ್ನ ಮುಂಡಾಸು ನನ್ನ ತಲೆಯ ಮೇಲೆ ಯಾವಾಗಲೂ ನಿಲ್ಲಬೇಕಾದರೆ ನನಗೆ ನಿನ್ನ ಧೈರ್ಯ ಬೇಕು. ಇಲ್ಲವೆನ್ನುವುದಿಲ್ಲ ತಾನೇ?'

ಅಬ್ದುಲ್ಲಾ ಸೇಠರ ಜತೆಗೆ ನ್ಯಾಯಾಲಯದ ಆವರಣದಲ್ಲಿ ಹೆಜ್ಜೆ ಬದಲಿಸುತ್ತಿರುವಾಗ ಮೆಹತಾಬನ ಜತೆಗೆ ರಾಜಕೋಟೆಯ ಗುಡ್ಡದ ನೆತ್ತಿಯ ಮೇಲೆ ನಡೆಯುತ್ತಿರುವಂತೆ ಭಾಸವಾಯಿತು. ಮುಂಡಾಸು ಧರಿಸಿದ ತಲೆಯನ್ನೆತ್ತಿ ಎದೆಯುಬ್ಬಿಸಿ ಹೆಜ್ಜೆ ಹಾಕಿದರು ಗಾಂಧಿ. ಭಾರತ ದೇಶದಿಂದ ತರಿಸಿದ್ದ ಪುಟ್ಟ ಬ್ಯಾರಿಸ್ಟರನ್ನು ತಮ್ಮ ಗುರುತಿನ ಹಲವಾರು ಗಣ್ಯರಿಗೆ ಪರಿಚಯಿಸಿದ ಅಬ್ದುಲ್ಲಾರವರು, ಗಾಂಧಿಯನ್ನು ನ್ಯಾಯಾಲಯದೊಳಗೆ ತಮ್ಮ ವಕೀಲರ ಪಕ್ಕದಲ್ಲೇ ಕುಳ್ಳಿರಿಸಿದರು.

ನ್ಯಾಯಾಧೀಶರ ಪ್ರವೇಶವಾಗುತ್ತಿದ್ದಂತೆ ಎಲ್ಲರೂ ಎದ್ದು ನಿಂತರು. ನ್ಯಾಯಾಧೀಶರು ದೊಡ್ಡವರು, ಅವರು ನ್ಯಾಯಪಾಲಕರು. ಅಂತಹವರು ಯಾವಾಗಲೂ ವಂದನೆಗೆ ಯೋಗ್ಯರು.

ಎತ್ತರದ ಪೀಠದಲ್ಲಿ ಕುಳಿತ ವಂದನಾರ್ಹ ನ್ಯಾಯಾಧೀಶರು ಸುತ್ತಲೂ ಕಣ್ಣು ಹಾಯಿಸಿ ನೋಡಿದರು. ಅವರ ದೃಷ್ಟಿ ಗಾಂಧಿಯ ಮುಂಡಾಸಿನ ಮೇಲೆ ಬೀಳುತ್ತಿದ್ದಂತೆ ಅವರ ಮುಖದ ಬಣ್ಣ ಬದಲಾಯಿತು. ಹೇಲು ತುಳಿದವರಂತೆ ಮುಖ ಸಿಂಡರಿಸಿಕೊಂಡರು. ಗಾಂಧಿಯತ್ತ ನೆಟ್ಟಿದ್ದ ಅವರ ಕಣ್ಣನೋಟದಲ್ಲಿ; ಯಾರು ನೀನೂ? ನಿನ್ನನ್ನು ಕರೆದುಕೊಂಡು ಬಂದವರು ಯಾರೂ? ಮುಂಡಾಸು ಕಟ್ಟಿಕೊಂಡು ಬಂದ ನಿನ್ನನ್ನು ಒಳಗೆ ಬಿಟ್ಟವರು ಯಾರೂ?, ನಿನಗೆ ಕುಳಿತುಕೊಳ್ಳಲು ಅನುಮತಿ ಕೊಟ್ಟವರು ಯಾರೂ? ನಿನಗೆ ಇಲ್ಲಿಯ ರೀತಿ ನೀತಿ ರಿವಾಜು ಒಂದೂ ಗೊತ್ತಿಲ್ಲವೇ? ಎಂಬಿತ್ಯಾದಿ ತಾತ್ಸಾರದ ನೂರುಪ್ರಶ್ನೆಗಳಿದ್ದವು.

ನ್ಯಾಯಾಧೀಶರ ಕೋಪದ ಕಣ್ಣನೋಟದಿಂದ ಅಬ್ದುಲ್ಲಾ ಸೇಠರಿಗೆ ಗಲಿಬಿಲಿಯಾಯಿತು. ಗಾಂಧಿಯಿಂದ ನ್ಯಾಯಾಲಯದ ಸಂಪ್ರದಾಯಕ್ಕೆ ಏನಾದರೂ ಕುಂದು ಉಂಟಾಯಿತೇನೋ ಎಂದು ಕಸಿವಿಸಿಗೊಂಡರು. ಬ್ಯಾರಿಸ್ಟರ್ ಪದವಿ ಪಡೆದಿರುವ ವಕೀಲನೊಬ್ಬ ಮೊದಲ ಸಾಲಿನ ಕುರ್ಚಿಯಲ್ಲಿ ಬೇರೆ ವಕೀಲರ ಜತೆಗೆ ಕುಳಿತುಕೊಳ್ಳುವುದು ಅಪರಾಧವೇನೂ ಅಲ್ಲ. ನ್ಯಾಯಾಧೀಶರ ಅಸಹನೆಗೆ ಬೇರೇನು ಕಾರಣವಿರಬಹುದೂ? ತಮ್ಮ ಕೇಸಿನ ಮೊದಲ ದಿನವೇ ಅನಾಹುತವಾಗುವುದು ಅವರಿಗೆ ಬೇಡದ ಸಂಗತಿಯಾಗಿತ್ತು. ನ್ಯಾಯಾಧೀಶರನ್ನೇ ಎದುರು ಹಾಕಿಕೊಂಡರೆ ಕೇಸು ಗೆಲ್ಲುವುದು ಸಾಧ್ಯವೆ?

ಬಹಳ ಹೊತ್ತು ಗಾಂಧಿಯ ಮುಂಡಾಸನ್ನೇ ಎವೆಯಿಕ್ಕದೆ ನೋಡಿದ ನ್ಯಾಯಾಧೀಶರು, ತಮ್ಮ ಬಲಗೈಯ ತೋರು ಬೆರಳನ್ನು ತಮ್ಮ ತಲೆಯ ಮೇಲೆ ಗಿರಗಿರನೆ ತಿರುಗಿಸುತ್ತಾ ಮುಂಡಾಸನ್ನು ತೆಗೆದು ಮೇಜಿನ ಮೇಲೆ ಇರಿಸುವಂತೆ ಸನ್ನೆ ಮಾಡಿದರು. ಗಾಂಧಿಗೆ ನ್ಯಾಯಾಧೀಶರ ತಾತ್ಸಾರದ ಸೂಚನೆ ಅರ್ಥವಾಗಿತ್ತು. ಆದರೆ ಅವರ ಸೂಚನೆ ತನಗಲ್ಲ ಎಂಬಂತೆ ಗಾಂಧಿ ಸುಮ್ಮನೆ ಕುಳಿತಿದ್ದರು.

ತನ್ನ ಸೂಚನೆ ಅರ್ಥವಾಗಿದ್ದರೂ ಅರ್ಥವಾಗದವನಂತೆ ಮುಂಡಾಸಿನ ಯುವಕನು ನಟಿಸುತ್ತಿದ್ದಾನೆ ಎಂಬುದನ್ನು ತಿಳಿಯದಷ್ಟು ಮೂರ್ಖರಲ್ಲ ನ್ಯಾಯಾಧೀಶರು. ಆದರೆ ಅದನ್ನು ತೋರ್ಪಡಿಸದೆ, ' ಮಾನ್ಯ ಯುವಕರು ತಮ್ಮ ತಲೆಗೆ ಕಟ್ಟಿದ ಉರುಟು ಬಟ್ಟೆಯನ್ನು ತೆಗೆದು ಮೇಜಿನ ಮೇಲೆ ಇರಿಸಿಕೊಳ್ಳಬೇಕು ಎಂಬುದು ನಮ್ಮ ಅಪೇಕ್ಷೆಯಾಗಿದೆ.' ಎಂಬುದನ್ನು ವ್ಯಂಗ್ಯವಾಗಿಯೇ ಹೇಳಿದ್ದರು.

ನ್ಯಾಯಾಧೀಶರ ಮಾತು ಮುಗಿಯುವ ಮೊದಲೇ ಗಾಂಧೀಜಿಯೊಳಗೆ ಮೆಹತಾಬ ಪರಕಾಯ ಪ್ರವೇಶ ಮಾಡಿಬಿಟ್ಟಿದ್ದ.

ಎದ್ದು ನಿಂತು ವಂದಿಸಿದ ಗಾಂಧೀಜಿ ' ಮಹಾ ಮಹಿಮರಲ್ಲಿ ನನ್ನದೊಂದು ಪ್ರಾರ್ಥನೆಯಿದೆ. ಹಿಂದೂಸ್ಥಾನದ ಹಿಂದೂ ಜಾತಿಯಲ್ಲಿ ಹುಟ್ಟಿರುವ ನಾನು, ನನ್ನ ಜಾತಿಯ ಸಂಪ್ರದಾಯದಂತೆ ತಲೆಗೆ ಮುಂಡಾಸು ಧರಿಸಿಕೊಳ್ಳುವ ಅಧಿಕಾರವನ್ನು ಹುಟ್ಟಿನಿಂದಲೇ ಪಡೆದುಕೊಂಡಿರುತ್ತೇನೆ. ತಮ್ಮ ಘನತೆವೆತ್ತ ನ್ಯಾಯಾಲಯದಲ್ಲಿ, ತಲೆಗೆ ವಸ್ತ್ರದ ಉಡುಪು ಧರಿಸುವುದು ಅಪರಾಧವಾಗಿರಲು ಸಾಧ್ಯವಿಲ್ಲ. ಯಾಕೆಂದರೆ, ಇಲ್ಲಿ ಸೇರಿರುವವರಲ್ಲಿ ಕೆಲವು ಮಹನೀಯರು ಬ್ರಿಟಿಷ್ ಸಂಪ್ರದಾಯದಂತೆ ತಲೆಗೆ ಹ್ಯಾಟು ಧರಿಸಿರುವುದನ್ನು ಮತ್ತು ಮುಸಲ್ಮಾನ ಸಂಪ್ರದಾಯದಂತೆ ಉಡುಪು ತೊಟ್ಟ ಕೆಲವು ಮಹನೀಯರು ನನ್ನಂತೆಯೇ ತಲೆಗೆ ಮುಂಡಾಸನ್ನೂ ಸುತ್ತಿಕೊಂಡಿರುವುದನ್ನು ನಾನು ಕಾಣುತ್ತಿರುವೆ. ದಯವಿಟ್ಟು ನ್ಯಾಯಾಲಯದ ಕಣ್ಣುಗಳೂ ನಾನು ಕಾಣುತ್ತಿರುವುದನ್ನು ಕಾಣಬೇಕು.' ಎಂದು ನಿವೇದಿಸಿಕೊಂಡು ಕುಳಿತುಬಿಟ್ಟರು.

ಗಾಂಧಿಯ ನಿವೇದನೆಯಲ್ಲಿ ಅಡಕವಾಗಿದ್ದ ನ್ಯಾಯದ ಪ್ರತಿಪಾದನೆಯಿಂದ ನ್ಯಾಯಾಧೀಶರಿಗೆ ಮಾತು ಕಟ್ಟಿ ಹೋದಂತಾಗಿತ್ತು. ನ್ಯಾಯಾಲಯದಲ್ಲಿ ಸೇರಿದ್ದ ಎಲ್ಲರೂ ಮುಂದೇನಾಗುವುದೋ ಎಂಬ ಕುತೂಹಲದಲ್ಲಿ ಉಸಿರು ಬಿಗಿ ಹಿಡಿದು ಮುಂಡಾಸು ಪ್ರಕರಣಕ್ಕೆ ಸಾಕ್ಷಿಯಾಗಲು ಸಿದ್ಧರಾಗಿ, ಬಣ್ಣ ಕಳೆದುಕೊಳ್ಳುತ್ತಿರುವ ನ್ಯಾಯಾಧೀಶರ ಮುಖವನ್ನು ದಿಟ್ಟಿಸಿ ನೋಡುತ್ತಿದ್ದರು.

'ಇದು ನನ್ನ ಆದೇಶ.' ಬೇರೇನೂ ಹೇಳಲು ತೋಚದ ನ್ಯಾಯಾಧೀಶರು ಗುಡುಗಿದ್ದರು.

'ಘನವೆತ್ತ ನ್ಯಾಯಾಧೀಶರು ದಯವಿಟ್ಟು ಮನ್ನಿಸಬೇಕು. ತಮ್ಮ ಈ ಆದೇಶವನ್ನು ತಮ್ಮ ವೈಯಕ್ತಿಕ ಬಯಕೆಯೆಂದು ಕಡೆಗಣಿಸಲೇ? ಅಥವಾ ಘನವೆತ್ತ ನ್ಯಾಯಾಲಯದ ಆದೇಶವೆಂದು ಪರಿಗಣಿಸಲೇ?'

ನ್ಯಾಯಾಧೀಶರು ಇಕ್ಕಟ್ಟಿಗೆ ಸಿಲುಕಿದ್ದರು. ತಲೆಗೆ ರುಮಾಲು ಅಥವಾ ಹ್ಯಾಟು ಧರಿಸುವ ಅಥವಾ ಧರಿಸದಿರುವ ಬಗ್ಗೆ ಸ್ಥಳೀಯ ಕಾನೂನುಗಳಲ್ಲಿ ಯಾವುದೇ ಅಧಿಕೃತ ನಿರ್ದೇಶನಗಳಿಲ್ಲ ಎಂಬುದು ತಮಗೆ ಮಾತ್ರವಲ್ಲ, ಅಲ್ಲಿ ನೆರೆದಿದ್ದ ಎಲ್ಲ ವಕೀಲರುಗಳಿಗೂ ಗೊತ್ತಿರುವ ಗುಟ್ಟು ಎಂಬುದು ಅವರಿಗೂ ಗೊತ್ತಿತ್ತು. ಆದರೆ ಅವರು ನ್ಯಾಯಾಧೀಶರಾಗಿ ನೇಮಕವಾಗುವುದಕ್ಕಿಂತಲೂ ಬಲು ಹಿಂದಿನಿಂದಲೇ ಭಾರತಿಯ ಹಿಂದೂಗಳಿಗೆ ನ್ಯಾಯಾಲಯದೊಳಗೆ ರುಮಾಲನ್ನು ಧರಿಸುವ ಅವಕಾಶವನ್ನು ನಿರಾಕರಿಸಲಾಗುತ್ತಿತ್ತು. ಆದರೆ ಮುಸಲ್ಮಾನರ ರುಮಾಲು ಧರಿಸಲು ಅಥವಾ ಇಂಗ್ಲಿಷರಂತೆ ಹ್ಯಾಟು ಧರಿಸಲು ಯಾರಿಗೂ ಯಾವ ಅಡ್ಡಿಯೂ ಇರಲಿಲ್ಲ. ಅದು ನಡೆದು ಬಂದ ಸಂಪ್ರದಾಯ. ಅದಕ್ಕೆ ಕಾನೂನಿನ ಮೊಹರು ಇಲ್ಲ. ಆದರೆ ಅದನ್ನೆಲ್ಲಾ ನ್ಯಾಯಾಧೀಶರ ಆಸನದಲ್ಲಿ ಕುಳಿತು ವಿವೇಚಿಸಲು ಸಾಧ್ಯವಾಗುವುದಿಲ್ಲ.

'ನ್ಯಾಯಪೀಠದಲ್ಲಿ ಕುಳಿತವರ ಆದೇಶವನ್ನು ಧಿಕ್ಕರಿಸುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧವಾಗುತ್ತದೆಯೆಂಬುದನ್ನು ತಾವು ಓದಿದ್ದಿರಬಹುದು ಎಂದು ನಾವು ಭಾವಿಸುತ್ತೇವೆ.' ನ್ಯಾಯಾಧೀಶರು ಹತಾಶರಾದಂತೆ ಘೋಷಿಸಿದ್ದರು.

ಗಾಂಧಿಗೆ ಬಾಲ್ಯದಲ್ಲಿ ತಂದೆಯವರು ಹೇಳಿದ್ದ ಮಾತುಗಳು ನೆನಪಾದವು. ಅವರು ಹಲವು ಬಾರಿ ಹೇಳಿದ್ದರು. 'ಹೋರಾಟದಲ್ಲಿ ಒಂದು ಹೆಜ್ಜೆ ಹಿಂದಿಡುವುದು ಸೋಲಿನ ಲಕ್ಷಣವೆಂದು ಭಾವಿಸಬೇಕಾಗಿಲ್ಲ. ಅದು ಮುಂದಕ್ಕೆ ಎರಡು ಹೆಜ್ಜೆ ಇಡಲು ಬೇಕಾದ ತಂತ್ರದ ಸಿದ್ಧತೆಯೆಂದೇ ತಿಳಿಯಬೇಕು'.

ಗಾಂಧಿಗೆ ತಾನು ಗೆಲುವಿನ ಮೊದಲ ಮೆಟ್ಟಲು ಏರಿದ್ದೆನೆಂಬುದು ಸಂತಸ ತಂದಿತು. ತನಗಿಷ್ಟು ಧೈರ್ಯ ತುಂಬಿದ ಮೆಹತಾಬನಿಗೆ ಮನದಲ್ಲೇ ವಂದಿಸಿ, ಕುಳಿತಲ್ಲಿಂದ ಎದ್ದು, ನ್ಯಾಯಾಲಯಕ್ಕೆ ಸಂಪ್ರದಾಯದಂತೆ ವಂದಿಸಿ, ಮುಂಡಾಸು ಸುತ್ತಿದ ತಲೆಯೆತ್ತಿ, ಎದೆಯುಬ್ಬಿಸಿ ನ್ಯಾಯಾಲಯದ ಕೊಠಡಿಯಿಂದ ಹೊರನಡೆದರು. ಕೊಠಡಿಯ ಮೆಟ್ಟಲಿಳಿಯುತ್ತಿದ್ದಾಗ ಗಾಂಧಿಯ ಕಿವಿಯಲ್ಲಿ ಮೆಹತಾಬ್ ಪಿಸುಗುಟ್ಟಿದ್ದ, 'ಮೋಹನಾ, ಈವತ್ತು ನೀನು ಒಂದು ಮೆಟ್ಟಲು ಮೇಲಕ್ಕೆ ಏರಿರುವಿ. ನಾಳೆ ಇನ್ನೊಂದು ಮೆಟ್ಟಲು ಏರು. ನಿನ್ನ ಜತೆಗೆ ನಾನಿದ್ದೇನೆ.'

ಮೂಕ ಪ್ರೇಕ್ಷಕರಂತೆ ಎಲ್ಲವನ್ನೂ ಗಮನಿಸುತ್ತಾ ಆತಂಕಪಡುತ್ತಿದ್ದ ಅಬ್ದುಲ್ಲಾ ಸೇಠರಿಗೆ ಗರ ಬಡಿದಂತಾಗಿತ್ತು. ಹಗ್ಗವೊಂದನ್ನು ಬಲವಾಗಿ ಜಗ್ಗಿದ್ದ ಗಾಂಧಿ, ಇನ್ನೇನು ಹಗ್ಗ ತುಂಡಾಗಲಿದೆ ಎನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆ ಅದನ್ನು ಎಳೆದವನತ್ತಲೇ ಬಿಟ್ಟುಕೊಟ್ಟು ಅವನು ಮುಗ್ಗರಿಸಿ ಬೀಳುವಂತೆ ಮಾಡಿದ ತಂತ್ರವನ್ನು ಕಂಡ ಸೇಠರಿಗೆ ಖಾತ್ರಿಯಾಗಿತ್ತು; 'ಕಡ್ಡಿ ಪೈಲ್ವಾನನಂತಿರುವ ಈ ಹುಡುಗ ಎಲ್ಲರಂತಲ್ಲ, ಎಂತಹ ಪೈಲ್ವಾನನನ್ನೂ ಚಿತ್ತು ಮಾಡಬಲ್ಲ ಉಸ್ತಾದ'.

# ಕೂಲಿ ಬ್ಯಾರಿಸ್ಟರ್–೧

ಸೇಠರ ನಂಬಿಕೆ ಸುಳ್ಳಾಗಲಿಲ್ಲ. ಗಾಂಧಿ ನ್ಯಾಯಾಲಯದ ಆವರಣದಿಂದ ಹೊರಬಂದವರೇ, ತಮಗಾದ ಅನ್ಯಾಯವನ್ನು ಪತ್ರಿಕೆಗಳಿಗೆ ಬರೆದು ತಿಳಿಸಿದರು. ಗಾಂಧಿಯ ಮುಂಡಾಸು ಪ್ರಕರಣವು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾದವು. ಮುಂಡಾಸಿನ ಪರ ಮತ್ತು ವಿರೋಧವಾದ ಹಲವಾರು ಲೇಖನಗಳು ಕೆಲವು ದಿನಪತ್ರಿಕೆಗಳಲ್ಲಿ ಪ್ರಕಟವಾದವು. ಮುಂಡಾಸು ಧರಿಸುವು ದರಿಂದ ನ್ಯಾಯಪಾಲನೆಗೆ ಯಾವುದೇ ಬಗೆಯಲ್ಲಿ ಕುಂದು ಬರುವುದಿಲ್ಲವೆಂಬ ಗಾಂಧಿಯ ವಾದವನ್ನು ಹಲವು ಪತ್ರಿಕೆಗಳು ಸಮರ್ಥಿಸಿದರೆ, ಹಲವು ಪತ್ರಿಕೆಗಳು ಗಾಂಧಿಯನ್ನು ಭಾರತದಿಂದ ಬಂದಿರುವ ಬೇಡದ ಅತಿಥಿ ಎಂದು ಗೇಲಿ ಮಾಡಿದವು. ಈ ಪರ–ವಿರೋಧದ ಪತ್ರಿಕಾ ಸಮರದಲ್ಲಿ ಗಾಂಧಿಗೆ ದಕ್ಷಿಣ ಆಫ್ರಿಕಾದಲ್ಲಿ ಅನಿರೀಕ್ಷಿತವಾದ ಮತ್ತು ಅಪಾರವಾದ ಪ್ರಚಾರ ದೊರಕಿಬಿಟ್ಟಿತು. ಅಬ್ದುಲ್ಲಾ ಸೇಠರಿಗಂತೂ, ಹಿಂದೂಸ್ಥಾನದ ಅಮೂಲ್ಯ ವಜ್ರವೊಂದು ತಮ್ಮ ಖಜಾನೆಗೆ ಅನಾಯಾಸವಾಗಿ ಬಂದು ಸೇರಿದೆ ಎಂದೆನಿಸಿತ್ತು.

ಅದೇ ದಿನಗಳಲ್ಲಿ, 'ಮೊಕದ್ದಮೆ ಆರಂಭವಾಗಲಿದೆ, ನೀವು ಬನ್ನಿ ಅಥವಾ ನಿಮ್ಮ ನಂಬಿಗಸ್ಥರಾದ ಯಾರನ್ನಾದರೂ ಪ್ರತಿನಿಧಿಯನ್ನಾಗಿ ಕಳುಹಿಸಿ' ಎಂದು ಸೇಠರಿಗೆ, ಪ್ರಿಟೋರಿಯದಿಂದ ವಕೀಲರು ಪತ್ರ ಬರೆದಿದ್ದರು. ಪತ್ರ ಬಂದಾಗ ಸೇಠರು ಎರಡನೆಯ ಯೋಚನೆ ಮಾಡಲಿಲ್ಲ. ಗಾಂಧಿಗಿಂತ ಹೆಚ್ಚು ನಂಬಿಗಸ್ಥ ಯಾರಾದರೂ ಭೂಮಿಯ ಮೇಲೆ ಹುಟ್ಟಿದ್ದಿದ್ದರೆ ಅದು ಮೊಹಮ್ಮದ್ ಪೈಗಂಬರರು ಮಾತ್ರ ಎಂಬುದನ್ನು ಅವರು ಕಳೆದ ಏಳೆಂಟು ದಿನಗಳಲ್ಲಿಯೇ ಕಂಡುಕೊಂಡಿದ್ದರು. ಗಾಂಧಿ ಕೇವಲ ನಂಬಿಗಸ್ಥ ಮಾತ್ರವಲ್ಲ, ವ್ಯವಹಾರ ಚತುರರೂ ಆಗಿದ್ದಾರೆ ಎಂಬುದನ್ನು ಗಾಂಧಿಯ ಮುಂಡಾಸು ಪ್ರಕರಣವು ಇಡಿಯ ಜಗತ್ತಿಗೇ ಸಾರಿ ಹೇಳಿತ್ತು.

ಮರುದಿನವೆ ಗಾಂಧಿಗೆ ಡರ್ಬನಿನಿಂದ ಪ್ರಿಟೋರಿಯಕ್ಕೆ ಪ್ರಯಾಣಿಸಲು ರೈಲಿನ ಪ್ರಥಮ ದರ್ಜೆಯ ಟಿಕೇಟು ಸಿದ್ಧವಾಗಿ ಬಂದಿತು. ಸೇಠರು ಎಷ್ಟೇ ಒತ್ತಾಯಿಸಿದರೂ ಮಲಗುವ ಹಾಸಿಗೆಗಾಗಿ ಐದು ಶಿಲ್ಲಿಂಗ್ ಹೆಚ್ಚು ವೆಚ್ಚಮಾಡುವುದನ್ನು ಗಾಂಧಿ ವಿರೋಧಿಸಿದ್ದರು. ಹಲವಾರು ವರ್ಷಗಳಿಂದ ಆಫ್ರಿಕಾದಲ್ಲಿ ಬಿಳಿಯರಿಂದ ನೋವು ಸಂಕಟ ಅನುಭವಿಸಿದ್ದ ಅಬ್ದುಲ್ಲಾ ಸೇಠರು, ಈ ಹುಡುಗ ಇಲ್ಲಿ ಕಲಿಯುವುದು ತುಂಬಾ ಇದೆ, ಕಲಿತುಕೊಳ್ಳಲಿ ಎಂದು ನಕ್ಕು ಸುಮ್ಮನಾಗಿದ್ದರು.

ಬ್ಯಾರಿಸ್ಟರ್ ಮೋಹನದಾಸ ಕರಮಚಂದ್ ಗಾಂಧಿ, ಬಾರ್ ಎಟ್ ಲಾ, ಅವರನ್ನು ಪ್ರಥಮ ದರ್ಜೆಯಲ್ಲಿ ಕುಳ್ಳಿರಿಸಿಕೊಂಡ ರೈಲು, ಹೊಗೆ ಉಗುಳುತ್ತಾ ಹೊರಟಿತು. ರಾತ್ರಿ ೯ಕ್ಕೆ ಮೆರಿಟ್ಸ್ ಬರ್ಗ್ ತಲುಪಿ ನಿಟ್ಟುಸಿರುಬಿಟ್ಟಂತೆ ಒಮ್ಮೆ ಜೋರಾಗಿ ಹೊಗೆಯುಗುಳಿ ನಿಂತುಬಿಟ್ಟಿತು.

ಟಕ್, ಟಕ್.

ಬಾಗಿಲು ಬಡಿದ ಸದ್ದು.

ಗಾಂಧಿ ಕುಳಿತಿದ್ದ ಪ್ರಥಮ ದರ್ಜೆಯ ವಿಭಾಗದಲ್ಲಿ ಅವರೊಬ್ಬರೇ ಇದ್ದದ್ದು. ಬೇರೆ ಪ್ರಯಾಣಿಕರು ಬಂದಿರಬಹುದು ಎಂಬ ಯೋಚನೆಯಿಂದ ಬಾಗಿಲು ತೆರೆದರು.

ಬಾಗಿಲು ಬಡಿದವನು ಹಾಸಿಗೆಗಳನ್ನು ಒದಗಿಸುತ್ತಿದ್ದ ರೈಲು ನೌಕರ. ಗಾಂಧಿ, ತನ್ನ ಬಳಿ ಹಾಸಿಗೆ ಇರುವುದ್ದರಿಂದ  ತನಗೆ ರೈಲುಗಾಡಿಯವರು ಒದಗಿಸುವ ಹಾಸಿಗೆ ಬೇಡ ಎಂದು ಹೇಳಿ ಅವನನ್ನು ಕಳುಹಿಸಿದ್ದರು. ರೈಲು ಮೆರಿಟ್ಸ್‌ಬರ್ಗ್ ನಿಲ್ದಾಣದಿಂದ ಹೊರಡುವ ಸಮಯ ಹತ್ತಿರವಾಗುತ್ತಿತ್ತು. ಬಾಗಿಲು ಹಾಕಿಕೊಂಡ ಗಾಂಧಿ ತನ್ನ ಹಾಸಿಗೆ ಬಿಡಿಸಿ ಮಲಗುವ ತಯಾರಿ ನಡೆಸಿದರು.

ಟಕ್, ಟಕ್.

ಬಾಗಿಲು ಬಡಿದ ಸದ್ದು.

ಹಾಸಿಗೆ  ಬಿಡಿಸುವ ಕೆಲಸವನ್ನು ಅರ್ಧಕ್ಕೇ ಕೈಬಿಟ್ಟ ಗಾಂಧಿ, ಎದ್ದು ಹೋಗಿ ಬಾಗಿಲು ತೆರೆದರು.

ಈ ಬಾರಿ ಬಂದವನು ನೌಕರನಲ್ಲ. ಬಂದವನು ಪ್ರಯಾಣಿಕನೇ ಎಂಬುದನ್ನು ಅವನ ಉಡುಪು ಸಾರಿ ಹೇಳುತ್ತಿತ್ತು. ಕಡಿದು ಜೋಡಿಸಿದರೆ ಮೂರು ಗಾಂಧಿಯಾಗಬಲ್ಲಷ್ಟು ಬೆಳೆದ ದೊಡ್ಡ ದೇಹ. ಪೊದೆಮೀಸೆ. ಹೇಗಿದ್ದರೇನಂತೆ, ಇಂಗ್ಲಿಷ್ ಮಾತನಾಡಬಲ್ಲ ಜೊತೆಗಾರ ಸಿಕ್ಕಿದನೆಂದು ಗಾಂಧಿಗೆ ಸಂತೋಷವಾಗಿತ್ತು. ಆದರೆ ಬಂದವನಿಗೆ ಗಾಂಧಿಯನ್ನು ಕಂಡಾಗ ಸಂತೋಷ ವಾದಂತಿರಲಿಲ್ಲ. ತನ್ನನ್ನು ಪರಿಚಯಿಸಿಕೊಳ್ಳುತ್ತಾ ಗಾಂಧಿ ಚಾಚಿದ್ದ ಕೈಯನ್ನು ಕಂಡರೂ ಗಮನಿಸದವನಂತೆ, ತಾನು ತಂದಿದ್ದ ಸಾಮಾನು ಸರಂಜಾಮುಗಳನ್ನು ಜೋಡಿಸತೊಡಗಿದ್ದನು. ಗಾಂಧಿಗೆ ಮುಜುಗರವಾಯಿತಾದರೂ ತೋರಿಸಿಕೊಳ್ಳದೆ, ತನ್ನ ಹಾಸಿಗೆ ಬಿಡಿಸುವ ಕೆಲಸವನ್ನು ಮುಂದುವರಿಸಿದರು.

ಬಂದವನು ಸ್ವಲ್ಪ ಹೊತ್ತು ಹಾಗೆಯೇ ನಿಂತುಕೊಂಡು, ಹಾಸಿಗೆಯ ಸುರುಳಿಗಳನ್ನು ಬಿಡಿಸುತ್ತಿದ್ದ ಗಾಂಧಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುವವನಂತೆ ದಿಟ್ಟಿಸಿ ನೋಡುತ್ತಿದ್ದ. ತಲೆ ತಗ್ಗಿಸಿ ತನ್ನ ಕೆಲಸದಲ್ಲಿ ಮಗ್ನರಾಗಿದ್ದ ಗಾಂಧಿಗೆ ಕೆಂಪು ಮೋರೆಯವನ ಕಣ್ಣುಗಳಲ್ಲಿ ಹೊರಸೂಸುತ್ತಿದ್ದ ಜಿಗುಪ್ಸೆಯ ನೋಟ ಕಾಣಿಸುವುದಾದರೂ ಹೇಗೇ? ಗಾಂಧಿಯ ಕೈಗಳು ಯಾಂತ್ರಿಕವಾಗಿ ಹಾಸಿಗೆಯ ಮೇಲೆ ಸರಿದಾಡುತ್ತಿದ್ದರೂ, ಅವರ ಮನಸ್ಸು ದಕ್ಷಿಣ ಆಫ್ರಿಕಾದಲ್ಲಿ ಕಳೆದ ನಾಲ್ಕೈದು ದಿನಗಳ ಅವಧಿಯಲ್ಲಿ ಕಂಡ ಭಾರತೀಯರ ಅವಮಾನದ ಕತೆಗಳನ್ನು ಮೆಲುಕು ಹಾಕುತ್ತಿತ್ತು.

ಗಾಂಧಿ ಗಮನಿಸಿದಂತೆ, ದಕ್ಷಿಣ ಆಫ್ರಿಕದಲ್ಲಿ ಬದುಕುತ್ತಿರುವ ಭಾರತೀಯರು ಮೂರು ಗುಂಪುಗಳಲ್ಲಿ ತಮ್ಮನ್ನು ತಾವೇ ಒಡೆದುಕೊಂಡಿದ್ದರು. ಮೊದಲನೆಯ ಗುಂಪು ಮುಸ್ಲಿಂ

ವ್ಯಾಪಾರಿಗಳದ್ದು. ಅವರು ತಮ್ಮನ್ನು ತಾವು ಅರಬ್ಬಿಗಳ ನೇರ ಸಂತಾನವೆಂದೇ ನಂಬಿಕೊಂಡವರು. ಭಾರತದಿಂದ ಎಂದೋ ಹೋಗಿ ಅಲ್ಲೇ ನೆಲಸಿರುವ ಹಿಂದೂಗಳದ್ದು ಮತ್ತೊಂದು ಗುಂಪು. ಈ ಎರಡೂ ಗುಂಪಿಗೆ ಸೇರದ ಮತ್ತೊಂದು ಗುಂಪು ಪಾರಸೀಗಳದ್ದು. ಬಹುಮಟ್ಟಿಗೆ ಗುಮಾಸ್ತರ ಕೆಲಸ ಮಾಡುವ ಈ ಪಾರಸೀ ಗುಂಪಿನವರು, ತಾವೆಲ್ಲ ಪರ್ಶಿಯಾ ದೇಶದಿಂದ ನೇರವಾಗಿ ಆಫ್ರಿಕಾ ಖಂಡಕ್ಕೆ ಬಂದು ಸೇರಿದವರೆಂದು ಹೇಳುವವರು. ಕೆಲವೊಮ್ಮೆ ಇವರು ತಾವು ಅರಬ್ಬಿಗಳೆಂದು ಹೇಳುತ್ತಿದ್ದವರ ಜತೆಗೆ ಗುರುತಿಸಿಕೊಳ್ಳುವುದೂ ಉಂಟು. ಆದರೆ ಈ ಮೂರೂ ಗುಂಪುಗಳ ನಡುವೆ ಸಾಮಾಜಿಕ ವ್ಯವಹಾರಗಳು ನಡೆಯುವುದು ಸಾಮಾನ್ಯ ಸಂಗತಿಯಾಗಿತ್ತು.

ಈ ಮೂರೂ ಗುಂಪುಗಳಿಗೆ ಸೇರದ ಮತ್ತೊಂದು ದೊಡ್ಡ ಗುಂಪು ಇತ್ತು. ಅದುವೇ ನಿರ್ದಿಷ್ಟ ವರ್ಷಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿ ಉಳಿಯುವ ಕರಾರು ಪತ್ರ ಮಾಡಿಸಿಕೊಂಡು ಬಂದಿರುವವರು. ಇವರನ್ನು ಎಲ್ಲರೂ 'ಕೂಲಿ' ಎಂದೇ ಕರೆಯುತ್ತಿದ್ದದ್ದು. ಕರಾರು ಪತ್ರದ ಶಕ್ತಿಯಿಂದ ಉಳಿದುಕೊಳ್ಳುವ ತಮಿಳರು, ತೆಲುಗರು, ಉತ್ತರ ಭಾರತೀಯರೆಲ್ಲರೂ ಈ ಕೂಲಿ ಗುಂಪಿಗೆ ಸೇರುತ್ತಾರೆ. ದಕ್ಷಿಣ ಆಫ್ರಿಕಾದಲ್ಲಿ ಒಂದು ವರ್ಷ ಉಳಿಯುವ ಕರಾರಿನೊಂದಿಗೆ ಬಂದಿರುವ ಗಾಂಧಿಯನ್ನು ಕೂಡಾ ಕೂಲಿಕಾರರ ಗುಂಪಿಗೇ ಸೇರಿದವರೆಂದು ಪರಿಗಣಿಸಲಾಗಿತ್ತು. ಅಂದರೆ ತಾನು ದಕ್ಷಿಣ ಆಫ್ರಿಕಾದ 'ಕೂಲಿ ಬ್ಯಾರಿಸ್ಟರ್.'

ದಢಾರನೆ ಬಾಗಿಲು ಮುಚ್ಚಿಕೊಂಡ ಸದ್ದಿಗೆ ಬೆಚ್ಚಿಬಿದ್ದ ಗಾಂಧಿ ತಲೆಯೆತ್ತಿ ನೋಡಿದರು.

ಮುಖಕ್ಕೆ ರಾಚುವಂತೆ ಬಾಗಿಲು ಎಳೆದುಕೊಂಡು ಹೊರಗೆ ಹೋಗಿದ್ದ ಪೊದೆಮೀಸೆಯವನು ರೈಲು ನಿಲ್ದಾಣದ ಕಚೇರಿಯ ದಿಕ್ಕಿಗೆ ದಾಪುಗಾಲು ಹಾಕುತ್ತಿರುವುದು ಕಿಟಕಿಯ ಕಂಬಿಗಳೆಡೆಯಿಂದ ಗಾಂಧಿಗೆ ಕಾಣಿಸಿತು.

ಯಾಕಿದ್ದಿರಬಹುದೂ? ಟಿಕೇಟು ಮರೆತು ಬಂದಿರಬಹುದೇ? ಗಾಂಧಿ ತನ್ನ ಜೇಬಿನಲ್ಲಿ ಭದ್ರವಾಗಿ ಇರಿಸಿಕೊಂಡಿದ್ದ ಟಿಕೇಟನ್ನೊಮ್ಮೆ ತಡವಿ ನೋಡಿ ಸಮಾಧಾನಪಟ್ಟರು. ರೈಲು ಹೊರಡಲು ಇನ್ನು ಬಹಳ ಹೊತ್ತು ಇರಲಾರದು. ಆವನು ಟಿಕೇಟು ಮರೆತು ಬಂದಿದ್ದರೂ ಬಿಳಿಯನೆಂಬ ಕಾರಣಕ್ಕೆ ಅವನಿಗೆ ಪ್ರಯಾಣ ಮಾಡಲು ಅನುಮತಿ ಸಿಗಬಹುದೇ? ಅಥವಾ ಬೇರೆ ಟಿಕೇಟು ತೆಗೆದುಕೊಳ್ಳಲು ಹೇಳಬಹುದೇ? ಅವನಲ್ಲಿ ಮೊದಲ ದರ್ಜೆಯ ದುಬಾರಿ ಟಿಕೇಟು ಖರೀದಿಸಲು ಸಾಕಾಗುವಷ್ಟು ಹಣವಿಲ್ಲದೆ ಹೋದರೇನು ಮಾಡಿಯಾನೂ? ಮೂರನೇ ದರ್ಜೆಯಲ್ಲಿ ಪ್ರಯಾಣ ಮಾಡಬೇಕಾಗಬಹುದು, ಪಾಪ.

ಟಕ್, ಟಕ್.
ಬಾಗಿಲು ಬಡಿದ ಸದ್ದು.

ಗಾಂಧಿ ಬಾಗಿಲು ತೆರೆದರು.

ಬಂದವನು ಪೊದೆಮೀಸೆಯ ಟೊಣಪನಲ್ಲ. ರೈಲು ಅಧಿಕಾರಿ.

ಅವನ ಹಿಂದೆ ಇನ್ನಿಬ್ಬರು. ಅವರಲ್ಲೊಬ್ಬ ಪೊದೆಮೀಸೆಯವನು.

'ಈ ಹಾಸಿಗೆ ನಿನ್ನದೇ?' ಅರೆತೆರೆದುಕೊಂಡಿದ್ದ ಹಾಸಿಗೆಯತ್ತ ಬೊಟ್ಟು ಮಾಡಿದ ರೈಲು ಅಧಿಕಾರಿ ಪ್ರಶ್ನಿಸಿದ್ದ.

'ಹೌದು'.ಗಾಂಧೀಜಿ ಉತ್ತರಿಸಿದ್ದರು.

'ಅದನ್ನು ಮೊದಲು ಮಡಿಚು'

'ನನಗೆ ನಿದ್ರೆ ಮಾಡಲು ಅದು ಬೇಕಾಗುತ್ತದೆ'

'ಹೇಳಿದಷ್ಟು ಮಾಡು'

'ಯಾಕೆ?'

'ಪ್ರಶ್ನೆ ಕೇಳುವ ಅಧಿಕಾರ ನಿನಗಿಲ್ಲ''

'ಯಾಕೆ?'

ಅಧಿಕಾರಿ ಸ್ವಲ್ಪ ಗಲಿಬಿಲಿಗೊಂಡನಾದರೂ ಕೂಡಲೇ ಸಾವರಿಸಿಕೊಂಡು ಹೇಳಿದ, 'ನೀನು ಈ ರೈಲಿನ ಹಿಂಭಾಗದಲ್ಲಿರುವ ಗಾಡಿಗೆ ಹೋಗಬೇಕು'

'ಅದು ಪ್ರಥಮ ದರ್ಜೆಯಲ್ಲವಲ್ಲ? ನನ್ನಲ್ಲಿ ಪ್ರಥಮ ದರ್ಜೆಯ ಟಿಕೇಟು ಇದೆ.' ಗಾಂಧಿ ಜೇಬಿನಿಂದ ಟಿಕೇಟು ಹೊರಗೆ ತೆಗೆದು ಅವನಿಗೆ ತೋರಿಸಿದರು.

'ಅದನ್ನು ನಿನ್ನ ಜೇಬಿನಲ್ಲೇ ಇರಿಸಿಕೋ. ನಿನ್ನ ಹಾಸಿಗೆ ಮತ್ತು ಪೆಟ್ಟಿಗೆಯನ್ನು ತೆಗೆದುಕೊಂಡು ನೇರವಾಗಿ ಹಿಂಭಾಗದ ಗಾಡಿಗೆ ಹೋಗಿಬಿಡು. ಸುಮ್ಮನೆ ಚರ್ಚೆ ಮಾಡಿ ನಮ್ಮ ಸಮಯ ಹಾಳುಮಾಡಬೇಡ'

'ಇಲ್ಲ. ಪ್ರಥಮ ದರ್ಜೆಯಲ್ಲಿ ಪ್ರಯಾಣಿಸಲು ಟಿಕೇಟು ಖರೀದಿಸಿರುವ ನಾನು, ಮೂರನೇ ದರ್ಜೆಯ ಗಾಡಿಯಲ್ಲಿ ಪ್ರಯಾಣಿಸುವ ಅಗತ್ಯವಿಲ್ಲ. ನಾನು ಹೋಗಲಾರೆ'.

'ಹಾಗಾದರೆ ನಾನು ರೈಲ್ವೇ ಪೋಲೀಸರನ್ನು ಕರೆಸಿ ನಿನ್ನನ್ನು ಹೊರದಬ್ಬಿಸಬೇಕಾಗುತ್ತದೆ. ಆ ಬಳಿಕ ನೀನು ಮೂರನೆಯ ದರ್ಜೆಯಲ್ಲಿ ಪ್ರಯಾಣಿಸುವ ಅವಕಾಶವನ್ನೂ ಕಳೆದುಕೊಳ್ಳುತ್ತೀಯಾ.'

'ಇದು ಅನ್ಯಾಯ. ಟಿಕೇಟು ಖರೀದಿಸಿರುವ ರೈಲು ಪ್ರಯಾಣಿಕನ ಹಕ್ಕನ್ನು ನೀವು ಕಸಿದು ಕೊಳ್ಳಲಾರಿರಿ. ಅದು ಕಾನೂನಿಗೆ ವಿರುದ್ಧವಾಗುತ್ತದೆ. ನಾನು ಕಾನೂನು ಕಲಿತಿರುವ ಬ್ಯಾರಿಸ್ಟರ್ ಪದವಿ ಪಡೆದಿರುವ ವಕೀಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.'

'ಓಹೋ.., ಕೂಲಿ ಬ್ಯಾರಿಸ್ಟರ್!' ಅಧಿಕಾರಿ ನಗತೊಡಗಿದ. ಪೊದೆಮೀಸೆಯ ಕೆಂಪು ಮೋರೆಯ ಟೊಣಪನೂ ನಕ್ಕ. ಜತೆಯಲ್ಲಿ ನಿಂತಿದ್ದ ಪೋಲೀಸನೂ ನಕ್ಕ. ಮೂವರೂ ಗಹಗಹಿಸಿ ನಗತೊಡಗಿದರು.

ನಗು ನಿಲ್ಲಿಸಿದ ಅಧಿಕಾರಿ ಪೋಲೀಸನತ್ತ ಕಣ್ಣು ಹೊಡೆದ. ಅಷ್ಟೆ.

ಗಾಂಧಿಯ ಹಾಸಿಗೆಯನ್ನು ಎತ್ತಿದ ಪೋಲೀಸ ಅದನ್ನು ಬಾಗಿಲಿನಿಂದ ಹೊರಗೆಸೆದ. ಬಳಿಕ ಗಾಂಧಿಯ ಪೆಟ್ಟಿಗೆಯ ಸರದಿ. ಫ್ಲಾಟ್ ಫಾರಂನ ಕಲ್ಲು ಹಾಸಿನ ಮೇಲೆ ಬಿದ್ದ ಪೆಟ್ಟಿಗೆ ಬಾಯಿತೆರೆದುಕೊಂಡು ಅದರೊಳಗಿನ ವಸ್ತುಗಳೆಲ್ಲವೂ ಹೊರಗೆ ಹಾರಿತು.

ಕೈಚೀಲವೊಂದನ್ನು ಎದೆಗವಚಿಕೊಂಡಿದ್ದ ಗಾಂಧಿ ಕಲ್ಲಿನಂತೆ ನಿಂತೇ ಇದ್ದರು.
ಅಧಿಕಾರಿ ಪೋಲೀಸನತ್ತ ಮತ್ತೊಮ್ಮೆ ನೋಡಿ 'ಆ ಕೂಲಿಯನ್ನೂ ತಳ್ಳು' ಎಂದ.

ಪೋಲೀಸ ಒಂದು ಕ್ಷಣ ಅನುಮಾನಿಸಿದ.
'ಹೂಂ' ಅಧಿಕಾರಿ ಮತ್ತೊಮ್ಮೆ ಅಬ್ಬರಿಸಿದ್ದ.
ಗಾಂಧಿಯ ರಟ್ಟೆ ಹಿಡಿದ ಪೋಲಿಸ, ಅವರನ್ನು ಬಾಗಿಲತ್ತ ಎಳೆದು ಹೊರಗೆ ದಬ್ಬಿದ. ಗಾಂಧಿ ನೆಲದ ಮೇಲೆ ಬಿದ್ದುಬಿಟ್ಟರು.

ಅದನ್ನೇ ನಿರೀಕ್ಷಿಸಿದ್ದಂತೆ ರೈಲು ಹೊರಟೇ ಬಿಟ್ಟಿತು.

ಗಾಂಧಿ ಬಹಳ ಹೊತ್ತು ಹಾಗೆಯೇ ನಿಂತಿದ್ದರು. ದೂರದಲ್ಲಿ ನಿಂತು ಇದೆಲ್ಲವನ್ನೂ ಗಮನಿಸುತ್ತಿದ್ದ ನೀಗ್ರೋ ಜಾತಿಗೆ ಸೇರಿದ ಯುವಕನೊಬ್ಬ ನಿಧಾನವಾಗಿ ನಡೆಯುತ್ತಾ ಹತ್ತಿರ ಬಂದ. ಗಾಂಧಿ ಅವನತ್ತ ನೋಡುವ ಸ್ಥಿತಿಯಲ್ಲಿರಲಿಲ್ಲ. ಅವನದನ್ನು ನಿರೀಕ್ಷಿಸಿದಂತೆಯೂ ಇದ್ದಿರಲಿಲ್ಲ. ಹತ್ತಿರ ಬಂದವನೇ ನೆಲದಲ್ಲಿ ಕುಳಿತು ಗಾಂಧಿಯ ಪೆಟ್ಟಿಗೆಯಿಂದ ಚೆಲ್ಲಿದ ವಸ್ತುಗಳನ್ನೆಲ್ಲ ಒಂದೊಂದಾಗಿ ಆರಿಸಿ ಪೆಟ್ಟಿಗೆಯಲ್ಲಿ ಭದ್ರಪಡಿಸಿದ. ಬಿಚ್ಚಿಕೊಂಡಿದ್ದ ಹಾಸಿಗೆಯನ್ನು ಒಪ್ಪವಾಗಿ ಮಡಿಚಿದ. ಎರಡನ್ನೂ ಎತ್ತಿಕೊಂಡು ಹೋಗಿ ರೈಲು ಅಧಿಕಾರಿಯ ಕೊಠಡಿಯ ಹೊಸ್ತಿಲ ಬಳಿ ಇರಿಸಿ ವಾಪಸು ಬಂದ.

ಗಾಂಧಿ ಕಲ್ಲಿನಂತೆ ನಿಂತೇ ಇದ್ದರು.

ನೀಗ್ರೋ ಯುವಕ ಗಾಂಧಿಯ ಕೈಹಿಡಿದು ಮೃದುವಾಗಿ ಅದುಮಿದ. ಗಾಂಧಿಗೆ ಮೆಹತಾಬ್ ನೆನಪಾದ. ಅವನತ್ತ ಒಂದು ಕ್ಷಣ ದೃಷ್ಟಿ ಹಾಯಿಸಿದರು. ಮೆಹತಾಬನದೇ ನೀಲಿ ಕಣ್ಣುಗಳು!

ಗಾಂಧಿಯ ಕೈಯನ್ನು ಹಿಡಿದುಕೊಂಡ ಯುವಕ ಪಕ್ಕದಲ್ಲೇ ಇದ್ದ ವಿಶ್ರಾಂತಿಗೃಹದತ್ತ ನಡೆದ. ಸಂಮೋಹಿನಿಗೊಳಗಾದವರಂತೆ ಗಾಂಧಿ ಅವನ ಹಿಂದೆ ಕಾಲೆಳೆದಿದ್ದರು. ವಿಶ್ರಾಂತಿಗೃಹದ ಕುರ್ಚಿಯಲ್ಲಿ ಗಾಂಧಿಯನ್ನು ಕುಳ್ಳಿರಿಸಿ ಅವರ ಕೈಯನ್ನು ಮತ್ತೊಮ್ಮೆ ಅದುಮಿದ, ಆ ಕಪ್ಪು ಯುವಕ ಹೊರಗೆ ಕತ್ತಲೆಯಲ್ಲಿ ಕರಗಿ ಹೋದ.

ಮೆರಿಟ್ಸ್‌ಬರ್ಗ್ ಮೊದಲೇ ಎತ್ತರದ ಚಳಿ ಪ್ರದೇಶ. ಚಳಿಗಾಲದ ರಾತ್ರಿಯಲ್ಲಿ ಅಲ್ಲಿ ಬೀಸಿಬರುವ ಶೀತಗಾಳಿ ಅದೆಷ್ಟು ಗಟ್ಟಿಗನ ಮೈಯನ್ನಾದರೂ ಕೊರೆದು ಬಿಡುತ್ತದೆ. ಗಾಂಧಿ ತಂದಿದ್ದ ಚಳಿಯ

ಉಡುಪುಗಳು ರೈಲು ಅಧಿಕಾರಿಯ ಕೊಠಡಿಯ ಹೊಸ್ತಿಲ ಬಳಿ ಇದ್ದ ಪೆಟ್ಟಿಗೆಯಲ್ಲಿ ಬೆಚ್ಚಗೆ ಇದ್ದವು. ಅವುಗಳನ್ನು ತರುವುದೆಂದರೆ ಮತ್ತೆ ಅವಮಾನ. ಗಾಂಧಿ ಅವುಡು ಕಚ್ಚಿ ಚಳಿ ತಡೆದು ಕೊಂಡರು; ಚಳಿಯನ್ನು ನಿವಾರಿಸುವ ತನ್ನದೇ ಉಡುಪುಗಳಿದ್ದರೂ ಅವುಗಳನ್ನು ಪಡೆಯಲು ಅಧಿಕಾರಿಯ ಕೊಠಡಿ ಎದುರು ಹೋಗಲು ಮನಸ್ಸಾಗಲಿಲ್ಲ.

ತನಗೆ ಪ್ರಕೃತಿಯ ಸಹಜ ಸಂಗತಿಗಳಲ್ಲೊಂದಾದ ಚಳಿಯನ್ನು ತಡೆದುಕೊಳ್ಳಲೇ ಸಾಧ್ಯವಾಗ ದಿದ್ದರೆ, ತನ್ನಿಂದ ಮತ್ತಿನ್ನೇನು ಸಾಧಿಸಲು ಸಾಧ್ಯವಾದೀತು? ಎಂದು ಪ್ರಶ್ನಿಸಿಕೊಂಡವರಿಗೆ ಹರಿಶ್ಚಂದ್ರ ನಾಟಕದ ಚಂದ್ರಮತಿ ನೆನಪಾದಳು. ಅವಳ ಕಷ್ಟಗಳ ಜತೆ ತನ್ನ ಕಷ್ಟಗಳನ್ನಿಟ್ಟು ತೂಗಿ ನೋಡಿದ ಗಾಂಧಿಗೆ ನಾಚಿಕೆಯಾಯಿತು. ಗಂಡನಲ್ಲದೆ ಬೇರಾವ ಆಶ್ರಯವೂ ಇಲ್ಲದ ಒಬ್ಬಳು ಹೆಣ್ಣುಮಗಳು, ತನ್ನ ಗಂಡನ ಒಳಿತಿಗಾಗಿ ಸಹಿಸಿಕೊಂಡ ನೋವು ಅವಮಾನಗಳ ಎದುರು ತನ್ನದು ಸಮಸ್ಯೆಗಳೇ ಅಲ್ಲ. ತಾನೇನೂ ಬೇರೆಯವರಿಗಾಗಿ ನೋವು ಅನುಭವಿಸುತ್ತಿಲ್ಲ. ರೈಲಿನಲ್ಲಿ ಪ್ರಥಮ ದರ್ಜೆಯಲ್ಲಿ ಹೋಗಲಾಗಲಿಲ್ಲ ಅಷ್ಟೆ ತಾನೆ ? ಈ ಬಗೆಯ ಅವಮಾನಗಳು ಬೇಡ ವೆನ್ನಿಸಿದರೆ, ನಾಳೆಯೇ ಹಡಗು ಹತ್ತಿ ಊರಿಗೆ ಹಿಂತಿರುಗುವ ಸ್ವಾತಂತ್ರ್ಯ ತನಗಿದೆ. ಕೆಲವರು ತನ್ನನ್ನು ಹೇಡಿ ಎನ್ನಬಹುದು. ನಾಲ್ಕು ದಿನಗಳಲ್ಲಿ ಎಲ್ಲವನ್ನೂ ಜನರು ಮರೆತುಬಿಡುತ್ತಾರೆ. ತಾನು ಬೊಂಬಾಯಿಯಲ್ಲೋ, ರಾಜಕೋಟೆಯಲ್ಲೋ ಅಥವಾ ದಕ್ಷಿಣದ ಮದರಾಸು ಪ್ರಾಂತ್ಯದಲ್ಲೆಲ್ಲೋ ಒಂದು ಕಡೆ ಬ್ಯಾರಿಸ್ಟರ್ ಎಂದು ನಾಮಫಲಕ ತೂಗಿಸಿಕೊಂಡು ಜೀವನ ನಿರ್ವಹಣೆ ಮಾಡುವುದು ತೀರಾ ಸುಲಭದ ಕೆಲಸ. ದಲ್ಲಾಳಿಗಳ ಮೂಲಕ ಮೊಕದ್ದಮೆಗಳನ್ನು ಸ್ವೀಕರಿಸುವುದನ್ನು ಒಪ್ಪಿಕೊಂಡರೆ, ರಾಜಕೋಟೆಯಲ್ಲಿಯೇ ಕೋಟೆಯಂತಹ ಮನೆ ಕಟ್ಟಿಸಬಹುದು.

ಮೆಹತಾಬ್ ಅದೆಲ್ಲಿಂದಲೋ ಮಾತನಾಡುತ್ತಿರುವಂತೆ ಕೇಳಿಸಿತು. 'ಅಲ್ವೋ ಮೋಹನ. ನಿನಗಿಂದು ಏನಾಗಿದೆ? ಸುಖಪಡುವುದೇ ಆಗಿದ್ದರೆ ಈ ಹಿಂದೆಯೇ ಅದನ್ನೆಲ್ಲವನ್ನೂ ಮಾಡಬಹುದಾಗಿತ್ತಲ್ಲವೆ? ಮೂರು ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ ಸನ್ಯಾಸಿಯಂತೆ ಬದುಕಿದ್ದು ಯಾರಿಗಾಗೀ? ತಾಯಿಗೆ ನೋವು ಮಾಡದಿರುವುದೊಂದೇ ಉದ್ದೇಶವಾಗಿರುತ್ತಿದ್ದರೆ ಅವಳಿಗೆ ಅದನ್ನು ತಿಳಿಸದಿದ್ದರೆ ಸಾಕಾಗುತ್ತಿತ್ತು. ಅಮ್ಮನ ಸಮಾಧಾನಕ್ಕಾಗಿ ಹಲವಾರು ಪ್ರತಿಷ್ಠಿತರಿಂದ ಪ್ರಮಾಣ ಪತ್ರ ಪಡೆದು ಅವಳಿಗೆ ತೋರಿಸುವುದು ನಿನಗೆ ಮಾಂಸ ತಿನ್ನುವಷ್ಟೇ ಸುಲಭದ ಕೆಲಸವಾಗಿರುತ್ತಿತ್ತು. ಆದರೆ ನೀನು ಇದುವರೆಗೆ ಸಾಧಿಸಿದ್ದೆಲ್ಲವೂ ನಿನ್ನ ಸಂತೋಷಕ್ಕಾಗಿ ಮಾತ್ರ; ಬೇರೆಯವರಿಂದ ಮೆಚ್ಚುಗೆ ಪಡೆಯಲು ಅಲ್ಲ'.

ಮೆಹತಾಬ್ ಪಕ್ಕದ ಖುರ್ಚಿಯಲ್ಲಿ ಆರಾಮವಾಗಿ ಕುಳಿತು ಸಿಗರೇಟು ಸೇದುತ್ತಾ ಮಾತನಾಡುತ್ತಿದ್ದನೇ?

'ನೋಡು ಮೋಹನ. ನಿನಗೆ ಇಂದು ಒಂದು ರಾತ್ರಿಯಲ್ಲಿ ಆಗಿರುವ ಅವಮಾನವನ್ನು ಇಲ್ಲಿಯ ಭಾರತೀಯರು ಪ್ರತಿದಿನವೂ ಅನುಭವಿಸುತ್ತಿದ್ದಾರೆ. ನಿನ್ನ ಅವಮಾನವು ಅವರಿಗೆ

ಅವಮಾನವೆಂದೇ ಅನ್ನಿಸಲಾರದು. ನಿನಗೆ ರೈಲಿನಲ್ಲಿ ಪ್ರಥಮದರ್ಜೆಯಲ್ಲಿ ಹೋಗಲು ಬಿಡಲಿಲ್ಲ ಎಂದು ಅಳುತ್ತಾ ಕೂತರೆ, ಮೂರನೇ ದರ್ಜೆಯಲ್ಲೂ ಪ್ರಯಾಣಿಸಲು ಸಾಧ್ಯವಾಗದೆ ಮೈಲು ಗಟ್ಟಲೆ ನಡೆದುಕೊಂಡು ಹೋಗುವ ಬಡಜನರು ನಗಬಹುದು. ನೀನು ವಿರೋಧಿಸಬೇಕಾದದ್ದು ನಿನಗೊಬ್ಬನಿಗಾದ ಅವಮಾನವನ್ನಲ್ಲ. ನಿನ್ನ ಹೋರಾಟವು ಬರಿಯ ರೈಲಿನ ದರ್ಜೆಗಳ ವ್ಯತ್ಯಾಸದ ಚರ್ಚೆಯಲ್ಲಿ ನಿಲ್ಲಬಾರದು. ಅದು ಸ್ವಾತಂತ್ರ್ಯ ಮತ್ತು ಗುಲಾಮಗಿರಿಗಳ ನಡುವಿನ ಚರ್ಚೆಯಾಗಬೇಕು. ಈ ಚರ್ಚೆ ನಾಳೆಯಿಂದಲೇ ಶುರುವಾಗುವಂತೆ ನೀನು ಪ್ರಯತ್ನ ಪಡಬೇಕು. ನಿನ್ನ ಈ ಹೋರಾಟಕ್ಕೆ ನೀನು ಪಡೆದಿರುವ ಕರಾರಿನ ಅವಧಿ ಸಾಲದೆ ಹೋದರೆ, ಹೋರಾಟ ಮುಗಿಯುವತನಕವೂ ನೀನು ಇಲ್ಲಿಯೇ ಉಳಿಯುವಂತಹ ಏರ್ಪಾಡು ಮಾಡಿಕೊಳ್ಳಬೇಕು.'

ಮರುದಿನವೇ ರೈಲ್ವೇ ಜನರಲ್ ಮ್ಯಾನೇಜರಿಗೆ ಗಾಂಧಿ ರಾತ್ರಿಯ ಘಟನೆಯನ್ನೆಲ್ಲ ವಿವರಿಸಿ ತಂತಿ ಕೊಟ್ಟರು. ಮುಂದಿನ ರೈಲಿನಲ್ಲಿ ಚಾರ್ಲ್ಸ್‌ಟೌನ್‌ನತ್ತ ಹೊರಟರು.

## ಕೂಲಿ ಬ್ಯಾರಿಸ್ಟರ್–೨

ಗಾಂಧಿ ಚಾರ್ಲ್ಸ್ ಟೌನ್ ತಲುಪುವಷ್ಟರಲ್ಲಿ ಸೂರ್ಯ ಸಾಕಷ್ಟು ಮೇಲೆ ಏರಿದ್ದ. ಚಾರ್ಲ್ಸ್ ಟೌನ್‌ನಿಂದ ಜೋಹಾನ್ಸ್‌ಬರ್ಗಿಗೆ ಹೋಗುವವರು ಅಂಚೆಪೆಟ್ಟಿಗೆಗಳನ್ನು ಸಾಗಿಸುವ ಕುದುರೆಗಾಡಿಗಳಲ್ಲಿ ಪ್ರಯಾಣಿಸಬೇಕಾಗಿದ್ದ ದಿನಗಳು ಅವು. ಆ ಎರಡು ಊರುಗಳ ನಡುವೆ ರೈಲು ಸೇವೆ ಇನ್ನೂ ಆರಂಭವಾಗಿದ್ದಿರಲಿಲ್ಲ.

ಗಾಂಧಿಯ ಹತ್ತಿರ ಕುದುರೆಗಾಡಿಯ ಪ್ರಯಾಣದ ಟಿಕೇಟು ಇತ್ತು. ರೈಲು ನಿಲ್ದಾಣದಿಂದ ತನ್ನ ಹಾಸಿಗೆ ಮತ್ತು ಪೆಟ್ಟಿಗೆಗಳನ್ನೆತ್ತಿಕೊಂಡ ಗಾಂಧಿ ಕುದುರೆಗಾಡಿ ಹೊರಡಲಿರುವ ಜಾಗಕ್ಕೆ ನಡೆದರು. ಕುದುರೆಗಾಡಿ ಹೊರಡಲು ಸಿದ್ಧವಾಗಿ ನಿಂತಿತ್ತು. ಆದರೆ, ಗಾಂಧಿಯನ್ನು ತನ್ನ ಕುದುರೆಗಾಡಿಯಲ್ಲಿ ಕರೆದುಕೊಂಡು ಹೋಗಲು ಗಾಡಿಯ ಬಿಳಿ ಅಧಿಕಾರಿಯು ಸಿದ್ಧನಿರಲಿಲ್ಲ. ಗಾಂಧಿಯು ಬಳಿ ಟಿಕೇಟು ಇರುವುದು ಅವನಿಗೆ ಗೊತ್ತಿತ್ತು. ಆದರೆ ಕರಿಯನಾದ ಕೂಲಿಯೊಬ್ಬನನ್ನು ಹತ್ತಿಸಿಕೊಂಡರೆ, ಬೇರೆ ಬಿಳಿಯರು ಅವನ ಗಾಡಿಯಲ್ಲಿ ಪ್ರಯಾಣಿಸಲು ಹಿಂದೆ ಮುಂದೆ ನೋಡುತ್ತಾರೆಂಬುದು ಅವನ ಭಯವಾಗಿತ್ತು.

ತನ್ನ ಗಾಡಿಯಲ್ಲಿ ಗಾಂಧಿ ಪ್ರಯಾಣಿಸುವುದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂಬ ಆಸೆ ಯಿಂದ, ಗಾಂಧಿಯ ಟಿಕೇಟನ್ನು ಪರೀಕ್ಷೆ ಮಾಡುವವನಂತೆ ನಟಿಸಿದ ಬಳಿಕ, 'ದಯವಿಟ್ಟು ಕ್ಷಮಿಸಬೇಕು. ನಿಮ್ಮ ಬಳಿ ಇರುವ ಟಿಕೇಟು ರದ್ದಾಗಿದೆ'. ಎಂದು ಸುಳ್ಳು ಹೇಳಿದ. ಆತ ಸುಳ್ಳು ಹೇಳುತ್ತಿದ್ದಾನೆಂಬುದು ಗಾಂಧಿಗೆ ಗೊತ್ತಾಯಿತು. ಕುದುರೆಗಾಡಿಯಲ್ಲಿ ಪ್ರಯಾಣಿಸಲು ತನಗೆ

ಇರುವ ಕಾನೂನುಬದ್ಧ ಅಧಿಕಾರವನ್ನೂ, ತಾನು ಅಂದೇ ಚಾರ್ಲ್ಸ್‌ಟೌನ್‌ಗೆ ಹೋಗಲೇ ಬೇಕಾಗಿರುವ ಅನಿವಾರ್ಯತೆಯನ್ನೂ ಗಾಂಧಿ ಆ ಬಿಳಿಯ ಅಧಿಕಾರಿಯಲ್ಲಿ ಅತ್ಯಂತ ವಿನಯ ದಿಂದಲೇ ನಿವೇದಿಸಿಕೊಂಡರು. ಗಾಂಧಿಯ ವಿನಂತಿಯಲ್ಲಿದ್ದ ಸಜ್ಜನಿಕೆಯನ್ನು ನಿರಾಕರಿಸಲಾಗದ ಆ ಅಧಿಕಾರಿ, ಕೊನೆಗೂ ಅರೆಮನಸ್ಸಿನಿಂದ ಅವರನ್ನು ತನ್ನ ಕುದುರೆ ಗಾಡಿಯಲ್ಲಿ ಕರೆದು ಕೊಂಡು ಹೋಗಲು ಒಪ್ಪಿದನು.

ಆದರೆ, ಗಾಂಧಿಗೆ ಕುದುರೆಗಾಡಿಯ ಒಳಗೆ ಕುಳಿತುಕೊಳ್ಳಲು ಅವನು ಬಿಡಲಿಲ್ಲ. ಗಾಡಿಯ ಎದುರುಭಾಗದಲ್ಲಿ ಗಾಡಿ ಹೊಡೆಯುವವನು ಕುಳಿತುಕೊಳ್ಳುವ ಜಾಗದ ಪಕ್ಕದಲ್ಲಿದ್ದ ಇಕ್ಕಟ್ಟಾದ ಮರದ ಹಲಗೆಯ ಮೇಲೆ ಕುಳಿತುಕೊಳ್ಳುವಂತೆ ಆದೇಶಿಸಿದನು. ಆ ಜಾಗದಲ್ಲಿ ನಿಜವಾಗಿ ಆ ಅಧಿಕಾರಿಯು ಕುಳಿತುಕೊಳ್ಳಬೇಕಾಗಿತ್ತು. ಆದರೆ ಆತನು ತನಗಾಗಿ ನಿಗದಿಪಡಿಸಿದ್ದ ಜಾಗವನ್ನು ಗಾಂಧಿಗೆ ನೀಡಿ, ಗಾಡಿಯ ಒಳಭಾಗದಲ್ಲಿ ಟಿಕೇಟು ಖರೀದಿಸಿದ ಗಾಂಧಿಗೆ ಮೀಸಲಾಗಿದ್ದ ಆಸನದಲ್ಲಿ ಹೋಗಿ ಕುಳಿತುಕೊಂಡನು. ಗಾಂಧಿಗೆ ಇದು ಅನ್ಯಾಯ ಎಂಬುದು ಗೊತ್ತಾಯಿತು. ಆದರೆ, ಎರಡು ರಾತ್ರಿಯ ಹಿಂದೆ ರೈಲಿನ ಡಬ್ಬದಿಂದ ಹೊರದೂಡಲ್ಪಟ್ಟು, ಒಂದು ರಾತ್ರಿಯ ಅವಧಿಯ ಪ್ರಯಾಣವನ್ನು ಅದಾಗಲೇ ಕಳೆದುಕೊಂಡಿದ್ದ ಗಾಂಧಿಗೆ, ಯಾವುದೇ ಕಾರಣಕ್ಕೂ ಪ್ರಯಾಣವನ್ನು ಮುಂದೂಡುವುದು ಬೇಕಾಗಿರಲಿಲ್ಲ. ಅಧಿಕೃತವಾದ ಟಿಕೇಟು ಹೊಂದಿರುವ ತನಗೆ ಒಳಗಡೆ ಕುಳಿತು ಪ್ರಯಾಣಿಸುವ ಹಕ್ಕು ಇದೆಯಾದರೂ, ಅಧಿಕಾರಿಯ ಜತೆ ಜಗಳ ವಾಡಿದರೆ ಕೆಲಸ ಕೆಟ್ಟೀತೆಂದು ಭಾವಿಸಿ ಸುಮ್ಮನಾದರು. ಗಾಡಿ ಹೊಡೆಯುವವನು ಕುಳಿತು ಕೊಳ್ಳುವ ಜಾಗದ ಪಕ್ಕದಲ್ಲಿದ್ದ ಜಾಗದಲ್ಲಿ ಕುಳಿತುಕೊಂಡರು. ಗಾಡಿ ಹೊರಟಿತು.

ಸೂರ್ಯ ನಡುನೆತ್ತಿಯನ್ನೇರುವ ತನಕವೂ ಕುದುರೆಗಾಡಿಯ ಪ್ರಯಾಣವು ಸುಖಕರವಾಗಿಯೇ ಇತ್ತು. ಪರ್ಡೆಕೋಫ್ ತಲುಪಿದಾಗ ಅಧಿಕಾರಿಗೆ ಸಿಗರೇಟ್ ಸೇದುವ ಮನಸ್ಸಾಗಿರಬೇಕು. ಅವನು ಗಾಡಿಯ ಒಳಗಿನಿಂದ ಹೊರಬಂದು, ಕುದುರೆ ಹೊಡೆಯುವವನ ಕಾಲಿನ ಬಳಿ ಇರುವ ಕಿರಿದಾದ ಕೊಳಕು ಜಾಗವನ್ನು ಗಾಂಧಿಗೆ ತೋರಿಸುತ್ತಾ, 'ನೀನು ಸ್ವಲ್ಪ ಹೊತ್ತು ಅಲ್ಲಿ ಕುಳಿತು ಕೊಂಡರೆ ನಾನು ನಿನ್ನ ಜಾಗದಲ್ಲಿ ಕುಳಿತು ಸಿಗರೇಟು ಸೇದುತ್ತೇನೆ. ಏನಂತೀಯಾ?' ಎಂದು ಪ್ರಶ್ನಿಸಿದ್ದನು.

ಮೊದಲೇ ಅವಮಾನದಿಂದ ತಳಮಳಿಸುತ್ತಿದ್ದ ಗಾಂಧಿಗೆ, ಅಧಿಕಾರಿಯ ಮಾತು ಕೇಳಿ ಸಹನೆಯ ಕಟ್ಟೆ ಒಡೆದು ಹೋಗಿತ್ತು. ನಿರ್ಧಾರದ ಸ್ವರದಲ್ಲಿ ಹೇಳಿದ್ದರು, 'ಒಳಗೆ ಕುಳಿತುಕೊಳ್ಳುವ ಹಕ್ಕು ಇರುವ ನನ್ನನ್ನು ಹೊರಗೆ ಕುಳಿತುಕೊಳ್ಳುವಂತೆ ಹೇಳಿದವನು ನೀನು. ಈಗ ಇಲ್ಲಿಯೂ ಕುಳಿತು ಕೊಳ್ಳಲು ನಿರಾಕರಿಸುವ ನಿನ್ನ ಆದೇಶವನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಒಂದೋ ಒಳಗೆ ಕುಳಿತುಕೊಳ್ಳುವ ಅವಕಾಶವನ್ನು ನೀನು ನನಗೆ ಕೊಡಬೇಕು; ಇಲ್ಲವಾದರೆ, ನಾನು ಇಲ್ಲಿಯೇ ಕುಳಿತುಕೊಳ್ಳುವವನು.'

ಗಾಂಧಿಯ ನೇರ ಮಾತು ಬಿಳಿಯ ಅಧಿಕಾರಿಗೆ ಅನಿರೀಕ್ಷಿತವಾಗಿತ್ತು. ಕುದುರೆಗಾಡಿಯಲ್ಲಿ

ಕುಳಿತಿದ್ದ ಇತರ ಬಿಳಿಯ ಪ್ರಯಾಣಿಕರ ಎದುರು ಕರಿಯನೊಬ್ಬನಿಂದ ಈ ಬಗೆಯ ಮಾತುಗಳನ್ನು ಕೇಳಿಸಿಕೊಳ್ಳುವುದು ಅವನಿಗೆ ಸಹ್ಯವಾಗಲಿಲ್ಲ. ಹತ್ತಿರ ಬಂದವನೇ ಗಾಂಧಿಯ ಕೆನ್ನೆಗೆ ಬಲವಾಗಿ ಹೊಡೆದುಬಿಟ್ಟನು. ಗಾಂಧಿಗೆ ಕಣ್ಣು ಕತ್ತಲೆ ಬಂದಂತಾಯಿತು. ಗಾಡಿಯ ಬದಿಯಲ್ಲಿ ಜೋಡಿಸಿದ್ದ ಹಿತ್ತಾಳೆಯ ಸರಳುಗಳನ್ನು ಬಲವಾಗಿ ಹಿಡಿದುಕೊಂಡು ನೋವನ್ನು ಸಹಿಸಿಕೊಂಡರು. ಇಷ್ಟು ಬಲವಾಗಿ ಹೊಡೆದರೂ ತನ್ನ ಜಾಗ ಬಿಟ್ಟು ಏಳಲೊಲ್ಲದ ಕರಿಯನೊಬ್ಬನ ಹಟ, ಬಿಳಿಯ ಅಧಿಕಾರಿಯನ್ನು ಮತ್ತಷ್ಟು ಕೆಣಕಿತು. ಗಾಂಧಿಯ ಕೋಟನ್ನು ಹಿಡಿದು ಜಗ್ಗುತ್ತಾ ಕೆಳಗೆ ದಬ್ಬಲು ಯತ್ನಿಸಿದನು. ಆದರೆ ಗಾಡಿಯ ಸರಳುಗಳನ್ನು ಮತ್ತಷ್ಟು ಬಲವಾಗಿ ಹಿಡಿದುಕೊಂಡ ಗಾಂಧಿ, ಆ ಬಿಳಿಯ ಅಧಿಕಾರಿಯ ಎಲ್ಲ ಹೊಡೆತ, ಎಳೆತಗಳನ್ನೂ ಮೌನವಾಗಿಯೇ ಸಹಿಸಿಕೊಂಡರು.

ಇವೆಲ್ಲವನ್ನೂ ಗಾಡಿಯ ಒಳಗೆ ಕುಳಿತುಕೊಂಡು ನೋಡುತಿದ್ದ ಇತರ ಪ್ರಯಾಣಿಕರಿಗೆ, ಅಧಿಕಾರಿಯ ಎಲ್ಲ ಹಿಂಸೆಯನ್ನೂ ಸದ್ದಿಲ್ಲದೆ ಸಹಿಸಿಕೊಳ್ಳುತ್ತಿದ್ದ ಗಾಂಧಿಯ ವರ್ತನೆ ಅಚ್ಚರಿ ಹುಟ್ಟಿಸಿತ್ತು. ಗಾಂಧಿಯ ಬಗ್ಗೆ ಕರುಣೆ ಮೂಡಿದ ಮಧ್ಯವಯಸ್ಸಿನ ಬಿಳಿಯ ಹೆಂಗಸೊಬ್ಬಳು ಎದ್ದು ನಿಂತು, ಅಧಿಕಾರಿಯನ್ನು ಉದ್ದೇಶಿಸಿ, 'ನೀನು ಆ ಯುವಕನನ್ನು ಅವನ ಪಾಡಿಗೆ ಬಿಟ್ಟು ಒಳಗೆ ಬಂದು ಸುಮ್ಮನೇ ಕುಳಿತುಕೊಳ್ಳದಿದ್ದರೆ, ನಾನು ಚೀರಾಡಿ ಪೋಲೀಸರನ್ನು ಕರೆಸಬೇಕಾಗುತ್ತದೆ. ಅವನು ಏನು ತಪ್ಪು ಮಾಡಿದ್ದಾನೆಂದು ನೀನು ಅವನಿಗೆ ಹೊಡೆಯುತ್ತಿದ್ದೀಯಾ? ಒಳಗೆ ಬಂದು ಕುಳಿತುಕೊಳ್ಳುವ ಎಲ್ಲ ಹಕ್ಕು ಇರುವಾಗಲೂ ನಿನ್ನ ಮಾತಿಗೆ ಬೆಲೆಕೊಟ್ಟು ಅವನು ಅಲ್ಲಿ ಕೂತಿರುವಾಗ, ಅಲ್ಲಿಂದಲೂ ಅವನನ್ನು ಎಬ್ಬಿಸುವುದು ನ್ಯಾಯವೇ?' ಎಂದು ಜೋರಾಗಿಯೇ ಪ್ರಶ್ನಿಸಿದ್ದಳು. ಬಿಳಿಯ ಮಹಿಳೆಯೊಬ್ಬಳು ಕರಿಯ ಕೂಲಿಯ ಪರವಹಿಸಿ ಮಾತನಾಡಿದ್ದು ಆ ಅಧಿಕಾರಿಗೆ ಅನಿರೀಕ್ಷಿತವಾಗಿತ್ತು. ಗಾಂಧಿಯ ಕೋಟಿನ ಕೊರಳಿನಿಂದ ತನ್ನ ಕೈಯ್ಯನ್ನು ಹಿಂತೆಗೆದುಕೊಂಡು, 'ಕೂಲಿಯವನನ್ನು ಕುದುರೆಗಾಡಿಯ ಮೇಲೆ ಹತ್ತಿಸಿಕೊಂಡದ್ದು ತಲೆಯ ಮೇಲೆ ಹೊತ್ತುಕೊಂಡಂತಾಯಿತು'. ಎಂದು ಗೊಣಗುತ್ತಾ ಸುಮ್ಮನಾದನು.

ಕುದುರೆಗಾಡಿಯು ಗ್ರಾಮೀಣ ಪ್ರದೇಶವಾಗಿದ್ದ ಸ್ಟಾಂಡರ್‌ಟನ್ ಎಂಬ ಊರು ತಲುಪುವಾಗ ರಾತ್ರಿಯಾಗಿತ್ತು. ಗಾಂಧಿಯನ್ನು ಸ್ವಾಗತಿಸಲು ಅಬ್ದುಲ್ಲಾ ಸೇಠರ ಗೆಳೆಯರು ಕಾದು ನಿಂತಿದ್ದರು. ಅಲ್ಲಿಯ ನಿವಾಸಿಯಾಗಿದ್ದ ಇಸಾಸೇಠರ ಮನೆಯಲ್ಲಿ ಗಾಂಧಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು.

ತನಗಾಗಿ ನಿಗದಿಪಡಿಸಿದ್ದ ಮಲಗುವ ಕೋಣೆ ಹೊಕ್ಕಕೂಡಲೇ, ತನಗೆ ಕುದುರೆ ಪ್ರಯಾಣದ ನಡುವೆ ಆಗಿರುವ ಅವಮಾನವನ್ನು ಕುದುರೆಗಾಡಿಯ ಪ್ರಧಾನ ಏಜಂಟರಿಗೆ ವಿವರಿಸಿ ದೂರೊಂದನ್ನು ಬರೆಯತೊಡಗಿದರು. ತನ್ನ ದೂರಿಗೆ ಈ ಅಪರಿಚಿತ ದೇಶದಲ್ಲಿ ಕಾಸಿನ ಬೆಲೆಯೂ ಇಲ್ಲವೆಂಬುದು ಅವರಿಗೆ ಈಗಾಗಲೇ ಗೊತ್ತಿತ್ತು.

ಆದರೆ, ಅನ್ಯಾಯದ ವಿರುದ್ಧದ ತನ್ನ ಪ್ರತಿಭಟನೆಯಲ್ಲಿ ಸೋಲು ಗೆಲುವುಗಳ ಬಗ್ಗೆ ಅವರಿಗೆ ಚಿಂತೆಯೇ ಇರಲಿಲ್ಲ. ತನ್ನ ದೂರಿನಿಂದಾಗಿ ಆ ಬಿಳಿಯ ಅಧಿಕಾರಿಗೆ ಶಿಕ್ಷೆಯಾಗುತ್ತದೆಯೋ ಇಲ್ಲವೊ ಎಂಬ ಯೋಚನೆಯೂ ಅವರ ಬಳಿ ಸುಳಿದಿರಲಿಲ್ಲ. ಅನ್ಯಾಯದ ವಿರುದ್ಧದ ತನ್ನ ಪ್ರತಿಭಟನೆಯ ಹಕ್ಕನ್ನು ಯಾರಿಂದಲೂ ಕಸಿದುಕೊಳ್ಳುವುದು ಸಾಧ್ಯವಿಲ್ಲ ಎಂಬುದನ್ನು ತನಗೆ ತಾನೇ ಹೇಳಿಕೊಳ್ಳಲು, ತಪ್ಪು ಮಾಡಿರುವ ಅಧಿಕಾರಿಯ ವಿರುದ್ಧ ದೂರು ಬರೆಯುವುದು ಗಾಂಧಿಗೆ ಅಗತ್ಯವಾಗಿತ್ತು. ದೂರು ಬರೆದು ಮುಗಿಸಿ ಸುಖವಾಗಿ ನಿದ್ರಿಸಿದರು.

ಮರುದಿನ ಸ್ಟಾಂಡರ್‌ಟನ್‌ನಿಂದ ಬೇರೆಯೇ ಕುದುರೆಗಾಡಿಯಲ್ಲಿ ಕುಳಿತು ಹಗಲಿಡೀ ಪ್ರಯಾಣಿಸಿ ರಾತ್ರಿಯ ಹೊತ್ತಲ್ಲಿ ಜೊಹಾನ್ಸ್‌ಬರ್ಗ್ ಪಟ್ಟಣ ತಲುಪಿದರು. ಅಬ್ದುಲ್ಲಾ ಸೇಠರ ಗೆಳೆಯರು ಜೊಹಾನ್ಸ್‌ಬರ್ಗ್ ಗಾಡಿ ನಿಲ್ದಾಣದಲ್ಲಿ ಕಾದಿರುತ್ತಾರೆಂಬುದು ಗೊತ್ತಿತ್ತು. ಆದರೆ ಗಾಂಧಿಗೆ ಅಂಥವರಾರೂ ಅಲ್ಲಿ ಕಾಣಿಸಲಿಲ್ಲ. ಅಲ್ಲಿಯ ನಿವಾಸಿ ಮೊಹಮ್ಮದ್ ಖಾಸಿಮ್ ಕಮರುದ್ದೀನ್ ಎಂಬವರ ಮನೆ ವಿಳಾಸವು ಗಾಂಧಿಗೆ ತಿಳಿದಿತ್ತಾದರೂ, ರಾತ್ರಿಯ ಹೊತ್ತಲ್ಲಿ ಬೇರೆಯವರಿಗೆ ತೊಂದರೆ ಮಾಡಬಾರದೆಂಬ ಉದ್ದೇಶದಿಂದ ಯಾವುದಾದರೂ ಹೋಟೆಲಲ್ಲಿ ರಾತ್ರಿಯ ಹೊತ್ತನ್ನು ಕಳೆಯುವುದೆಂದು ನಿರ್ಧರಿಸಿದರು. ಅಲ್ಲಿ ಯಾರನ್ನೋ ವಿಚಾರಿಸಿಕೊಂಡು ಗ್ರಾಂಡ್ ನ್ಯಾಶನಲ್ ಹೋಟೆಲಿಗೆ ಹೋಗಿ, ಹೋಟೆಲಿನ ಮ್ಯಾನೇಜರನನ್ನು ಕಂಡು ತನ್ನ ಬಯಕೆಯನ್ನು ತಿಳಿಸಿದರು. ಕರಿಯ ಕೂಲಿಯೊಬ್ಬನಿಗೆ ಕೊಠಡಿ ಒದಗಿಸುವಷ್ಟು ದೊಡ್ಡತನ ಆ ಬಿಳಿಯ ಮ್ಯಾನೇಜರನಲ್ಲಿ ಇಲ್ಲವಾದರೂ, ಕೊಠಡಿ ಖಾಲಿಯಿಲ್ಲ ಎಂಬ ಸುಳ್ಳನ್ನು ಅತ್ಯಂತ ನಯ ವಾಗಿಯೇ ಹೇಳುವಷ್ಟು ಸೌಜನ್ಯವಿತ್ತು.

ಬೇರೆ ದಾರಿ ಕಾಣದೆ ಗಾಂಧಿ, ಕುದುರೆಗಾಡಿಯೊಂದನ್ನು ಗೊತ್ತು ಮಾಡಿಕೊಂಡು ಮೊಹಮ್ಮದ್ ಖಾಸಿಮ್ ಕುಸ್ರುದ್ದೀನ್ ಅವರ ಮನೆಗೆ ಹೊರಟರು. ಅಲ್ಲಿ ಅಬ್ದುಲ್ ಘನಿ ಷೇಖ್ ಎಂಬವರು ಗಾಂಧಿಯನ್ನು ಎದುರು ನೋಡುತ್ತಿದ್ದರು. ಗಾಂಧಿಯನ್ನು ಕರೆದುಕೊಂಡು ಬರಲು ಕುದುರೆಗಾಡಿ ಸಹಿತ ನಿಲ್ದಾಣಕ್ಕೆ ಹೋಗಿದ್ದ ಅವರ ಆಳು, ಗಾಡಿನಿಲ್ದಾಣದಲ್ಲಿ ಗಾಂಧಿಯನ್ನು ಗುರುತಿಸದೆ ವಾಪಸು ಬಂದಿದ್ದನು. ಆತಂಕಗೊಂಡಿದ್ದ ಸೇಠರಿಗೆ ಬೇರೆಯೇ ಕುದುರೆಗಾಡಿಯಲ್ಲಿ ಬಂದಿಳಿದ ಗಾಂಧಿಯನ್ನು ಕಂಡಾಗ ಹೋದ ಪ್ರಾಣ ಮರಳಿ ಬಂದಂತಾಗಿತ್ತು.

ತನಗೆ ಹೋಟೆಲಲ್ಲಿ ಕೊಠಡಿ ನಿರಾಕರಿಸಲಾದ ಸಂಗತಿಯನ್ನು ಗಾಂಧಿ ತಿಳಿಸಿದಾಗ ಘನಿ ಷೇಖ್ ಸಾಹೇಬರು, 'ಮಿಸ್ಟರ್ ಗಾಂಧಿ, ನೀವು ಈ ದೇಶದಲ್ಲಿ ಅಂತಹ ನಿರೀಕ್ಷೆಗಳನ್ನು ಇಟ್ಟುಕೊಳ್ಳ ದಿರುವುದೇ ಒಳ್ಳೆಯದು. ಕೇವಲ ಹಣ ಮಾಡುವ ಉದ್ದೇಶದಿಂದ ಎಲ್ಲ ಅವಮಾನಗಳನ್ನು ಸಹಿಸುವ ನಮ್ಮಂತವರಿಗೆ ಮಾತ್ರ ಈ ದೇಶದಲ್ಲಿ ಬದುಕುವುದು ಸಾಧ್ಯ. ದುಡ್ಡಿಗಿಂತ ಮಾನ ಮರ್ಯಾದೆಗಳೇ ಮುಖ್ಯ ಅಂತ ಭಾವಿಸುವವರು ಹಿಂದೂಸ್ಥಾನಕ್ಕೇ ಮರಳಿ ಹೋಗಬಹುದು.' ಎಂದರು. ನೋವಿನಿಂದ ಹೇಳುತ್ತಿದ್ದ ಷೇಖ್ ಸಾಹೇಬರು, ಇದ್ದಕ್ಕಿದ್ದಂತೆ ಗಟ್ಟಿಯಾಗಿ ನಗುತ್ತಾ, 'ಹಾಗೆ ಹೋಗುವಾಗ ಕೂಡಾ, ಮೂರನೆ ದರ್ಜೆಯ ರೈಲು ಟಿಕೇಟು ಖರೀದಿಸಿಯೇ

ಪ್ರಯಾಣಿಸಬೇಕಾಗುತ್ತದೆ. ಯಾಕೆಂದರೆ, ಈ ಊರಲ್ಲಿ ಮೊದಲನೆಯ ಮತ್ತು ಎರಡನೆಯ ದರ್ಜೆಯ ರೈಲು ಟಿಕೇಟುಗಳನ್ನು ಭಾರತೀಯರಿಗೆ ಕೊಡುವುದೇ ಇಲ್ಲ. ನಾಳೆ ನೀವು ಪ್ರಿಟೋರಿಯಕ್ಕೆ ಹೋಗುತ್ತೀರಲ್ಲವೇ? ಆಗ ನಿಮಗೇ ಗೊತ್ತಾಗುತ್ತದೆ. ನಿಮಗೆ ಮೂರನೇ ದರ್ಜೆಯ ಟಿಕೇಟನ್ನು ಮಾತ್ರ ನೀಡಲಾಗುತ್ತದೆ.'

'ನೀವೇಕೆ ಎಲ್ಲರೂ ಸೇರಿ ಈ ಅನ್ಯಾಯವನ್ನು ಪ್ರತಿಭಟಿಸುವುದಿಲ್ಲ?' ಗಾಂಧಿ ಬೇಸರದಿಂದ ಪ್ರಶ್ನಿಸಿದ್ದರು. ಷೇಖರು ವಿಷಾದದ ನಗು ಚೆಲ್ಲುತ್ತಾ ತಣ್ಣಗಿನ ಸ್ವರದಲ್ಲಿ ಉತ್ತರಿಸಿದ್ದರು, 'ನಾವು ದುಡ್ಡು ಗಳಿಸಲು ಬಂದವರು. ಮೊದಲ ದರ್ಜೆ ಟಿಕೇಟು ಖರೀದಿಸಿ ದುಡ್ಡು ಯಾಕೆ ಪೋಲು ಮಾಡಿಕೊಳ್ಳಬೇಕೂ?' ಷೇಖರ ಧ್ವನಿಯಲ್ಲಿ ದುಡ್ಡಿನ ಮೋಹದ ಬದಲು ಇದಿಷ್ಟು ದಿನಗಳ ಕಾಲ ಅನುಭವಿಸಿದ ಅವಮಾನವಿತ್ತು.

'ಇದು ದುಡ್ಡು ಪೋಲು ಮಾಡುವ ಪ್ರಶ್ನೆಯಲ್ಲ. ಸ್ವಾಭಿಮಾನದ ಪ್ರಶ್ನೆ. ನಾಳೆ ನನಗೆ ಪ್ರಿಟೋರಿಯಾಕ್ಕೆ ಹೋಗಲು ಮೊದಲ ದರ್ಜೆಯ ಟಿಕೇಟನ್ನು ರೈಲು ಅಧಿಕಾರಿಗಳು ನಿರಾಕರಿಸಿದರೆ, ನಾನು ರೈಲಿನಲ್ಲಿ ಹೋಗುವುದೇ ಇಲ್ಲ. ನಲವತ್ತು ಮೈಲು ದೂರವನ್ನು ಕುದುರೆ ಗಾಡಿಯಲ್ಲಿ ಪ್ರಯಾಣಿಸುವುದು ನನಗೆ ಅಂತಹ ಕಷ್ಟವಾಗಲಾರದು.' ಗಾಂಧಿ ನಿರ್ಧಾರದ ಧ್ವನಿಯಲ್ಲಿ ಹೇಳಿದ್ದರು.

ಪ್ರಿಟೋರಿಯಾದತ್ತ ರೈಲು ಪ್ರಯಾಣವನ್ನು ಮೊದಲ ದರ್ಜೆಯಲ್ಲಿಯೇ ಮಾಡಬೇಕೆಂದು ಅದಾಗಲೇ ನಿರ್ಧರಿಸಿದ್ದ ಗಾಂಧಿ, ಅದಕ್ಕಾಗಿ ಕೂಡಲೇ ತಯಾರಿಯನ್ನೂ ಆರಂಭಿಸಿಬಿಟ್ಟರು. ಸ್ಥಳೀಯ ರೈಲು ಸ್ಟೇಶನ್ ಮಾಸ್ಟರಿಗೆ, ತಾನೊಬ್ಬ ಬ್ಯಾರಿಸ್ಟರ್ ವಕೀಲನೆಂದೂ, ತನಗೆ ಮೊದಲ ದರ್ಜೆಯಲ್ಲಿ ಮಾತ್ರ ರೈಲು ಪ್ರಯಾಣ ಮಾಡುವುದು ಅಭ್ಯಾಸವಾಗಿದೆಯೆಂದೂ, ತಮಗೆ ಈ ಕಾಗದಕ್ಕೆ ಪ್ರತ್ಯುತ್ತರ ನೀಡುವಷ್ಟು ಕಾಲಾವಕಾಶ ಇಲ್ಲದಿರುವುದರಿಂದಾಗಿ, ನಾನು ನಾಳೆ ನೇರವಾಗಿ ತಮ್ಮ ಬಳಿಗೆ ಬಂದು ಟಿಕೇಟು ಪಡೆಯಲಿರುವೆನೆಂದೂ ಬರೆದು ಕಳುಹಿಸಿಯೇ ಬಿಟ್ಟರು. ಮರುದಿನ ಇಂಗ್ಲಿಷರಂತೆ ಅಚ್ಚುಕಟ್ಟಾಗಿ ಉಡುಪು ಧರಿಸಿ, ಟೈ ಕಟ್ಟಿಕೊಂಡು ತಾನು ಪತ್ರ ಬರೆದಿದ್ದ ಅಧಿಕಾರಿಯ ಎದುರು ಹೋಗಿ, ಮೇಜಿನ ಮೇಲೆ ನಾಣ್ಯವನ್ನಿಟ್ಟು ' ದಯವಿಟ್ಟು ನನಗೆ ಪ್ರಿಟೋರಿಯಾಕ್ಕೆ ಹೋಗುವ ರೈಲಿನಲ್ಲಿ ಮೊದಲ ದರ್ಜೆಯ ಟಿಕೇಟು ಕೊಡಿ' ಎಂದು ವಿನಂತಿಸಿದರು.

ಗಾಂಧಿಯನ್ನು ಅಡಿಯಿಂದ ಮುಡಿಯ ತನಕ ನೋಡಿದ ಸ್ಟೇಶನ್ ಮಾಸ್ಟರ್, ಮುಗುಳುನಗು ಸೂಸುತ್ತಾ 'ನಿನ್ನೆ ನನಗೆ ಪತ್ರ ಬರೆದು, ಉತ್ತರಿಸಲೂ ಸಮಯಾವಕಾಶ ನೀಡದ ಜಾಣ ಬ್ಯಾರಿಸ್ಟರ್ ನೀವು ತಾನೇ? ಸಂತೋಷ. ನಿಮ್ಮ ಪತ್ರದ ಉದ್ದೇಶ ನನಗರ್ಥವಾಗಿದೆ. ನಿಮ್ಮ ಅದೃಷ್ಟ ಈದಿನ ಚೆನ್ನಾಗಿದೆ. ಯಾಕೆಂದರೆ ನಾನು ಟ್ರಾನ್ಸ್‌ವಾಲಿನವನಲ್ಲ, ಹಾಲೆಂಡ್ ದೇಶದವನು. ನಾನು ನಿಮಗೆ ಮೊದಲ ದರ್ಜೆಯ ಟಿಕೇಟು ಕೊಡುವೆ. ಆದರೆ, ನಡುದಾರಿಯಲ್ಲಿ ಯಾವನಾದರೂ ಗಾರ್ಡ್ ನಿಮ್ಮನ್ನು ರೈಲಿನಿಂದ ಹೊರಗೆ ಎಳೆದು ಹಾಕಿದರೆ,

ನೀವು ರೈಲು ಕಂಪೆನಿಯ ವಿರುದ್ಧ ಮೊಕದ್ದಮೆ ಹೂಡಬಾರದು. ಆದರಿಂದ ನನಗೆ ತೊಂದರೆಯಾಗುತ್ತದೆ. ನಿಮಗೆ ಅಂತಹ ಕಷ್ಟ ಬರದಿರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.'

ಕಷ್ಟದ ಸಮಯ ಬರಲು ಹೆಚ್ಚು ತಡವಾಗಲಿಲ್ಲ. ಜರ್ಮಿಸ್ಟನ್ ಎಂಬ ಸ್ಟೇಶನ್ನಿನಲ್ಲಿ, ಟಿಕೇಟು ಪರೀಕ್ಷಿಸಲೆಂದು ಬಂದಿದ್ದ ಗಾರ್ಡ್, ಗಾಂಧಿಯನ್ನು ಮೂರನೇ ದರ್ಜೆಯ ಬೋಗಿಗೆ ಹೋಗುವಂತೆ ಆದೇಶಿಸಿದ್ದನು. ಗಾಂಧಿ ಯಥಾಪ್ರಕಾರ ತನ್ನ ಪ್ರತಿಭಟನೆಯನ್ನು ವಿನಯದಿಂದಲೇ ವ್ಯಕ್ತಪಡಿಸಿದ್ದರು. ಗಾರ್ಡ್ ತನ್ನ ದನಿಯನ್ನು ಎತ್ತರಿಸತೊಡಗಿದ್ದನು. ಆದರೆ, ಆ ಮೊದಲ ದರ್ಜೆಯ ಬೋಗಿಯಲ್ಲಿ ಕುಳಿತಿದ್ದ ಬಿಳಿಯ ಸಜ್ಜನನೊಬ್ಬನು, ಗಾಂಧಿಯ ಪರವಾಗಿ ವಾದ ಮಾಡಲು ಆರಂಭಿಸಿದಾಗ, ಗಲಿಬಿಲಿಗೊಂಡ ಗಾರ್ಡನು, 'ಕೂಲಿಯವನೊಂದಿಗೇ ಪ್ರಯಾಣಿಸುವುದೇ ನಿಮ್ಮ ಹಣೆಯಲ್ಲಿ ಬರೆದಿದ್ದರೆ ನಾನೇನು ಮಾಡಲು ಸಾಧ್ಯ?' ಎಂದು ಗೊಣಗುತ್ತಾ ಹೊರಟು ಹೋಗಿದ್ದನು.

ಆ ಬಿಳಿಯನತ್ತ ಗಾಂಧಿ ಕೃತಜ್ಞತೆಯ ನೋಟ ಬೀರಿದರು. ರೈಲು ಹೊರಟಿತು. ಗಾಂಧಿ ಪ್ರಿಟೋರಿಯಾದ ನೆಲದಲ್ಲಿಳಿದಾಗ, ಆ ಬಿಳಿಯರ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗಿ ಬಹಳ ಹೊತ್ತು ದಾಟಿತ್ತು.

## ಹೋರಾಟದ ಸಾವಿರ ದಿನಗಳು

ಕೇವಲ ಒಂದು ವರ್ಷದ ಪರವಾನಿಗೆಯೊಂದಿಗೆ ದಕ್ಷಿಣ ಅಫ್ರಿಕದ ನೆಲದ ಮೇಲೆ ಕಾಲಿಟ್ಟಿದ್ದ ಗಾಂಧಿ, ಮೂರು ವರ್ಷದ ವರೆಗೆ ಅಲ್ಲಿಯೇ ಉಳಿಯಬೇಕಾದಂತಹ ಹಲವಾರು ಘಟನೆಗಳು ಒಂದರ ಹಿಂದೆ ಇನ್ನೊಂದರಂತೆ ನಡೆದು ಹೋಗಿದ್ದವು. 'ನೇಟಾಲ್ ಇಂಡಿಯನ್ ಕಾಂಗ್ರೆಸ್' ನಲ್ಲಿ ಗಾಂಧಿ ಕೆಲಸಮಾಡುತ್ತಿದ್ದ ಆ ಸಾವಿರ ದಿನಗಳು, ಅವರ ಹೋರಾಟದ ಬದುಕಿನ ಸಾವಿರದ ದಿನಗಳಾಗಿದ್ದವು.

ಗಾಂಧಿ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದದ್ದು, ಅಬ್ದುಲ್ಲಾ ಸೇಠರು ತಮ್ಮ ವ್ಯವಹಾರದಲ್ಲಿ ವಿರೋಧಿಯಾಗಿದ್ದ ತಯ್ಯಬ್ ಸೇಠ್ ಬಣದ ಮೇಲೆ ಹೂಡಿದ್ದ ನಲುವತ್ತು ಸಾವಿರ ಪೌಂಡ್ ಮೊತ್ತದ ಮೊಕದ್ದಮೆಯಲ್ಲಿ ಸಹಾಯಕನಾಗಿ ಕೆಲಸ ಮಾಡಲು. ಅಬ್ದುಲ್ಲಾ ಸೇಠರ ಪರವಾಗಿ ನ್ಯಾಯಾಲಯದಲ್ಲಿ ಮಾಡಬಹುದಾದ ವಾದಗಳಿಗೆ ಪೂರಕವಾಗಬಲ್ಲ ಅಂಶಗಳನ್ನು ಸಂಗ್ರಹಿಸಿ ಹಿರಿಯ ವಕೀಲರುಗಳಿಗೆ ಒದಗಿಸುವುದು ಗಾಂಧಿಯ ಜವಾಬ್ದಾರಿಯಾಗಿತ್ತು.

ಪ್ರಕರಣದ ಬಗ್ಗೆ ಆಳವಾಗಿ ಅಧ್ಯಯನ ಮಾಡುತ್ತಾ ಹೋದಂತೆ ಗಾಂಧಿಗೆ ಮೊಕದ್ದಮೆಯ ಫಲಿತಾಂಶವು ಸ್ಪಷ್ಟವಾಗತೊಡಗಿತ್ತು. ನ್ಯಾಯವು ಅಬ್ದುಲ್ಲಾ ಸೇಠರ ಕಡೆಗೇ ಇದ್ದು, ಅಲ್ಲಿಯ

ಕಾನೂನುಗಳು ಕೂಡಾ ಅವರಿಗೆ ಸಹಾಯಕವಾಗಿಯೇ ಇದ್ದವು. ಆದರೆ, ನ್ಯಾಯಾಲಯದ ತೀರ್ಪು ಬರುವಷ್ಟರಲ್ಲಿ ಸೋತವನ ಜತೆಗೆ ಗೆದ್ದವನೂ, ತಮ್ಮ ತಮ್ಮ ವಕೀಲರಿಗಾಗಿ ಬಹಳಷ್ಟು ಹಣವನ್ನು ಖರ್ಚುಮಾಡಿರುತ್ತಾರೆ ಎಂಬುದು ಗಾಂಧಿಗೆ ಗೊತ್ತಾಗಿ ಹೋಗಿತ್ತು.

ಅಬ್ದುಲ್ಲಾ ಸೇಠ್ ಮತ್ತು ಪ್ರತಿವಾದಿ ತಯ್ಯಬ್ ಸೇಠ್ ಬದ್ಧ ವೈರಿಗಳೇನೂ ಅಲ್ಲ. ಅವರ ನಡುವೆ ತಗಾದೆಯಿದ್ದದ್ದು ಹಣದ ಬಗ್ಗೆ ಮಾತ್ರ. ಇಬ್ಬರೂ ಒಂದೇ ದೇಶಕ್ಕೆ, ಮಾತ್ರವಲ್ಲ ಒಂದೇ ಧರ್ಮಕ್ಕೆ ಸೇರಿದವರು. ಅವರಿಬ್ಬರ ಜಗಳದಲ್ಲಿ ಲಾಭವಾಗುತ್ತಿದ್ದದ್ದು ವಾದಗಳ ಸರಪಳಿಗಳಿಗೆ ಪ್ರತಿದಿನವೂ ಹೊಸತೊಂದು ಕೊಂಡಿಯನ್ನು ಹೆಣೆಯುತ್ತಿದ್ದ ಎರಡೂ ಕಡೆಯ ವಕೀಲರುಗಳಿಗೆ ಮಾತ್ರ. ನ್ಯಾಯಾಲಯದ ಹೊರಗೆಯೇ ಈ ವ್ಯಾಜ್ಯ ಇತ್ಯರ್ಥವಾಗುವುದಾದರೆ ಪ್ರತಿವಾದಿ ತಯ್ಯಬ್ ಸೇಠರಿಗೆ ಮಾತ್ರವಲ್ಲ, ವಾದಿ ಅಬ್ದುಲ್ಲಾ ಸೇಠರಿಗೂ ಬಹಳಷ್ಟು ಹಣ ಮತ್ತು ಸಮಯದ ಉಳಿತಾಯವಾಗುವ ಸಾಧ್ಯತೆಗಳಿದ್ದವು ಎಂಬುದು ಗಾಂಧಿಗೆ ಬಲುಬೇಗನೆ ಅರ್ಥವಾಗಿತ್ತು.

ನ್ಯಾಯಾಲಯದ ಹೊರಗೆಯೇ ಪಂಚಾಯಿತಿ ನಡೆಸಿ ಇವರಿಬ್ಬರ ನಡುವಿನ ವ್ಯಾಜ್ಯವನ್ನು ಕೊನೆಗೊಳಿಸಬೇಕು ಎಂಬ ಆಸೆ ಗಾಂಧಿಗೆ ಹುಟ್ಟಿದ್ದೇ ತಡ, ಆ ಬಗ್ಗೆ ಗಂಭೀರವಾದ ಪ್ರಯತ್ನ ವನ್ನು ಆರಂಭಿಸಿಯೇ ಬಿಟ್ಟರು. ಗಾಂಧಿ ಯಾವಾಗಲೂ ಹಾಗೆಯೆ. ಒಮ್ಮೆ ಒಂದು ಕೆಲಸವನ್ನು ಆರಂಭಿಸಿದರೆಂದರೆ, ನಂತರ ಅದು ಕೊನೆತಲುಪುವವರೆಗೂ ವಿರಮಿಸುವವರಲ್ಲ. ವ್ಯಾಜ್ಯದ ಸಂಬಂಧವಾಗಿ ನೋಡಬೇಕಾದವರನ್ನೆಲ್ಲ ನೋಡಿದರು; ಮಾತನಾಡಬೇಕಾದವರೆಲ್ಲರ ಜತೆ ಮಾತನಾಡಿದರು. ವ್ಯಾಜ್ಯವು ಬಲು ಬೇಗನೆ ಕೊನೆಗೊಳ್ಳುವುದು ಇಬ್ಬರಿಗೂ ಬೇಕಾಗಿತ್ತು. ಅಡ್ಡಿ ಪಡಿಸುತ್ತಿದ್ದವರು ವಕೀಲರುಗಳು ಮಾತ್ರ. ಗಾಂಧಿಯ ಹಠ ಕೊನೆಗೂ ಗೆದ್ದಿತು. ವ್ಯಾಜ್ಯವು ನ್ಯಾಯಾಲಯದ ಹೊರಗೆಯೇ ತೀರ್ಮಾನವಾಯಿತು. ಎರಡೂ ಬಣಗಳನ್ನು ಒಗ್ಗೂಡಿಸುವಲ್ಲಿ ಗಾಂಧಿಯು ಪ್ರದರ್ಶಿಸಿದ ಜಾಣ್ಮೆಯನ್ನು ಎಲ್ಲರೂ ಮೆಚ್ಚಿಕೊಂಡರು. ಗಾಂಧಿಯ ವ್ಯಕ್ತಿತ್ವವು ಆ ಪ್ರದೇಶದಲ್ಲೆಲ್ಲ ಮನೆಮಾತಾಯಿತು.

ವಿರೋಧಿಗಳಂತಿದ್ದ ಇಬ್ಬರು ಸಿರಿವಂತ ಪ್ರತಿಷ್ಠಿತ ವ್ಯಕ್ತಿಗಳನ್ನು, ಪರಸ್ಪರ ಕೊಡು ಕೊಳ್ಳುವಿಕೆ ಯನ್ನೇ ನಿಲ್ಲಿಸಿಬಿಟ್ಟಿದ್ದ ಅವರ ಕುಟುಂಬಗಳನ್ನು ಮತ್ತು ಆ ಎರಡೂ ಬಣಗಳಲ್ಲಿ ಹಂಚಿ ಹೋಗಿದ್ದ ಸಾವಿರಾರು ಸಾಮಾನ್ಯ ಜನರನ್ನು ಒಗ್ಗೂಡಿಸುವ ಗಾಂಧಿಯ ಶ್ರಮದ ಹಿಂದೆ ಬಲವಾದ ಕಾರಣವೊಂದು ತಣ್ಣಗೆ ಕೆಲಸ ಮಾಡುತ್ತಿತ್ತು. ದಕ್ಷಿಣ ಆಫ್ರಿಕಾದಲ್ಲಿ ಬೆವರಿಳಿಸಿ ದುಡಿದು, ಬಿಳಿಯರ ಸಂಪತ್ತನ್ನು ಬೆಳೆಸುತ್ತಿರುವ ಭಾರತೀಯರು ಪ್ರತಿದಿನವೂ ಅನುಭವಿಸು ತ್ತಿರುವ ಅವಮಾನಗಳನ್ನು ಕಣ್ಣಾರೆ ಕಂಡದ್ದು ಮಾತ್ರವಲ್ಲ, ಸ್ವತಃ ಅನುಭವಿಸಿದ್ದ ಗಾಂಧಿಗೆ, ಅದನ್ನು ಪ್ರತಿಭಟಿಸುವ ಹೋರಾಟವೊಂದನ್ನು ಸ್ಥಳೀಯವಾಗಿ ಸಂಘಟಿಸಲು ಸಾಧ್ಯವೇನೋ ಎಂಬ ಕ್ಷೀಣ ಆಸೆ ಹುಟ್ಟಿಕೊಂಡಿತ್ತು.

ತನ್ನ ಪ್ರತಿಭಟನೆಯ ಹೋರಾಟದಲ್ಲಿ ಆರ್ಥಿಕ ನೆರವು ಮಾತ್ರವಲ್ಲ ಜನಬೆಂಬಲದ ಅಗತ್ಯವೂ

ಇತ್ತು. ಇಬ್ಬರು ಸೇಠುಗಳೂ ಆಗರ್ಭ ಶ್ರೀಮಂತರು ಮಾತ್ರವಲ್ಲ, ಅವರಿಬ್ಬರಿಗಿರುವ ಹಿಂಬಾಲಕರ ಪಡೆಯೂ ದೊಡ್ಡದೇ ಎಂಬುದು ಗಾಂಧಿಗೆ ಗೊತ್ತಿತ್ತು. ಅವರಿಬ್ಬರನ್ನು ಜತೆಗೂಡಿಸಿದರೆ ತನ್ನ ಹೋರಾಟಕ್ಕೆ ಹಣದ ಮತ್ತು ಜನದ ಬೆಂಬಲ ಸಿಗಬಹುದು ಎಂಬುದರಲ್ಲಿ ಅವರಿಗೆ ಯಾವುದೇ ಅನುಮಾನವಿದ್ದಿರಲಿಲ್ಲ.

ಅವರ ಆಸೆ ಹುಸಿಯಾಗಲಿಲ್ಲ; ಜನರನ್ನು ಸಂಘಟಿಸುವ ಅವಕಾಶವನ್ನು ಅಲ್ಲಿಯ ಬಿಳಿಯರೇ ಒದಗಿಸಿಬಿಟ್ಟಿದ್ದರು.

ತಮ್ಮ ಮೊಕದ್ದಮೆಯು ನ್ಯಾಯಾಲಯದ ಹೊರಗೆಯೇ ಇತ್ಯರ್ಥವಾದ ಬಳಿಕ ಗಾಂಧಿಯ ಕೆಲಸ ಮುಗಿಯಿತೆಂದೇ ಭಾವಿಸಿದ್ದ ಅಬ್ದುಲ್ಲಾ ಸೇಠರು, ಅವರನ್ನು ಅದ್ದೂರಿಯಾಗಿ ಸನ್ಮಾನಿಸಿ ಭಾರತಕ್ಕೆ ವಾಪಸು ಕಳುಹಿಸುವ ಏರ್ಪಾಡು ಮಾಡಿದ್ದರು. ಆದರೆ ಸನ್ಮಾನದ ದಿನದಂದು ಸ್ಥಳೀಯ ದಿನಪತ್ರಿಕೆ 'ನೇಟಾಲ್ ಮರ್ಕ್ಯುರಿ' ಯಲ್ಲಿ ಪ್ರಕಟವಾಗಿದ್ದ ಭೀಕರ ಸುದ್ದಿಯೊಂದು, ಗಾಂಧಿಯ ಮರು ಪ್ರಯಾಣದ ದಿನವನ್ನು ಮುಂದೂಡಿತ್ತು.

ಸಧ್ಯದಲ್ಲೇ ನಡೆಯಲಿದ್ದ ನೇಟಾಲ್ ಚುನಾವಣೆಯಲ್ಲಿ ಭಾರತೀಯರಿಗೆ ಮತದಾನದ ಹಕ್ಕನ್ನು ನಿರಾಕರಿಸಲಿರುವ ವಿಧೇಯಕವೊಂದು ಅಲ್ಲಿಯ ಶಾಸಕಾಂಗದ ಎದುರು ಮಂಡಿಸಲು ನಡೆಸಿದ ತಯಾರಿಯ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ವಿಧೇಯಕವು ಕಾನೂನಿನ ರೂಪ ಪಡೆದುಬಿಟ್ಟರೆ ಅಲ್ಲಿ ಬಹುಕಾಲದಿಂದ ನೆಲೆಸಿರುವ ಭಾರತೀಯರ ಬದುಕು ಮತ್ತಷ್ಟು ಅಸಹನೀಯವಾಗುತ್ತದೆ ಎಂಬುದು ಗಾಂಧಿಯ ಹೋರಾಟದ ಮನಸ್ಸಿಗೆ ಬಲು ಬೇಗ ಹೊಳೆದಿತ್ತು. ಅವರು ತಮ್ಮ ದುಗುಡವನ್ನು ಸಮಾರಂಭದಲ್ಲಿ ಸೇರಿದ್ದ ಕೆಲವರಲ್ಲಿ ಹಂಚಿ ಕೊಂಡದ್ದೇ ತಡ, ಗಾಂಧಿಯ ಮರು ಪ್ರಯಾಣದ ಟಿಕೇಟನ್ನು ರದ್ದುಗೊಳಿಸುವಂತೆ ಹಲವಾರು ಮಂದಿ ಅಬ್ದುಲ್ಲಾ ಸೇಠರನ್ನು ಒತ್ತಾಯಿಸಿದರು.

ಗಾಂಧಿಯ ಆಸೆಯೂ ಅದುವೇ ಆಗಿತ್ತು. ವಾರದೊಳಗೆ ನೇಟಾಲ್‌ನ ರಸ್ತೆಬದಿಯ ಪುಟ್ಟ ಕೋಣೆಯೊಂದರ ಎದುರು, 'ನೇಟಾಲ್ ಇಂಡಿಯನ್ ಕಾಂಗ್ರೆಸ್-ಸ್ಥಾಪನೆ ೨೨.೦೫.೧೮೯೪' ಎಂಬ ಫಲಕ ತೂಗಾಡಿತು. ಬ್ಯಾರಿಸ್ಟರ್ ಮೋಹನದಾಸ ಗಾಂಧಿಯ ಕಾರ್ಯದರ್ಶಿತನದಲ್ಲಿ, ದಕ್ಷಿಣ ಆಫ್ರಿಕಾದ ಭಾರತೀಯರು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಪಾಠ ಕಲಿಸುವ ಶಾಲೆ ಆರಂಭವಾಯಿತು. 'ನೇಟಾಲ್ ಇಂಡಿಯನ್ ಕಾಂಗ್ರೆಸ್' ನ ಸದಸ್ಯರಲ್ಲಿ ಬಡವ ಬಲ್ಲಿದನೆಂಬ ಭೇದವಿಲ್ಲ, ಹಿಂದೂ ಮುಸ್ಲಿಮನೆಂಬ ವ್ಯತ್ಯಾಸವಿಲ್ಲ, ಗುಜರಾತೀ ಮದರಾಸೀ ಎಂಬ ವಿಭಾಗವಿಲ್ಲ, ಎಲ್ಲರೂ ಒಂದೇ; ಎಲ್ಲರೂ ಭಾರತೀಯರು.

ಗಾಂಧಿಗೆ ಸಾವಿರ ಆನೆಯ ಬಲ ಬಂದಂತಾಗಿತ್ತು. 'ನೇಟಾಲ್ ಇಂಡಿಯನ್ ಕಾಂಗ್ರೆಸ್'ಗೆ ಐದು ಷಿಲಿಂಗ್ ಕೊಟ್ಟು ಸದಸ್ಯರಾದ ಮಂದಿ ಸಭೆ ಸೇರಿದ ಮೊದಲ ದಿನವೇ, ಸ್ಥಳೀಯ ಶಾಸನ ಸಭೆಯ ಸ್ಪೀಕರ್‌ಗೆ ತಾರು ಕಳುಹಿಸಿಬಿಟ್ಟರು. 'ಸ್ಥಳಿಯರಾಗಿರುವ ಭಾರತೀಯ ಮೂಲ

ನಿವಾಸಿಗಳಿಗೆ ಮತದಾನದ ಹಕ್ಕನ್ನು ನಿರಾಕರಿಸುವ ಬಗ್ಗೆ ಶಾಸನಸಭೆಯಲ್ಲಿ ಮಂಡಿಸಲಾಗುವ ವಿಧೇಯಕಕ್ಕೆ ಎಲ್ಲ ಭಾರತೀಯ ಮೂಲ ನಿವಾಸಿಗಳ ವಿರೋಧವಿದೆ. ಆದ್ದರಿಂದ ವಿಧೇಯಕದ ಮೇಲಿನ ಚರ್ಚೆಯನ್ನು ಸಧ್ಯಕ್ಕೆ ಮುಂದೂಡಬೇಕು.'

ಅನಿರೀಕ್ಷಿತವಾಗಿ ಪ್ರತಿಭಟನೆಯ ರೂಪಧರಿಸಿ ಬಂದ ಸಂದೇಶವನ್ನು ಕಡೆಗಣಿಸುವ ಧೈರ್ಯ ಆ ಸ್ಪೀಕರನಿಗೂ ಇದ್ದಿರಲಿಲ್ಲವೆಂದು ಕಾಣುತ್ತದೆ. 'ಚರ್ಚೆಯನ್ನು ಎರಡು ದಿನಗಳ ಕಾಲ ಮುಂದೂಡಲಾಗಿದೆ' ಎಂದು ಸ್ಪೀಕರ್ ಬರೆದ ಪತ್ರ, 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಕಚೇರಿಗೆ ಬಂದೇಬಿಟ್ಟಿತು. ಗಾಂಧಿಯ ಹೋರಾಟಕ್ಕೆ ಸಂದ ಮೊದಲ ಗೌರವ ಇದು.

ಆದರೆ ಭಾರತೀಯ ಮೂಲ ನಿವಾಸಿಗಳಿಗೆ ಮತದಾನದ ಹಕ್ಕನ್ನು ನಿರಾಕರಿಸುವ ವಿಧೇಯಕವು ಶಾಸನಸಭೆಯಲ್ಲಿ ಎರಡು ದಿನಗಳ ಬಳಿಕ ಚರ್ಚೆಗೆ ಬಂದು, ಮಸೂದೆಯಾಗಿ ಕಾನೂನಿನ ರೂಪ ಪಡೆದೇ ಬಿಟ್ಟಿತು.

ಕೇವಲ ಒಂದು ತಾರು ಕಳುಹಿಸಿದ ಮಾತ್ರಕ್ಕೆ ಹೆದರುವ ಬಿಳಿಯರು, ವಿಧೇಯಕವನ್ನು ಹಿಂದಕ್ಕೆ ಪಡೆಯುತ್ತಾರೆಂಬ ಅತಿಆಸೆ ಗಾಂಧಿಗೆ ಮಾತ್ರವಲ್ಲ, ನೇಟಾಲ್ ಇಂಡಿಯನ್ ಕಾಂಗ್ರೆಸ್‌ನ ಸಾಮಾನ್ಯ ಸದಸ್ಯನಿಗೂ ಇದ್ದಿರಲಿಲ್ಲ. ಆದ್ದರಿಂದ ಅವರಾರಿಗೂ ನಿರಾಸೆಯಾಗಲಿಲ್ಲ. ಮೊದಲೇ ನಿರ್ಧರಿಸಿದ್ದಂತೆ, ವಿಧೇಯಕದ ವಿರುದ್ಧದ ಪ್ರತಿಭಟನೆಯ ಮನವಿಪತ್ರಕ್ಕೆ ಸಹಿಸಂಗ್ರಹ ಮಾಡಿ, ಹದಿನೈದು ದಿನಗಳ ಒಳಗೆ ಹತ್ತು ಸಾವಿರ ಮಂದಿಯ ಸಹಿ ದಾಖಲಿಸಿದ್ದ ಮನವಿ ಪತ್ರವನ್ನು ಸರಕಾರಕ್ಕೆ ಸಲ್ಲಿಸಿಯೇಬಿಟ್ಟರು.

ದಿನೇ ದಿನೇ ಪ್ರತಿಭಟನೆಯ ಧ್ವನಿಗಳು ಹೊಸ ಹೊಸ ದಿಕ್ಕುಗಳಿಂದ ಕೇಳಿ ಬರಲಾರಂಭಿಸಿದಾಗ ಸರಕಾರಕ್ಕೆ ಕಸಿವಿಸಿಯಾಯಿತು. 'ಲಂಡನ್ ಟೈಮ್ಸ್'ನಂತಹ ಪ್ರತಿಷ್ಠಿತ ಪತ್ರಿಕೆಗಳಿಗೆ ಕೂಡಾ ದಕ್ಷಿಣ ಆಫ್ರಿಕಾದಲ್ಲಿ ಭುಗಿಲೆದ್ದ ಕ್ರಾಂತಿಯ ಕಹಳೆಗೆ ಕಿವುಡಾಗಲು ಸಾಧ್ಯವಾಗಲಿಲ್ಲ. ವಾರವೊಂದರೊಳಗೆ ಗಾಂಧಿ ದೊಡ್ಡ ದೊಡ್ಡ ಪತ್ರಿಕೆಗಳ ಮುಖಪುಟವಾದರು. ದಕ್ಷಿಣ ಆಫ್ರಿಕಾದ ಭಾರತೀಯ ಜನನಾಯಕರಾಗಿ ಗಾಂಧಿ ಪ್ರಸಿದ್ಧಿ ಪಡೆದರು.

ಈ ಎಲ್ಲ ಬೆಳವಣಿಗೆಗಳಿಂದಾಗಿ ಗಾಂಧಿ ನೇಟಾಲನ್ನು ಬಿಟ್ಟು ಹೊರಡುವುದು ಸಾಧ್ಯವೇ ಇರಲಿಲ್ಲ. ದಿನಕ್ಕೆ ಹದಿನೆಂಟು ತಾಸು ದುಡಿದರೂ ಮುಗಿಯದಷ್ಟು ಕೆಲಸಗಳು ಅವರ ಮುಂದೆ ಬಿದ್ದಿರುತ್ತಿದ್ದವು. ಹೋರಾಟದ ಬಗೆಗಿನ ಓದು, ಬರಹಗಳ ಜೊತೆ ಜನಸಾಮಾನ್ಯರ ಒಳಿತಿಗಾಗಿ ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡುತ್ತಿರುವ ಮುಸಲ್ಮಾನ ಮತ್ತು ಕಿರಿಸ್ತಾನ ಸಮಾಜ ಸೇವಕರೊಂದಿಗೆ ಸಂಪರ್ಕವೂ ಬೆಳೆಯಿತು. ಮೊಹಮ್ಮದನ ಸಮಾನತೆ, ಕ್ರಿಸ್ತನ ಕರುಣೆಯ ಬಗೆಗಿನ ಓದು ಮತ್ತು ಚರ್ಚೆಗಳು ದಿನಚರಿಯಾಯಿತು.

ಆದರೆ, ಈ ಬಗೆಯ ದಿನಚರಿಯಿಂದ ಹೊಟ್ಟೆ ತುಂಬುವುದು ಸಾಧ್ಯವಿರಲಿಲ್ಲ. ಅವರ ಊಟದ ಖರ್ಚಿಗೆ ಯಾವುದಾದರೊಂದು ಬಗೆಯಲ್ಲಿ ಸಂಪಾದನೆ ಮಾಡಲೇ ಬೇಕಾಗಿತ್ತು. 'ನೇಟಾಲ್

ಇಂಡಿಯನ್ ಕಾಂಗ್ರೆಸ್'ನಲ್ಲಿ ನೇತಾರನ ಕೆಲಸ ಮಾಡಿದುದಕ್ಕೆ ತಿಂಗಳಿಗೆ ೩೦೦ ಪೌಂಡು ಸಂಬಳ ಪಡೆಯಬೇಕೆಂಬ ಸದಸ್ಯರ ವಿನಂತಿಯನ್ನು ಗಾಂಧಿ ಖಂಡತುಂಡವಾಗ್ಗಿ ತಿರಸ್ಕರಿಸಿದ್ದರು. ಸಮಾಜ ಸೇವೆ ಮಾಡುವವನು ಯಾವುದೇ ಪ್ರತಿಫಲದ ಆಸೆ ಹೊಂದಿರಬಾರದು ಎಂಬುದು ಅವರ ನಿಲುವಾಗಿತ್ತು. ಬಹಳಷ್ಟು ಚರ್ಚೆಯಾದ ಬಳಿಕ, ಗಾಂಧಿ ಸುಪ್ರೀಂಕೋರ್ಟಿನಲ್ಲಿ ನ್ಯಾಯವಾದಿಯಾಗಿ ಸೇರಿಕೊಳ್ಳುವುದೆಂದೂ, ಆರಿಸಿದ ಇಪ್ಪತ್ತು ವರ್ತಕರು ಜತೆಸೇರಿ ಗಾಂಧಿಗೆ ತಿಂಗಳಿಗೆ ೩೦೦ ಪೌಂಡು ಸಂಪಾದನೆಯಾಗುವಷ್ಟು ಮೊಕದ್ದಮೆಗಳನ್ನು ಒದಗಿಸುತ್ತಿರುವುದೆಂದೂ ನಿರ್ಧಾರವಾಯಿತು.

ಆದರೆ ಗಾಂಧಿಗೆ ಅಲ್ಲಿಯ ಸುಪ್ರೀಂಕೋರ್ಟಿನ ವಕೀಲರಾಗಿ ದಾಖಲಾಗುವುದು ಸುಲಭದ ಕೆಲಸವಾಗಿರಲಿಲ್ಲ. ಬಿಳಿಯರ ದಬ್ಬಾಳಿಕೆಯ ವಿರುದ್ಧ ರಣಕಹಳೆ ಊದಿದ್ದ ಒಬ್ಬ ಕರಿಯನನ್ನು ಸುಪ್ರೀಂಕೋರ್ಟಿನ ಒಳಗೆ ಬಿಟ್ಟುಕೊಡುವುದೆಂದರೆ ತಮ್ಮ ಗೋರಿಯನ್ನು ತಾವೇ ತೋಡಿಕೊಂಡಂತೆ ಎಂಬ ಭಯ ಬಿಳಿಯರಿಗಿತ್ತು. ಆದರೆ, ಬ್ಯಾರಿಸ್ಟರ್ ಕಲಿತ ವಕೀಲನೊಬ್ಬನನ್ನು ಕೋರ್ಟಿನ ಒಳಗೆ ಬರಬೇಡವೆಂದು ಹೇಳುವ ಯಾವ ಮಾತುಗಳನ್ನೂ ಕಾನೂನು ಪುಸ್ತಕಗಳಲ್ಲಿ ಸೇರಿಸಿಕೊಳ್ಳದ ತಮ್ಮ ಹಿರಿಯರ ಮೂರ್ಖತನಕ್ಕೆ ಅವರು ತಲೆ ಚಚ್ಚಿಕೊಂಡಿದ್ದಿರಬಹುದು. ಮುಂದೊಂದು ದಿನ, ಬಿಳಿಯನಲ್ಲದ ಒಬ್ಬಾತ ಬ್ಯಾರಿಸ್ಟರ್ ಪದವಿ ಪಡೆದು ಬಂದು ತಮ್ಮನ್ನೆಲ್ಲ ತರಾಟೆಗೆ ತೆಗೆದುಕೊಂಡಾನು ಎಂಬ ಕನಸನ್ನೂ ಅಲ್ಲಿಯ ಕಾನೂನು ಗ್ರಂಥ ರಚಿಸಿದ್ದವರು ಕಂಡಿದ್ದಿರಲಾರರು. ಸುಪ್ರೀಂಕೋರ್ಟಿನ ಒಳಗೆ ಬರುವಾಗ ತನ್ನ ತಲೆಯ ಮೇಲಿನ ಮುಂಡಾಸು ತೆಗೆದಿರಿಸಬೇಕು ಎಂಬ ಸಂಪ್ರದಾಯವನ್ನಷ್ಟೇ ಗಾಂಧಿಗೆ ವಿಧಿಸಲು ಶಕ್ತರಾದ ಬಿಳಿಯರು, ಅದಷ್ಟರಿಂದಲೇ ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ಮುಂಡಾಸು ಧರಿಸಿಯೇ ಸುಪ್ರೀಂ ಕೊರ್ಟ್‌ನಲ್ಲಿ ಕೆಲಸ ಮಾಡುವೆ ಎಂದೇ ಹಠ ಹಿಡಿದರೆ ಗೆಲುವು ಖಂಡಿತ ಎಂಬ ಭರವಸೆ ಗಾಂಧಿಗೆ ಇತ್ತು. ಆದರೆ, ತನ್ನ ಮುಂದಿರುವ ದೊಡ್ಡ ಹೋರಾಟಕ್ಕೆ ಬಲವಾದ ಶಿರಸ್ತ್ರಾಣ ಧರಿಸುವ ಸಲುವಾಗಿ ಗಾಂಧಿ, ಮುಂಡಾಸನ್ನು ತ್ಯಜಿಸಬೇಕೆನ್ನುವ ನ್ಯಾಯಾಲಯದ ಆದೇಶಕ್ಕೆ ತಲೆಬಾಗಿದ್ದರು.

'ನೇಟಾಲ್ ಇಂಡಿಯನ್ ಕಾಂಗ್ರೆಸ್'ನ ಸದಸ್ಯರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದ್ದರೂ, ಅನಕ್ಷರಸ್ಥ ಕೂಲಿ ಕಾರ್ಮಿಕರು ಮತ್ತು ಕರಾರುಬದ್ಧ ಕೂಲಿಯಾಳುಗಳು ಕಾಂಗ್ರೆಸ್‌ನಿಂದ ದೂರವೇ ಉಳಿದುಬಿಟ್ಟಿದ್ದಾರೆಂದು ತಿಳಿಯಲು ಗಾಂಧಿಗೆ ಹೆಚ್ಚು ದಿನಗಳು ಬೇಕಾಗಲಿಲ್ಲ. ಚಂದಾಕೊಟ್ಟು ಸದಸ್ಯರಾಗುವ ಶಕ್ತಿ ಅವರಿಗಿರಲಿಲ್ಲ ಎಂಬುದು ನಿಜವಾದರೂ, ಅದಕ್ಕಿಂತ ಹೆಚ್ಚಾಗಿ 'ಇಂಡಿಯನ್ ಕಾಂಗ್ರೆಸ್' ತಮಗೂ ಸಂಬಂಧಪಟ್ಟ ಸಂಸ್ಥೆಯೆಂದು ಅವರಿಗೆ ಅನ್ನಿಸಿಯೇ ಇರಲಿಲ್ಲ. ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದ ಗಾಂಧಿಯ ಬಳಿಗೆ ಪರಿಹಾರವೊಂದು ತಾನೇ ಹುಡುಕಿಕೊಂಡು ಬಂದಿತ್ತು; ಚಿಂದಿ ಉಡುಪು ತೊಟ್ಟ ಗಾಯಾಳುವಿನ ರೂಪದಲ್ಲಿ.

ನಡು ಮಧ್ಯಾಹ್ನದ ಹೊತ್ತು. ತನ್ನ ತಲೆಯ ರುಮಾಲನ್ನು ಕೈಗಳಲ್ಲಿ ಹಿಡಿದುಕೊಂಡು ಬಂದು ನಿಂತ ವ್ಯಕ್ತಿಯನ್ನು ಗಾಂಧಿ ಗಾಬರಿಯಿಂದಲೇ ನೋಡಿದ್ದರು. ಅವನ ಎದುರಿನ ಎರಡು ಹಲ್ಲು ಗಳು ಮುರಿದಿದ್ದವು. ಬಾಯಿಯಿಂದ ರಕ್ತ ಜಿನುಗುತ್ತಿತ್ತು. ಹೆಸರು ಬಾಲಸುಂದರಂ. ಊರು ಮದರಾಸು. ಭಾಷೆ ತಮಿಳು. ವೃತ್ತಿ ಕರಾರು ಕೂಲಿ. ಬಂದ ಕಾರಣ: ಅವನ ಬಿಳಿಯ ಯಜಮಾನ.

ಗಾಂಧಿಯ ವಕೀಲಿ ಮನಸ್ಸು ಕೂಡಲೇ ಜಾಗೃತವಾಗಿತ್ತು. ಬಾಲಸುಂದರನನ್ನು ಪರಿಚಿತ ಬಿಳಿಯ ವೈದ್ಯರೊಬ್ಬರ ಬಳಿಗೆ ಕಳುಹಿಸಿ, ಗಾಯದ ಬಗ್ಗೆ ಪ್ರಮಾಣಪತ್ರ ಸಿದ್ಧಪಡಿಸಿದರು. ಮ್ಯಾಜಿಸ್ಟ್ರೇಟರ ಬಳಿಗೆ ಅವನನ್ನು ಕರೆದುಕೊಂಡು ಹೋಗಿ ದೂರು ಕೊಡಿಸಿದರು. ಗಾಯದ ಬಗ್ಗೆ ವೈದ್ಯರು ನೀಡಿದ ಪ್ರಮಾಣಪತ್ರವನ್ನು ನ್ಯಾಯಾಲಯದಲ್ಲಿ ದಾಖಲಿಸಿದರು.

ಗಾಂಧಿಯ ಕೆಲಸ ಅಲ್ಲಿಗೆ ನಿಲ್ಲಲಿಲ್ಲ. ಬಾಲಸುಂದರಂನಿಗೆ ಹೊಡೆದ ಅವನ ಬಿಳಿಯ ಯಜಮಾನನ ಬಳಿಗೆ ಹೋಗಿ, 'ನಿಮ್ಮ ಮೇಲೆ ಮೊಕದ್ದಮೆ ದಾಖಲಾಗಿದೆ. ನೀವು ಬಾಲಸುಂದರಂನನ್ನು ನಿಮ್ಮ ಬಳಿಯೇ ಕೆಲಸ ಮಾಡಬೇಕೆಂಬ ಕರಾರಿನಿಂದ ಬಿಡುಗಡೆ ಗೊಳಿಸಿದರೆ, ನಾನು ಮೊಕದ್ದಮೆಯನ್ನು ಹಿಂದಕ್ಕೆ ಪಡೆಯುವಂತೆ ನನ್ನ ಕಕ್ಷಿದಾರನಿಗೆ ತಿಳಿಯಹೇಳುವೆ. ಹೀಗೆ ಮಾಡುವುದರಿಂದ ನಿಮಗೆ ಲಾಭವಾಗುತ್ತದೆ.' ಎಂದರು. ಗಾಂಧಿಯ ಮತ್ತು ಗಾಂಧಿ ಕಟ್ಟಿಕೊಂಡಿರುವ ಸಂಘಟನೆಯ ಬಗ್ಗೆ ತಿಳಿದಿದ್ದ ಆತ, ಗಾಂಧಿಯ ಎಲ್ಲ ಸಲಹೆ ಗಳನ್ನೂ ಮರುಮಾತಿಲ್ಲದೆ ಒಪ್ಪಿಕೊಂಡನು. ಕ್ರೂರಿ ಯಜಮಾನನ ಕರಾರಿನಿಂದ ಬಿಡುಗಡೆ ಗೊಂಡ ಬಾಲಸುಂದರಂನ ಕರಾರು ಪತ್ರವನ್ನು ಗಾಂಧಿ, ತನಗೆ ಗೊತ್ತಿರುವ ಸಜ್ಜನನಾದ ಒಬ್ಬ ಬಿಳಿಯ ಮಿತ್ರನಿಗೆ ವರ್ಗಾಯಿಸಿದರು.

ಬಾಲಸುಂದರಂನನ್ನು ಅವನ ಹೊಸ ಯಜಮಾನನ ಜತೆ ಕಳುಹಿಸಿಕೊಡುವಾಗ ಗಾಂಧಿ ಅವನ ಬೆನ್ನು ತಟ್ಟಿ ಹೇಳಿದ್ದರು, 'ನೀನು ನನ್ನ ಬಳಿ ಬರುವಾಗ ತಲೆಯ ರುಮಾಲನ್ನು ಕಳಚಿ ಕೈಯಲ್ಲಿ ಹಿಡಿದುಕೊಳ್ಳಬೇಕಾಗಿಲ್ಲ.' ಬಾಲಸುಂದರನ ಕಣ್ಣುಗಳು ತೇವವಾಗಿದ್ದವು; ಗಾಂಧಿಯದ್ದು ಕೂಡಾ. ರಾಜಕೋಟೆಯಲ್ಲಿ ಅವರು ಓದುತ್ತಿರುವ ದಿನಗಳಲ್ಲಿ ಮೆಹತಾಬನ ಜೊತೆಗೆ ಸುಧಾರಕರ ಸಂಘದ ಸಭೆಗೆ ಹೋಗಿದ್ದಾಗ, ಹಿರಿಯರಾದ ಮೆಹತಾರವರು ಹೇಳಿದ್ದ ಮಾತು ಗಳು ನೆನಪಾಗಿದ್ದವು. ' ನಮ್ಮ ಹೋರಾಟದಲ್ಲಿ ನಾವು, ಹಸಿರೆಲೆ ತಿನ್ನುವ ಜಾತಿಯವರು ಮಾತ್ರವಲ್ಲ, ಮಾಂಸ ತಿನ್ನುವ ಎಲ್ಲ ಜಾತಿಯವರೂ ಭಾಗವಹಿಸುವಂತಾಗಬೇಕು. ಆಗ ಮಾತ್ರ ನಾವೆಲ್ಲ ಗಟ್ಟಿಯಾಗಿ ಬ್ರಿಟಿಷ್ ಸರಕಾರದ ವಿರುದ್ಧ ಹೋರಾಡಿ ವಿಜಯ ಸಾಧಿಸಬಹುದು.'

ಬಾಲಸುಂದರಂ ಪ್ರಕರಣವು ಕೂಲಿಕಾರ್ಮಿಕರ ಗುಡಿಸಲುಗಳಲ್ಲಿ ನಿತ್ಯ ಚರ್ಚೆಯ ಸಂಗತಿ ಯಾಯಿತು. ಗಾಂಧಿಯೆಂಬ ಮನುಷ್ಯನು ತಮ್ಮ ಪರವಾಗಿ ಹೋರಾಡಲು ಬಂದ ದೇವದೂತ ನೆಂದೇ ಅವರು ಭಾವಿಸಿದರು. 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಕಚೇರಿಯು ಕೂಲಿ ಕಾರ್ಮಿಕರ ಯಾತ್ರಾಸ್ಥಳವಾಯಿತು.

# ಯೇಸುಕ್ರಿಸ್ತ ಇಳಿಸಿದ ಬಾವುಟ

'ನೇಟಾಲ್ ಇಂಡಿಯನ್ ಕಾಂಗ್ರೆಸ್'ನ ಕೆಲಸಗಳಿಂದ ಆರು ತಿಂಗಳ ರಜಪಡೆದು ಭಾರತಕ್ಕೆ ಹೋಗಿದ್ದ ಗಾಂಧಿ, ಮರಳಿ ದಕ್ಷಿಣ ಆಫ್ರಿಕಾಕ್ಕೆ ಬರುವಾಗ ತಮ್ಮ ಹೆಂಡತಿ ಕಸ್ತೂರಿಬಾಯಿಯ ಜೊತೆಗೆ, ತಮ್ಮಿಬ್ಬರು ಮಕ್ಕಳಾದ – ಒಂಭತ್ತು ವರ್ಷ ವಯಸ್ಸಿನ ಹರಿಲಾಲ್, ಐದು ವರ್ಷ ವಯಸ್ಸಿನ ಮನಿಲಾಲ್ ಹಾಗೂ ಹತ್ತು ವರ್ಷ ತುಂಬಿದ್ದ ತನ್ನ ಅಕ್ಕನ ಮಗ ಛಗನ್‌ಲಾಲನನ್ನು ಜತೆಗೆ ಕರೆದುಕೊಂಡು ಬಂದಿದ್ದರು.

ಆ ದಿನ ಡರ್ಬನ್ ಬಂದರಿನಲ್ಲಿ ಜನಜಾತ್ರೆ, ಡಿಸೆಂಬರ್ ತಿಂಗಳ ಚಳಿಗಾಳಿಯು ಕಡಲಿನ ಬೀಸುಗಾಳಿಯ ಜೊತೆ ಗೆಳೆತನ ನಡೆಸುತ್ತಿತ್ತು. ಗಾಂಧಿಯನ್ನು ಹೊತ್ತು ಬಂದಿದ್ದ ಹಡಗು ಬಂದರಿಗೆ ಬಂದಿತ್ತು. ಗಾಂಧಿಯನ್ನು ಸ್ವಾಗತಿಸಲೆಂದು ಉತ್ಸಾಹದಿಂದ ಬಂದಿದ್ದವರಿಗೆ; ಧಕ್ಕೆಯ ಮುಂಭಾಗದ ಜಾಗವನ್ನು ಇಡಿಯಾಗಿ ಆಕ್ರಮಿಸಿಕೊಂಡಿದ್ದ ಸುಮಾರು ಅರುವತ್ತರಷ್ಟಿಬಹುದಾದ ಯುವಕರ ದಂಡನ್ನು ಕಂಡು ದಿಗ್ಭ್ರಮೆಯಾಗಿತ್ತು. ಅತ್ತಿಂದಿತ್ತ, ಇತ್ತಿಂದತ್ತ ಓಡಾಡುತ್ತಿದ್ದ ಪೋಲೀಸರ ಬೂಟುಗಳ ಕಟ್ ಕಟ್ ಸಪ್ಪಳವು, ಬಂದರಿನಲ್ಲಿ ಆತಂಕದ ವಾತಾವರಣವನ್ನು ಸೃಷ್ಟಿಸಿತ್ತು.

'ಗಾಂಧಿ ಕುಟುಂಬವನ್ನು ನಮ್ಮ ದೇಶದಲ್ಲಿ ಇಳಿಯಲು ಬಿಡುವುದಿಲ್ಲ', 'ಗಾಂಧಿ ಹಿಂದಕ್ಕೆ ಹೊರಡು', 'ಕೂಲಿ ಬ್ಯಾರಿಸ್ಟರ್ ನಮಗೆ ಬೇಡ' ಎಂದೆಲ್ಲ ಬರೆದಿದ್ದ ಫಲಕಗಳನ್ನು ಅವರು ಹಿಡಿದುಕೊಂಡಿದ್ದರು. ಭೋರ್ಗರೆಯುವ ಕಡಲಿನ ತೆರೆಗಳ ಸದ್ದು ಕೇಳಿಸದಷ್ಟು ಗಟ್ಟಿಯಾಗಿ ಆ ಯುವಕರು ಘೋಷಣೆಗಳನ್ನು ಕೂಗುತ್ತಿದ್ದರು.

ನಿಜವಾಗಿ ನೋಡಿದರೆ 'ನಮ್ಮ ದೇಶ' ಎಂದು ಘೋಷಣೆಗಳನ್ನು ಕೂಗುತಿದ್ದ ಆ ಬಿಳಿಯ ಹುಡುಗರಿಗೆ, ದಕ್ಷಿಣ ಆಫ್ರಿಕಾ ತಾಯ್ನಾಡೇ ಆಗಿದ್ದಿರಲಿಲ್ಲ. ಅವರಾರೂ ಆ ದೇಶದ ಮೂಲ ನಿವಾಸಿಗಳಲ್ಲ. ಆದರೆ ಗಾಂಧಿಯನ್ನು ಸ್ವಾಗತಿಸಲು ಬಂದವರಲ್ಲಿ ಹೆಚ್ಚಿನವರು ಅಲ್ಲಿಯ ಮೂಲ ನಿವಾಸಿಗಳಾಗಿದ್ದರೂ, ಅವರು ಅಲ್ಲಿ ಬಿಳಿಯರ ಗುಲಾಮರಂತೆಯೇ ಬದುಕಬೇಕಾಗಿತ್ತು. ಅವರ ಮಾತುಗಳಿಗೆ, ಅವರ ಬಯಕೆಗಳಿಗೆ ಅಲ್ಲಿಯ ಬಿಳಿಯರ ಸರಕಾರವಾಗಲೀ, ಬಿಳಿಯರಿಂದಲೇ ಪ್ರಕಟವಾಗುತ್ತಿದ್ದ ಅಲ್ಲಿಯ ಪತ್ರಿಕೆಗಳಾಗಲೀ ಬೆಲೆ ಕೊಡುತ್ತಿರಲಿಲ್ಲ.

ಗಾಂಧಿಯ ನಿಸ್ವಾರ್ಥ ಸೇವೆಯನ್ನು ಈ ಹಿಂದೆ ಕಣ್ಣಾರೆ ಕಂಡಿದ್ದ ಕೆಲವು ಬಿಳಿಯರೂ, ಗಾಂಧಿಯ ಸ್ವಾಗತಕ್ಕೆಂದು ಬಂದಿದ್ದರು. ಆದರೆ ಅಲ್ಲಿ ಅದಾಗಲೇ ಗುಂಪು ಕಟ್ಟಿ ಘೋಷಣೆಗಳನ್ನು ಕೂಗುತ್ತಿದ್ದ ಯುವಕರನ್ನು ಕಂಡು ಹಿಂದಕ್ಕೆ ಹೋಗಿದ್ದರು. ಎಳೆಂಟು ಮಂದಿ ಬಿಳಿಯರು ಧೈರ್ಯವಹಿಸಿ ಭಾರತೀಯ ಗುಂಪಿನ ನಡುವೆ ಉಳಿದುಕೊಂಡಿದ್ದರಾದರೂ, ಅವರಾರಿಗೂ ಗಾಂಧಿ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದ ಬಿಳಿಯರ ಗುಂಪನ್ನು ಎದುರಿಸುವಷ್ಟು ಗಟ್ಟಿ ದನಿಯಿರಲಿಲ್ಲ.

ಸಾಮಾನ್ಯವಾಗಿ ಹಡಗೊಂದು ಧಕ್ಕೆಗೆ ಬಂದರೆ ಅದರೊಳಗಿರುವ ಎಲ್ಲ ಪ್ರಯಾಣಿಕರನ್ನೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವ ಕ್ರಮವು ಹೊಸತೇನೂ ಅಲ್ಲ. ಸಾಂಕ್ರಾಮಿಕ ಖಾಯಿಲೆ ಇರುವವರನ್ನು ಪ್ರತ್ಯೇಕವಾಗಿರಿಸಿ, ಅಂಥವರನ್ನು ಪೂರ್ತಿಯಾಗಿ ಗುಣವಾದ ಬಳಿಕವೇ ನೆಲಕ್ಕೆ ಹೆಜ್ಜೆಯಿಡಲು ಬಿಡಲಾಗುತ್ತಿತ್ತು.

ವೈದ್ಯಕೀಯ ಪರೀಕ್ಷೆಯಾಗುತ್ತಿರುವ ದಿನಗಳಲ್ಲಿ ಹಡಗಿನ ನೆತ್ತಿಯ ಮೇಲೆ ಹಳದಿ ಬಾವುಟವೊಂದನ್ನು ಹಾರಿಸಲಾಗುತ್ತಿತ್ತು. ಗಾಂಧಿಯನ್ನು ಸುಮಾರು ಇಪ್ಪತ್ತು ದಿನಗಳ ಕಾಲ ಕಡಲಲ್ಲಿ ತೇಲಿಸಿ, ಜಾಗ್ರತೆಯಾಗಿ ಕರೆದು ತಂದು ನಿಂತಿದ್ದ ಅಬ್ದುಲ್ಲಾ ಸೇಠರ ಸ್ವಂತ ಹಡಗಿನ ಹಳದಿ ಬಾವುಟವು ನಾಲ್ಕು ದಿನವಾದರೂ ಕೆಳಗಿಳಿಯಲಿಲ್ಲ. ಕಾರಣ; ವೈದ್ಯಕೀಯ ಪರೀಕ್ಷೆಯ ನೆಪ.

ಬಂದರಿನಲ್ಲಿ ಮಾತ್ರವಲ್ಲ, ಊರೊಳಗೆಯೂ ಗಾಂಧಿಯ ವಿರುದ್ಧ ಬಿಳಿಯರ ಚಳುವಳಿಗಳು ಪ್ರಾರಂಭಗೊಂಡಿದ್ದವು. ಏನೇ ಆದರೂ ಗಾಂಧಿಯನ್ನು ಮತ್ತೊಮ್ಮೆ ದಕ್ಷಿಣ ಆಫ್ರಿಕಾದ ನೆಲದ ಮೇಲೆ ಕಾಲಿಡಲು ಬಿಡಬಾರದೆಂದು ಅಲ್ಲಿಯ ಬಿಳಿಯರು ನಿರ್ಧರಿಸಿದಂತಿತ್ತು.

ಗಾಂಧಿಯನ್ನು ದಕ್ಷಿಣ ಆಫ್ರಿಕಕ್ಕೆ ಪರಿಚಯಿಸಿದ್ದು ಮಾತ್ರವಲ್ಲ, ಇದೀಗ ಎರಡನೆಯ ಬಾರಿಗೆ ಗಾಂಧಿಯನ್ನೂ, ಅವರ ಜತೆಯಲ್ಲಿ ಎರಡು ಹಡಗುಗಳ ತುಂಬ ಭಾರತೀಯರನ್ನೂ ಕರೆದು ತಂದಿದ್ದ ಅಬ್ದುಲ್ಲಾ ಸೇಠರ ವಿರುದ್ಧವೂ ಘೋಷಣೆ, ಪ್ರದರ್ಶನಗಳು ಪ್ರತಿನಿತ್ಯ ನಡೆಯುತ್ತಿತ್ತು. ಬರಿಯ ವ್ಯಾಪಾರ ಮಾಡಿಕೊಂಡು ತಮ್ಮ ಪಾಡಿಗೆ ತಾವಿದ್ದ ಅಬ್ದುಲ್ಲಾ ಸೇಠರಂತಹ ಕೆಲವು ಬಲಾಢ್ಯ ನಾಗರಿಕರನ್ನು, ನಾಡಿನ ಆಡಳಿತದಲ್ಲಿ ಮೂಗು ತೂರಿಸುವಂತೆ ಪ್ರೇರೇಪಿಸಿದವರು ಗಾಂಧಿ ಎಂಬುದು ಅವರಿಗೆ ಗೊತ್ತಿತ್ತು. ಅಂತಹ ಅಪಾಯಕಾರಿ ವಕೀಲನನ್ನು ಮತ್ತೊಮ್ಮೆ ಊರೊಳಗೆ ಬಿಟ್ಟುಕೊಡುವುದೆಂದರೆ, 'ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆ' ಎಂಬುದು ಅವರಿಗೆ ಖಂಡಿತವಾಗಿತ್ತು.

ಅಲ್ಲಿ ಆಡಳಿತ ನಡೆಸುತ್ತಿದ್ದ ಬಿಳಿಯರ ಸರಕಾರಕ್ಕೆ ಗಾಂಧಿಯ ವಿರುದ್ಧ ಸಿಟ್ಟು ಬರಲು ಬೇರೊಂದು ಕಾರಣವೂ ಇತ್ತು. ಹೆಂಡತಿ ಮಕ್ಕಳನ್ನು ಕರೆದುಕೊಂಡು ಬರುತ್ತೇನೆ ಎಂಬ ಕಾರಣ ಹೇಳಿ ಭಾರತಕ್ಕೆ ಹೋಗಿದ್ದ ಗಾಂಧಿ, ಹೇಳಿದಷ್ಟನ್ನೇ ಮಾಡಿಕೊಂಡು ಮರಳಿ ಬಂದಿದ್ದರೆ ಬಿಳಿಯರಿಗೆ ಇಷ್ಟೊಂದು ಕೋಪ ಬರುತ್ತಿರಲಿಲ್ಲವೇನೋ.

ಸಾವಿರ ದಿನಗಳ ಪ್ರತಿಯೊಂದು ನಿಮಿಷವೂ ದಕ್ಷಿಣ ಆಫ್ರಿಕಾದ ಭಾರತೀಯರ ಮೇಲೆ ಬಿಳಿಯರು ನಡೆಸುತ್ತಿದ್ದ ದಬ್ಬಾಳಿಕೆಯನ್ನು ಸ್ವತಃ ಕಂಡು, ನೋವು ಅನುಭವಿಸಿದ್ದ ಗಾಂಧಿಗೆ, ಭಾರತದ ನೆಲದಲ್ಲಿ ಹೆಂಡತಿ ಮಕ್ಕಳ ಜತೆಗೆ ರಜವನ್ನು ಸುಖವಾಗಿ ಕಳೆಯುವುದು ಸಾಧ್ಯವಾಗುವುದಾದರೂ ಹೇಗೇ ? ಅವರೊಳಗೆ ಅವರ ಬಾಲ್ಯದ ಬಂಡಾಯಗಾರ ಗೆಳೆಯ ಮೆಹತಾಬ ಪರಕಾಯ ಪ್ರವೇಶ ಮಾಡಿಕೊಂಡಿದ್ದ.

ರಾಜಕೋಟೆಗೆ ತಲುಪಿದ ದಿನವೇ ಮೆಹತಾಬನನ್ನು ಹುಡುಕಿಕೊಂಡು ಗಾಂಧಿ ಅವನ ಮನೆಗೆ ಹೋಗಿದ್ದರು. ಮಾಂಸ ತಿಂದು ಗಟ್ಟಿಯಾಗಿರುವ ಬಿಳಿಯರ ವಿರುದ್ಧ, ಮಾಂಸ ತಿಂದರೂ ಗಟ್ಟಿಯಾಗಿರದ ಜನರನ್ನು, ದಕ್ಷಿಣ ಆಫ್ರಿಕಾದಲ್ಲಿ ತಾನು ಮಾಂಸ ತಿನ್ನದೆಯೂ ಹೋರಾಟಕ್ಕೆ ಸಂಘಟಿಸಿದ ಗಟ್ಟಿ ಕತೆಯನ್ನು ಅವನಿಗೆ ತಿಳಿಸಲು ಗಾಂಧಿ ತುದಿಗಾಲಲ್ಲಿ ನಿಂತಿದ್ದರು. ತನ್ನ ಎದೆಯೊಳಗೇ ಇದ್ದು ತನಗೆ ಪ್ರತಿದಿನವೂ, 'ನಡೆ ಮುಂದೆ ಮೋಹನಾ, ನಡೆ ಮುಂದೆ. ನಿನ್ನ ಜತೆ ನಾನಿದ್ದೇನೆ.' ಎಂದು ಉತ್ಸಾಹ ತುಂಬುತ್ತಿದ್ದ ಜೀವದ ಗೆಳೆಯ ಮೆಹತಾಬನಿಗೆ ಕೃತಜ್ಞತೆ ಹೇಳಲು ಗಾಂಧಿ ಕಾತುರರಾಗಿದ್ದರು.

ಮನೆಬಾಗಿಲಿಗೆ ಬಂದಿದ್ದ ಗಾಂಧಿಯನ್ನು ಮೆಹತಾಬನ ತಾಯಿ ಪ್ರೀತಿಯಿಂದಲೇ ಬರಮಾಡಿ ಕೊಂಡಿದ್ದರು. ಆದರೆ, ಮೆಹತಾಬ ಅಲ್ಲೆಲ್ಲೂ ಕಾಣಿಸಿದ್ದಿರಲಿಲ್ಲ. ಪ್ರೌಢಶಾಲೆಯ ದಿನಗಳಲ್ಲೇ ಮನೆಬಿಟ್ಟು ಅದ್ಯಾವುದೋ ಕ್ರಾಂತಿಕಾರಿ ಸಂಘಟನೆಯ ಬೆನ್ನು ಹತ್ತಿ ಹೋಗಿದ್ದ ಮೆಹತಾಬನು ಮತ್ತೆ ಮನೆಗೆ ಮರಳಿದ್ದಿರಲಿಲ್ಲ. ಗಾಂಧಿಗೆ ನಿರಾಸೆಯಾಗಿತ್ತು. ಅವನು ರಂಗೂನಿಗೆ ಹೋಗಿದ್ದಾನೆ ಎಂಬ ಸುದ್ದಿ ಇದ್ದರೂ ಆ ಬಗ್ಗೆ ಖಚಿತವಾದ ಮಾಹಿತಿ ಅಲ್ಲಿ ಇದ್ದ ಯಾರಿಗೂ ಗೊತ್ತಿರಲಿಲ್ಲ.

ದಕ್ಷಿಣ ಆಫ್ರಿಕಾದ ಭಾರತೀಯ ಕರಿಯರನ್ನು ಆಳುತ್ತಾ ಅಳಿಸುತ್ತಿರುವ ಬಿಳಿಯರ ವಿರುದ್ಧ, ಭಾರತದಲ್ಲಿ ಜನಾಭಿಪ್ರಾಯ ರೂಪಿಸಲು ಗಾಂಧಿ ಕೆಲಸ ಶುರುಮಾಡಿದರು. ಒಂದು ತಿಂಗಳ ಕಾಲ ತಪಸ್ಸಿಗೆ ಕುಳಿತವರಂತೆ ಕುಳಿತು ದಕ್ಷಿಣ ಆಫ್ರಿಕಾದಲ್ಲಿನ ತನ್ನ ಅನುಭವವನ್ನು ಕುರಿತು ಪುಸ್ತಕವೊಂದನ್ನು ಬರೆದರು. ಪುಸ್ತಕದ ಹತ್ತು ಸಾವಿರ ಪ್ರತಿಗಳನ್ನು ಮುದ್ರಿಸಿದರು. ಮುದ್ರಿಸಿದ ಹತ್ತು ಸಾವಿರ ಪುಸ್ತಕಗಳನ್ನು ಲಕೋಟೆಗಳಲ್ಲಿರಿಸಿ, ಅಂಚೆ ಚೀಟಿ ಅಂಟಿಸಿ ರವಾನಿಸುವುದು ಸುಲಭದ ಕೆಲಸವಾಗಿದ್ದಿರಲಿಲ್ಲ. ಆದರೆ ಗಾಂಧಿ ಅದಾಗಲೇ ಸಂಘಟನೆಗೆ ಅಗತ್ಯವಾದ ಎಲ್ಲ ತಂತ್ರಗಳನ್ನೂ ಕಲಿತುಬಿಟ್ಟಿದ್ದರು.

ತಾನು ವಾಸಿಸುತ್ತಿದ್ದ ಪರಿಸರದ ಮಕ್ಕಳನ್ನೆಲ್ಲ ಜತೆಗೂಡಿಸಿ, ಅವರ ರಜಾದಿನಗಳನ್ನು ತನ್ನ ಹೋರಾಟದ ಕೆಲಸಕ್ಕೆ ಬಳಸಿಕೊಂಡರು. ಗಾಂಧಿ ತನ್ನ ಸಂಗ್ರಹದಲ್ಲಿದ್ದ ಹಳೆಯ ಬಳಸಿದ ಅಂಚೆ ಚೀಟಿಗಳನ್ನು ಮಕ್ಕಳಿಗೆ ಉಡುಗೊರೆಯಾಗಿ ನೀಡುತ್ತಿದ್ದಾರೆ ಎಂಬ ಸುದ್ದಿ ಗೊತ್ತಾದ ಬಳಿಕ ಮಕ್ಕಳು ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಿದರು. ಕಾಗದ ಕತ್ತರಿಸಲು ಆರು ಮಕ್ಕಳು. ಲಕೋಟೆ ಮಾಡಿ ಗೋಂದು ಅಂಟಿಸಲು ಹನ್ನೆರಡು ಮಕ್ಕಳು. ಪುಸ್ತಕಗಳನ್ನು ಲಕೋಟೆಗಳಲ್ಲಿ ತುಂಬಿಸಿ ನೂರರಂತೆ ಕಟ್ಟು ಮಾಡಿ ಜೋಡಿಸಲು ಹದಿನೆಂಟು ಮಕ್ಕಳು.

ಗಾಂಧಿಯ ಮನೆಯಂಗಳವು ಮಕ್ಕಳ ಆಟದ ಬಯಲಿನಂತಾಯಿತು.

ತನ್ನ ಕೆಲಸದಲ್ಲಿ 'ಸುದ್ದಿ ಪತ್ರಿಕೆ'ಗಳ ಸಹಕಾರ ಅತೀ ಅಗತ್ಯ ಎಂಬುದು ಗಾಂಧಿಗೆ ಗೊತ್ತಿತ್ತು. ಹಾಗಾಗಿ ಪುಸ್ತಕದ ಪ್ರತಿಗಳನ್ನು ಎಲ್ಲ ಪತ್ರಿಕೆಗಳಿಗೂ ಕಳುಹಿಸಿ ಕೊಟ್ಟರು. ಪುಸ್ತಕದಲ್ಲಿರುವ

ವಿಷಯದ ಬಗ್ಗೆ ಪತ್ರಿಕೆಯಲ್ಲಿ ಚರ್ಚೆ ಆರಂಭಿಸುವಂತೆ ಸಂಪಾದಕರುಗಳಿಗೆ ಪತ್ರ ಬರೆದರು. ಕೆಲವು ಪತ್ರಿಕಾ ಕಚೇರಿಗಳಿಗೆ ಸ್ವತಃ ಹೋಗಿ ವಿನಂತಿಸಿದರು. ಹಲವು ಪತ್ರಿಕೆಗಳವರಿಗೆ ಅವರ ಗೆಳೆಯರಿಂದ ಪತ್ರ ಬರೆಸಿ ಒತ್ತಾಯಿಸಿದರು. ಗಾಂಧಿಯ ಪ್ರಯತ್ನವು ಫಲ ನೀಡಿತು. ದೇಶ ವಿದೇಶಗಳ ದೊಡ್ಡ ದೊಡ್ಡ ಪತ್ರಿಕೆಗಳೂ ಗಾಂಧಿ ಕಳುಹಿಸಿದ್ದ ಹಸುರು ಬಣ್ಣದ ಹೊದಿಕೆ ಹೊತ್ತ ಆ ಪುಸ್ತಕವನ್ನು 'ಹಸಿರು ಪತ್ರ'ವೆಂದೇ ಹೆಸರಿಸಿ, ಅದರ ಪರ ಮತ್ತು ವಿರೋಧವಾದ, ಎರಡೂ ಬಗೆಯ ಅಭಿಪ್ರಾಯಗಳನ್ನು ಓದುಗರಿಂದ ಸಂಗ್ರಹಿಸಿ ಪ್ರಕಟಿದವು.

ದಕ್ಷಿಣ ಆಫ್ರಿಕಾದಲ್ಲಿ ಅಧಿಕಾರ ನಡೆಸುತ್ತಿರುವ ಬಿಳಿಯರೂ ಪತ್ರಿಕೆ ಓದಿದ್ದರು. ಕೋಪ ಬಾರದಿರುತ್ತದೆಯೇ?. ಆದ್ದರಿಂದಲೇ ಡರ್ಬಾನಿನ ಬೀದಿಗಳಲ್ಲಿ ಗಾಂಧಿ ವಿರುದ್ಧ ಫಲಕ ಹಿಡಿದು ಘೋಷಣೆಗಳನ್ನು ಕೂಗುತ್ತಾ ಹೊರಟ ಮೆರವಣಿಗೆಗೆ, ಆಡಳಿತ ನಡೆಸುತ್ತಿದ್ದ ಅಧಿಕಾರಿಗಳು ಬಹಿರಂಗವಾಗಿಯೇ ಬೆಂಬಲ ನೀಡಿದ್ದರು.

ನಾಲ್ಕು ದಿನ ಕಳೆದರೂ ಗಾಂಧಿಯನ್ನು ಹೊತ್ತುಕೊಂಡಿದ್ದ ಹಡಗಿನ ನೆತ್ತಿಯ ಮೇಲೆ ಹಾರಾಡುತ್ತಿದ್ದ ಹಳದಿ ಬಾವುಟವು ಪಟಪಟನೆ ಹಾರುತ್ತಲೇ ಇತ್ತು. ಊರೊಳಗೆ ಪ್ರತಿದಿನವೂ ನಡೆಯುತ್ತಿರುವ ಸಭೆ, ಚಳುವಳಿ, ಗಲಿಬಿಲಿಗಳ ವಾರ್ತೆಗಳೆಲ್ಲವೂ ಹಡಗಿನಲ್ಲಿ ಅಸಹಾಯಕರಾಗಿ ಕುಳಿತಿದ್ದ ಗಾಂಧಿಗೆ ಬಂದು ತಲುಪುತ್ತಿತ್ತು. ಅವರಿಗೆ ಗಾಬರಿಯಾಗಿತ್ತು. ತನ್ನಿಂದಾಗಿ ಅಬ್ದುಲ್ಲಾ ಸೇಠರ ಒಡೆತನದ 'ಕೋರ್ಲ್ಯಾಂಡ್' ಮತ್ತು ಅದರ ಜತೆಯಲ್ಲಿ ಬಂದಿದ್ದ 'ನಾದೇರಿ' ಎಂಬ ಹೆಸರಿನ ಎರಡೂ ಹಡಗುಗಳೂ ಕಡಲಿನಲ್ಲೇ ವ್ಯರ್ಥವಾಗಿ ಉಳಿಯಬೇಕಾಗಿ ಬಂದಿದೆಯೆಂಬ ನೋವು ಅವರನ್ನು ಕಾಡುತ್ತಿತ್ತು. ಈ ಸಮಸ್ಯೆಯಿಂದ ಪಾರಾಗುವ ಉಪಾಯವನ್ನೇ ಚಿಂತಿಸುತ್ತಿದ್ದರು.

ಕ್ರಿಸ್‌ಮಸ್‌ತಿಂಗಳು ಅದು. ಹಡಗಿನ ಕಪ್ತಾನನು ಮೇಲಿನ ದರ್ಜೆಯ ಪ್ರಯಾಣಿಕರಿಗಾಗಿ ಒಂದು ವಿಶೇಷ ಔತಣ ಕೂಟದ ಘೋಷಣೆ ಮಾಡಿದ್ದನು. ಊಟದ ಬಳಿಕ ಭಾಷಣವಿರಲೇ ಬೇಕು. ಅದು ಸಂಪ್ರದಾಯ. ಗಾಂಧಿ ತನಗೆ ಸಿಕ್ಕಿದ ಅವಕಾಶವನ್ನು ಜಾಣತನದಿಂದ ಬಳಸಿಕೊಳ್ಳಲು ನಿರ್ಧರಿಸಿದರು.

ಭಾಷಣ ಮಾಡುವುದೆಂದರೆ ಗಾಂಧಿಗೆ ಎದೆನಡುಕ ಆರಂಭವಾಗುತ್ತಿತ್ತು. ಆದರೆ ಈ ಸಂದರ್ಭದಲ್ಲಿ ತಾನು ಹೇಡಿಯಂತೆ ವರ್ತಿಸಿದರೆ ಮೆಹತಾಬನು ಕ್ಷಮಿಸಲಾರನು ಎಂಬುದು ಅವರಿಗೆ ಗೊತ್ತಿತ್ತು. ರಾತ್ರಿಯಿಡೀ ಕುಳಿತು ತಾನು ಮಾತನಾಡಬೇಕಾದ ವಿಷಯಗಳನ್ನು ಪಟ್ಟಿ ಮಾಡಿ ಬರೆದುಕೊಂಡರು. ಹಡಗಿನ ಮಹಡಿಯ ಮೇಲೆ ಯಾರೂ ಇಲ್ಲದ ಸಮಯದಲ್ಲಿ ತಾನು ಬರೆದುಕೊಂಡದ್ದನ್ನು ಗಟ್ಟಿಯಾಗಿ ಓದುತ್ತಾ ಕಂಠಪಾಠ ಮಾಡಿಕೊಂಡರು. ಬಾಲ್ಯದಲ್ಲಿ ಸಂಸ್ಕೃತವನ್ನು ಕಂಠಪಾಠ ಮಾಡಿಕೊಳ್ಳುವಾಗ ಅನುಸರಿಸಿದ ತಂತ್ರ ಈಗ ನೆರವಿಗೆ ಬಂತು.

ಭಾಷಣವನ್ನು ಬರೆದ ಕಾಗದವನ್ನು ಉದ್ದಕ್ಕೆ ನಾಲ್ಕು ಮಡಿಕೆ ಮಡಚುವುದು. ನಂತರ ಕಾಗದವನ್ನು ಇಡಿಯಾಗಿ ಬಿಡಿಸಿ, ಆ ನಾಲ್ಕೂ ಮಡಿಕೆಗುರುತುಗಳ ಮೇಲಿನ ಒಂದು ಸಾಲು ಮತ್ತು ಕೆಳಗಿನ ಒಂದು ಸಾಲು ಬರೆದಿರುವ ಬರಹವನ್ನು ಒಂದು ದೃಶ್ಯವೆಂಬಂತೆ ಭಾವಿಸಿ ನೆನಪಿಟ್ಟುಕೊಳ್ಳುವುದು. ಅಂತೆಯೇ, ಪುಟದ ತಳದಲ್ಲಿ ಬರೆದಿರುವ ಕೊನೆಯ ಸಾಲು ಮತ್ತು ಬೆನ್ನಪುಟದಲ್ಲಿ ತಲೆಭಾಗದಲ್ಲಿ ಬರೆದಿರುವ ಮೊದಲ ಸಾಲುಗಳನ್ನು ದಿಟ್ಟಿಸಿ ನೋಡುತ್ತಾ ನೆನಪಿಟ್ಟುಕೊಳ್ಳುವುದು. ಇದು ತಂತ್ರ.

ತಂತ್ರ ಗೆದ್ದಿತು. ಗಾಂಧಿ ಔತಣ ಕೂಟದ ನಡುವೆಯೇ ಎದ್ದು ಸ್ನಾನದ ಕೊಠಡಿಗೆ ನುಗ್ಗಿ ಬಾಗಿಲು ಹಾಕಿಕೊಂಡರು. ಕೋಟಿನ ಜೇಬಿನಲ್ಲಿ ಭದ್ರವಾಗಿಟ್ಟುಕೊಂಡಿದ್ದ ಭಾಷಣವನ್ನು ಬರೆದಿಟ್ಟು ಕೊಂಡಿದ್ದ ಕಾಗದವನ್ನು ಎರಡು ನಿಮಿಷಗಳಷ್ಟು ಹೊತ್ತು ನೇರವಾಗಿ ದಿಟ್ಟಿಸಿ ನೋಡಿದರು. ಬಳಿಕ ಎರಡೂ ಕಣ್ಣುಗಳನ್ನು ಮುಚ್ಚಿಕೊಂಡು ತಾನು ದಿಟ್ಟಿಸಿ ನೋಡಿದ ಎಲ್ಲ ಸಾಲುಗಳನ್ನೂ ಒಂದೊಂದಾಗಿ ನೆನಪಿಸಿಕೊಂಡರು. ಎಲ್ಲವೂ ಸರಿಯಾಗಿ ನೆನಪಿಗೆ ಬರುತ್ತಿತ್ತು. ಗಾಂಧಿಗೆ ನೆಮ್ಮದಿಯಾಯಿತು. ಬಾಗಿಲು ತೆರೆದು ಹೊರಗೆ ಬಂದರು. ಹೊರಗೆ ಪಾನಕ ಗೋಷ್ಠಿ ನಡೆಯುತ್ತಿತ್ತು. ಭಾಷಣದ ಸಮಯ ಹತ್ತಿರವಾಗುತ್ತಿತ್ತು.

ಗಾಂಧಿ ಮಾತನಾಡಲು ಎದ್ದು ನಿಂತರು. ಜೋರಾಗಿ ಉಸಿರೆಳೆದುಕೊಳ್ಳುತ್ತಾ ಎಲ್ಲರನ್ನೂ ಒಂದು ಬಾರಿ ನೋಡಿದರು. ಎಲ್ಲರೂ ತನ್ನತ್ತವೇ ಕಣ್ಣು ನೆಟ್ಟು, ತಾನು ಬಾಯಿ ತೆರೆಯುವುದನ್ನೇ ನಿರೀಕ್ಷಿಸುತ್ತಿದ್ದಾರೆಂದು ಅನ್ನಿಸಿ ಒಂದು ಕ್ಷಣ ಎದೆ ಧಸಕ್ಕೆಂದಿತಾದರೂ ತತ್ಷಣ ಸಾವರಿಸಿ ಕೊಂಡರು. ತಾನಿವತ್ತು ಭಾಷಣ ಮಾಡಲೇಬೇಕು; ಮಾಡಿದರು.

ದಕ್ಷಿಣ ಅಫ್ರಿಕಾದಲ್ಲಿ ಭಾರತೀಯರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳ ಬಗ್ಗೆ ತಾನು ಬರೆದಿದ್ದ ಪುಸ್ತಕದ ವಿಷಯಗಳನ್ನು ಉತ್ಪ್ರೇಕ್ಷೆ ಮಾಡಿ ಪತ್ರಿಕೆಗಳು ಪ್ರಚಾರ ನೀಡಿವೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿದರು. ಯಾರಿಗೂ ನೋವು ಉಂಟು ಮಾಡುವುದು ತನ್ನ ಉದ್ದೇಶವಾಗಿದ್ದಿರಲಿಲ್ಲ; ಬದುಕಿನಲ್ಲಿ ನಿಜವನ್ನು ಮಾತ್ರ ಹೇಳುವ ತನ್ನ ಪ್ರತಿಜ್ಞೆಗೆ ತಾನು ಈ ಹಿಂದೆಯೂ ಮತ್ತು ಇನ್ನು ಮುಂದೆಯೂ ಬದ್ಧನಾಗಿದ್ದೇನೆಂದು ಒತ್ತಿ ಹೇಳಿದರು. ತಾನು ಭಾರತದಿಂದ ಬರುವಾಗ ಎರಡು ಹಡಗುಗಳಲ್ಲಿ ಸಾವಿರಾರು ಭಾರತೀಯರನ್ನು ತುಂಬಿಸಿ ಕೊಂಡು ಬಂದಿರುತ್ತೇನೆ ಎಂಬ ಆರೋಪಗಳು ಬರಿಯ ಸುಳ್ಳಿನ ಕಂತೆ ಎಂಬುದನ್ನು ಆಧಾರ ಸಹಿತವಾಗಿ ನಿವೇದಿಸಿಕೊಂಡರು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಅನುಭವಿಸುತ್ತಿರುವ ಅವಮಾನದ ಬದುಕನ್ನು ಮೂರು ವರ್ಷಗಳ ಕಾಲ ಕಣ್ಣಾರೆ ಕಂಡಿರುವ ತನ್ನಿಂದ, ಇನ್ನಷ್ಟು ಭಾರತೀಯರನ್ನು ಅದೇ ಬಗೆಯ ಅವಮಾನಕ್ಕೆ ದೂಡಲು ಸಾಧ್ಯವೇ ? ಎಂದು ಪ್ರಶ್ನಿಸಿದರು.

ಬರೆದುಕೊಂಡು ಕಂಠಪಾಠ ಮಾಡಿಕೊಂಡಿದ್ದ ಎರಡೂ ಪುಟಗಳ ವಿಷಯಗಳು ಮುಗಿದು ಹೋಗಿದ್ದವು. ಎಲ್ಲ ವಿಷಯಗಳನ್ನೂ ತಾನು ಸಮರ್ಪಕವಾಗಿಯೇ ಸಭೆಯ

ಮುಂದಿಟ್ಟಿದ್ದೇನೆಂಬ ತೃಪ್ತಿಯೂ ಗಾಂಧಿಗಾಗಿತ್ತು. ಅದಲ್ಲದೆ, ಎಲ್ಲರೂ ಮೌನವಾಗಿ ತನ್ನ ಮುಂದಿನ ಮಾತುಗಳಿಗಾಗಿ ಕಾತರಿಸುತ್ತಿದ್ದಾರೆಂಬುದೂ ಅವರ ಮುಖಭಾವಗಳಿಂದಲೇ ಗಾಂಧಿಗೆ ತಿಳಿದುಬಿಟ್ಟಿತ್ತು.

ಎದೆಬಡಿತ ಈಗ ಹತೋಟಿಯಲ್ಲಿತ್ತು. ತನ್ನಿಂದಲೂ ಮಾತು ಸಾಧ್ಯ ಎಂಬ ಭರವಸೆ ಹುಟ್ಟಿತ್ತು. ತಾನು ಪ್ರಸ್ತುತ ಭಾಷಣಕ್ಕಾಗಿ ತಯಾರು ಮಾಡಿಕೊಳ್ಳದಿದ್ದ, ಆದರೆ ಕಳೆದ ಹಲವಾರು ತಿಂಗಳುಗಳಿಂದ ಚಿಂತಿಸುತ್ತಿದ್ದ ವಿಷಯಗಳನ್ನು ಸಭೆಯ ಜತೆ ಹಂಚಿಕೊಳ್ಳಬೇಕು ಎಂದು ಅನ್ನಿಸಿತು. ನಿಧಾನವಾಗಿ ತನ್ನ ಚಿಂತನೆಗಳಿಗೆ ಮಾತಿನ ರೂಪ ಕೊಡತೊಡಗಿದರು. ಬಿಳಿಯರು ಅನುಸರಿಸುತ್ತಿರುವ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅಡಕವಾಗಿರುವ 'ಹಿಂಸಾಮಾರ್ಗ' ಮತ್ತು ತಾನು ನಂಬುವ ಪೌರಾತ್ಯ ನಾಗರಿಕತೆಯಲ್ಲಿ ರಕ್ತಗತವಾಗಿರುವ 'ಅಹಿಂಸಾಮಾರ್ಗ', ಈ ಎರಡರ ನಡುವೆ ನಲುಗಿ ಹೋಗುತ್ತಿರುವ 'ಸತ್ಯ'ದ ಬಗ್ಗೆ ತನ್ನ ಯೋಚನೆಗಳನ್ನು ಬಿಡಿ ಬಿಡಿಯಾಗಿ ವಿವರಿಸತೊಡಗಿದರು.

ಸಾಮಾನ್ಯವಾಗಿ ಔತಣ ಕೂಟದ ಭಾಷಣಗಳಲ್ಲಿ ಯಾರೂ ಗಂಭೀರವಾದ ವಿಷಯಗಳ ಕುರಿತು ಮಾತನಾಡುವುದಿಲ್ಲ. ಅ ಸಮಯದಲ್ಲಿ ಬೇರೆಯವರ ಮಾತು ಆಲಿಸುವ ವ್ಯವಧಾನವೂ ಹೊಟ್ಟೆ ತುಂಬಿಸಿಕೊಂಡವರಿಗೆ ಇರುವುದಿಲ್ಲ. ಗಾಂಧಿಯ ಧ್ವನಿಯಲ್ಲಿ ಅಂತಹ ಆಕರ್ಷಣೆಯೇನೂ ಇದ್ದಿರಲಿಲ್ಲ. ಅದರೆ ಪ್ರತಿಯೊಂದು ಪದವನ್ನೂ ಅಳೆದು, ತೂಗಿದ ಗಾಂಧಿ ತನ್ನೆದುರು ಕುಳಿತ ಸಭಿಕರ ಮುಂದೆ ಅದನ್ನು ಒಂದೊಂದಾಗಿ ಪ್ರಕಟಪಡಿಸುತ್ತಿದ್ದ ರೀತಿ ಅವರೆಲ್ಲರನ್ನು ಮೋಡಿ ಮಾಡಿತ್ತು. ಭಾಷಣದ ಮೇಲೆ ಎರಡು ತಾಸಿನ ಗಂಭೀರ ಚರ್ಚೆಯೂ ನಡೆಯಿತು. ಗಾಂಧಿಯು ಪ್ರತಿಪಾದಿಸುತ್ತಿರುವ, ಅಹಿಂಸಾ ಮಾರ್ಗದ ಪ್ರತಿಭಟನೆಯಲ್ಲಿ ಭಾಗವಹಿಸಿದವರು, ಹಿಂಸೆಯನ್ನು ಎದುರಿಸಬೇಕಾದ ಸಂದರ್ಭ ಬಂದರೆ ಏನು ಮಾಡಬೇಕು ಎಂಬ ಬಗ್ಗೆಯೇ ಬಹಳ ಹೊತ್ತು ಚರ್ಚೆಯಾಯಿತು.

ಒಬ್ಬ ಬಿಳಿಯನಂತೂ ನೇರವಾಗಿ ಗಾಂಧಿಯನ್ನು ಪ್ರಶ್ನಿಸಿದ್ದ, 'ಹೊರಗೆ ಚಳುವಳಿ ನಡೆಸುತ್ತಿರುವ ಬಿಳಿಯರು ತಾವು ಹೇಳುತ್ತಿರುವಂತೆಯೇ ನಿಮ್ಮ ಮೇಲೆ ಹಲ್ಲೆ ನಡೆಸಿದರೆ ನೀವು ಯಾವ ಬಗೆಯಲ್ಲಿ ಪ್ರತಿಕ್ರಿಯೆ ನೀಡುತ್ತೀರೀ? '

ಗಾಂಧಿ ಸಹಜವಾದ ಸ್ವರದಲ್ಲಿ ತಟ್ಟನೆ ಉತ್ತರಿಸಿದ್ದರು, 'ಯೇಸುಕ್ರಿಸ್ತನನ್ನು ಸ್ಮರಿಸುತ್ತೇನೆ; ಒಂದು ಕೆನ್ನೆಗೆ ಹೊಡೆದ ಅ ಬಿಳಿಯಗೆಳೆಯನಿಗೆ, ನನ್ನ ಇನ್ನೊಂದು ಕೆನ್ನೆಯನ್ನು ತೋರಿಸುತ್ತೇನೆ.'

ಊಟದ ಸಭೆಗೆ ಗರಬಡಿದಿತ್ತು! ಸಭೆಯ ಹಿಂದಿನ ಸಾಲಲ್ಲಿ ಕುಳಿತವನಿಗೆ ಕೂಡಾ ಗಾಂಧಿಯ ಎದೆಮಿಡಿತದ ಸದ್ದು ಕೇಳಿಸುವಷ್ಟು ಮೌನ ಆವರಿಸಿಬಿಟ್ಟಿತ್ತು!

ಮರುದಿನ ಮುಂಜಾನೆ, ಹಡಗಿನಲ್ಲಿ ಹಾರುತ್ತಿದ್ದ ಹಳದಿ ಬಾವುಟವನ್ನು ಇಳಿಸಲಾಯಿತು.

# ನಡುರಾತ್ರಿಯಲ್ಲಿ ಹಗಲು ವೇಷ

ನೇಟಾಲಿಗೆ ಕಾಲಿಟ್ಟ ದಿನವೇ ಯೇಸುಕ್ರಿಸ್ತನು ಗಾಂಧಿಯನ್ನು ಪರೀಕ್ಷಿಸಲು ನಿರ್ಧರಿಸಿದ್ದಿರಬೇಕು.

ಹಡಗಿನಿಂದ ಪ್ರಯಾಣಿಕರು ಇಳಿಯಲು ಅನುಮತಿ ಸಿಕ್ಕಿತ್ತು. ಜನರು ಒಬ್ಬೊಬ್ಬರಾಗಿ ಹಡಗಿನಿಂದ ಇಳಿಯತೊಡಗಿದ್ದರು. ಈ ನಡುವೆ ಹಡಗಿನ ಕಪ್ತಾನನಿಗೆ ಗುಪ್ತ ಸಂದೇಶವೊಂದು ಬಂದಿತ್ತು. ಸಂದೇಶ ಕಳುಹಿಸಿದವರು ಅಲ್ಲಿಯ ಸಂಪುಟದ ಸದಸ್ಯರಾಗಿದ್ದ ಶ್ರೀ ಎಸ್ಕೂಂಬ ಎನ್ನುವ ಹಿರಿಯರು.

ಸಂದೇಶ ಸ್ಪಷ್ಟವಾಗಿತ್ತು. 'ಹೊರಗೆ ಜನರು ರೊಚ್ಚಿಗೆದ್ದಿದ್ದಾರೆ. ಗಾಂಧಿಯ ಪ್ರಾಣಕ್ಕೆ ಅಪಾಯವಿದೆ. ಗಾಂಧಿ ಕತ್ತಲಾಗುವವರೆಗೆ ಹೊರಗೆ ಬರಬಾರದು. ಆ ನಂತರ ಪೋಲಿಸ್ ಬೆಂಗಾವಲಿನಲ್ಲಿ ಅವರನ್ನು ರುಸ್ತುಂಜೀ ಅವರ ಮನೆ ಸೇರಿಸಬೇಕು.'

ಗಾಂಧಿ 'ಹೂಂ' ಎಂದರು.

ಆದರೆ, ಸ್ವಲ್ಪ ಹೊತ್ತಿನಲ್ಲಿ ಅಲ್ಲಿಗೆ ಬಂದಿದ್ದ ಭಾರತೀಯರ ವಕೀಲ ಮಿತ್ರ ಮಿಸ್ಟರ್ ಲಾಂಗ್ಟನ್ ಎಂಬವರು ಬೇರೆಯೇ ಬಗೆಯ ಸಲಹೆ ಕೊಟ್ಟರು. 'ಬ್ಯಾರಿಸ್ಟರ್ ಮೋಹನದಾಸ ಕರಮಚಂದ್ ಗಾಂಧಿ ಕಳ್ಳನಂತೆ ಊರು ಪ್ರವೇಶಿಸುವುದು ತಪ್ಪು ಸಂದೇಶ ನೀಡುತ್ತದೆ. ಅಗತ್ಯ ಅನ್ನಿಸಿದರೆ ಗಾಂಧಿಯ ಹೆಂಡತಿ ಮತ್ತು ಮಕ್ಕಳು ಹಡಗಿನಿಂದ ಇಳಿದು ಬೇರೆ ಗಾಡಿಯಲ್ಲಿ ರುಸ್ತುಂಜೀ ಅವರ ಮನೆಗೆ ಹೋಗಲಿ. ಹೊರಗೆ ಈಗ ಪರಿಸ್ಥಿತಿ ಶಾಂತವಾಗಿದೆ. ಘೋಷಣೆ ಕೂಗುತ್ತಿದ್ದ ಹುಡುಗರು ಹೊರಟು ಹೋಗಿದ್ದಾರೆ. ಗಾಂಧಿ ನನ್ನಜತೆ ಎರಡುಮೈಲು ನಡೆದುಕೊಂಡೇ ಬರುತ್ತಾರೆ. ಏನಂತೀರಿ ನೀವು, ಮಿಸ್ಟರ್ ಗಾಂಧೀ ?'

ಗಾಂಧಿ 'ಹೂಂ' ಎಂದರು.

ಕಸ್ತೂರಿಬಾಯಿ ತನ್ನಿಬ್ಬರು ಮಕ್ಕಳಾದ ಹರಿಲಾಲ್ ಮತ್ತು ಮನಿಲಾಲ್ ಹಾಗೂ ತನ್ನ ಸೋದರಳಿಯನ ಜತೆ ರುಸ್ತುಂಜೀ ಅವರ ಮನೆಗೆ ಹೊರಟು ಹೋದರು. ಕಪ್ತಾನನಿಗೆ ವಂದಿಸಿದ ಗಾಂಧಿ ಹಡಗಿನಿಂದ ಇಳಿದು ಲಾಂಗ್ಟನ್ ಜತೆ ನಡೆಯತೊಡಗಿದರು.

ಹಿರಿಯ ವಕೀಲ ಲಾಂಗ್ಟನ್‌ರವರ ಸಲಹೆಯು, ಅನನುಭವಿಯೊಬ್ಬನ ಅವಿವೇಕದ ಸಲಹೆ ಯಂತಾಗಿತ್ತು. ಗಾಂಧಿ ಎರಡು ಹೆಜ್ಜೆ ಬದಲಿಸಿದ್ದರಷ್ಟೆ. ಒಂದಿಬ್ಬರು ಹುಡುಗರು ಗಾಂಧಿಯನ್ನು ಗುರುತಿಸಿ, 'ಗಾಂಡೀ.., ಗಾಂಡೀ...,' ಎಂದು ಬೊಬ್ಬೆ ಹೊಡೆದುಬಿಟ್ಟಿದ್ದರು. ಹತ್ತು ಹೆಜ್ಜೆ ನಡೆಯುವಷ್ಟರಲ್ಲಿ ಇಬ್ಬರಿದ್ದವರು ಇಪ್ಪತ್ತಾದರು. ಲಾಂಗ್ಟನ್‌ರವರಿಗೆ ಭಯವಾಯಿತು; ತಾನು ತಪ್ಪುಮಾಡಿಬಿಟ್ಟೆ ಎಂಬುದು ಅವರಿಗೆ ಅರಿವಾಗಿತ್ತು. ನಡೆದುಕೊಂಡು ಹೋಗುವುದು

ಅಪಾಯವೆಂದು ಯೋಚಿಸಿ, ಪಕ್ಕದಲ್ಲಿ ಹಾದು ಹೋಗುತ್ತಿದ್ದ ರಿಕ್ಷಾವನ್ನು ಕೂಗಿ ಕರೆದರು. ರಿಕ್ಷಾ ನಿಂತಿತು. ಆದರೆ ಬೊಬ್ಬಿಡುತ್ತಿದ್ದ ಹುಡುಗರು ರಿಕ್ಷಾದ ಹುಡುಗನನ್ನು ಬೆದರಿಸಿ ಓಡಿಸಿಬಿಟ್ಟರು.

ಗುಂಪು ಕ್ಷಣ ಕ್ಷಣಕ್ಕೂ ದೊಡ್ಡದಾಗುತ್ತಾ ಹೋಯಿತು. ಕೆಲವು ಹುಡುಗರು ಲಾಂಗ್ಟನ್‌ರವರ ರಟ್ಟೆ ಹಿಡಿದು ಪಕ್ಕದ ಗಲ್ಲಿಗೆ ಎಳೆದುಕೊಂಡು ಹೋದರು.

ಗಾಂಧಿ ಒಂಟಿಯಾದರು.

ನಡು ರಸ್ತೆಯಲ್ಲಿ ನಿಂತು ಬಿಟ್ಟ ಗಾಂಧಿಗೆ ರಸ್ತೆ ಕಾಣಿಸುತ್ತಿರಲಿಲ್ಲ. ನಾಲ್ಕು ಸುತ್ತಲೂ ಹುಡುಗರ ಗುಂಪು. ತಮ್ಮ ಕೆಂಪು ಕಣ್ಣುಗಳ ತುಂಬ ಕ್ರೋಧವನ್ನು ಉಗುಳುತ್ತಿದ್ದ ಆ ಎಳೆಯ ಹುಡುಗರನ್ನು ಗಾಂಧಿ ನಿರ್ವಿಕಾರವಾಗಿ ದಿಟ್ಟಿಸಿದರು. ತನಗವರೆಲ್ಲ ಸೇರಿ ಹೊಡೆಯುತ್ತಾರೆ ಎಂಬುದರಲ್ಲಿ ಗಾಂಧಿಗೆ ಯಾವ ಅನುಮಾನವೂ ಉಳಿದಿರಲಿಲ್ಲ. ನೂರಕ್ಕೂ ಮಿಕ್ಕಿದ ಗುಂಪಿನ ನಡುವೆ ನುಗ್ಗಿಕೊಂಡು ತಪ್ಪಿಸಿಕೊಳ್ಳುವ ಯಾವ ಅವಕಾಶವೂ ಇದ್ದಿರಲಿಲ್ಲ.

ಕಣ್ಣು ಮುಚ್ಚಿ ನಿಂತು ಬಿಟ್ಟರು ಗಾಂಧಿ.

ಹುಡುಗರಲ್ಲಿ ಒಬ್ಬಾತ ಗಾಂಧಿಯ ಕೋಟನ್ನು ಹಿಡಿದು ಜಗ್ಗಿದ; ಅಷ್ಟೇ. ಸೇರಿದವರೆಲ್ಲರೂ ಗಾಂಧಿಯನ್ನು ಹಿಂದಕ್ಕೂ ಮುಂದಕ್ಕೂ ಎಳೆದಾಡಿದರು. ಕೇಕೆ ಹಾಕಿ ನಕ್ಕರು; ಕುಣಿದರು. ಮುಖ ಕಣ್ಣು ಎಂಬುದನ್ನೂ ನೋಡದೆ ಹೊಡೆದರು. ಗಾಂಧಿ ನೆಲಕ್ಕೆ ಬಿದ್ದರು. ಬಿದ್ದವನ ಬೆನ್ನನ್ನು ತುಳಿದರು. ಗಾಂಧಿ ನೋವಿನಿಂದ ಹೊರಳಾಡಿದರು. ನೋವನ್ನು ಅವುಡುಗಚ್ಚಿ ಸಹಿಸಿ ಕೊಂಡರು.

ರಸ್ತೆಯಲ್ಲಿ ಹೋಗುತ್ತಿದ್ದ ಕೆಲವು ಗಂಡಸರು ಮೂಕ ಪ್ರೇಕ್ಷಕರಂತೆ ಗಾಂಧಿಯ ಅಸಹಾಯಕತೆ ಯನ್ನು ನೋಡುತ್ತಿದ್ದರು. ಆದರೆ ವಿವೇಕ ಕಳೆದುಕೊಂಡಿದ್ದ ಹುಡುಗರ ಗುಂಪನ್ನು ಭೇದಿಸಿ, ಗಾಂಧಿಯನ್ನು ಪಾರುಮಾಡುವ ಮನಸ್ಸು ಮತ್ತು ಧೈರ್ಯ ಆ ಗಂಡಸರಾರಿಗೂ ಇದ್ದಂತಿರಲಿಲ್ಲ. ಅದಕ್ಕೊಬ್ಬಳು ಹೆಣ್ಣು ಬರಬೇಕಾಯಿತು.

ಆಕೆ ಶ್ರೀಮತಿ ಅಲೆಗ್ಸಾಂಡರ್. ಸ್ಥಳೀಯ ಪೋಲಿಸ್ ಸೂಪರಿಂಟೆಂಡೆಂಟನ ಹೆಂಡತಿ. ಆಕೆ ತನ್ನ ಛತ್ರಿಯನ್ನು ಬಿಡಿಸಿ ಗುಂಪಿನ ನಡುವೆ ನುಗ್ಗಿದ್ದರು. ತಾಯಿ ಮಗುವನ್ನು ಅಪ್ಪಿ ಹಿಡಿದು ಕೊಳ್ಳುವಂತೆ ಗಾಂಧಿಯನ್ನು ಹಿಡಿದುಕೊಂಡುಬಿಟ್ಟಿದ್ದಳು. ಹುಡುಗರು ಹೊಡೆದರೆ ಅವಳಿಗೆ ಹೊಡೆಯಬೇಕಾಗಿತ್ತು. ತುಳಿದರೆ ಅವಳಿಗೆ ತುಳಿಯಬೇಕಾಗಿತ್ತು. ಗುಂಪಿನ ಒಂದಿಬ್ಬರು ಹುಡುಗರಿಗೆ ಆಕೆಯ ಗುರುತು ಸಿಕ್ಕಿಬಿಟ್ಟಿತ್ತು. ಎರಡೇ ಕ್ಷಣದಲ್ಲಿ 'ಪೋಲೀಸ್ ಅಧಿಕಾರಿಯ ಹೆಂಡತಿ' ಎಂಬ ಪಿಸುಮಾತು ಪರಸ್ಪರ ಹಂಚಿಹೋಯಿತು. ಅಷ್ಟರಲ್ಲಿ ಪೊಲಿಸ್ ಪಡೆಯೂ ಸ್ಥಳಕ್ಕೆ ಬಂದು ತಲುಪಿತು. ಪೋಲೀಸರನ್ನು ಕಂಡ ಹುಡುಗರ ದಂಡು ಚೆಲ್ಲಾಪಿಲ್ಲಿಯಾಯಿತು.

ಗಾಯಗೊಂಡಿದ್ದ ಗಾಂಧಿಯನ್ನು ಪೋಲೀಸರು ತಮ್ಮ ರಕ್ಷಣೆಯಲ್ಲಿ ಕರೆದುಕೊಂಡು ಹೋಗಿ ರುಸ್ತುಂಜೀಯವರ ಮನೆಗೆ ತಲುಪಿಸಿದರು. ತಮ್ಮ ಕೆಲಸವಾಯಿತೆಂದು ಹೊರಟು ಹೋದರು.

ಪೋಲೀಸರು ಹೊರಟು ಹೋದ ಕೂಡಲೇ ರುಸ್ತುಂಜೀ ಮನೆಯೆದುರಿನ ಕತ್ತಲಲ್ಲಿ ಹುಡುಗರು ಮತ್ತೆ ಜಮಾಯಿಸಿದರು. 'ನಮಗೆ ಗಾಂಧಿ ಬೇಕು' ಎಂಬ ಘೋಷಣೆಯ ಸದ್ದು ಪೋಲೀಸ್ ಸ್ಟೇಶನ್ನಿಗೂ ಕೇಳಿಸಿತು. ಪೋಲಿಸ್ ಸೂಪರಿಂಟೆಂಡೆಂಟ್ ಅಲೆಗ್ಸಾಂಡರ್ ತತ್‌ಕ್ಷಣ ರುಸ್ತುಂಜೀ ಮನೆಯೆದುರು ಬಂದು ನಿಂತರು. ಹುಡುಗರು ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ಅವರ ವಿರುದ್ಧ ಬಲಪ್ರಯೋಗ ಮಾಡುವಂತೆಯೂ ಇರಲಿಲ್ಲ. ಯಾಕೆಂದರೆ, ಹುಡುಗರನ್ನು ಸರಕಾರವೇ ಗುಟ್ಟಾಗಿ ಬೆಂಬಲಿಸುತ್ತಿದೆ ಎಂಬ ಸಂಗತಿ ಗುಟ್ಟಾಗಿಯೇನೂ ಉಳಿದಿರಲಿಲ್ಲ. ಹುಡುಗರನ್ನು ಸಮಾಧಾನಿಸಿ ಮನೆಗೆ ಕಳುಹಿಸಲು ಪೋಲಿಸ್ ಸೂಪರಿಂಟೆಂಡೆಂಟ್ ಅಲೆಗ್ಸಾಂಡರ್ ಬೇರೆ ಉಪಾಯವನ್ನು ಮಾಡಬೇಕಾಗಿತ್ತು.

ಅವರು ಗುಟ್ಟಾಗಿ ಗಾಂಧಿಗೆ ಸಂದೇಶ ರವಾನಿಸಿದರು.

'ನೀವು, ನಿಮ್ಮ ಮತ್ತು ನಿಮ್ಮ ಕುಟುಂಬದ ಪ್ರಾಣವನ್ನು ಉಳಿಸಿಕೊಳ್ಳಬಯಸುವಿರಾದರೆ, ನಿಮ್ಮ ಗೆಳೆಯ ರುಸ್ತುಂಜೀಯವರ ಆಸ್ತಿ ಪಾಸ್ತಿಯು ಬೆಂಕಿಯಿಂದ ಸುಡದೇ ಉಳಿಯಬೇಕೆಂಬ ಬಯಕೆ ನಿಮಗಿದ್ದರೆ, ನಾನು ಹೇಳಿದಂತಹ ವೇಷ ತೊಟ್ಟುಕೊಂಡು ಈ ಮನೆಯಿಂದ ಹೊರಟು ಹೋಗಬೇಕು.'

ಗಾಂಧಿ 'ಹೂಂ' ಎಂದರು.

ಆ ನಡುರಾತ್ರಿಯ ಹೊತ್ತಲ್ಲಿ ಹಗಲುವೇಷಕ್ಕೆ ಗಾಂಧಿ ಸಿದ್ಧರಾದರು. ಬೇರೆ ದಾರಿಯಿರಲಿಲ್ಲ. ಅಲೆಗ್ಸಾಂಡರ್ ಕಳುಹಿಸಿದ್ದ ಭಾರತೀಯ ಪೋಲೀಸನ ಸಮವಸ್ತ್ರ ತೊಟ್ಟರು. ಬಾಣಲೆಯೊಂದನ್ನು ತಲೆಯ ಮೇಲಿರಿಸಿಕೊಂಡು ಮದರಾಸೀ ರುಮಾಲನ್ನು ಸುತ್ತಿದರು. ಅದು ಹೆಲ್ಮೆಟ್‌ನಂತೆ ಕಾಣಿಸುತ್ತಿತ್ತು. ಗಾಂಧಿಗೆ ತನ್ನ ಪ್ರೌಢಶಾಲಾ ದಿನಗಳು ನೆನಪಾಗಿ ನಾಚಿಕೆಯಾಯಿತು.

ಪ್ರೌಢಶಾಲಾ ವಾರ್ಷಿಕೋತ್ಸವದ ಸಂದರ್ಭಗಳಲ್ಲಿ ಅವರ ಕೆಲವು ಗೆಳೆಯರು ಹಗಲುವೇಷ ಧರಿಸಿ ವೇದಿಕೆಯೇರಿ ಎಲ್ಲರನ್ನೂ ರಂಜಿಸುತ್ತಿದ್ದರು. ಪುಕ್ಕಲು ಸ್ವಭಾವದ ಮೋಹನದಾಸನಿಗೆ ವೇದಿಕೆಯೇರುವ ಧೈರ್ಯ ಎಂದೂ ಇದ್ದಿರಲಿಲ್ಲ. ಮೋಹನದಾಸನು ಪ್ರೌಢಶಾಲೆಯ ನಾಲ್ಕನೆಯ ತರಗತಿಯಲ್ಲಿದ್ದಾಗ, ಅವನಿಗೆ ವೇಷ ತೊಡಿಸಿ ವೇದಿಕೆಗೆ ಹತ್ತಿಸಲೇ ಬೇಕು ಎಂದು, ಅವನ ಗೆಳೆಯ ಮೆಹತಾಬ ಹಟತೊಟ್ಟಿದ್ದ.

ರೈಲಿನಲ್ಲಿ ಟಿಕೇಟು ಪರೀಕ್ಷಿಸುವ ಅಧಿಕಾರಿಯ ವೇಷ ತೊಟ್ಟು ವೇದಿಕೆ ಹತ್ತಿ, ಅಲ್ಲಿ ಕುಳಿತು ಸ್ಪರ್ಧಿಗಳಿಗೆ ಅಂಕ ನೀಡುತ್ತಿರುವ ಅಧ್ಯಾಪಕರ ಟಿಕೇಟುಗಳನ್ನು ಪರೀಕ್ಷೆ ಮಾಡುವವನಂತೆ

ಮೋಹನದಾಸನು ನಟಿಸಬೇಕಾಗಿತ್ತು; ಅಷ್ಟೆ. ಆದರೆ ಅಷ್ಟು ಮಾಡಲು ತನ್ನಿಂದ ಸಾಧ್ಯವೇ ಇಲ್ಲ ಎಂದು ಅವನು ಹಟ ಹಿಡಿದಿದ್ದನು. ಮೆಹತಾಬ ಸುಲಭದಲ್ಲಿ ಬಿಟ್ಟುಕೊಡುವವನಲ್ಲ. ಮೆಹತಾಬನು ರೈಲು ಅಧಿಕಾರಿಯ ಸಮವಸ್ತ್ರವನ್ನು ಎಲ್ಲಿಂದಲೋ ಸಂಪಾದಿಸಿ ತಂದಿದ್ದ. ಮೋಹನದಾಸನು ಅದನ್ನು ತೊಡಿಸಿಯೂ ಬಿಟ್ಟಿದ್ದ. ಆದರೆ ಅದೆಷ್ಟೇ ಒತ್ತಾಯಿಸಿದ್ದರೂ ರೈಲು ಅಧಿಕಾರಿಯ ವೇಷ ತೊಟ್ಟ ಮೋಹನದಾಸನನ್ನು ತರಗತಿಯ ಕೊಠಡಿಯಿಂದ ಹೊರಗೆ ಕರೆದುಕೊಂಡು ಬರಲು ಸಾಧ್ಯವಾಗದೆ ಸೋತು ಹೋಗಿದ್ದ.

ಆದರೆ ಇಂದು, ನಡುರಾತ್ರಿಯ ಕಪ್ಪು ಕತ್ತಲಿನಲ್ಲಿ, ಸೂಪರಿಂಟೆಂಡೆಂಟ್ ಕಳುಹಿಸಿದ್ದ ನಂಬಿಗಸ್ಥ ಪೋಲೀಸರ ಜತೆಗೆ ಹಗಲುವೇಷಧಾರಿಯಾದ ಗಾಂಧಿ, ನಡುರಾತ್ರಿಯ ಹೊತ್ತಲ್ಲಿ ಮನೆಯ ಹಿತ್ತಲ ಬಾಗಿಲಿನಿಂದ ಕಳ್ಳನಂತೆ ಹೊರಬಿದ್ದರು. ಮೆಹತಾಬನು ನಗುತ್ತಿದ್ದಾನೆಯೇ?

ಮನೆಯೆದುರು ಹುಡುಗರ ಬೊಬ್ಬೆ ಕೇಳಿಸುತ್ತಲೇ ಇತ್ತು. ಭಯವಾಯಿತು. ಯಾರಿಗೂ ಅನುಮಾನ ಬಾರದಂತೆ ಮುಖ ಮರೆಸಿಕೊಂಡು, ಹಿಂಭಾಗದ ರಸ್ತೆ ಹಾದು ಎದುರಿಗೆ ಕಾಣಿಸಿದ ಹಳೆಯ ಗೋದಾಮು ನುಗ್ಗಿದರು. ಅಲ್ಲಿದ್ದ ಗೋಣಿಚೀಲಗಳ ನಡುವೆ ತೂರಿಕೊಂಡು ಹಿಂಭಾಗದ ಬಾಗಿಲ ಸಂದಿಯಲ್ಲಿ ಬೆಕ್ಕಿನಂತೆ ನುಸುಳಿದರು. ಪಾಗಾರದ ಗೋಡೆ ಎತ್ತರವಿತ್ತು. ಪೋಲೀಸನೊಬ್ಬ ಗೋಡೆಗೊರಗಿ ನಿಂತ. ಗಾಂಧಿ ಅವನ ಭುಜದ ಮೇಲೆ ಕಾಲಿರಿಸಿ ಗೋಡೆಯೇರಿದರು. ಕತ್ತಲೆಯಲ್ಲಿ ನೆಲ ಕಾಣಿಸುತ್ತಿರಲಿಲ್ಲ. ಧುಮುಕಿದರು. ನೆಲದ ಮೇಲೆ ಬಿದ್ದಾಗ ಮೊಣಕಾಲು ಜುಂ ಎಂದಿತು. ಹುಡುಗರು ಚಚ್ಚಿದ್ದ ನೋವಿನ ಎದುರು ಈ ನೋವು ನಗಣ್ಯ. ರಸ್ತೆಯಂಚಿನಲ್ಲಿ ಕಪ್ಪು ಬಣ್ಣದ ಮೋಟಾರು ಗಾಡಿಯೊಂದು ಇವರನ್ನೇ ನಿರೀಕ್ಷಿಸುತ್ತಾ ನಿಂತಿತ್ತು. ಮುಖಕ್ಕೆ ಮುಸುಕೆಳೆದುಕೊಂಡು, ಕಳ್ಳನಂತೆ ಗಾಂಧಿ ಗಾಡಿಯೇರಿದರು. ಗಾಡಿ ಪೋಲಿಸ್ ಸ್ಟೇಶನ್ ತಲುಪಿತು. ಗಾಂಧಿಯ ಪ್ರಾಣ ಉಳಿಯಿತು.

ರೊಚ್ಚಿಗೆದ್ದ ಹುಡುಗರ ಗುಂಪನ್ನು ಬಹಳ ಹೊತ್ತು ತನ್ನ ತಮಾಶೆಯ ಮಾತುಗಳಿಂದ ಸಮಾಧಾನಿಸುತ್ತಿದ್ದ ಪೋಲಿಸ್ ಸೂಪರಿಂಟೆಂಡೆಂಟರು, ರುಸ್ತುಂಜೀಯವರ ಮನೆಗೆ ಯಾರೊಬ್ಬರೂ ನುಗ್ಗದಂತೆ ನೋಡಿಕೊಂಡಿದ್ದರು. ಗಾಂಧಿ ಸುರಕ್ಷಿತವಾಗಿ ಸ್ಟೇಶನ್ ತಲುಪಿದ್ದಾರೆಂಬುದನ್ನು ಖಚಿತಪಡಿಸಿಕೊಂಡನಂತರ, ಆ ಜಾಣ ಸಜ್ಜನ ಪೋಲಿಸ್ ಅಧಿಕಾರಿಯು, ಹುಡುಗರ ಗುಂಪಿನ ಪ್ರತಿನಿಧಿಗಳಿಬ್ಬರನ್ನು ಮನೆಯೊಳಗೆ ಕಳುಹಿಸಿ ಗಾಂಧಿ ತಪ್ಪಿಸಿಕೊಂಡಿದ್ದಾರೆ ಎಂಬುದನ್ನು ಅವರಿಗೇ ಮನದಟ್ಟು ಮಾಡಿಸಿದ್ದರು.

ವಿಜಯೋತ್ಸವ ಆಚರಿಸುವಂತೆ ಕೇಕೆ ಹಾಕುತ್ತಾ, ಹುಡುಗರ ಗುಂಪು ಹೊರಟು ಹೊಯಿತು. ಪೋಲಿಸ್ ಸುಪರಿಂಟೆಂಡೆಂಟ್ ಅಲೆಗ್ಸಾಂಡರ್ ಸಮಾಧಾನದ ನಿಟ್ಟುಸಿರುಬಿಟ್ಟರು. ಸ್ಟೇಶನ್‌ನಲ್ಲಿ ಅಡಗಿ, ತನಗಾಗಿ ಕಾದು ಕೂತಿರುವ ತನ್ನ ರಾತ್ರಿಯ ಅತಿಥಿ ಗಾಂಧಿಯನ್ನು ಕಾಣಲು ಹೊರಟರು.

ಗಾಂಧಿಯ ಬಂದರು ಪ್ರಕರಣವು ಪತ್ರಿಕೆಗಳಲ್ಲಿ ಸುದ್ದಿಯಾಯಿತು. ವಸಾಹತುಗಳ ಕಾರ್ಯದರ್ಶಿಯಾಗಿದ್ದ ಶ್ರೀ ಛೆಂಬರ್ಲೆನ ಎಂಬವರು ಇದರಿಂದ ನೊಂದುಕೊಂಡರು. ಅವರು ನೇಟಾಲಿನ ಸರಕಾರಕ್ಕೆ ತಂತಿ ಕಳುಹಿಸಿ ಗಾಂಧಿಯವರ ಮೇಲೆ ಆಕ್ರಮಣ ಮಾಡಿದವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಆದೇಶ ನೀಡಿದ್ದರು. ಶ್ರೀ ಎಸ್ಕೊಂಬೋ ಅವರು ಆಕ್ರಮಣ ಮಾಡಿದವರ ವಿರುದ್ಧ ದೂರು ಬರೆದುಕೊಡುವಂತೆ ಗಾಂಧಿಗೆ ಸೂಚನೆ ಕಳುಹಿಸಿದರು.

ಗಾಂಧಿ ಯೇಸುವನ್ನು ಸ್ಮರಿಸಿದರು.

ತಾನು ಆ ಹುಡುಗರ ಬಗ್ಗೆ ದೂರು ನೀಡಲಾರೆ ಎಂದು ಬರೆದು ಕಳುಹಿಸಿದರು.

## ನಗುವಿನ ಕಾರಣ – ೧

'ಇತ್ತೀಚೆಗೆ ಕೆಲವು ದಿನಗಳಿಂದ ಜನರೆಲ್ಲ ನಿಮ್ಮ ಬೆನ್ನ ಹಿಂದೆ ನಗುತ್ತಿರುವುದು ಯಾಕೆ ಎಂಬುದು ನಿಮಗೆ ಗೊತ್ತಿದೆಯೇ ಮಿಸ್ಟರ್ ಗಾಂಧೀ?'

ನ್ಯಾಯಾಲಯದ ನ್ಯಾಯಪೀಠದಲ್ಲಿ ಕುಳಿತ ನ್ಯಾಯಾಧೀಶರೊಬ್ಬರು ಕೇಳಿದ್ದ ಪ್ರಶ್ನೆ ಇದು. ದಿನದ ಕಲಾಪಗಳೆಲ್ಲ ಮುಗಿದು ಹೋಗಿ ಇನ್ನೇನು, ನ್ಯಾಯಾಧೀಶರು ತನ್ನ ಪೀಠದಿಂದ ಏಳುವ ಹೊತ್ತು. ನ್ಯಾಯಾಲಯದ ಕೊಠಡಿಯಲ್ಲಿ ಹೆಚ್ಚು ಜನರೇನೂ ಇದ್ದಿರಲಿಲ್ಲ. ಹೆಚ್ಚೆಂದರೆ ಐದಾರು ಮಂದಿ ಇದ್ದಿರಬಹುದು. ನ್ಯಾಯಾಧೀಶರ ಪ್ರಶ್ನೆ ಅಷ್ಟೂ ಜನರಿಗೆ ಕೇಳಿಸಿತ್ತು.

ಆ ನ್ಯಾಯಾಧೀಶರು ತಮಾಶೆಯ ಮಾತುಗಳಿಗೆ ಪ್ರಸಿದ್ಧರು. ನ್ಯಾಯಾಲಯದೊಳಗೆ ವಾದಿ ಪ್ರತಿವಾದಿಗಳ ಪರವಾಗಿ ಅವರವರ ವಕೀಲರುಗಳು ವಾದಿಸುತ್ತಾ ಜಗಳದ ಹಂತ ತಲುಪುತ್ತಿದ್ದಾಗ, ಇದ್ದಕ್ಕಿದ್ದಂತೆ ಏನಾದರೂ ಹಾಸ್ಯದ ತುಣುಕೊಂದನ್ನು ಉದ್ಧರಿಸಿ ವಾತಾವರಣವನ್ನು ತಿಳಿಗೊಳಿಸುವ ಜಾಣ ನ್ಯಾಯಾಧೀಶರು ಅವರು. ಅದರೆ, ಅವರು ಇಂದು ಕೇಳಿದ್ದ ಪ್ರಶ್ನೆಯು ತಮಾಶೆಯದ್ದಾಗಿರಲಿಲ್ಲ. ತೀರ ಖಾಸಗಿಯದಾಗಿತ್ತು. ನ್ಯಾಯಾಧೀಶರೊಬ್ಬರು ತಮ್ಮ ನ್ಯಾಯ ಪೀಠದಲ್ಲಿ ಕುಳಿತ ಸಂದರ್ಭದಲ್ಲಿ ವಕೀಲರಿಗೆ ಕೇಳಬಾರದಿದ್ದ ಪ್ರಶ್ನೆ ಅದಾಗಿತ್ತು. ಹೊರಡಲು ಸಿದ್ಧರಾಗಿ ತಮ್ಮ ಕಡತಗಳನ್ನು ಜೋಡಿಸಿಕೊಳ್ಳುತ್ತಿದ್ದ ಗಾಂಧಿಗೂ ನ್ಯಾಯಪೀಠದಲ್ಲಿ ಕುಳಿತವರ ಪ್ರಶ್ನೆ ಅನಿರೀಕ್ಷಿತವಾಗಿತ್ತು. ಅವರ ತಲೆಯೊಳಗೆ ನೂರು ಪ್ರಶ್ನೆಗಳು ಏಕ ಕಾಲದಲ್ಲಿ ಹುಟ್ಟಿಕೊಂಡಿದ್ದವು.

ತಾನು ದಕ್ಷಿಣ ಆಫ್ರಿಕಾದಲ್ಲಿ ಕಳೆದೆರಡು ವರ್ಷಗಳಿಂದ ವಕೀಲಿ ವೃತ್ತಿ ಮಾಡುತ್ತಿರುವುದು ಕೆಲವು ಬಿಳಿಯ ವಕೀಲರುಗಳಿಗೆ ಅಸಹನೆಯನ್ನುಂಟು ಮಾಡುತ್ತಿದೆ ಎಂಬುದು ಅವರಿಗೆ ಗೊತ್ತಿರದ

ಗುಟ್ಟೇನೂ ಅಲ್ಲ. ತನ್ನ ಬೆನ್ನ ಹಿಂದೆ ಅವರೆಲ್ಲ ತನ್ನನ್ನು ಗೇಲಿ ಮಾಡಿ ನಗುತ್ತಿದ್ದಾರೆ ಎಂಬುದೂ ಅವರ ಅರಿವಿಗೆ ಬಂದಿತ್ತು. ಆದರೆ ಯಾರೂ ಅದನ್ನು ಗಾಂಧಿಯ ಎದುರಿಗೆ ಬಾಯಿ ಬಿಟ್ಟು ಹೇಳಿದ್ದಿರಲಿಲ್ಲ. ಆದರೆ, ಇಂದು ನ್ಯಾಯಾಲಯದ ನ್ಯಾಯಪೀಠದಲ್ಲಿ ಕುಳಿತ ನ್ಯಾಯಾಧೀಶರೇ ಇಂಥ ಪ್ರಶ್ನೆಯನ್ನು ನೇರವಾಗಿ ಕೇಳಿದಾಗ, ತನ್ನ ಬೆನ್ನ ಹಿಂದೆ ಗೇಲಿ ಮಾಡಿ ನಗುತ್ತಿರುವವರಿಗೆಲ್ಲ ಸರಿಯಾದ ರೀತಿಯಲ್ಲಿ ಉತ್ತರಿಸಬೇಕೆನ್ನಿಸಿತು.

'ಮಹಾಮಹಿಮರು ಆಲಿಸಿಕೊಳ್ಳಲು ಸಿದ್ಧವಿರುವುದಾದರೆ ನಾನು ನಿವೇದಿಸಿಕೊಳ್ಳುವೆ' ಎಂದು ಗಂಭೀರವಾಗಿ ಮಾತು ಆರಂಭಿಸಿದ್ದ ಗಾಂಧಿ, ನಿಧಾನವಾಗಿ ತನ್ನ ಅನಿಸಿಕೆಗಳನ್ನು ನ್ಯಾಯಾಲಯದ ಮುಂದಿಟ್ಟರು.

'ಮಹಾಮಹಿಮರಿಗೆ ಗೊತ್ತಿರಬಹುದು. ಜಗತ್ತಿಗೆ ಸಹನೆ ಮತ್ತು ದಯೆ ಎಂದರೇನೆಂದು ಕಲಿಸಿದ ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿದಾಗಲೂ ಕೆಲವರು ಬೆನ್ನ ಹಿಂದೆ ನಕ್ಕಿದ್ದರು. ಆದರೆ ಎಲ್ಲರೂ ನಗಲಿಲ್ಲ. ಅಥೆನ್ಸಿನ ಯುವಜನಾಂಗಕ್ಕೆ ಸತ್ಯವೆಂದರೆ ಏನು ಎಂದು ಬೋಧಿಸಿದ ಸಾಕ್ರೆಟೀಸ್‌ನ ಬೆನ್ನಹಿಂದೆಯೂ ಕೆಲವರು ನಕ್ಕರು; ಎಲ್ಲರೂ ನಗಲಿಲ್ಲ. ಸಾಕ್ರೆಟೀಸ್‌ಗೆ ಮರಣದಂಡನೆಯಾದಾಗಲೂ ಕೆಲವರು ನಕ್ಕರು; ಆದರೆ, ಎಲ್ಲರೂ ನಗಲಿಲ್ಲ.

'ನಿಮಗೆ ನಮ್ಮ ಹಿಂದೂ ಪುರಾಣದ ಕತೆಗಳು ಗೊತ್ತಿರಲಾರದು ಎಂದು ಭಾವಿಸುವೆ. ಬಾಲಕ ಪ್ರಹ್ಲಾದ, ತನ್ನ ತಂದೆ ಹಿರಣ್ಯಕಷಿಪುವಿನಿಂದ ಶಿಕ್ಷೆ ಅನುಭವಿಸುತ್ತಿದ್ದಾಗ ರಾಜಸಭೆಯಲ್ಲಿದ್ದವರಲ್ಲಿ ಕೆಲವರು ನಕ್ಕರು; ಆದರೆ ಎಲ್ಲರೂ ಅಲ್ಲ. ತನ್ನ ಇಚ್ಛೆಯಂತೆ ನಡೆಯದ ಮೀರಾಬಾಯಿಯನ್ನು ಆಕೆಯ ಗಂಡ ಹಿಂಸಿಸುತ್ತಿದ್ದಾಗ ಊರ ಕೆಲವರು ನಕ್ಕರು. ಆದರೆ ಅತ್ತವರೇ ಬಹಳ ಮಂದಿ.

'ಮಹಾಮಹಿಮರು ದಯವಿಟ್ಟು ಆಲಿಸಬೇಕು,

'ಸತ್ಯದೊಂದಿಗೆ ಯಾವುದೇ ಬಗೆಯ ರಾಜಿಗೆ ಒಪ್ಪದ ಯೇಸುವಾಗಲೀ, ಸಾಕ್ರೆಟೀಸ್ ಆಗಲೀ, ಅಥವಾ ಬಾಲಕ ಪ್ರಹ್ಲಾದ, ಸಂತ ಮೀರಾಬಾಯಿ, ಇವರಾರೇ ಆಗಲಿ, ತಮಗೆ ಶಿಕ್ಷೆ ಕೊಟ್ಟವರ ಬಗ್ಗೆ, ಹಿಂಸಿಸಿದವರ ಬಗ್ಗೆ ದ್ವೇಷ ತಳೆಯಲಿಲ್ಲ ಎಂಬುದನ್ನು ತಾವು ದಯವಿಟ್ಟು ಗಮನಿಸಬೇಕು. ಸತ್ಯಾಗ್ರಹಿಗಳಾದ ಅವರೆಲ್ಲರೂ ತಮಗೆ ನೀಡಲಾದ ಎಲ್ಲ ಸಂಕಟಗಳನ್ನೂ ಮೌನವಾಗಿ ಸಹಿಸಿಕೊಂಡರು. ನಾನು ಕೂಡಾ ಅವರ ದಾರಿಯಲ್ಲಿ ಸಣ್ಣ ಹೆಜ್ಜೆಯಿಡಲು ಪ್ರಾರಂಭಿಸಿದ್ದೇನೆ. ನನ್ನ ಬೆನ್ನ ಹಿಂದೆ ಕೂಡಾ ಜನರು ನಗಲು ಪ್ರಾರಂಭಿದ್ದಾರೆ ಎಂದು ನ್ಯಾಯಾಲಯವೇ ಹೇಳುತ್ತಿದೆ ಅಂದ ಬಳಿಕ, ನಾನು ಕೂಡಾ ಸತ್ಯಾಗ್ರಹದ ದಾರಿಯಲ್ಲಿ ನಡೆಯುತ್ತಿದ್ದೇನೆ ಎಂಬುದಕ್ಕೆ ಬೇರೆ ಸಾಕ್ಷಿಗಳು ಬೇಕಾಗಿಲ್ಲವೆಂದು ಸಂತೋಷ ಪಡುವೆ.

'ತಮಗೆ ಸತ್ಯಾಗ್ರಹ ಎಂಬ ಪದದ ಬಗ್ಗೆ ಕುತೂಹಲವಿರಬಹುದು. ಆದ್ದರಿಂದ, ಈ ಪದದ ಅರ್ಥವನ್ನು ವಿವರಿಸುವುದು ನನ್ನ ಕರ್ತವ್ಯವೆಂದು ಭಾವಿಸುವೆ'.

'ಭಾರತೀಯರ ಮೇಲೆ ಬ್ರಿಟಿಷ್ ಸರಕಾರವು ವಿಧಿಸಿರುವ ಕರಾಳ ಕಾನೂನುಗಳನ್ನು ವಿರೋಧಿಸಿ, ಇಂಗ್ಲೆಂಡ್ ಮತ್ತು ಈ ದೇಶದಲ್ಲಿ ನಡೆಸಲಾಗುತ್ತಿರುವ ಚಳುವಳಿಗಳ ವಿವರಗಳು ತಮಗೂ ಗೊತ್ತಿದೆ. ಆದರೆ ಈ ಎರಡೂ ಚಳುವಳಿಗಳ ಮೂಲ ಸ್ವರೂಪದಲ್ಲಿ ಒಂದು ಮುಖ್ಯವಾದ ವ್ಯತ್ಯಾಸವಿದೆ. ಆದ್ದರಿಂದಲೇ ದಕ್ಷಿಣ ಆಫ್ರಿಕಾದ ಭಾರತೀಯರು ನಡೆಸುತ್ತಿರುವ ಅನ್ಯಾಯದ ವಿರುದ್ಧದ ತಮ್ಮ ಚಳುವಳಿಗೆ, 'ಸತ್ಯಾಗ್ರಹ' ಎಂಬ ಹೆಸರನ್ನಿಟ್ಟುಕೊಂಡಿದ್ದಾರೆ.

'ಇಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ನಡೆಸುತ್ತಿರುವ 'ಸತ್ಯಾಗ್ರಹ'ವು ಅಲ್ಲಿ ಇಂಗ್ಲೆಂಡಿನಲ್ಲಿ ಭಾರತೀಯರ ಪರವಾಗಿ ನಡೆಸಲಾಗುತ್ತಿರುವ ಚಳುವಳಿಗಿಂತ ಭಿನ್ನವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ನಡೆಸುತ್ತಿರುವ 'ಸತ್ಯಾಗ್ರಹ'ದಲ್ಲಿ ಹಿಂಸೆಗೆ ಜಾಗವಿಲ್ಲ. ತಾಯಿಯ ಬಳಿ ತಿಂಡಿಗಾಗಿ ಪುಟ್ಟ ಮಕ್ಕಳು ಹಟ ಹಿಡಿದಂತೆ ಈ ಪ್ರತಿಭಟನೆ. 'ಸತ್ಯಾಗ್ರಹ' ಎಂಬ ಪದವು 'ಸತ್ಯ' ಮತ್ತು 'ಆಗ್ರಹ' ಎಂಬ ಎರಡು ಪದಗಳಿಂದ ಕೂಡಿದೆ. 'ಸತ್ಯಾಗ್ರಹ' ಎಂಬುದನ್ನು 'ಸತ್ಯಕ್ಕಾಗಿ ಹಟ ಮಾಡು' ಎಂದೂ ಸರಳವಾಗಿ ಅರ್ಥಮಾಡಿಕೊಳ್ಳಬಹುದು'.

'ಹಾಗೆಂದು ನಾನು ವಿವರಿಸುತ್ತಿರುವ 'ಸತ್ಯಾಗ್ರಹ' ಹೊಸ ತತ್ವ ಹೊಸದೇನೂ ಅಲ್ಲ. ಪ್ರೇಮವು ಸತ್ಯಾಗ್ರಹದ ಮೂಲಮಂತ್ರ. ಸಾವಿರಾರು ವರ್ಷಗಳಿಂದ ಗಂಡಹೆಂಡಿರ ನಡುವೆ ನಡೆದು ಕೊಂಡು ಬಂದಿರುವ ಪ್ರೇಮ ಕಲಹಗಳೂ ಸತ್ಯಾಗ್ರಹವೆ. ಸಂಸಾರದಲ್ಲಿ ತೊಂದರೆಗೊಳಗಾದ ವ್ಯಕ್ತಿ ತನಗೆ ತೊಂದರೆ ನೀಡಿದವರನ್ನು ದ್ವೇಷಿಸುವುದಿಲ್ಲ. ತನ್ನ ಒಳಿತನ್ನು ಬಯಸುವ ಸತ್ಯಾಗ್ರಹಿಯು, ತನ್ನ ವಿರೋಧಿಯ ಕೇಡನ್ನು ಬಯಸುವುದಿಲ್ಲ. ಆತ ತನ್ನ ವಿರೋಧಿಯ ಬಗ್ಗೆ ಕೆಟ್ಟ ಮಾತನ್ನು ಆಡುವುದು ಹೋಗಲಿ, ಅವನತ್ತ ಕೆಂಗಣ್ಣು ಹರಿಸಿ ದಿಟ್ಟಿಸುವುದೂ ಇಲ್ಲ'.

'ರಾಮಾಯಣ ಕತೆಯಲ್ಲಿ ಸೀತೆಯ ಅಗ್ನಿಪರೀಕ್ಷೆ ಮಾಡುವುದರಲ್ಲಿ ರಾಮನ ಸತ್ಯಾಗ್ರಹವಿದೆ. ವಿಶ್ವದ ಕೇಂದ್ರವು ಭೂಮಿ ಎಂಬುದಾಗಿ ಆಗ್ರಹಿಸಿದ ಗೆಲಿಲಿಯೋನ ವಾದದಲ್ಲಿ ಸತ್ಯಾಗ್ರಹವಿದೆ. ಹೆಂಡತಿ ಮಕ್ಕಳನ್ನು ತೊರೆದು ನಡುರಾತ್ರಿಯಲ್ಲಿ ಎದ್ದು ಹೊರಟ ಗೌತಮಬುದ್ಧನ ಹುಡುಕಾಟ ದಲ್ಲಿ ಸತ್ಯಾಗ್ರಹವಿದೆ. ಗಾಯಗೊಂಡ ಕುರಿಮರಿಯನ್ನು ಯೇಸು ಎತ್ತಿ ಎದೆಗಪ್ಪಿಕೊಳ್ಳುವುದರಲ್ಲಿ ಸತ್ಯಾಗ್ರಹವಿದೆ. ಆದರೆ, ಮಹಾಭಾರತ ಪುರಾಣದಲ್ಲಿ ಬರುವ ಧೃತರಾಷ್ಟ್ರನ ಪುತ್ರಪ್ರೇಮದಲ್ಲಿ ಸತ್ಯಾಗ್ರಹವಿಲ್ಲ. ಹೋಮರನ ಮಹಾಕಾವ್ಯ ಒಡೆಸ್ಸಿಯಲ್ಲಿ ಬರುವ....'

'ಸಾಕಪ್ಪ ಸಾಕು, ದಯವಿಟ್ಟು ನಿಮ್ಮ ಮಾತು ನಿಲ್ಲಿಸಿ, ಮಿಸ್ಟರ್ ಗಾಂಧಿ.' ನ್ಯಾಯಾಧೀಶರು ಗಾಬರಿ ಯಿಂದಲೇ ಆದೇಶ ನೀಡಿದ್ದರು. ಅವರಿಗೆ ತಾನು ಗಾಂಧಿಯನ್ನು ಯಾತಕ್ಕಾಗಿ ಅಂತಹ ಪ್ರಶ್ನೆ ಕೇಳಿದೆನೋ ಎಂದೆನಿಸಿತ್ತು.

ನ್ಯಾಯಾಲಯದ ಕಲಾಪಗಳಿಗೆ ಸಂಬಂಧವೇ ಇಲ್ಲದ ಮಾತುಗಳನ್ನು ಗಾಂಧಿ ಆರಂಭಿಸಿದ್ದಾಗ ಕೊಠಡಿಯ ಒಳಗಿದ್ದವರು ಕೇವಲ ಐದಾರು ಮಂದಿ ಮಾತ್ರ. ಆದರೆ ಗಾಂಧಿ ಮಾತು ಮುಂದು ವರಿಸಿದ್ದಂತೆ ಕೊಠಡಿಯೊಳಗೆ ಒಬ್ಬೊಬ್ಬರಾಗಿ ಬಂದು ಸೇರಿಕೊಂಡಿದ್ದರು.

ಗಾಂಧಿ ಹೇಳುತ್ತಿರುವುದೇನೆಂಬುದು ಅವರಲ್ಲಿ ಹೆಚ್ಚಿನವರಿಗೆ ಅರ್ಥವಾಗುತ್ತಿರಲಿಲ್ಲ; ಆದರೆ ಗಾಂಧಿ ಮಾತಾಡುತ್ತಿರುವ ಧಾಟಿಯನ್ನು ಗಮನಿಸಿದಾಗ ಅವರು ಹೇಳುತ್ತಿರುವುದು ಸಾಮಾನ್ಯವಾದ ಸಂಗತಿಯಲ್ಲ ಎಂಬುದಂತೂ ಎಲ್ಲರಿಗೂ ಗೊತ್ತಾಗುತ್ತಿತ್ತು. ಗಾಂಧಿ ಮಾತು ಮುಗಿಸಿದಾಗ ನ್ಯಾಯಾಲಯದ ಕೊಠಡಿ ಜನರಿಂದ ಕಿಕ್ಕಿರಿದಿತ್ತು. ಗಾಂಧಿಯ ಮಾತೆಂದರೆ ಹಾಗೆ; ಎಲ್ಲರಿಗೂ ಒಂದು ಬಗೆಯ ಕುತೂಹಲ.

ಗಾಂಧಿಯನ್ನು ದ್ವೇಷಿಸುತ್ತಿದ್ದವರಿಗೂ ಅವರು ಕುತೂಹಲದ ವ್ಯಕ್ತಿಯಾಗಿದ್ದರು. ಬಂದರಿನ ಘಟನೆಗೆ ಗಾಂಧಿ ಪ್ರತಿಕ್ರಿಯಿಸಿದ ರೀತಿ ಎಲ್ಲರಿಂದಲೂ ಮೆಚ್ಚುಗೆ ಗಳಿಸಿತ್ತು. ನೇಟಾಲಿನ ಜನರಿಗೆ ಗಾಂಧಿ ಅದಾಗಲೇ ಪ್ರಿಯರಾಗಿ ಬಿಟ್ಟಿದ್ದರು. ಪತ್ರಿಕೆಗಳೂ ಗಾಂಧಿಯ ಅಹಿಂಸಾತ್ಮಕ ಪ್ರತಿಭಟನೆಯ ಕ್ರಮವನ್ನು ಪ್ರಶಂಸಿಸಿ ಬರೆದಿದ್ದವು. ಗಾಂಧಿ ಮನಸ್ಸು ಮಾಡಿದ್ದರೆ ಆ ಹುಡುಗರ ವಿರುದ್ಧ ಮೊಕದ್ದಮೆ ಹೂಡಬಹುದಿತ್ತು. ಅವರಲ್ಲಿ ಕೆಲವರಿಗಾದರೂ ಶಿಕ್ಷೆಯಾಗುವಂತೆ ಮಾಡಬಹುದಾಗಿತ್ತು. ಆದರೆ ಗಾಂಧಿ ಆ ಹುಡುಗರನ್ನೆಲ್ಲ ಕ್ಷಮಿಸಿಬಿಟ್ಟಿದ್ದರು. ತಮ್ಮನ್ನು ಮೊಕದ್ದಮೆ ಹೂಡುವಂತೆ ಒತ್ತಾಯಿಸಿದ ಬಿಳಿಯ ಗೆಳೆಯರಿಗೆ ನೇರವಾಗಿಯೇ ಹೇಳಿದ್ದರು, 'ತಪ್ಪು ಹುಡುಗರದ್ದಲ್ಲ. ಹುಡುಗರನ್ನು ಆ ರೀತಿ ವರ್ತಿಸುವಂತೆ ಪ್ರೇರೇಪಿಸಿದ್ದ ನಿಮ್ಮಂತಹ ಹಿರಿಯರದ್ದು.'

ನ್ಯಾಯಾಧೀಶರು ಹತಾಶೆಯ ಸ್ವರದಲ್ಲಿ ಹೇಳಿದ್ದರು, 'ಮಿಸ್ಟರ್ ಗಾಂಧಿ, ನಾನು ಕೇಳಿದ್ದು ತೀರಾ ಸರಳವಾದ ಪ್ರಶ್ನೆಯನ್ನು. ಆದರೆ ನೀವು ಅದಕ್ಕಿನ್ನೂ ಉತ್ತರಿಸಿಯೇ ಇಲ್ಲ. ನೀವು ಇದುವರೆಗೆ ಉತ್ತರಿಸಿದ್ದು, ನಾನು ಕೇಳಿರದ ಪ್ರಶ್ನೆಗೆ. ಆದರೂ ಮಿಸ್ಟರ್ ಗಾಂಧಿ, ನಿಮ್ಮನ್ನು ನಾನು ಮೊದಲಾಗಿ ಅಭಿನಂದಿಸುವೆ. ನಿಮ್ಮ 'ಸತ್ಯಾಗ್ರಹ' ಎಂಬ ಶಬ್ದದ ವಿವರಣೆಯಿಂದ ನ್ಯಾಯಾಲಯದ ಅರಿವಿನ ವ್ಯಾಪ್ತಿ ವಿಸ್ತರಿಸಿದೆ ಎಂಬುದಂತೂ ನಿಜ. ಸತ್ಯದ ಬಗೆಗಿನ ನಿಮ್ಮ ಆಗ್ರಹದ ಬಗ್ಗೆ ತಿಳಿಯುವ ಕುತೂಹಲ ನಮಗಿದೆ. ಇಲ್ಲಿ ಸೇರಿರುವ ಇನ್ನೂ ಕೆಲವರಿಗೆ ನನ್ನಂತೆ ಆ ಕುತೂಹಲವಿರಬಹುದು. ನಿಮಗೆ ಅಭ್ಯಂತರವಿಲ್ಲ ಎಂದು ಅನ್ನಿಸಿದರೆ, ವಾರದ ಯಾವುದಾದರೊಂದು ಸಂಜೆ ನಿಮ್ಮ ಭಾಷಣದ ಕಾರ್ಯಕ್ರಮವನ್ನು ನಡೆಸುವಂತೆ ಕೋರ್ಟ್ ಅಧಿಕಾರಿಗಳಿಗೆ ಸೂಚನೆ ನೀಡುವೆ. ಆದರೆ, ಮಿಸ್ಟರ್ ಗಾಂಧಿ, ನನ್ನ ಸರಳ ಪ್ರಶ್ನೆ ಮಾತ್ರ ಉತ್ತರವಿಲ್ಲದ ಬರಿಯ ಪ್ರಶ್ನೆಯಾಗಿಯೇ ಉಳಿದುಬಿಟ್ಟಿತು ನೋಡಿ.'

ನ್ಯಾಯಾಧೀಶರು ಯಾವ ಪ್ರಶ್ನೆಯ ಬಗ್ಗೆ ಹೇಳುತ್ತಿದ್ದಾರೆಂಬುದು ಅಲ್ಲಿದ್ದ ಯಾರಿಗೂ ಹೊಳೆದಿರಲಿಲ್ಲ. ಗಾಂಧಿಗೂ ಮುಜುಗರವಾಗಿತ್ತು. ತಾನು ನ್ಯಾಯಾಧೀಶರು ಬಯಸಿರದ ವಿಷಯದ ಬಗ್ಗೆ ಮಾತನಾಡುವ ಮೂಲಕ, ನ್ಯಾಯಾಲಯದ ಅಮೂಲ್ಯ ಸಮಯವನ್ನು ಹಾಳು ಮಾಡಿ ಬಿಟ್ಟೆನೇನೋ ಎಂದು ಪರಿತಪಿಸಿದರು. ಇನ್ನು ಗೊಂದಲಗೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ ಎಂದು ನಿರ್ಧರಿಸಿದ ಗಾಂಧಿ, ನೇರವಾಗಿ ಕೇಳಿದರು, 'ಮಹಾಮಹಿಮರು ಕೇಳಿರುವ ಪ್ರಶ್ನೆಯನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡು ಉತ್ತರಿಸದ ಬಗ್ಗೆ

ವಿಷಾದಿಸುತ್ತೇನೆ. ದಯವಿಟ್ಟು, ತಮ್ಮ ಮನಸ್ಸಿನಲ್ಲಿ ಯಾವ ಪ್ರಶ್ನೆಯಿತ್ತು ಎಂಬುದನ್ನು ವಿವರಿಸಬೇಕು ಎಂದು ಪ್ರಾರ್ಥಿಸುತ್ತೇನೆ'

ಈಗ ಗೊಂದಲಗೊಳ್ಳುವ ಸರದಿ ನ್ಯಾಯಾಧೀಶರದಾಗಿತ್ತು. ಅರೆಕ್ಷಣ ಯೋಚಿಸಿದವರು, 'ಮರೆತುಬಿಡಿ ಮಿಸ್ಟರ್ ಗಾಂಧಿ. ನಾನು ಈಗ ಕೋರ್ಟ್ ಕಲಾಪಗಳನ್ನು ಮುಗಿಸುವ ಆದೇಶ ನೀಡುತ್ತಿರುವೆ.' ಎಂದವರೇ ಎದ್ದು ನಿಂತರು.

ಗಾಂಧಿ ಮಾತ್ರವಲ್ಲ, ಗಾಂಧಿಯ ಜತೆಗಿದ್ದ ಎಲ್ಲರೂ ಎದ್ದು ನಿಂತರು. ಅತ್ಯಂತ ಕುತೂಹಲದ ಘಟ್ಟ ತಲುಪಿದ್ದ ಪ್ರಕರಣವೊಂದು ಟುಸ್ಸೆಂದು ಕರಗಿಹೋದದ್ದು ಸೇರಿದ್ದವರಿಗೆಲ್ಲ ನಿರಾಸೆಯನ್ನುಂಟುಮಾಡಿತು. ಜನರೆಲ್ಲ ಕೊಠಡಿಯಿಂದ ಹೊರಗೆ ಹೊರಟರು. ಗಾಂಧಿ ಕೂಡಾ ತಮ್ಮ ಕಡತಗಳನ್ನು ಎತ್ತಿಕೊಂಡು ನ್ಯಾಯಾಧೀಶರ ವರ್ತನೆ ಬಗ್ಗೆ ಅಚ್ಚರಿಪಡುತ್ತಾ ನಿಧಾನವಾಗಿ ಹೊರಗೆ ಹೊರಟರು.

ನ್ಯಾಯಾಲಯದ ಮೆಟ್ಟಲಿಳಿಯುತ್ತಿದ್ದಾಗ ಅಲ್ಲಿಯ ಜವಾನನೊಬ್ಬ ಗಾಂಧಿ ಬಳಿಗೆ ಬಂದು 'ನ್ಯಾಯಾಧೀಶರು ಅವರ ಕೊಠಡಿಯಲ್ಲಿ ತಮ್ಮನ್ನು ನಿರೀಕ್ಷಿಸುತ್ತಿದ್ದಾರೆ. ತಾವು ಕೂಡಲೇ ಬಂದು ಕಾಣಬೇಕಂತೆ.' ಎಂಬ ಸಂದೇಶ ಕೊಟ್ಟು ಹೋದ. ಸಾಮಾನ್ಯವಾಗಿ ನ್ಯಾಯಾಧೀಶರ ಕೊಠಡಿಗೆ ವಕೀಲರುಗಳಾರೂ ಹೋಗುವಂತಿರಲಿಲ್ಲ. ಬಹಳ ಹಿರಿಯರಾದ ಬಿಳಿಯ ವಕೀಲರು ಕೆಲವೊಮ್ಮೆ ಅವರ ಕೊಠಡಿಗೆ ಹೋಗಿಬರುತ್ತಿರುವುದನ್ನು ಗಾಂಧಿ ಕಂಡಿದ್ದರು. ಅನುಮಾನದಿಂದಲೇ ಜವಾನ ಹೋದ ದಿಕ್ಕಿನತ್ತ ಗಾಂಧಿ ಕಾಲೆಳೆದರು.

ನ್ಯಾಯಾಲಯದ ಕೊಠಡಿಯಲ್ಲಿ ಅರ್ಧ ತಾಸಿನಷ್ಟು ಕಾಲ ಗಾಂಧಿಯ ಸತ್ಯಾಗ್ರಹದ ಕತೆ ಆಲಿಸಿದ್ದ ವಕೀಲರುಗಳು, ಒಂದು ಹತ್ತು ನಿಮಿಷಗಳ ಬಳಿಕ ನ್ಯಾಯಾಧೀಶರ ಕೊಠಡಿಯ ಹೊರಗೇನಾದರೂ ನಿಂತುಕೊಂಡಿರುತ್ತಿದ್ದರೆ, ಕೊಠಡಿಯ ಒಳಗೆ ನ್ಯಾಯಾಧೀಶರ ಜೊತೆಗೆ ಗಾಂಧಿ ಕೂಡಾ ಬಿದ್ದು ಬಿದ್ದು ನಗುತ್ತಿರುವುದನ್ನು ಕೇಳಿಸಿಕೊಳ್ಳಬಹುದಾಗಿತ್ತು.

ನಗುವಿನ ಕಾರಣವು ನಗುವಂಥದ್ದೇ ಆಗಿತ್ತು.

## ನಗುವಿನ ಕಾರಣ – ೨

ಹೆಂಡತಿ ಮಕ್ಕಳ ಜತೆಗೆ ಮನೆ ಮಾಡಿ ಸಂಸಾರ ನಡೆಸಲಾರಂಭಿಸಿದ್ದ ಗಾಂಧಿಗೆ ತನ್ನ ವಕೀಲಿ ವೃತ್ತಿಯಲ್ಲಿ ಚೆನ್ನಾಗಿಯೇ ಸಂಪಾದನೆಯಾಗುತ್ತಿತ್ತು. ಆದರೆ, ಪರಿಸರದ ಬಡಜನರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವರಿಗೆ ಸರಳ ಜೀವನದ ಪಾಠ ಹೇಳುತ್ತಿದ್ದ ಗಾಂಧಿಗೆ, ತನ್ನ ಮನೆಯೊಳಗೂ ಸರಳ ಜೀವನದ ಪ್ರಯೋಗವನ್ನು ಅಳವಡಿಸುವುದು ತೀರಾ ಅಗತ್ಯವೆಂದು

ಅನ್ನಿಸಿತ್ತು. ತಮ್ಮ ಮನೆಯ ಎಲ್ಲ ಕೆಲಸಗಳನ್ನೂ ತಾವೇ ಮಾಡಿಕೊಳ್ಳಬೇಕು. ಯಾವ ಕೆಲಸಕ್ಕೂ ಸೇವಕರನ್ನು ಅವಲಂಬಿಸಬಾರದು ಎಂಬುದು ಸ್ವಾವಲಂಬನೆಯ ಬದುಕಿನ ಮೊದಲ ಪಾಠ.

ಅಡುಗೆ ಕೆಲಸ, ಪಾತ್ರೆ ತೊಳೆಯುವುದು, ಮನೆಯ ನೆಲ ಒರಸುವುದು ಎಲ್ಲವನ್ನೂ ಅದು ಒಂದು ಕೆಲಸವೇ ಅಲ್ಲ ಎಂದು ಮಾಡಿ ಮುಗಿಸುತ್ತಿದ್ದ ಕಸ್ತೂರಿಬಾಯಿಗೆ ಈಗ ಕಕ್ಕಸು ತೊಳೆಯುವ ಕೆಲಸವೂ ಹೆಚ್ಚುವರಿಯಾಗಿ ಅಂಟಿಕೊಂಡಿತು. ಆಕೆ ಮನೆಯವರ ಕಕ್ಕಸು ತೊಳೆದು ಎಸೆದರೆ ಮಾತ್ರ ಸಾಲದು, ಮನೆಯಲ್ಲಿಯೇ ಇರುತ್ತಿದ್ದ ಕಚೇರಿಯ ಕೆಲಸದವರ ಕಕ್ಕಸು ಕೂಡಾ ತೊಳೆಯಬೇಕಾಗಿತ್ತು. ಆಕೆ ಅದನ್ನು ಮಾಡಲು ಹಿಂದೆ ಮುಂದೆ ನೋಡಿದ' ತತ್ಕ್ಷಣ ಬಕೀಟು ಹಿಡಿದುಕೊಂಡು ಗಾಂಧಿಯೇ ಹೊರಟುಬಿಡುತ್ತಿದ್ದರು. ಸ್ವಾವಲಂಬನೆಯ ಮೊದಲ ಮಾದರಿ ತಮ್ಮ ಮನೆಯಲ್ಲೇ ಇರಬೇಕು ಎಂಬುದು ಗಾಂಧಿಯ ಹಟವಾಗಿತ್ತು.

ದಕ್ಷಿಣ ಅಫ್ರಿಕಾದಲ್ಲಿ ಹುಟ್ಟಿದ್ದ ಮಕ್ಕಳನ್ನು ತಾಯಿಗಿಂತ ಹೆಚ್ಚಾಗಿ ತಂದೆಯೇ ಸಾಕಿ ಬೆಳೆಸಿದ್ದು. ಅಲ್ಲಿಯ ಶಾಲೆಗೆ ಸೇರಿಸಿ ಮಕ್ಕಳನ್ನು ಇಂಗ್ಲಿಷರ ಕೃಪೆಗೆ ಒಡ್ಡಬಾರದೆಂಬ ಹಟದಿಂದ ಅವರಿಗೆ ಮನೆಯಲ್ಲಿಯೇ ಬಾಲಪಾಠ ಮಾಡಿದ್ದರು. ಅಷ್ಟೇಕೆ, ಗಾಂಧಿಯ ಕೊನೆಮಗನ ಹೆರಿಗೆಯ ಸೂಲಗಿತ್ತಿ ಆಗಿದ್ದವರೂ ಗಾಂಧಿಯೇ.

ಸರಳ ಜೀವನದ ಮುಂದಿನ ಪ್ರಯೋಗವಾಗಿ ಬಟ್ಟೆ ಒಗೆಯುವ ಯಂತ್ರವೊಂದನ್ನು ಖರೀದಿಸಿ ತಂದರು. ಯಂತ್ರದಲ್ಲಿ ಬಟ್ಟೆ ಒಗೆಯುವ ಕ್ರಮವನ್ನು ತಾನು ಮೊದಲು ಕಲಿತು ನಂತರ ಹೆಂಡತಿಗೂ ಕಲಿಸಿದರು. ತನ್ನ ಮನೆಯ ಬಟ್ಟೆಗಳನ್ನು ಅಗಸನಿಗೆ ಒಗೆಯಲು ಹಾಕುವುದನ್ನು ನಿಲ್ಲಿಸಿ ಬಿಟ್ಟರು. ಕೆಲವೇ ದಿನಗಳಲ್ಲಿ ಗಾಂಧಿ ಬಟ್ಟೆ ತೊಳೆಯುವ ಕಲೆಯಲ್ಲಿ ನುರಿತ ಅಗಸನನ್ನೂ ಮೀರಿಸುವಷ್ಟು ಕುಶಲಿಗರಾಗಿಬಿಟ್ಟಿದ್ದರು. ಆ ದಿನಗಳಲ್ಲಿ ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್‌ಗೆ ಭೇಟಿ ನೀಡಿದ್ದ ಗೋಪಾಲಕೃಷ್ಣ ಗೋಖಲೆಯವರ ವಸ್ತ್ರಗಳನ್ನು, ತಾನೇ ಒಗೆದು ಅವರಿಂದಲೂ ಶಹಬ್ಬಾಸ್ ಅನ್ನಿಸಿಕೊಂಡು ಬಿಟ್ಟಿದ್ದರು.

ಎರಡನೆಯ ಪ್ರಯೋಗ ಸ್ವಲ್ಪ ಕಷ್ಟಕರವಾದದ್ದು.

ಕನ್ನಡಿ ನೋಡಿಕೊಂಡು ಮುಖದ ಕ್ಷೌರ ಮಾಡುವುದು ಅಂತಹ ಕಷ್ಟದ ಕೆಲಸವೇನೂ ಅಲ್ಲ. ಆದರೆ ತಲೆಗೂದಲು ಕತ್ತರಿಸಿಕೊಳ್ಳುವುದೂ ?.

ಆದರೆ ಗಾಂಧಿ ಒಮ್ಮೆ ಏನನ್ನಾದರೂ ನಿರ್ಧರಿಸಿ ಬಿಟ್ಟರೆಂದರೆ ಅದನ್ನು ಕೊನೆ ಮುಟ್ಟಿಸುವ ತನಕ ಸುಮ್ಮನಿರುವವರಲ್ಲ. ಮರುದಿನವೇ ಹರಿತವಾದ ಕತ್ತರಿಯೊಂದನ್ನು ಖರೀದಿಸಿ ತರದೇ ಬಿಟ್ಟರು. ಅವರ ಇಬ್ಬರು ಸ್ವಂತ ಮಕ್ಕಳ ಜತೆ, ಅಕ್ಕನ ಮಗನೂ ಗಾಂಧಿಯ ಕ್ಷೌರ ಪ್ರಯೋಗಕ್ಕೆ ಮೊದಲ ಬಲಿಗಳಾಗಿ ತಮ್ಮ ತಲೆಯೊಪ್ಪಿಸಿದರು. ತಂದೆಯಿಂದ ತಲೆಗೂದಲು ಕತ್ತರಿಸಿಕೊಂಡಿದ್ದ ಮಕ್ಕಳನ್ನು ಗುರುತಿಸಲೂ ಕಸ್ತೂರಿಗೆ ಕಷ್ಟವಾಗಿತ್ತು. ತಮ್ಮ ಮಕ್ಕಳ ಮುಖ ನೋಡುವಾಗ ಕಸ್ತೂರಿಬಾಯಿಯವರಿಗೆ ಅಳುವೇ ಬಂದು ಬಿಟ್ಟಿತ್ತು.

ಮುಂದಿನದು ಗಾಂಧಿಯ ಸರದಿ.

ಮಕ್ಕಳ ಕೂದಲು ಕತ್ತರಿಸಿದ ಅನುಭವವೇನೋ ಗಾಂಧಿಗಿತ್ತು. ಮಕ್ಕಳ ಮೇಲೆ ಕ್ಷೌರ ಪ್ರಯೋಗ ಮಾಡುವಾಗ, ಅವರ ತಲೆಯಲ್ಲಿ ಬೆಳೆದಿದ್ದ ಕೂದಲು ಗಾಂಧಿಯ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತಿತ್ತು. ಆದರೆ, ತನ್ನ ತಲೆಗೂದಲು ಕತ್ತರಿಸಿಕೊಳ್ಳಲು ಕನ್ನಡಿಯೆದುರು ಕುಳಿತರೆ, ಗಾಂಧಿಗೆ ತನ್ನ ಹಣೆಯ ಎದುರಿನ ತಲೆಗೂದಲು ಮಾತ್ರ ಕಾಣಿಸುತ್ತಿತ್ತು.

ಕಣ್ಣನ್ನು ಸರಿಯಾಗಿ ಹೊಂದಿಸಿಕೊಂಡರೆ ನೆತ್ತಿಯ ಹಿಂಭಾಗದ ಒಂದಾರಿಂಚು, ಕಿವಿಗಳ ಹಿಂದಿನ ತಲಾ ಎರಡೆರಡು ಇಂಚು ಕೂದಲು ಕಾಣಿಸುತ್ತಿತ್ತು. ಆದರೆ ತಲೆಗೂದಲಿನ ಮಧ್ಯಭಾಗ, ಹಿಂಭಾಗ ಕಾಣಿಸುತ್ತಿರಲಿಲ್ಲ. ಗಾಂಧಿಗೆ ಕ್ಷೌರಿಕನ ಅಂಗಡಿಯಲ್ಲಿ ಎದುರುಬದುರಾಗಿ ತೂಗಾಡಿಸಿದ್ದ ಕನ್ನಡಿಗಳು ನೆನಪಾಗಿದ್ದವು. ಕೂಡಲೇ ಹೊಸದೆರಡು ಕನ್ನಡಿಗಳನ್ನು ಖರೀದಿಸಿ ಮನೆಗೆ ತಂದರು. ಅವುಗಳನ್ನು ಮನೆಯ ಗೋಡೆಗಳಲ್ಲಿ ಎದುರು ಬದುರಾಗಿ ತೂಗಿಸಿದರು. ಕತ್ತರಿ ಪ್ರಯೋಗಕ್ಕೆ ಸಿದ್ಧರಾಗಿ ಕುರ್ಚಿಯಲ್ಲಿ ಕುಳಿತರು. ಕನ್ನಡಿಯೊಳಕ್ಕೆ ಕಣ್ಣು ತೂರಿದರು. ಉತ್ತರದಿಕ್ಕಿನಲ್ಲಿ ತೂಗಾಡಿಸಿದ್ದ ಕಣ್ಣೆದುರಿನ ಕನ್ನಡಿಯಲ್ಲಿ ತನ್ನ ಮುಖವೇನೋ ಚೆನ್ನಾಗಿ ಕಾಣಿಸುತ್ತಿತ್ತು.

ಆದರೆ, ಉತ್ತರದಿಕ್ಕಿನ ಗೋಡೆಯಲ್ಲಿ ತೂಗಿಸಿದ್ದ ಕನ್ನಡಿಯೊಳಗಿನ ಪ್ರತಿಬಿಂಬದಲ್ಲಿ ಕಾಣಿಸುತ್ತಿದ್ದ, ದಕ್ಷಿಣ ದಿಕ್ಕಿನ ಗೋಡೆಯಲ್ಲಿ ತೂಗಿಸಿದ್ದ ಕನ್ನಡಿಯಲ್ಲಿ ಪ್ರತಿಬಿಂಬಿಸುತಿದ್ದ ಕೂದಲು ತನ್ನದೋ ಬೇರೆಯವರದ್ದೋ ಎಂಬುದೇ ಸಂಶಯಕ್ಕೆ ಕಾರಣವಾಗಿತ್ತು. ಹಾಗೆಯೇ ಉತ್ತರ ದಿಕ್ಕಿನ ಗೋಡೆಯಲ್ಲಿ ತೂಗಿಸಿದ್ದ ಕನ್ನಡಿಯೊಳಗಿನ ಪ್ರತಿಬಿಂಬದಲ್ಲಿ ಎಡಗೈಯಾಗಿ ಕಾಣಿಸುತ್ತಿದ್ದ ತನ್ನ ಬಲಗೈ, ದಕ್ಷಿಣ ದಿಕ್ಕಿನ ಗೋಡೆಯಲ್ಲಿ ತೂಗಿಸಿದ್ದ ಕನ್ನಡಿಯಲ್ಲಿ ಮತ್ತೆ ಬಲಗೈಯಾಗಿ ಕಾಣಿಸುತ್ತಿದ್ದು, ತಾನು ಕತ್ತರಿ ಹಿಡಿದ ಕೈ ಯಾವುದು ಎಂಬುದೇ ಮರೆತು ಹೋಗುತ್ತಿತ್ತು.

ಒಮ್ಮೆ ತನ್ನ ಎಡವು ಬಲವಾಗಿ, ಮತ್ತೊಮ್ಮೆ ತನ್ನ ಬಲವು ಎಡವಾಗಿ ಕಾಣಿಸತೊಡಗಿದಾಗ ಗಾಂಧಿಯ ಮನಸ್ಸಿನಲ್ಲಿ ಹೊಸ ಪ್ರಶ್ನೆಯೊಂದು ಹುಟ್ಟಿಕೊಂಡಿತು. ಪ್ರತಿಬಿಂಬದಲ್ಲಿ ಎಡವು ಬಲವಾಗಿ ಮತ್ತು ಬಲವು ಎಡವಾಗಿ ಕಾಣಿಸುತ್ತಿರುವಾಗ, ತನ್ನ ಮುಖದ ಮೇಲುಭಾಗದಲ್ಲಿರುವ ಹಣೆಯು, ಮುಖದ ತಳಬಾಗದಲ್ಲಿರುವ ಗದ್ದದ ಭಾಗದಲ್ಲಿ ಯಾಕೆ ಕಾಣಿಸುವುದಿಲ್ಲ? ತನ್ನ ತಲೆಗೂದಲು ಕುತ್ತಿಗೆಯ ಭಾಗದಲ್ಲೂ, ಕುತ್ತಿಗೆಯು ಹಣೆಯ ಮೇಲ್ಭಾಗದಲ್ಲೂ ಕಾಣಿಸಬೇಕಲ್ಲವೇ? ಗಾಂಧೀಯದ್ದು ಯಾವಾಗಲೂ ಪ್ರಯೋಗಶೀಲ ಮನಸ್ಸು.

ನೆಲಕ್ಕೆ ಸಮಾನಾಂತರವಾಗಿ ಎರಡು ಕಣ್ಣು ಇರುವುದರಿಂದಾಗಿ ಹೀಗೆ ಕಾಣಿಸಿರುತ್ತಿರಬಹುದೇ ಎಂಬ ಅನುಮಾನ ಹುಟ್ಟಿತು. ಹಾಗಾದರೆ ಒಂದು ಕಣ್ಣಿನಿಂದ ನೋಡಿದರೆ ಎಡವು ಎಡವಾಗಿಯೂ, ಬಲವು ಬಲವಾಗಿಯೂ ಕಾಣಿಸಬೇಕಲ್ಲವೇ? ಒಂದು ಕಣ್ಣು ಮುಚ್ಚಿ ನೋಡಿದರು.

ಊಹುಂ, ಯಾವುದೇ ವ್ಯತ್ಯಾಸವಾಗಲಿಲ್ಲ. ನೆಲಕ್ಕೆ ಸಮಾನಾಂತರವಾಗಿ ಮಲಗಿದ್ದಾಗ ಎತ್ತರದಲ್ಲಿ ತೂಗುತ್ತಿದ್ದ ಕನ್ನಡಿಯೇ ಕಾಣಿಸಲಿಲ್ಲ. ಗಾಂಧಿಯ ತಲೆ ಹನ್ನೆರಡಾಣೆಯಾಗಿತ್ತು.

ತಮ್ಮ ಮಕ್ಕಳ ಮುಖದ ಲಕ್ಷಣವನ್ನೇ ಬದಲಿಸಿ ಗುರುತು ಸಿಗದಂತೆ ಮಾಡಿದ್ದ ತನ್ನ ಗಂಡ, ಇದೀಗ ಸ್ವತಃ ತನ್ನ ಮೇಲೆಯೇ ಕ್ಷೌರಪ್ರಯೋಗ ಮಾಡಿಕೊಳ್ಳಲು ಹೆಣಗುತ್ತಿರುವುದನ್ನು, ಕಸ್ತೂರಿ ಬಾಯಿಯವರು ಬಾಗಿಲ ಮರೆಯಲ್ಲಿ ನಿಂತು ನೋಡುತ್ತಲೇ ಇದ್ದರು. ಅದು ಗಾಂಧಿಯ ಗಮನಕ್ಕೂ ಬಂದಿತ್ತು. ಆದರೆ, ಹಿಡಿದ ಕೆಲಸವನ್ನು ಮುಗಿಸದೆ ಬಿಡುವವರಲ್ಲ ಗಾಂಧಿ. ಮುಗಿಸಿದರು.

ಮರುದಿನದಿಂದ ನ್ಯಾಯಾಲಯದಲ್ಲಿ ಗಾಂಧಿಯ ತಲೆಯ ಹಿಂಬದಿಯ ಕೂದಲು ಇಲಿ ಕತ್ತರಿಸಿ ತಿಂದಂತಿರುವುದನ್ನು ಕಂಡ ಎಲ್ಲರೂ, ಗಾಂಧಿಯ ಬೆನ್ನ ಹಿಂದೆ ಮುಸಿ ಮುಸಿ ನಗತೊಡಗಿದ್ದರು. ನ್ಯಾಯಾಧೀಶರ ಗಮನಕ್ಕೂ ಅದು ಬಂದಿತ್ತು.

ಅವರು ನ್ಯಾಯಾಲಯದಲ್ಲಿ ಗಾಂಧಿಯನ್ನು ಕೇಳಬಯಸಿದ್ದ ಪ್ರಶ್ನೆ ಅದುವೇ; ತೀರಾ ಸರಳವಾದ ಪ್ರಶ್ನೆ ನ್ಯಾಯಾಧೀಶರದ್ದು, 'ನಿಮ್ಮ ತಲೆಗೂದಲನ್ನು ಇಲಿಗಳು ತಿಂದವೇನೂ ಮಿಸ್ಟರ್ ಗಾಂಧೀ?' ನ್ಯಾಯಾಧೀಶರು ಗಾಂಧಿಯನ್ನು ತಮ್ಮ ಕೊಠಡಿಗೆ ಕರೆಸಿಕೊಂಡು ಅದೇ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದ್ದರು.

ಗಾಂಧಿಗೆ ನಗುವೇ ನಗು.

ಇಂತಹ ಸರಳ ಪ್ರಶ್ನೆಗೆ ಉತ್ತರವಾಗಿ ಜಗತ್ತಿನ ಪುರಾಣಗಳನ್ನೆಲ್ಲ ನ್ಯಾಯಾಲಯದ ಕಟಕಟೆಯಲ್ಲಿಟ್ಟು ವಿಚಾರಿಸಿಕೊಂಡ ಗಾಂಧಿಯ ಮುಗ್ಧ ಮನಸ್ಸನ್ನು ಕಂಡು ನ್ಯಾಯಾಧೀಶರಿಗೆ ನಗುವೇ ನಗು. ಇಬ್ಬರೂ ಮನಸಾರೆ ನಕ್ಕಿದ್ದರು. ತಮ್ಮ ಪದವಿ ಅಧಿಕಾರಗಳನ್ನು ಮರೆತು, ತಮ್ಮೆಲ್ಲಾ ಅಹಂಕಾರಗಳನ್ನು ಕಟ್ಟಿ ಮೂಲೆಗೆಸೆದು ಇಬ್ಬರೂ ಬಿದ್ದು ಬಿದ್ದು ನಕ್ಕಿದ್ದರು.

## ಕಟ್ಟ ಕಡೆಯವನಿಗೆ ನ್ಯಾಯ

ಒಂದು ದ್ರಾಕ್ಷಿ ತೋಟ; ತೋಟಕ್ಕೊಬ್ಬ ಯಜಮಾನ.

ಆ ಯಜಮಾನನು ಒಂದು ದಿನ ಬೆಳಗ್ಗೆ ಸೂರ್ಯೋದಯದ ಹೊತ್ತಿಗೆ ನದಿ ದಡಕ್ಕೆ ಹೋದನು. ನದಿ ದಡದಲ್ಲಿ ನಿಂತಿದ್ದ ಕೆಲವರನ್ನು ಕರೆದು, ಅವರಿಗೆಲ್ಲ ಒಂದೊಂದು ಬೆಳ್ಳಿ ನಾಣ್ಯದಂತೆ ದಿನಗೂಲಿ ನಿಶ್ಚಯಿಸಿ ತನ್ನ ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡಲು ಕಳುಹಿಸಿದನು. ಸೂರ್ಯನು ಸ್ವಲ್ಪ ಮೇಲೇರಿ ಬಂದನು.

ಯಜಮಾನನು ಸಂತೆ ನಡೆಯುತ್ತಿರುವಲ್ಲಿಗೆ ಹೋದನು. ಅಲ್ಲಿ ಕೆಲವರು ಕೂಲಿಗಾಗಿ ಕಾಯುತ್ತಿದ್ದರು. ಯಜಮಾನನು ಅವರಲ್ಲಿ ಕೆಲವರನ್ನು ಆರಿಸಿ, 'ನನ್ನ ತೋಟದಲ್ಲಿ ನೀವು ಸೂರ್ಯ ಮುಳುಗುವವರೆಗೆ ಕೆಲಸ ಮಾಡಿದರೆ ನಿಮಗೆ ನ್ಯಾಯವಾದ ಕೂಲಿಯನ್ನು ಕೊಡುವೆನು' ಎಂದು ಹೇಳಿ ಅವರನ್ನು ತನ್ನ ದ್ರಾಕ್ಷಿ ತೋಟಕ್ಕೆ ಕಳುಹಿಸಿದನು.

ಸೂರ್ಯನು ನಡು ನೆತ್ತಿಗೆ ಬಂದನು.

ಯಜಮಾನನು ಆಲದ ಮರದ ನೆರಳಲ್ಲಿ ಕೆಲಸವಿಲ್ಲದೆ ಕುಳಿತು ಹರಟೆ ಹೊಡೆಯುತ್ತಿರುವ ಜನರ ಬಳಿಗೆ ಹೋದನು. ಅವರಿಗೆ ಹೇಳಿದನು, 'ನನ್ನ ತೋಟದಲ್ಲಿ ನೀವು ಸೂರ್ಯ ಮುಳುಗುವ ವರೆಗೆ ಕೆಲಸ ಮಾಡಿದರೆ ನಿಮಗೂ ನ್ಯಾಯವಾದ ಕೂಲಿಯನ್ನು ಕೊಡುವೆನು'. ಅವರೆಲ್ಲರೂ ಯಜಮಾನನ ತೋಟಕ್ಕೆ ಕೆಲಸ ಮಾಡಲು ಹೋದರು.

ಸೂರ್ಯನು ತಂಪಾಗಿ ಪಶ್ಚಿಮದಲ್ಲಿ ಇಳಿಯತೊಡಗಿದ್ದನು.

ಯಜಮಾನನು ಗುಡ್ಡದ ಇಳಿಜಾರಿನಲ್ಲಿ ನಡೆದು ಕೊಂಡು ಹೋಗುತ್ತಿರುವವರನ್ನು ಕರೆದು,' ನನ್ನ ತೋಟದಲ್ಲಿ ನೀವು ಸೂರ್ಯ ಮುಳುಗುವ ವರೆಗೆ ಕೆಲಸ ಮಾಡಿದರೆ ನಿಮಗೂ ನ್ಯಾಯವಾದ ಕೂಲಿಯನ್ನು ಕೊಡುವೆನು' ಎಂದು ಹೇಳಿ ತನ್ನ ತೋಟಕ್ಕೆ ಕೆಲಸ ಮಾಡಲು ಕಳುಹಿಸಿದನು.

ಸೂರ್ಯ ಮುಳುಗಿದನು.

ಕೆಲಸಗಾರರೆಲ್ಲ ಕೆಲಸ ಮುಗಿಸಿ ಯಜಮಾನನ ಎದುರು ಕೂಲಿಗಾಗಿ ಸಾಲುಗಟ್ಟಿ ನಿಂತರು. ಯಜಮಾನನು ದಿನದ ಕೊನೆಗೆ ಕೆಲಸಕ್ಕೆ ಬಂದಿದ್ದವರನ್ನು ಮೊದಲು ಕರೆದನು. ಅವರಿಗೆಲ್ಲ ತಲಾ ಒಂದೊಂದು ಬೆಳ್ಳಿಯ ನಾಣ್ಯವನ್ನು ಕೊಟ್ಟನು. ಅವರು ಸಂತೋಷದಿಂದ ಯಜಮಾನನನ್ನು ಹರಸಿಕೊಳ್ಳುತ್ತಾ ಹೋದರು. ಕೆಲಸಕ್ಕೆ ಮುಂಜಾನೆಯೇ ಬಂದು ಸೇರಿದ್ದವರು ಅದನ್ನು ನೋಡಿದರು. ತಮ್ಮ ಸರದಿ ಬಂದಾಗ ತಮಗೆ ಹೆಚ್ಚು ಕೂಲಿ ಸಿಗಬಹುದೆಂದು ಆಸೆಪಟ್ಟರು. ಅವರ ಸರದಿಯೂ ಬಂದಿತು. ಯಜಮಾನನು ಅವರಿಗೂ ಒಂದೊಂದು ಬೆಳ್ಳಿ ನಾಣ್ಯವನ್ನು ಕೂಲಿಯಾಗಿ ಕೊಟ್ಟನು. ಬೆಳಗ್ಗಿನಿಂದಲೂ ಕೆಲಸ ಮಾಡಿದವರಿಗೆ ಇದರಿಂದ ಅಚ್ಚರಿಯಾಯಿತು. ಬೇಸರವಾಯಿತು. ಕೋಪವೂ ಬಂದಿತು.

'ನಾವು ಸೂರ್ಯೋದಯದ ಹೊತ್ತಿನಿಂದಲೇ ತೋಟದಲ್ಲಿ ಕೆಲಸ ಮಾಡಿದ್ದೇವೆ. ಮಧ್ಯಾಹ್ನದ ಬಿಸಿಲಿಗೆ ಬೆಂದು ದುಡಿದಿದ್ದೇವೆ. ಆದರೆ ಸಂಜೆ ಸೂರ್ಯ ಮುಳುಗುವ ಹೊತ್ತಿಗೆ ಬಂದು ತೋಟದ ನೆರಳಲ್ಲಿ ಸ್ವಲ್ಪ ಹೊತ್ತು ಮಾತ್ರ ಕೆಲಸ ಮಾಡಿದವರಿಗೆ ಕೊಟ್ಟಿರುವಷ್ಟು ಕೂಲಿಯನ್ನು ನಮಗೂ ಕೊಡುವುದು ನ್ಯಾಯವಲ್ಲ' ಎಂದು ಗೊಣಗಿದರು.

ಯಜಮಾನನು ನಗುತ್ತಾ ಅವರಿಗೆ ಹೀಗೆಂದು ಉತ್ತರಿಸಿದನು,' ನಾನು ನಿಮಗೆ ಒಂದು ಬೆಳ್ಳಿಯ ನಾಣ್ಯವನ್ನು ಕೂಲಿಯಾಗಿ ಕೊಡುವೆನೆಂದು ಮಾತು ಕೊಟ್ಟಿರುವೆನು. ಕೊಟ್ಟ ಮಾತಿನಂತೆ ನಿಮಗೆಲ್ಲಾ ತಲಾ ಒಂದೊಂದು ಬೆಳ್ಳಿಯ ನಾಣ್ಯವನ್ನು ಕೊಟ್ಟಿರುವೆನು. ಅದನ್ನು

ತೆಗೆದುಕೊಂಡು ನೀವು ಹೋಗುವುದು ನ್ಯಾಯವಾಗುತ್ತದೆ. ಕಟ್ಟ ಕಡೆಯವನಿಗೂ ಬೆಳ್ಳಿಯ ನಾಣ್ಯವನ್ನು ಕೊಡುವುದು ನನಗಿಷ್ಟದ ಸಂಗತಿಯಾಗಿದೆ. ನನ್ನ ಉದಾರತೆಯನ್ನು ಕಂಡು ನೀವೇಕೆ ಹೊಟ್ಟೆಯುರಿ ಮಾಡಿಕೊಳ್ಳಬೇಕೂ? ಯೇಸುಸ್ವಾಮಿ ನಿಮಗೆ ಬೋಧಿಸಲಿಲ್ಲವೇ? ಕಡೆಯವರು ಮೊದಲಿಗರಾಗುವರು. ಮೊದಲಿನವರು ಕಡೆಯವರಾಗುವರು.'

ಗೆಳೆಯನೊಬ್ಬನು ಕೊಟ್ಟಿದ್ದ ಪುಸ್ತಕದಲ್ಲಿದ್ದ ಸಣ್ಣ ಕತೆಯೊಂದನ್ನು ಓದುತಿದ್ದ ಗಾಂಧಿಗೆ ನಿದ್ರೆ ಮರೆತು ಹೋಗಿತ್ತು.

ಜೊಹಾನ್ಸ್‌ಬರ್ಗ್‌ನಿಂದ ಡರ್‌ಬನ್‌ಗೆ ಇಪ್ಪತ್ತನಾಲ್ಕು ತಾಸುಗಳ ರೈಲು ಪ್ರಯಾಣ. ಡರ್‌ಬನ್‌ಗೆ ಹೊರಟಿದ್ದ ಗಾಂಧಿಯನ್ನು ರೈಲು ನಿಲ್ದಾಣದಲ್ಲಿ ವಿದಾಯ ಕೋರಲು ಬಂದಿದ್ದ ಗೆಳೆಯ ಹೆನ್ರಿ ಪೋಲಕ್ ಎಂಬವರು, ರೈಲು ಹೊರಡುತ್ತಿರುವಂತೆ ಗಾಂಧಿಯ ಕೈಯ್ಯಲ್ಲೊಂದು ಪುಟ್ಟ ಪುಸ್ತಕವನ್ನಿಟ್ಟು, ರೈಲಿನಲ್ಲಿ ಬೇಸರವಾದಾಗ ಇದರ ಪುಟ ತಿರುಗಿಸುತ್ತಿರಿ ಎಂದಿದ್ದರು. ಗಾಂಧಿ ತನ್ನ ಪ್ರಯಾಣದ ಸಮಯದಲ್ಲಿ ಪುಸ್ತಕ ಓದುವ ಅಭ್ಯಾಸವುಳ್ಳವರಾದ್ದರಿಂದ ಜತೆಯಲ್ಲಿ ನಾಲ್ಕೈದು ಪುಸ್ತಕಗಳನ್ನು ಯಾವಾಗಲೂ ಒಯ್ಯುತ್ತಿದ್ದರು. ಐದರ ಒಟ್ಟಿಗೆ ಆರಾಯಿತು ಎಂದು ಭಾವಿಸಿದ್ದ ಗಾಂಧಿ, ಅ ಪುಸ್ತಕವನ್ನೂ ತನ್ನ ಚೀಲಕ್ಕೆ ಹಾಕಿಕೊಂಡಿದ್ದರು.

ಡರ್ಬನ್‌ನಲ್ಲಿ ಗಾಂಧಿಗೆ ಬೆಟ್ಟದಷ್ಟು ಕೆಲಸಗಳು ಕಾದು ಕುಳಿತಿದ್ದವು. ಜೊಹಾನ್ಸ್‌ಬರ್ಗ್‌ನಿಂದ ಅವರು ಹೊರಡಿಸುತ್ತಿದ್ದ 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಪ್ರತಿಗಳನ್ನು ಡರ್ಬನ್‌ನಲ್ಲಿ ಮುದ್ರಿಸುತ್ತಿದ್ದ ಮುದ್ರಣಾಲಯದ ವ್ಯವಹಾರಗಳು ಪ್ರಾಮಾಣಿಕವಾಗಿಲ್ಲ ಎಂಬ ಸುದ್ದಿ ಅವರಿಗೆ ತಲುಪಿತ್ತು. ಅಲ್ಲಿಯ ಕೆಲಸಗಾರರು ಗಾಂಧಿಯ ಸೂಚನೆಯಂತೆ ಸರಿಯಾದ ಲೆಖ್ಖಪತ್ರಗಳನ್ನು ಇಟ್ಟಿರಲಿಲ್ಲ. ಇದರಿಂದ ಚಿಂತೆಗೊಳಗಾಗಿದ್ದ ಗಾಂಧಿ, ಬೇರೆಯವರ ಮಾತುಗಳನ್ನು ಕೇಳಿ ತಲೆಕೆಡಿಸಿಕೊಳ್ಳುವ ಬದಲು ತಾನೇ ಒಮ್ಮೆ ಹೋಗಿ ಎಲ್ಲವನ್ನೂ ಪರೀಕ್ಷಿಸುವ ನಿರ್ಧಾರ ಮಾಡಿದ್ದರು.

ರೈಲು ಹೊರಟಿತು. ಪತ್ರಿಕೆಗೆ ಬರೆಯಬೇಕಾಗಿದ್ದ ಲೇಖನವೊಂದರ ಕರಡು ತಯಾರಿಯಲ್ಲಿಯೇ ಹಗಲು ಕಳೆದು ಹೋಗಿತ್ತು. ರಾತ್ರಿಯ ಊಟದ ಬಳಿಕ ನಿದ್ರೆ ಮಾಡುವ ಮೊದಲು ನಾಲ್ಕು ಸಾಲು ಓದೋಣವೆಂದು ಆ ಪುಸ್ತಕವನ್ನು ಚೀಲದಿಂದ ಹೊರತೆಗೆದಿದ್ದರು.

ಮುಖಪುಟದಲ್ಲಿ ಪುಸ್ತಕದ ಹೆಸರು ದಪ್ಪಕ್ಷರಗಳಲ್ಲಿ ಅಚ್ಚಾಗಿತ್ತು: **'ಅನ್ ಟು ದ ಲಾಸ್ಟ್'**.

ಅಂದರೆ, ಕಟ್ಟ ಕಡೆಯವನಿಗೆ ನ್ಯಾಯ. ಬರೆದವರು ಜಾನ್ ರಸ್ಕಿನ್ ಎಂಬ ಮಹಾನ್ ಇಂಗ್ಲಿಷ್ ಲೇಖಕ.

ಅವನೊಬ್ಬ ಬರಿಯ ಲೇಖಕನಾಗಿದ್ದಿರಲಿಲ್ಲ. ಅವನೊಬ್ಬ ಪ್ರವಾದಿ, ಅವನೊಬ್ಬ ಕಲಾವಿಮರ್ಶಕ, ಸಮಾಜ ಸುಧಾರಕ.

ಪುಸ್ತಕದಲ್ಲಿ ಕಣ್ಣು ನೆಟ್ಟ ಗಾಂಧಿ ತನ್ನನ್ನು ತಾನೇ ಮರೆತುಬಿಟ್ಟಿದ್ದರು. ತಾನು ಬಹಳ ದಿನಗಳಿಂದ ಕನಸು ಕಾಣುತ್ತಿದ್ದ ವಿಚಾರಗಳೆಲ್ಲವೂ ಅವರು ಓದುತ್ತಿದ್ದ ಪುಸ್ತಕದಲ್ಲಿ ಕ್ರಮಬದ್ಧವಾಗಿ ವಿವರಿಸಲ್ಪಟ್ಟಿದ್ದವು.

ಎಲ್ಲರ ಒಳಿತಿನಲ್ಲಿ ಮಾತ್ರ ಒಬ್ಬನ ಒಳಿತು ಇದೆ; ಗಾಂಧಿಗೆ ಇದು ಮೊದಲೇ ತಿಳಿದಿತ್ತು.

ದುಡಿಮೆಯಲ್ಲಿ ಮೇಲು ಕೀಳು ಎಂಬುದಿಲ್ಲ; ಗಾಂಧಿಗೆ ಇದರಲ್ಲಿ ಸ್ವಲ್ಪ ಅನುಭವವಿತ್ತು.

ಕೃಷಿಕ ಅಥವಾ ಕುಶಲಕರ್ಮಿಯ ಶ್ರಮವೇ ನಿಜವಾದ ಜೀವನ; ಇದು ಗಾಂಧಿಗೆ ಹೊಸ ವಿಷಯವಾಗಿತ್ತು.

ಗಾಂಧಿ ಆ ರಾತ್ರಿ ನಿದ್ರೆ ಮಾಡಲಿಲ್ಲ. ಪುಸ್ತಕ ಓದುತ್ತಿರುವಂತೆಯೇ ತನ್ನ ಮುಂದಿನ ದಾರಿ ಯಾವ ರೀತಿ ಇರಬೇಕೆಂದು ನಿರ್ಧರಿಸಿಬಿಟ್ಟಿದ್ದರು. ಒಮ್ಮೆ ನಿರ್ಧರಿಸಿದ್ದನ್ನು ಕಾರ್ಯರೂಪಕ್ಕೆ ತರಲು ಏನೆಲ್ಲ ಮಾಡಬೇಕೋ ಅದೆಲ್ಲವನ್ನೂ ಮಾಡುವುದು ಅವರ ಸ್ವಭಾವ.

ಗಾಂಧಿ ತಡಮಾಡಲಿಲ್ಲ. ತನ್ನ ಉಳಿತಾಯದ ಹಣದಿಂದ, ಡರ್ಬನ್ ನಿಂದ ಸುಮಾರು ೧೫ ಮೈಲು ದೂರದಲ್ಲಿದ್ದ 'ಫೀನಿಕ್ಸ್ ವಸತಿ' ಕೃಷಿ ಕ್ಷೇತ್ರವನ್ನು ಮಿಸ್ಟರ್ ಥಾಮಸ್ ವಾಟಿನ್ಸ್ ಎಂಬ ರೈತನಿಂದ ಖರೀದಿಸಿದರು. ಆ ಕೃಷಿ ಕ್ಷೇತ್ರವು ಹಿಂದೊಮ್ಮೆ ಬೆಂಕಿಯಲ್ಲಿ ಬೆಂದು ಬೂದಿಯಾಗಿದ್ದ ಬಲು ವಿಶಾಲವಾದ ಕಬ್ಬಿನ ತೋಟವಾಗಿತ್ತು.

ಆದರೆ, ಧೈರ್ಯಗೆಡದ ಆ ರೈತನು ಆ ಕೃಷಿ ಕ್ಷೇತ್ರದ ಬೂದಿಯಿಂದಲೇ ಮತ್ತೆ ಅದೇ ತೋಟ ವನ್ನು ನಂದನವನವನ್ನಾಗಿ ರೂಪಿಸಿ, ಅದಕ್ಕೆ 'ಫೀನಿಕ್ಸ್ ಫಾರಂ' ಎಂಬ ಹೆಸರು ಕೊಟ್ಟಿದ್ದನು. ಫೀನಿಕ್ಸ್ ಎಂಬುದು ಗ್ರೀಕ್ ಪುರಾಣದಲ್ಲಿ ಬೂದಿಯ ಮಧ್ಯದಿಂದ ಎದ್ದುಬರುವ ಒಂದು ಪಕ್ಷಿಯ ಹೆಸರು. ಅದರ ನೆನಪಿಗೆ ಆ ರೈತನು ಬೂದಿಯಿಂದ ಎದ್ದು ಬಂದಂತಿರುವ ತನ್ನ ತೋಟಕ್ಕೆ ಆ ಹೆಸರನ್ನೇ ನೀಡಿದ್ದನು.

ಕೆಲವೇ ದಿನಗಳಲ್ಲಿ ಗಾಂಧಿ, 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಕಚೇರಿಯನ್ನು ತಾನು ಖರೀದಿಸಿದ 'ಫೀನಿಕ್ಸ್ ಕೃಷಿ ಕ್ಷೇತ್ರಕ್ಕೆ' ಸ್ಥಳಾಂತರಗೊಳಿಸಿದರು. ಎಲ್ಲ ಕಾರ್ಯಕರ್ತರಿಗೂ ಮಾರ್ಗಸೂಚಿ ಬರೆದು 'ಇಂಡಿಯನ್ ಒಪೀನಿಯನ್' ಪತ್ರಿಕೆಯಲ್ಲಿ ಪ್ರಕಟಿಸಿದರು.

ಫೀನಿಕ್ಸ್ ಕೃಷಿ ಕ್ಷೇತ್ರದಲ್ಲಿ ಪ್ರತಿಯೊಬ್ಬರೂ ಮೈಬಗ್ಗಿಸಿ ದುಡಿಯಬೇಕು. ಯಂತ್ರಗಳ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ದೇಶ, ಭಾಷೆ, ಬಣ್ಣ ಇವುಗಳ ನಡುವೆ ವ್ಯತ್ಯಾಸ ಮಾಡಬಾರದು. ಫೀನಿಕ್ಸ್ ಕೃಷಿ ಕ್ಷೇತ್ರದಲ್ಲಿ ಎಲ್ಲರೂ ಸಮಾನರು. ವ್ಯಕ್ತಿ ಜೀವನದಲ್ಲಿ ಎಲ್ಲರೂ ಪರಿಶುದ್ಧರಾಗಿರಬೇಕು. ಕೃಷಿ ಕ್ಷೇತ್ರದಲ್ಲಿರುವ ಎಲ್ಲ ಮಕ್ಕಳಿಗೂ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕು. ಪ್ರಕೃತಿ ಚಿಕಿತ್ಸೆಯ ಕ್ರಮವನ್ನು ಅಳವಡಿಸಿಕೊಳ್ಳಬೇಕು. ಎಲ್ಲ ನಿವಾಸಿಗಳೂ ಸಾರ್ವಜನಿಕ ಸೇವೆಗೇ ಬದುಕನ್ನು ಮುಡಿಪಾಗಿಡಬೇಕು. ಕೃಷಿ ಕ್ಷೇತ್ರದಲ್ಲಿ ದುಡಿಯುವ

ಎಲ್ಲರಿಗೂ ಸಮಾನವಾಗಿ ತಿಂಗಳಿಗೆ ತಲಾ ಮೂರು ಪೌಂಡ್ ವೇತನ ನೀಡಲಾಗುತ್ತದೆ. ಸಮಯ ಸಿಕ್ಕಾಗಲೆಲ್ಲ ಎಲ್ಲರೂ ಪತ್ರಿಕೆಯ ಕಚೇರಿಯಲ್ಲಿ ಕೆಲಸ ಮಾಡಬೇಕು ಮತ್ತು ಎಲ್ಲ ಧರ್ಮಗಳ ಗ್ರಂಥಗಳ ಓದು ಮತ್ತು ಚರ್ಚೆಗಳನ್ನು ನಡೆಸಬೇಕು.

ಗಾಂಧಿಗೆ ಭಗವದ್ಗೀತೆಯೆಂದರೆ ಮೊದಲೇ ಇಷ್ಟ. ಫೀನಿಕ್ಸ್ ಕೃಷಿ ಕ್ಷೇತ್ರದ ಕೆಲಸಗಳಲ್ಲಿ ತನ್ನನ್ನು ಗಂಭೀರವಾಗಿ ತೊಡಗಿಸಿಕೊಂಡ ಬಳಿಕ ಈ ಇಷ್ಟ ಹೆಚ್ಚಾಯಿತು. ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದಂತೆ ಬದುಕಲು ತನಗೆ ಸಾಧ್ಯವೇನೋ ಎಂದು ಪರೀಕ್ಷೆ ಮಾಡಿಕೊಳ್ಳುವ ಆಸೆ ಹುಟ್ಟಿತು. ಎಲ್ಲ ಸುಖ ಸಂಪತ್ತುಗಳನ್ನೂ ಸಂಪೂರ್ಣವಾಗಿ ತ್ಯಾಗ ಮಾಡದ ಹೊರತು ಹಾಗೆ ಬದುಕಲು ಸಾಧ್ಯವಾಗಲಾರದು ಅನ್ನಿಸಲಾರಂಭಿಸಿತು. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆ. ಆದ್ದರಿಂದ ಹೆಂಡತಿ ಮಕ್ಕಳಿಗಾಗಿ ಸಂಪತ್ತನ್ನು ಕೂಡಿ ಇಡುವುದು ಸರಿಯಲ್ಲವೆನ್ನಿಸಿತು. ಹಾಗೆಂದು ಗಾಂಧಿಯ ಬಳಿ ಕೂಡಿಟ್ಟಿರುವ ಸಂಪತ್ತಾದರೂ ಎಲ್ಲಿತ್ತು?.

ಈ ಹಿಂದೊಮ್ಮೆ ಹೆಂಡತಿ ಮಕ್ಕಳ ಸಹಿತ ಭಾರತಕ್ಕೆ ಹೊರಟು ನಿಂತಿದ್ದಾಗ, ದಕ್ಷಿಣ ಆಫ್ರಿಕಾಕ್ಕೆ ಅವರನ್ನು ಕರೆಸಿಕೊಂಡಿದ್ದ ಅಬ್ದುಲ್ಲಾ ಸೇಠರು ಮತ್ತು ಅವರ ಗೆಳೆಯರು, ಸಾವಿರಾರು ಪೌಂಡ್ ಬೆಲೆಬಾಳುವ ಬೆಳ್ಳಿ ಬಂಗಾರದ ಆಭರಣಗಳನ್ನು ಗಾಂಧಿಗೆ ಉಡುಗೊರೆಯಾಗಿ ನೀಡಿದ್ದರು. ಗಾಂಧಿ ಎಲ್ಲ ಉಡುಗೊರೆ ಮತ್ತು ಆಭರಣಗಳನ್ನು ಮಾರಾಟ ಮಾಡಿ ಸಿಗುವ ಹಣವನ್ನು ದಕ್ಷಿಣ ಆಫ್ರಿಕಾದಲ್ಲಿರುವ ಬಡವರ ಸೇವೆಗಾಗಿ ಬಳಸುವಂತೆ ಕರಾರು ಪತ್ರ ಬರೆಸಿ ಅಲ್ಲಿಯ ಬ್ಯಾಂಕಿಗೆ ಒಪ್ಪಿಸಿಬಿಟ್ಟಿದ್ದರು.

ಅದುವರೆಗೂ ತನ್ನ ವಕೀಲಿ ಕೆಲಸದಿಂದ ಸಂಪಾದನೆಯಾಗುತ್ತಿದ್ದ ಹಣದಿಂದ, ತನ್ನ ಕುಟುಂಬದ ಖರ್ಚು ಕಳೆದು ಉಳಿತಾಯವಾಗುತ್ತಿದ್ದ ಹಣವನ್ನು ಗಾಂಧಿ, ಭಾರತದಲ್ಲಿರುವ ತನ್ನ ಅಣ್ಣನಿಗೆ ಕಳುಹಿಸುತ್ತಿದರು. ಸಾಲ ಮಾಡಿ ತನ್ನನ್ನು ಇಂಗ್ಲೆಂಡಿಗೆ ಕಳುಹಿಸಿ ಮೂರು ವರ್ಷಗಳ ಕಾಲ ಬ್ಯಾರಿಸ್ಟರ್ ಓದಿಸಿದ್ದ ಅಣ್ಣನಿಗೆ ಕೃತಜ್ಞತೆಯ ರೂಪದಲ್ಲಿ ಹಣ ಕಳುಹಿಸಿ ಕೊಡುತ್ತಿದ್ದರು. ಇನ್ನು ಮುಂದೆ ಫೀನಿಕ್ಸ್ ಕೃಷಿ ಕ್ಷೇತ್ರದಲ್ಲಿ ತನಗೆ ಸಿಗುವ ಕೂಲಿಯಿಂದ ತನ್ನ ಕುಟುಂಬವನ್ನು ಸಾಕಲಷ್ಟೇ ಸಾಧ್ಯ. ಉಳಿತಾಯ ಮಾಡುವುದಂತೂ ಸಾಧ್ಯವೇ ಆಗದ ಮಾತು. ಅಲ್ಲದೆ, ಉಳಿತಾಯ ಮಾಡಿ ಸಂಪತ್ತನ್ನು ಕೂಡಿ ಇಡುವುದು ತನ್ನ ನೀತಿಗೆ ವಿರುದ್ಧವಾದದ್ದು.

ಮರುದಿನವೇ ಅಣ್ಣ ಲಕ್ಷ್ಮೀದಾಸನವರಿಗೆ ಕಾಗದ ಬರೆದು ತನ್ನ ನಿರ್ಧಾರವನ್ನು ತಿಳಿಸಿಬಿಟ್ಟರು. ತನ್ನ ತಮ್ಮನ ಸಾಧನೆಗಳ ಬಗ್ಗೆ ಈಗಾಗಲೇ ತಿಳಿದುಕೊಂಡಿದ್ದ ಅಣ್ಣ ಲಕ್ಷ್ಮೀದಾಸನವರು ಸಂತೋಷದಿಂದ ತಮ್ಮ ಒಪ್ಪಿಗೆಯನ್ನು ಬರೆದು ಗಾಂಧಿಗೆ ಆಶೀರ್ವಾದ ಮಾಡಿದ್ದರು.

ಗಾಂಧಿಗೆ ನೂರಾನೆಗಳ ಬಲ ಬಂದಂತಾಯಿತು. ತನ್ನ ಮನೆ, ಮನೆಯಲ್ಲಿದ್ದ ಮೇಜು, ಕುರ್ಚಿ ಸಹಿತ ಎಲ್ಲವನ್ನೂ ಮಾರಾಟ ಮಾಡಿದರು. ಸಿಕ್ಕಿದ ೫೧೩೦ ಪೌಂಡುಗಳಷ್ಟು ಹಣವನ್ನು

ಫೀನಿಕ್ಸ್ ಕೃಷಿ ಕ್ಷೇತ್ರಕ್ಕೆ ದಾನ ನೀಡಿದರು. ಕೃಷಿ ಕ್ಷೇತದಲ್ಲಿ ದುಡಿದುಣ್ಣುತ್ತಿರುವ ಇತರ ನಿವಾಸಿಗಳಂತೆ, ತಿಂಗಳಿಗೆ ಮೂರು ಪೌಂಡ್ ವೇತನ ಪಡೆದು, ಸ್ವಾವಲಂಬಿಯಾದ ಸಾಮೂಹಿಕ ಜೀವನದ ಪ್ರಯೋಗ ಆರಂಭಿಸಿದರು.

ಕಟ್ಟ ಕಡೆಯವನಿಗೆ ನ್ಯಾಯ ದೊರಕಲು ಏನೆಲ್ಲ ಮಾಡಬೇಕೋ, ಅದೆಲ್ಲವನ್ನೂ ಗಾಂಧಿ ಫೀನಿಕ್ಸ್ ಕೃಷಿ ಕ್ಷೇತ್ರದಲ್ಲಿ ಮಾಡಿದರು.

## ಹಣ್ಣಿನ ತೋಟದಲ್ಲಿ

ಗಾಂಧಿಗೆ ಸಂಸ್ಕೃತ ಭಾಷೆಯ ಮೇಲೆ ಅಷ್ಟಾಗಿ ಹಿಡಿತವಿದ್ದಿರಲಿಲ್ಲ. ಅವರ ಬಳಿ ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ ಎರಡು ಪುಸ್ತಕಗಳಿದ್ದವು. ಅವುಗಳನ್ನು ಓದುವ ಮೂಲಕ ಸಂಸ್ಕೃತ ಭಾಷೆಯನ್ನು ಕಲಿಯತೊಡಗಿದರು. ದಿನಕ್ಕೆ ಒಂದು ಅಥವಾ ಎರಡು ಸಂಸ್ಕೃತ ಶ್ಲೋಕಗಳನ್ನು ಕಂಠಪಾಠ ಮಾಡಿಕೊಳ್ಳುವುದೆಂದು ನಿರ್ಧರಿಸಿದರು. ಆದರೆ, ಅವರಿಗೆ ತನ್ನ ಕೆಲಸಗಳ ನಡುವೆ ಸಂಸ್ಕೃತ ಶ್ಲೋಕಗಳನ್ನು ಕಂಠಪಾಠ ಮಾಡಿಕೊಳ್ಳಲು ಸಮಯ ಸಿಗುತ್ತಿರಲಿಲ್ಲ. ಅದಕ್ಕಾಗಿ ಅವರು ಒಂದು ಉಪಾಯವನ್ನು ಮಾಡಿದರು.

ತಾನು ಕಂಠಪಾಠ ಮಾಡಿಕೊಳ್ಳಬೇಕೆಂದು ಬಯಸಿದ ಸಂಸ್ಕೃತ ಶ್ಲೋಕಗಳನ್ನು ಸಣ್ಣ ಸಣ್ಣ ಚೀಟಿಗಳಲ್ಲಿ ಬರೆದು ಅವುಗಳನ್ನು ಸ್ನಾನದ ಕೊಠಡಿಯ ಗೋಡೆಗಳಿಗೆ ಅಂಟಿಸಿದರು. ಬೆಳಗಿನ ಸ್ನಾನದ ಸಮಯದಲ್ಲಿ ಹಲ್ಲುಜ್ಜಿಕೊಳ್ಳುತ್ತಿರುವಾಗ ಹದಿನೈದು ನಿಮಿಷ, ನೀರೆರೆದುಕೊಂಡು ಸ್ನಾನ ಮಾಡಿಕೊಳ್ಳುತ್ತಿರುವಾಗ ಇಪ್ಪತ್ತು ನಿಮಿಷ ಆ ಚೀಟಿಗಳನ್ನೇ ನೋಡುತ್ತಾ, ಭಗವದ್ಗೀತೆಯ ಸಂಸ್ಕೃತ ಶ್ಲೋಕಗಳನ್ನು ಕಂಠಪಾಠ ಮಾಡಿಕೊಳ್ಳತೊಡಗಿದರು. ಹಾಗೆ ಕಂಠಪಾಠಮಾಡಿಕೊಂಡ ಸಂಸ್ಕೃತ ಶ್ಲೋಕಗಳನ್ನು, ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವೇಳೆಯಲ್ಲಿ ಅರ್ಥಮಾಡಿಕೊಳ್ಳಲು, ತಾನು ಪ್ರೌಢಶಾಲೆಯಲ್ಲಿ ಕಲಿತ ಸಂಸ್ಕೃತ ಭಾಷೆಯನ್ನು ನೆನಪು ಮಾಡಿಕೊಳ್ಳತೊಡಗಿದರು. ಕ್ರಮೇಣ ಅವರಿಗೆ ತಾನು ಕಂಠಪಾಠ ಮಾಡಿಕೊಳ್ಳುತ್ತಿರುವ ಶ್ಲೋಕಗಳ ಅರ್ಥಗಳು ಹೊಳೆಯಲಾರಂಭಿಸಿದ್ದವು.

ಅದೇ ಸಮಯದಲ್ಲಿ, ಬೋಯರ್ ಜನಾಂಗದ ಜನರು ಬ್ರಿಟಿಷ್ ಆಡಳಿತದ ವಿರುದ್ಧ ದಂಗೆಯೆದ್ದಿದ್ದರು.  ಸಾವು ನೋವುಗಳು ಸಾವಿರದ ಗಡಿ ದಾಟಿದ್ದವು. ಗಾಂಧಿಗೆ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಸರಕಾರದ ಅನುಮತಿ ಪಡೆದು ಸಾವಿರದ ನೂರು ಮಂದಿಯ ಸ್ವಯಂ ಸೇವಕರ ತಂಡ ಕಟ್ಟಿದರು. ಗಲಭೆಯಲ್ಲಿ ಗಾಯಗೊಂಡವರ ಗಾಯ ತೊಳೆದರು. ರಣರಂಗದಲ್ಲಿ ಬಿದ್ದವರನ್ನು ಇಪ್ಪತ್ತೈದು ಮೈಲಿಗೂ ಹೆಚ್ಚುದೂರ ಹೊತ್ತುಕೊಂಡು ಹೋಗಿ ಆಸ್ಪತ್ರೆ ಸೇರಿಸಿದರು.

ನೋವು ಉಂಡವರಿಗೆ ಸಮಾಧಾನ ಹೇಳಿದರು. ಗಾಂಧಿಯ ಸರಳ ಜೀವನ ಶೈಲಿ, ನಿಸ್ವಾರ್ಥ ಸೇವಾ ಮನೋಭಾವವು ಈಗ ಎಲ್ಲರ ಮೆಚ್ಚುಗೆ ಗಳಿಸಿತ್ತು. ಬಿಳಿಯರೂ ಗಾಂಧಿಯನ್ನು ಗೌರವದಿಂದ ಕಾಣಲಾರಂಭಿಸಿದ್ದರು.

ಆದರೆ, ಈ ಗೌರವವು ಹೆಚ್ಚು ದಿನ ಬಾಳಲಿಲ್ಲ.

ಒಂದು ಮುಂಜಾನೆ, ಅಲ್ಲಿಯ ಸುದ್ದಿ ಪತ್ರಿಕೆಗಳು ಅಲ್ಲಿ ಬದುಕುತ್ತಿರುವ ಎಲ್ಲ ಭಾರತೀಯರೂ ಅಪಮಾನದಿಂದ ತಲೆ ತಗ್ಗಿಸಬೇಕಾದ ಸುದ್ದಿಯೊಂದನ್ನು ಪ್ರಕಟಿಸಿದ್ದವು.

ಎಂಟು ವರ್ಷ ವಯಸ್ಸನ್ನು ಮೀರಿರುವ ಎಲ್ಲ ಭಾರತೀಯರು, ಅವರಿಗೆ ನಿಗದಿಯಾಗಿರುವ ಸರಕಾರಿ ಕಛೇರಿಗೆ ಹೋಗಿ ತಮ್ಮ ಬಗ್ಗೆ ಗುರುತಿನ ಪ್ರಮಾಣ ಪತ್ರಗಳನ್ನು ಪಡೆಯಲು ಸರಕಾರವು ಪತ್ರಿಕೆಗಳ ಮೂಲಕ ಎಚ್ಚರಿಕೆ ಕೊಟ್ಟಿತ್ತು. ಆದರಂತೆ ನಡೆಯದವರನ್ನು ಕಠಿಣವಾಗಿ ಶಿಕ್ಷಿಸಲು ಮತ್ತು ದೇಶದಿಂದ ಬಹಿಷ್ಕರಿಸಲು ಪೋಲೀಸರಿಗೆ ಅಧಿಕಾರವನ್ನು ಕೊಡಲಾಗಿತ್ತು.

ಗಾಂಧಿ ಸುಮ್ಮನಿರುವುದಾದರೂ ಹೇಗೇ? ಜೋಹಾನ್ಸ್‌ಬರ್ಗ್‌ನ ನಾಟಕಮಂದಿರದಲ್ಲಿ ಗಾಂಧಿ ಸಭೆ ಕರೆದರು. ಅಲ್ಲಿ ಸೇರಿದ್ದ ೩೦೦೦ ಮಂದಿ ಸರಕಾರದ ಕಾನೂನನ್ನು ಪ್ರತಿಭಟಿಸುವುದಾಗಿ ದೇವರ ಮೇಲೆ ಆಣೆ ಹಾಕಿ ಪ್ರತಿಜ್ಞೆ ಮಾಡಿದರು. ಅದೇ ದಿನಗಳಲ್ಲಿ ಪ್ರಿಟೋರಿಯಾದ ದೊಡ್ಡ ಮಸೀದಿಯ ಆವರಣದಲ್ಲಿ ಸೇರಿದ್ದ ಮತ್ತೊಂದು ಸಾವಿರ ಜನರೂ ಅದೇ ಬಗೆಯ ಶಪಥ ಹಾಕಿದ್ದರು.

ಸರಕಾರವಾದರೂ ಹೇಗೆ ಸುಮ್ಮನಿದ್ದೀತೂ? ಪ್ರತಿಭಟಿಸಿದ ಎಲ್ಲರನ್ನೂ ಸರಕಾರವು ಜೈಲಿಗೆ ತಳ್ಳಿತು. ಗಾಂಧಿಗೆ ಎರಡು ತಿಂಗಳ ಶಿಕ್ಷೆ ವಿಧಿಸಿ ಜೈಲಿಗೆ ಹಾಕಿದರು.

ಆ ದಿನಗಳಲ್ಲಿ ಹೆರ್ಮನ್ ಕಾಲೆನ್ಬಾಕ್ ಎಂಬ ಜರ್ಮನ್ ದೇಶದ ವಾಸ್ತುಶಿಲ್ಪಿಯು, ಗಾಂಧಿಯ ಸೇವಾ ಮನೋಭಾವದಿಂದ ತುಂಬಾ ಪ್ರಭಾವಿತರಾಗಿದ್ದರು. ಬಹಳ ಸಿರಿವಂತರಾಗಿದ್ದ ಅವರು, ಫೀನಿಕ್ಸ್ ಕೃಷಿ ಕ್ಷೇತ್ರದಲ್ಲಿ ದಿನಕ್ಕೆ ಮೂರು ತಾಸು ದುಡಿದು ಕ್ಷೇತ್ರದ ಅಭಿವೃದ್ಧಿಗೆ ತುಂಬಾ ನೆರವಾಗುತ್ತಿದ್ದರು. ಗಾಂಧಿಯನ್ನು ಜೈಲಿನಿಂದ ಬಿಡುಗಡೆ ಮಾಡುವ ದಿನದಂದು ಹೆರ್ಮನ್ ಕಾಲೆನ್ಬಾಕ್, ಬೆಲೆ ಬಾಳುವ ರೋಲ್ಸ್ ರಾಯ್ಸ್ ಕಾರನ್ನು ತಂದು ಜೈಲಿನ ಬಾಗಿಲಲ್ಲಿ ನಿಲ್ಲಿಸಿ ಗಾಂಧಿ ಹೊರಗೆ ಬರುವುದನ್ನೇ ಕಾಯುತ್ತಿದ್ದರು. ಗಾಂಧಿ ಜೈಲಿನಿಂದ ಹೊರಗೆ ಬರುತ್ತಿರುವಂತೆಯೇ ಕಾರಿನ ಬಾಗಿಲು ತೆರೆದು, ಕಾರಿನೊಳಗೆ ಕುಳಿತುಕೊಳ್ಳುವಂತೆ ಗಾಂಧಿಯನ್ನು ವಿನಂತಿಸಿದ್ದರು.

ಕಾರಿನ ಬಳಿಗೆ ಬಂದ ಗಾಂಧಿ, ಕಾರಿನ ಸೌಂದರ್ಯವನ್ನು ಮುಟ್ಟಿ ನೋಡಿ ಮೆಚ್ಚಿಕೊಳ್ಳುತ್ತಾ 'ಈ ಕಾರಿನ ಬೆಲೆಯೇನೂ?' ಎಂದು ಪ್ರಶ್ನಿಸಿದ್ದರು. ಗಾಂಧಿಯ ಪ್ರಶ್ನೆ ಕಾಲೆನ್ಬಾಕ್‌ಗೆ ಅನಿರೀಕ್ಷಿತವಾಗಿತ್ತು. ಯಾವ ಬಗೆಯಲ್ಲಿ ಉತ್ತರಿಸಬೇಕೆಂಬುದು ಹೊಳೆಯಲಿಲ್ಲ.

'ನಿನ್ನ ಈ ಕಾರನ್ನು ಮ್ಹಾರಿದರೆ ನಾವು ಇನ್ನೊಂದು ಕೃಷಿ ಕ್ಷೇತ್ರವನ್ನು ಕೊಳ್ಳಬಹುದಾದಷ್ಟು ದುಡ್ಡು ಸಿಗಬಹುದಲ್ಲವೆ?' ಗಾಂಧಿ ಮತ್ತೊಮ್ಮೆ ಪ್ರಶ್ನಿಸಿದ್ದರು. ಗಾಂಧಿಯವರ ಜತೆ ಹಲವಾರು ತಿಂಗಳ ಕಾಲ ಒಡನಾಡಿದ್ದ ಕಾಲೆನ್ಬಾಕ್‌ಗೆ ಗಾಂಧಿಯ ಪ್ರಶ್ನೆಗಳ ಉದ್ದೇಶ ತಟ್ಟನೆ ಅರ್ಥವಾಯಿತು.

'ತಪ್ಪಾಗಿ ಹೋಯಿತು ಮಿಸ್ಟರ್ ಗ್ಹಾಂಧಿ. ಜನಸೇವೆಯಲ್ಲಿ ತೊಡಗಿಕೊಂಡಿರುವವನು ದುಂದು ವೆಚ್ಚ ಮಾಡಬಾರದೆಂಬ ಪಾಠ ಕಲಿತೆ, ಈಗ ಬಂದೆ.' ಎಂದು ಹೇಳಿದ ಕಾಲೆನ್ಬಾಕ್ ಹತ್ತಿರದಲ್ಲೇ ಇದ್ದ ದಲ್ಲಾಳಿಯೊಬ್ಬನ ಅಂಗಡಿಗೆ ಕಾರನ್ನು ತೆಗೆದುಕೊಂಡು ಹೋದರು. ಆ ದಲ್ಲಾಳಿ ಹೇಳಿದ ಬೆಲೆಗೆ ಅದನ್ನು ಮಾರಿ, ನಡೆದುಕೊಂಡೇ ಬಂದರು. ಅದಷ್ಟು ಹೊತ್ತೂ ಗಾಂಧಿ ಜೈಲಿನ ಬಾಗಿಲಲ್ಲೇ ನಿಂತು ಕಾಲೆನ್ಬಾಕ್‌ಗಾಗಿ ಕಾಯುತ್ತಿದ್ದರು!.

ಆತ ಬಂದಕೂಡಲೇ ಗಾಂಧಿ ನಗುತ್ತಾ ಪ್ರಶ್ನಿಸಿದ್ದರು,' ಎಷ್ಟು ನಷ್ಟವಾಯಿತು?'
ಕಾಲೆನ್ಬಾಕ್ ತಟ್ಟನೆ ಉತ್ತರಿಸಿದ್ದರು, ' ಇನ್ನೆರಡು ಕೃಷಿ ಕ್ಷೇತ್ರಗಳನ್ನು ಕೊಳ್ಳಬಹುದಾದಷ್ಟು'

ಗಾಂಧಿ, ತಾನು ಈವಾಗಲಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದೇನೆ ಎಂಬುದನ್ನೂ ಮರೆತು ಗಹಗಹಿಸಿ ನಕ್ಕರು. ಕಾಲೆನ್ಬಾಕ್ ಅದಕ್ಕಿಂತ ಜೋರಾಗಿ ನಕ್ಕರು.

ವಾರವೊಂದು ದಾಟಿದ್ದಿರಬಹುದು. ಹೆರ್ಮನ್ ಕಾಲೆನ್ಬಾಕ್ ಗಾಂಧಿಯ ಬಳಿಗೆ ಬಂದು ಕೆಲವು ಕಾಗದ ಪತ್ರಗಳಿದ್ದ ಚೀಲವೊಂದನ್ನು ನೀಡಿದರು. 'ಇದೇನಿದೂ?' ಗಾಂಧಿ ಕುತೂಹಲದಿಂದ ಪ್ರಶ್ನಿಸಿದ್ದರು.

'ನೂರು ಕಾರು ಕೊಳ್ಳುವಷ್ಟು ಬೆಲೆಬಾಳುವ ಕೃಷಿ ಕ್ಷೇತ್ರ', ಕಾಲೆನ್ಬಾಕ್ ನಿರ್ವಿಕಾರವಾಗಿ ಉತ್ತರಿಸಿದ್ದರು.

ಜೋಹನ್ಸ್‌ಬರ್ಗ್ ನಿಂದ ಇಪ್ಪತ್ತೊಂದು ಮೈಲು ದೂರದಲ್ಲಿದ್ದ ತನ್ನ ಒಂದು ಸಾವಿರದ ನೂರು ಎಕರೆಯಷ್ಟು ವಿಶಾಲವಾದ ಹಣ್ಣಿನ ತೋಟವನ್ನು ಹೆರ್ಮನ್ ಕಾಲೆನ್ಬಾಕ್, ಗಾಂಧಿಗೆ ಉಡುಗೊರೆಯಾಗಿ ನೀಡಿದ್ದರು!.

ಗಾಂಧಿ ಅ ಹಣ್ಣಿನ ತೋಟಕ್ಕೆ ಮಹರ್ಷಿ ಟಾಲ್ಸ್‌ಟಾಯ್ ಅವರ ಹೆಸರಿಟ್ಟು 'ಟಾಲ್ಸ್‌ಟಾಯ್ ಫಾರಂ' ಎಂದು ಕರೆದರು. ಮಹರ್ಷಿ ಟಾಲ್ಸ್‌ಟಾಯ್ ಅವರು ರಷ್ಯಾದಲ್ಲಿ ಇದೇಬಗೆಯ ಒಂದು ಆಶ್ರಮವನ್ನು ಸ್ಥಾಪಿಸಿದ್ದು ಗಾಂಧಿಗೆ ಗೊತ್ತಿತ್ತು. ಕೂಲಿಗಾಗಿ ಕಾಳು (ಬ್ರೆಡ್ ಲೇಬರ್) ಎಂಬ ತತ್ವದಲ್ಲಿ ಎಲ್ಲರೂ ಸಮಾನರಾಗಿ ದುಡಿದು, ಎಲ್ಲರೂ ಸಮಾನವಾಗಿ ಹಂಚಿಕೊಂಡು ಉಣ್ಣುವ ಸಾಮೂಹಿಕ ಸ್ವಾವಲಂಬನೆಯ ಬದುಕಿನ ಪಾಠಶಾಲೆಯಾಗಿ ಆ 'ಟಾಲ್ಸ್‌ಟಾಯ್ ತೋಟ' ಪ್ರಸಿದ್ಧಿಯಾಯಿತು.

ಈ ನಡುವೆ, ಭಾರತೀಯರ ಅಹವಾಲುಗಳನ್ನು ಬ್ರಿಟಿಷ್ ಸರಕಾರದ ಎದುರು ಮಂಡಿಸಲು

ರಚಿಸಲಾದ ಒಂದು ಪ್ರತಿನಿಧಿ ಮಂಡಳಿಯ ನೇತೃತ್ವ ವಹಿಸಿ ಗಾಂಧಿ ಲಂಡನ್ನಿಗೆ ಹೋದರು. ಆದರೆ ಇಂಗ್ಲೆಂಡಿಗೆ ಹೋದ ಪ್ರತಿನಿಧಿ ಮಂಡಳಿಗೆ ಯಾವ ಭರವಸೆಯೂ ಸಿಗಲಿಲ್ಲ.

ಗಾಂಧಿ ಲಂಡನ್ನಿನಿಂದ ಮರಳಿ ಬರುವಾಗ ಬಹಳ ದುಃಖಿತರಾಗಿದ್ದರು. ಅವರಿಗೆ ತನ್ನ ಹೋರಾಟದ ಕ್ರಮವು ಬೇರೆ ಬೇರೆ ಅರ್ಥಗಳಲ್ಲಿ ಪ್ರಚಾರ ಪಡೆದುಕೊಳ್ಳುತ್ತಿರುವುದು ಬೇಸರವನ್ನುಂಟು ಮಾಡಿತ್ತು. ಗಾಂಧಿಯವರಿಗೆ ಹಿಂಸೆಯೆಂದರೆ ಆಗದು. ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದು ಕೆನ್ನೆ ತೋರಿಸು ಎಂಬ ಯೇಸುಕ್ರಿಸ್ತನ ಮಾತು ಭಗವದ್ಗೀತೆಯ ಉಪದೇಶದಂತೆ ಗಾಂಧಿಗೆ ಸದಾ ಎಚ್ಚರ ನೀಡುತ್ತಿತ್ತು.

ಗಾಂಧಿಯ ಮನಸ್ಸು ಕಡಲಿನ ತೆರೆಗಳಂತೆ ಹೊಯ್ದಾಡುತ್ತಿತ್ತು. ಆ ದಿನಗಳಲ್ಲಿ ಲಂಡನ್‌ನಲ್ಲಿ ಹಲವಾರು ಸಂಘಟನೆಗಳು ಭಾರತವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸಲು ತಮ್ಮದೇ ಆದ ರೀತಿಯಲ್ಲಿ ಜನಾಭಿಪ್ರಾಯ ರೂಪಿಸುತ್ತಿದ್ದವು. ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಪ್ರತಿಭಟನೆ ತೋರುತ್ತಿದ್ದವು. ಕೆಲವು ಸಂಘಟನೆಗಳಿಗೆ ಗಾಂಧಿಯ ಅಹಿಂಸಾತ್ಮಕ ಹೋರಾಟಗಳಲ್ಲಿ ನಂಬಿಕೆಯಿದ್ದಿರಲಿಲ್ಲ. ಅವರು ಶಸ್ತ್ರವನ್ನು ಎತ್ತಿಕೊಂಡು ಹಿಂಸಾತ್ಮಕ ಹೋರಾಟ ನಡೆಸುತ್ತಿದ್ದರು. ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಲು ಪಣ ತೊಟ್ಟಿದ್ದ ಅವರು, ತಮ್ಮನ್ನು ವಿರೋಧಿಸಿದವರನ್ನು ಕೊಲೆ ಮಾಡಲೂ ಹೇಸುತ್ತಿರಲಿಲ್ಲ.

ಅಂತಹ ಉಗ್ರಗಾಮೀ ಸಂಘಟನೆಯೊಂದರ ಸದಸ್ಯನಾಗಿದ್ದ ಮದನ್‌ಲಾಲ ಡಿಂಗ್ರಾ ಎಂಬ ಯುವಕನನ್ನು, ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲಲು ಯತ್ನಿಸಿದ್ದಾನೆ ಎಂಬ ಕಾರಣಕ್ಕೆ ಗಲ್ಲಿಗೆ ಏರಿಸಲಾಗಿತ್ತು. ಅದರಿಂದಾಗಿ ಗಾಂಧಿ ಬಹಳವಾಗಿ ನೊಂದುಕೊಂಡಿದ್ದರು. ಆ ಯುವಕನ ದೇಶಭಕ್ತಿಯ ಬಗ್ಗೆ ಗಾಂಧಿಗೆ ಮೆಚ್ಚುಗೆಯಿತ್ತಾದರೂ, ಆತ ನಡೆದ ದಾರಿ ಸರಿಯಾದುದಲ್ಲ ಎಂದು ತೀರ್ಮಾನಿಸಿದ್ದರು. ಅವರಿಗೆ ತನ್ನ ಜೀವದ ಗೆಳೆಯ ಮೆಹತಾಬ್ ಮತ್ತೆ ಮತ್ತೆ ನೆನಪಾಗುತ್ತಿದ್ದ. ಮೆಹತಾಬನೂ ಇದೇ ರೀತಿ ತಪ್ಪು ದಾರಿ ಹಿಡಿದಿರಬಹುದೇ ಎಂಬ ಯೋಚನೆ ಅವರನ್ನು ಕಾಡಿತ್ತು. ತನ್ನ ದಾರಿಯೇ ಸರಿಯಾದದ್ದು ಎಂದು ವಾದಿಸುತ್ತ ಮೆಹತಾಬ ಹಡಗಿನ ಪ್ರಯಾಣದುದ್ದಕ್ಕೂ ಗಾಂಧಿಯನ್ನು ಹಿಂಸಿಸುತ್ತಿದ್ದ.

'ಬ್ರಿಟಿಷರನ್ನು ಭಾರತದಿಂದ ಓಡಿಸಿ ನಮ್ಮನ್ನು ನಾವೇ ಆಳಬೇಕು' ಇದು ಅವನ ಹಟವಾಗಿತ್ತು. ಆದರೆ ಗಾಂಧಿಯ ನಿಲುವು ಬೇರೆ ಬಗೆಯದು. 'ನನ್ನನ್ನು ಯಾರು ಆಳುತ್ತಾರೆ ಎಂಬುದರ ಬಗ್ಗೆ ನನಗೆ ಆಸಕ್ತಿಯಿಲ್ಲ. ಆದರೆ ಆಳುವವನು ನನ್ನ ಇಷ್ಟದಂತೆ ಆಳಬೇಕು. ಇಲ್ಲದಿದ್ದರೆ ಆಡಳಿತ ನಡೆಸಲು ಅವನನ್ನು ನಾನು ಬಿಡಲಾರೆ. ಅವನಿಗೆ ನನ್ನ ಸಹಕಾರವಿಲ್ಲ. ಅವನ ವಿರುದ್ಧ ನಾನು ಸತ್ಯಾಗ್ರಹ ಹೂಡುವೆ.' ಗಾಂಧಿಯ ನಿಲುವು ಸ್ಪಷ್ಟವಾಗಿತ್ತು.

ಗಾಂಧಿ ತನ್ನ ಮನಸ್ಸಿನಲ್ಲಿ ಹುಟ್ಟುತ್ತಿದ್ದ ಪ್ರಶ್ನೆಗಳಿಗೆ ಮತ್ತು ಅವುಗಳಿಗೆ ಉತ್ತರವಾಗಿ ತಾನು ಕಂಡುಕೊಂಡ ಸತ್ಯಗಳನ್ನು ಬರೆಯತೊಡಗಿದರು. ದೇಶಪ್ರೇಮಿ ಓದುಗನೊಬ್ಬನು

ಪತ್ರಿಕೆಯೊಂದರ ಸಂಪಾದಕನಿಗೆ ಕೇಳುವ ಪ್ರಶ್ನೆ ಮತ್ತು ಆ ಪ್ರಶ್ನೆಗಳಿಗೆ ಸಂಪಾದಕನು ನೀಡುವ ಉತ್ತರದ ರೂಪದಲ್ಲಿ ಪುಸ್ತಕ ಬರೆಯ ತೊಡಗಿದರು.

ಬರೆದೂ ಬರೆದೂ ಬಲಗೈ ಸೋತು ಹೋದಾಗ ಎಡಗೈಯಲ್ಲಿ ಬರೆದರು. ಹಡಗು ದಕ್ಷಿಣ ಅಫ್ರಿಕಾ ತಲುಪುವಾಗ ಮೂವತ್ತು ಸಾವಿರ ಪದಗಳ ಇನ್ನೂರ ಎಪ್ಪತ್ತೊಂದು ಪುಟಗಳ ' ಹಿಂದ್ ಸ್ವರಾಜ್ಯ' ಎಂಬ ಪುಸ್ತಕದ ಹಸ್ತಪ್ರತಿ ಸಿದ್ಧವಾಗಿತ್ತು.

ಸರಕಾರ ಇನ್ನಷ್ಟು ಕಟುವಾಯಿತು.

## ಮುನಿದರೆ ನಾರಿ

ದಕ್ಷಿಣ ಆಫ್ರಿಕಾದಲ್ಲಿ, ಭಾರತೀಯರ ಅಹಿಂಸಾತ್ಮಕ ಹೋರಾಟ ಮುಂದುವರಿದೇ ಇತ್ತು. ಗಾಂಧಿಯ ನೇತೃತ್ವದಲ್ಲಿ ಮಾತುಕತೆಗಳು, ಸಂಧಾನಗಳು ನಡೆಯುತ್ತಲೇ ಇದ್ದವು. ಗಾಂಧಿಯನ್ನು ಬಂಧಿಸುವುದು, ಬಿಡುಗಡೆ ಮಾಡುವುದು, ಮತ್ತೆ ಬಂಧಿಸುವುದು ನಿರಂತರವಾಗಿ ನಡೆಯಿತು. ಒಂದೇ ವಾರದಲ್ಲಿ ನಾಲ್ಕು ಬಾರಿ ಬಂಧನವಾದ ದಿನಗಳೂ ಇದ್ದವು. ಗಾಂಧಿ ಕಾರಾಗೃಹದಲ್ಲಿರುವಾಗ ಧರಿಸುತ್ತಿದ್ದ ಜೈಲು–ಟೋಪಿಯು, ಜನರ ಪ್ರತಿಭಟನೆಯ ಸಂಕೇತವಾಯಿತು. ಅದನ್ನು 'ಗಾಂಧಿ ಟೋಪಿ' ಎಂದೇ ಕರೆಯತೊಡಗಿದರು.

ಕಾರಾಗೃಹದ ಹೊರಗೆ ಇದ್ದು ಪ್ರತಿಭಟಿಸುವವರೂ ಗಾಂಧಿಟೋಪಿ ಧರಿಸತೊಡಗಿದ್ದರು. ರಸ್ತೆಗಳಲ್ಲಿ ಜನರು ಪ್ರತಿಭಟನೆ ನಡೆಸಿ ಘೋಷಣೆಗಳನ್ನು ಕೂಗುವಾಗ ಗಾಂಧಿಟೋಪಿ ಧರಿಸುತ್ತಿರುವುದು, ಸರಕಾರಕ್ಕೆ ಮುಜುಗರವನ್ನುಂಟು ಮಾಡುತ್ತಿತ್ತು. ಪ್ರತೀಕಾರವೆಂಬಂತೆ, ಭಾರತೀಯರನ್ನು ಅವಮಾನಿಸಲೆಂದೇ ದಿನಕ್ಕೊಂದು ಹೊಸ ಕ್ರೂರ ಕಾನೂನುಗಳನ್ನು ಜಾರಿಗೊಳಿಸತೊಡಗಿತು.

ಅಲ್ಲಿಯ ವರಿಷ್ಠ ನ್ಯಾಯಾಲಯವು ಸರಕಾರದ ಕಾನೂನುಗಳನ್ನು ಬೆಂಬಲಿಸುತ್ತಿದ್ದದ್ದು ಮಾತ್ರವಲ್ಲ, ಸರಕಾರದ ಜತೆಗೆ ತಾನೂ ಸೇರಿಕೊಂಡಿತು; ಭಾರತೀಯ ಸಂಪ್ರದಾಯದ ಎಲ್ಲ ಮದುವೆಗಳನ್ನೂ ಕಾನೂನು ಬಾಹಿರವೆಂದು ಸಾರಿತು. ಮುಂಜಾನೆಯ ಪತ್ರಿಕೆ ಓದಿದವರೆಲ್ಲ ಆತಂಕಕ್ಕೊಳಗಾದರು. ಗಾಂಧಿಗೆ ದಿನವಿಡೀ ಕೆಲಸ. ಇದುವರೆಗೆ ರಸ್ತೆಗಳಲ್ಲಿ ಆರ್ಭಟಿಸುತ್ತಿದ್ದ ಕ್ರೂರ ಕಾನೂನುಗಳು ಈಗ ಮಲಗುವ ಮನೆಗೂ ಕನ್ನವಿಕ್ಕಿತ್ತು.

ಅಂದು ರಾತ್ರಿ ಗಾಂಧಿ ಮನೆಗೆ ಮರಳುವಾಗ ಮಧ್ಯರಾತ್ರಿ ದಾಟಿತ್ತು. ಕಸ್ತೂರಿಬಾಯಿಯವರಿಗೆ ಅದೇನೂ ಅಚ್ಚರಿಯ ವಿಷಯವಾಗಿದ್ದಿರಲಿಲ್ಲ. 'ಯಾಕೆ ತಡವಾಯಿತು' ಎಂದು ಗಂಡನನ್ನು

ಪ್ರಶ್ನಿಸುವುದು ಮೂರ್ಖತನವೆಂಬುದು ಅವರಿಗೆ ಗೊತ್ತಿತ್ತು. ಆದರೂ, ಗಂಡನನ್ನು ವಿಚಾರಿಸಿ ಕೊಳ್ಳುವುದು  ತಮ್ಮ ಕರ್ತವ್ಯಗಳಲ್ಲೊಂದು ಎಂದು ಭಾವಿಸಿದ್ದ ಭಾರತೀಯ ಹೆಣ್ಣು ಆಕೆ. ಗಾಂಧಿಯ ಹತ್ತಿರ ಬಂದರು.

'ಹತ್ತಿರ ಬರಬೇಡ, ನಿಲ್ಲು.'
ಗಂಡನ ಆದೇಶ ಕೇಳಿ ಕಸ್ತೂರಿಬಾಯಿಗೆ ಸಿಡಿಲೆರಗಿದಂತಾಗಿತ್ತು.

'ಏನಂದಿರಿ ನೀವೂ?' ಆತಂಕದಿಂದ ಪ್ರಶ್ನಿಸಿದ್ದರು ಕಸ್ತೂರಿಬಾಯಿ.
'ನೀನು ಏನನ್ನು ಕೇಳಿಸಿಕೊಂಡಿದ್ದೀಯಾ, ಅದನ್ನೇ ನಾನು ಹೇಳಿದ್ದು.'

'ಕಾರಣ ಕೇಳಬಹುದೇ?' ಕಸ್ತೂರಿಬಾಯಿ ಅಳುಕುತ್ತಲೇ ಕೇಳಿದರು.
'ಕೇಳಬಹುದು.' ಗಾಂಧಿ ನಿರ್ವಿಕಾರ ಧ್ವನಿಯಲ್ಲಿ ಅನುಮತಿ ನೀಡಿದ್ದರು.

'ಹಾಗಾದರೆ ಕಾರಣ ಹೇಳೀ?'

'ಇಲ್ಲ, ಹೇಳುವುದಿಲ್ಲ.'

'ಯಾಕೆ ಹೇಳುವುದಿಲ್ಲ?
'ಹೇಳಲೇಬೇಕೆಂಬ ನಿರ್ಬಂಧ ನನಗಿಲ್ಲ.'

'ಯಾಕಿಲ್ಲ? ನಾನು ನಿಮ್ಮ ಹೆಂಡತಿ'
'ನೀನು ನನ್ನ  ಹೆಂಡತಿ ಅಲ್ಲ.'

'ಏನೂ?! , ನಾನು ನಿಮ್ಮ ಹೆಂಡತಿ ಅಲ್ಲ?!'
'ನೀನು ಸರಿಯಾಗಿಯೇ ಕೇಳಿಸಿಕೊಂಡಿರುವೆ'

'ಅಂದರೆ, ನಾನು ನಿಮ್ಮ ಹೆಂಡತಿ ಅಲ್ಲವೆ?!'
'ಅಲ್ಲ'

'ಹಾಗಾದರೆ ಪಕ್ಕದ ಕೋಣೆಯಲ್ಲಿ ಮಲಗಿರುವ ಆ ಇಬ್ಬರು ಮಕ್ಕಳ ತಾಯಿ ಯಾರೂ?
'ನೀನು'

'ತಂದೆ?'
'ನಾನು'

'ನನ್ನ ಮಕ್ಕಳಿಗೆ ತಂದೆ ನೀವು; ಆದರೆ ನಾನು ನಿಮ್ಮ ಹೆಂಡತಿಯಲ್ಲ. ಅಂದ್ರೇ..., ನೀವು ಇಟ್ಟು ಕೊಂಡ ಹೆಣ್ಣೇ ನಾನೂ?
'ಹೌದು.'

'ಏನೂ?!'
' ನೀನು ಸರಿಯಾಗಿಯೇ ಕೇಳಿಸಿಕೊಂಡಿರುವೆ'

'ಇದು ಯಾವ ಊರಿನ ಕಾನೂನು?!'

'ಈ ಊರಿನದ್ದು'

'ಯಾವನವನು ಇಂತಹ ತಲೆ ಬುಡವಿಲ್ಲದ ಕಾನೂನು ಮಾಡಿದವನೂ? ಏನು ತಿನ್ನುತ್ತಾನಂತೆ ಅವನು ಹೊಟ್ಟೆಗೆ?'

'ಮಾಂಸ.'

'ನಿನ್ನೆ ತನಕ ನಾನು ನಿಮ್ಮ ಹೆಂಡತಿಯಾಗಿದ್ದೆ. ಈವತ್ತೇನು ಇದ್ದಕ್ಕಿದ್ದ ಹಾಗೆ ಈ ಬದಲಾವಣೆ?'

'ನಿನ್ನೆ ಈ ಕಾನೂನು ಇರಲಿಲ್ಲ. ಅದಕ್ಕೆ.'

'ಈ ಕಾನೂನು ನಮ್ಮ ಮನೆಗೆ ಮಾತ್ರವೇ?'

'ಅಲ್ಲ, ಇಡೀ ಊರಿಗೇ'

'ಹಾಗಾದರೆ ಈವತ್ತಿನಿಂದ ಹೆಂಡತಿಯರೆಂದು ಈ ಊರಿನಲ್ಲಿ ಯಾರೂ ಇಲ್ಲವೇ?'

'ಇರುತ್ತಾರೆ; ಕೆಲವರು.'

'ಯಾರಪ್ಪ ಅ ಪುಣ್ಯವಂತ ಹೆಂಡತಿಯರೂ?'

'ಬಿಳಿಯರ ಬಿಳಿ ಬಿಳಿಯಾದ ಹೆಂಡತಿಯರು.'

'ಹಾಗಾದರೆ ಬಿಳಿಯರಲ್ಲದವರ ಎಲ್ಲ ಹೆಂಡಂದಿರೂ ?'

'ಇಟ್ಟುಕೊಂಡವರು.'

'ಇಲ್ಲ. ನಾನು ಇದನ್ನು ಒಪ್ಪುವುದಿಲ್ಲ.'

'ನಿನ್ನ ಒಪ್ಪಿಗೆಯನ್ನು ಯಾರು ಕೇಳುತ್ತಿದ್ದಾರೆ ಈಗ?'

'ಯಾಕೆ ಕೇಳುವುದಿಲ್ಲ?'

'ಕೇಳದಿರುವುದು ಅವರ ಇಷ್ಟ .'

'ನನ್ನ ಮಾತನ್ನು ಅವರು ಕೇಳುವುದಿಲ್ಲವೆಂಬುದು ಅವರ ಇಷ್ಟವಾದರೆ, ಅವರ ಮಾತನ್ನು ಒಪ್ಪದಿರುವುದು ನನ್ನ ಇಷ್ಟ.'

'ಒಪ್ಪದೆ ಏನು ಮಾಡುತ್ತೀರೀ?'

'ನಾನೂ ಸತ್ಯಾಗ್ರಹ ಮಾಡ್ತೇನೆ.'

'ಒಬ್ಬಳೇ ?'

'ನಾನ್ಯಾಕೆ ಒಬ್ಬಳೂ? ನನ್ನ ಜತೆಗೆ ಬೇರೆ ಹೆಂಗಸರೂ ಬರುತ್ತಾರೆ.'

ಗಾಂಧಿ ನಕ್ಕರು.

ಮರುದಿನ :

ಹೆಂಗಸರೂ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಾರಂತೆ, ಹೆಂಗಸರೂ ಜೈಲಿಗೆ ಹೋಗಲು

ಸಿದ್ಧರಾಗಿದ್ದಾರಂತೆ ಎಂಬ ಗುಸು ಗುಸು ಮಾತು ಊರ ತುಂಬ ಸುದ್ದಿಯಾಯಿತು. ಹೌದಾ! ಎಂದು ಹುಬ್ಬೇರಿಸಿದ್ದ ಗಂಡಸರ ಮನೆಯಹೆಂಗಸರೂ ಸತ್ಯಾಗ್ರಹಕ್ಕೆ ಹೊರಟು ನಿಂತಾಗ, ಊರಿಗೆ ಊರೇ ಮೆರವಣಿಗೆಯಾಯಿತು.

ನ್ಯೂಕ್ಯಾಸೆಲ್ ಎಂಬಲ್ಲಿಂದ ಹೊರಟ ಮೂರು ಸಾವಿರ ಮಂದಿ ಭಾರತೀಯರು, ಹೆಂಗಸರು ಮಕ್ಕಳೆನ್ನದೆ ಮೂವತ್ತಾರು ಮೈಲು ದೂರ ನಡೆದು ಟ್ರಾನ್ಸ್‌ವಾಲದ ವರೆಗೆ ಮೆರವಣಿಗೆ ಮಾಡಿದರು. ಗಾಂಧಿಯನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು. ಪ್ರತಿಭಟನೆ ನಿಲ್ಲಲಿಲ್ಲ. ದಿನದಿಂದ ದಿನಕ್ಕೆ ಸತ್ಯಾಗ್ರಹಿಗಳ ಸಂಖ್ಯೆ ಹೆಚ್ಚಾಗತೊಡಗಿತು. ಫ್ಲಾಮ್ ಫೋರ್ಡ್, ಟೀಕ್ ವರ್ಥ್, ಫೋಲ್ಕಸ್ ರುಶ್ಟ್, ಬ್ಲೋಫೋಟೇನ್ ಜೈಲುಗಳೆಲ್ಲ ಸತ್ಯಾಗ್ರಹಿಗಳಿಂದ ತುಂಬಿ ಹೋದವು. ಭಾರತದಿಂದಲೂ ಕೆಲವು ಜನನಾಯಕರು ಬಂದು ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದರು. ಬಂಧಿತರನ್ನು ಇರಿಸಿಕೊಳ್ಳಲು ಜೈಲಿನಲ್ಲಿ ಜಾಗ ಸಾಲದೆ ಹೋಯಿತು.

ಈ ಅಭೂತಪೂರ್ವ ಸತ್ಯಾಗ್ರಹದ ವರದಿಗಳು ಜಗತ್ತಿನ ಎಲ್ಲೆಡೆ ಸುದ್ದಿ ಮಾಡಿತು. ಗಾಂಧಿಯ ಬಂಧನವನ್ನು ಎಲ್ಲರೂ ಖಂಡಿಸತೊಡಗಿದರು. ಸರಕಾರವು ಪೇಚಿಗೆ ಸಿಲುಕಿಕೊಂಡಿತು.

ಕೊನೆಗೂ ಸರಕಾರ ಮಣಿಯಿತು.
ತನ್ನ ಆದೇಶಗಳನ್ನೆಲ್ಲ ಹಿಂತೆಗೆದುಕೊಳ್ಳದೆ ಸರಕಾರಕ್ಕೆ ಬೇರೆ ದಾರಿಯಿದ್ದಿರಲಿಲ್ಲ.
ಬಂಧಿಗಳೆಲ್ಲ ಬಿಡುಗಡೆಯದರು.
'ಭಾರತೀಯರ ಪರಿಹಾರ ಕಾಯ್ದೆ'ಯನ್ನು ಸ್ಥಳೀಯ ಗೆಜೆಟಿನಲ್ಲಿ ಅಧಿಕೃತವಾಗಿ ಪ್ರಕಟಿಸಲಾಯಿತು.
ಭಾರತೀಯರ ಮೇಲೆ ಹೇರಲಾಗಿದ್ದ ಮೂರು ಪೌಂಡ್ ತಲೆಗಂದಾಯ ರದ್ದಾಯಿತು.
ಭಾರತದಲ್ಲಿ ಕ್ರಮಬದ್ಧವೆನ್ನಿಸಿದ್ದ ಎಲ್ಲ ಮದುವೆಗಳನ್ನೂ ಸಕ್ರಮವೆಂದು ಸಾರಲಾಯಿತು.
ಬರಿಯ ಹೆಬ್ಬೆಟ್ಟಿನ ಗುರುತುಳ್ಳ 'ವಸತಿ ಪ್ರಮಾಣ ಪತ್ರ'ವೊಂದಿದ್ದರೆ ಸಾಕು ಎಂಬ ಕಾನೂನು ಪ್ರಕಟವಾಯಿತು.

ದಕ್ಷಿಣ ಆಫ್ರಿಕಾದ ಭಾರತೀಯರು ಕೊನೆಗೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು.
ಕಟ್ಟ ಕಡೆಯವನಿಗೆ ನ್ಯಾಯ ದೊರಕಿತು.

ದಕ್ಷಿಣ ಆಫ್ರಿಕಾದ ಭಾರತೀಯರ ವಿರುದ್ಧ ಬ್ರಿಟಿಷರು ಹೇರಿದ್ದ ಕ್ರೂರ ಆಡಳಿತವನ್ನು, ಇಪ್ಪತ್ತೊಂದು ವರ್ಷಗಳ ಕಾಲ ತನ್ನ ಅಹಿಂಸಾತ್ಮಕ ಹೋರಾಟದಿಂದ ಎದುರಿಸಿ ಗೆದ್ದ ಗಾಂಧಿಗೆ, ತನಗಿನ್ನು ಇಲ್ಲಿ ಕೆಲಸವಿಲ್ಲ ಎಂದು ಅನ್ನಿಸಿತು. ಎಂತಹ ಕಲ್ಲು ಎದೆಯನ್ನೂ ಭೇದಿಸಬಲ್ಲ 'ಸತ್ಯಾಗ್ರಹ'ವೆಂಬ ಆಯುಧ ಧಾರಿಯಾದ ನಲುವತ್ತೈದು ವಯಸ್ಸಿನ ಗಾಂಧಿ, ತನ್ನ ತಾಯ್ನಾಡಿನಲ್ಲಿ ಹೋರಾಟ ಮುಂದುವರಿಸಲು, ಭಾರತಕ್ಕೆ ಹೊರಡುವ ಹಡಗು ಹತ್ತಿದರು.

❑


ಬಾಪು

# ಮರಳಿ ಮಣ್ಣಿಗೆ

'ನಾನಿನ್ನೂ ದಕ್ಷಿಣ ಆಫ್ರಿಕಾದಲ್ಲಿಯೇ ಇದ್ದೇನೆಯೇ ?! ' ಕಲಕತ್ತಾದ 'ಶಾಂತಿನಿಕೇತನ'ದ ಹೆಬ್ಬಾಗಿಲ ಎದುರು ತಮ್ಮನ್ನು ಸ್ವಾಗತಿಸಲೆಂದು ಸೇರಿದ್ದ ಜನಜಂಗುಳಿಯ ನಡುವೆ, ತಮ್ಮ ಪ್ರೀತಿಯ ಶಿಷ್ಯ ಮಗನ್‌ಲಾಲ ಗಾಂಧಿಯನ್ನು ಕಂಡಾಗ ಗಾಂಧೀಜಿ ಸಂತೋಷದಿಂದ ಉದ್ಗರಿಸಿದ್ದರು!.

ಹಿಂದೊಮ್ಮೆ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ನಡೆಸುತ್ತಿದ್ದ ಅಹಿಂಸಾತ್ಮಕ ಚಳುವಳಿಗೆ ಹೊಸದಾದ ಹೆಸರೊಂದನ್ನು ನೀಡಬೇಕೆಂದು ಗಾಂಧೀಜಿ ನಿರ್ಧರಿಸಿದ್ದರು. ಅದಕ್ಕಾಗಿ ಅವರೇ ಸಂಪಾದಿಸಿ ಪ್ರಕಟಿಸುತ್ತಿದ್ದ ' ಇಂಡಿಯನ್ ಒಪೀನಿಯನ್' ಪತ್ರಿಕೆಯಲ್ಲಿ 'ಹೆಸರು ಸೂಚಿಸುವ ಸ್ಪರ್ಧೆ' ಯೊಂದನ್ನು ಏರ್ಪಡಿಸಿದ್ದರು. ಆಗ ಅದರಲ್ಲಿ ಭಾಗವಹಿಸಿದ್ದ ಮಗನ್‌ಲಾಲ ಗಾಂಧಿ ಎಂಬ ಯುವಕನು 'ಸದಾಗ್ರಹ' ವೆಂಬ ಹೆಸರು ಸೂಚಿಸಿ ಬಹುಮಾನವನ್ನೂ ಗೆದ್ದಿದ್ದನು. ಅದೇ ಹೆಸರನ್ನೇ ಗಾಂಧೀಜಿ 'ಸತ್ಯಾಗ್ರಹ' ಎಂದು ಮಾರ್ಪಾಡು ಮಾಡಿಕೊಂಡಿದ್ದರು. ಮುಂದೆ ಅದೇ ಯುವಕ ಮಗನ್‌ಲಾಲ ಗಾಂಧಿ, 'ಫೀನಿಕ್ಸ್ ಕೃಷಿ ಕ್ಷೇತ್ರ' ದಲ್ಲಿ ಗಾಂಧೀಜಿಯ ಬಲಗೈ ಬಂಟನಂತೆ ದುಡಿದು ಅವರ ಅಚ್ಚುಮೆಚ್ಚಿನ ಶಿಷ್ಯನಾಗಿಬಿಟ್ಟಿದ್ದನು.

ಗುರುವರ್ಯ ವಿಶ್ವಕವಿ ರವೀಂದ್ರನಾಥ ಠಾಗೋರರು ಸ್ಥಾಪಿಸಿದ್ದ ಕಲಕತ್ತಾದ 'ಶಾಂತಿನಿಕೇತನ' ಆಶ್ರಮದ ಹೆಬ್ಬಾಗಿಲ ಬಳಿ ಅಂದು ಮುಂಜಾನೆಯಿಂದಲೇ ಜನಜಾತ್ರೆ. ಎಲ್ಲರಿಗೂ ದಕ್ಷಿಣ ಆಫ್ರಿಕಾ ದಿಂದ ಬಂದ ಪವಾಡ ಪುರುಷನನ್ನು ನೋಡುವ ಕುತೂಹಲ. ಆದರೆ, ಒಂದು ಸಾಧಾರಣವಾದ ಅಂಗಿ ಮತ್ತು ಪಂಚೆ ತೊಟ್ಟು, ಎಂಟಾಣೆ ಬೆಲೆಯ ಕಾಶ್ಮೀರಿ ಟೋಪಿಯನ್ನು ತಲೆಯ ಮೇಲೆ ಹಾಕಿಕೊಂಡಿದ್ದ, ಬಡ ಕೂಲಿಕಾರನೊಬ್ಬನು ಬಂದು ಎಲ್ಲರೆದುರು ಮುಗುಳ್ನಗುತ್ತಾ ನಿಂತಾಗ ಸೇರಿದ್ದವರಿಗೆಲ್ಲ ನಿರಾಸೆಯಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ಹಲವಾರು ವರ್ಷಗಳ ಕಾಲ ಸರಕಾರದ ನಿದ್ದೆಗೆಡಿಸಿದ್ದ ಹೋರಾಟಗಾರ ಇವನೇನಾ? ಎಂಬ ಅನುಮಾನ ಮೂಡಿತ್ತು.

ದಕ್ಷಿಣ ಆಫ್ರಿಕದಲ್ಲಿ 'ಸತ್ಯಾಗ್ರಹ' ನಿರತರಾಗಿದ್ದ ದಿನಗಳಲ್ಲಿ, ಗಾಂಧೀಜಿಯು ಅಲ್ಲಿಯ ಭಾರತೀಯ ಕರಾರು ಕೂಲಿಗಳು ಧರಿಸುತ್ತಿದ್ದ ಉಡುಪನ್ನೇ ತೊಟ್ಟುಕೊಳ್ಳುತ್ತಿದ್ದರು. ಅಲ್ಲಿಂದ ಭಾರತಕ್ಕೆ ಮರಳಿ ಹೊರಟು, ಇಂಗ್ಲೆಂಡ್ ಮಾರ್ಗವಾಗಿ ಬೊಂಬಾಯಿಯಲ್ಲಿ ಹಡಗಿನಿಂದ ಇಳಿಯುವ ದಿನದಂದು, ಸಾಧಾರಣವಾದ ಒಂದು ಅಂಗಿ, ಪಂಚೆ, ನಿಲುವಂಗಿ ಧರಿಸಿ, ಹೆಗಲ ಮೇಲೆ ಕಾಥೇವಾಡಿಯ ಸಂಪ್ರದಾಯದಂತೆ ಮೇಲುವಸ್ತ್ರವೊಂದನ್ನು ಹೊದೆದುಕೊಂಡಿದ್ದರು. ಆದರೆ ಬೊಂಬಾಯಿಯಿಂದ ಮುಂದಕ್ಕೆ, ರೈಲಿನ ಮೂರನೆಯ ದರ್ಜೆಯಲ್ಲಿ ಪ್ರಯಾಣ ಬೆಳೆಸುವಾಗ, ತಮ್ಮ ನಿಲುವಂಗಿ ಮತ್ತು ಮೇಲುವಸ್ತ್ರಗಳನ್ನೂ ತ್ಯಜಿಸಿದ್ದರು.

ಬೊಂಬಾಯಿಯಲ್ಲಿ ಬಹುದೊಡ್ಡ ಸಮಾರಂಭವನ್ನೇರ್ಪಡಿಸಿದ್ದ ಗೋಖಲೆಯವರು, ತಮ್ಮ ಶಿಷ್ಯ ಗಾಂಧಿಗೆ ಭವ್ಯ ಸ್ವಾಗತವನ್ನು ಕೋರಿದ್ದರು. ಆನಂತರ ಬೊಂಬಾಯಿಯಲ್ಲಿ, ಹಲವಾರು ಸ್ವಾಗತ ಸಮಾರಂಭಗಳು ಒಂದರ ಬೆನ್ನಿಗೆ ಇನ್ನೊಂದರಂತೆ ನಡೆದವು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಪರವಾಗಿ 'ಸತ್ಯಾಗ್ರಹ'ವೆಂಬ ಹೊಸಬಗೆಯ ಚಳುವಳಿ ಮಾಡಿ ಪ್ರಸಿದ್ಧಿ ಪಡೆದ ಗಾಂಧೀಜಿಯನ್ನು ಎಲ್ಲರೂ ಹೊಗಳುವವರೇ. ಗುಜರಾಥಿ ಸಮಾಜದ ಸಮಾರಂಭವೊಂದರಲ್ಲಿ ಉತ್ತಮಲಾಲ ತ್ರಿವೇದಿ, ಮಹಮ್ಮದಾಲೀ ಜಿನ್ನಾರಂತಹ ಜನನಾಯಕರು ಗಾಂಧೀಜಿಯ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಗೋಖಲೆಯವರ ಸಲಹೆಯಂತೆ ಗಾಂಧೀಜಿ ಮುಂಬಯಿಯಲ್ಲಿ ಗವರ್ನರ್ ಆಗಿದ್ದ ಲಾರ್ಡ್ ವಿಲ್ಲಿಂಗ್ಟನ್ ಅವರನ್ನೂ ಕಂಡು ಮಾತನಾಡಿದ್ದರು.

ಭಾರತದಲ್ಲಿ ಆ ಹೊತ್ತಿಗಾಗಲೇ ಬದಲಾವಣೆಯ ಗಾಳಿ ಬೀಸಲಾರಂಭಿಸಿತ್ತು. ಶ್ರೀ ಅಲನ್ ಒಕ್ಟೋವಿಯನ್ ಹ್ಯೂಮ್ಸ್ ಎಂಬವರು ಆ ಹೊತ್ತಿಗಾಗಲೇ 'ರಾಷ್ಟ್ರೀಯ ಕಾಂಗ್ರೆಸ್' ಎಂಬ ಪ್ರಗತಿಪರವಾದ ಸಂಸ್ಥೆಯೊಂದನ್ನು ಸ್ಥಾಪಿಸಿದ್ದರು. ಆ ಸಂಸ್ಥೆಯು ಬ್ರಿಟಿಷರ ಜತೆ ಸೌಹಾರ್ದ ಸಂಬಂಧವನ್ನು ಇಟ್ಟುಕೊಂಡಿತ್ತು. ಭಾರತೀಯರ ವಿಕಾಸಕ್ಕಾಗಿ ಬ್ರಿಟಿಷ್ ಸರಕಾರದವರು ಮಾಡಬೇಕಾದ ಕಾರ್ಯಕ್ರಮಗಳ ಬಗ್ಗೆ ಚಿಂತನೆ ನಡೆಸಿ, ಸರಕಾರಕ್ಕೆ ತಮ್ಮ ಮನವಿಗಳನ್ನು ಸಲ್ಲಿಸುವ ಕೆಲಸ ಮಾಡುತ್ತಿತ್ತು.

ದಕ್ಷಿಣ ಆಫ್ರಿಕಾದ 'ಫೀನಿಕ್ಸ್ ಕೃಷಿ ಕ್ಷೇತ್ರ'ದಿಂದ, ಮಗನ್‌ಲಾಲ ಗಾಂಧಿಯ ನೇತೃತ್ವದಲ್ಲಿ ಸುಮಾರು ಇಪ್ಪತ್ತೈದರಷ್ಟು ಸತ್ಯಾಗ್ರಹಿಗಳು ಭಾರತಕ್ಕೆ ಬಂದಿದ್ದರು. ಅವರೆಲ್ಲ ಕಲಕತ್ತಾದ ಶಾಂತಿನಿಕೇತನದಲ್ಲಿ ಶ್ರೀ ಸಿ. ಎಫ್. ಅಂಡ್ರ್ಯೂಸ್ ರವರ ಆಶ್ರಯದಲ್ಲಿದ್ದಾರೆ ಎಂಬ ಸುದ್ದಿ ಗಾಂಧೀಜಿಗೆ ಬೊಂಬಾಯಿಯಲ್ಲಿರುವಾಗಲೇ ತಲುಪಿತ್ತು. ಅವರನ್ನು ಕಾಣುವ ತವಕದಿಂದ ಬಂದಿದ್ದ ಗಾಂಧೀಜಿಗೆ, ಶಾಂತಿನಿಕೇತನದ ಹೆಬ್ಬಾಗಿಲ ಬಳಿ, ಮಗನ್‌ಲಾಲ ಗಾಂಧಿಯನ್ನು ಕಂಡಾಗ ಸಂತೋಷವನ್ನು ತಡೆಯಲಾಗಲಿಲ್ಲ. ಪಶ್ಚಿಮ ದಿಕ್ಕಿನಲ್ಲಿ ಮುಳುಗಲು ತಯಾರಿ ನಡೆಸುತ್ತಿದ್ದ ಸೂರ್ಯನು ತನ್ನ ಮುಖಕ್ಕೆ ಕೆಂಬಣ್ಣ ಬಳಿದುಕೊಳ್ಳುತ್ತಿದ್ದ ಹೊತ್ತು ಅದು.

ಮಗನ್‌ಲಾಲ ಗಾಂಧಿಯ ಹೆಗಲ ಮೇಲೆ ಪ್ರೀತಿಯಿಂದ ಕೈಯಿರಿಸಿದ ಗಾಂಧೀಜಿ, 'ಅಲ್ಲಿ ನೋಡು, ಅದೇ ಸೂರ್ಯ; ಏನೇನೂ ವ್ಯತ್ಯಾಸವಿಲ್ಲ. ಅಲ್ಲವೇನೋ ಲಾಲ್?' ಎಂದು ಉತ್ಸಾಹದಿಂದ ನಗುತ್ತಾ ಪ್ರಶ್ನಿಸಿದ್ದರು.

'ಆ ಸೂರ್ಯ ಮುಳುಗುವ ದಿನ ದೂರವಿಲ್ಲ!.' ಬೆನ್ನ ಹಿಂದೆ ನಿಂತಿದ್ದ ಯಾರೋ ಹೇಳಿದಂತಾಗಿತ್ತು.

ಈ ಧ್ವನಿಯನ್ನು ಎಲ್ಲೋ ಕೇಳಿದ್ದೇನೆ ಅನ್ನಿಸಿ ಗಾಂಧೀಜಿ ತಟ್ಟನೆ ತಿರುಗಿದರು. ಅಷ್ಟರಲ್ಲಿ, ಗಾಂಧೀಜಿಯನ್ನು ಹತ್ತಿರದಿಂದ ನೋಡುವ ಆತುರದಿಂದ ಸೇರಿದ್ದ ಜನರ ನಡುವೆ ನೂಕು ನುಗ್ಗಲು ಆರಂಭವಾಗಿತ್ತು. ತಿರುಗಿ ನೋಡುವಷ್ಟರಲ್ಲಿ, ಗುಂಪಿನ ನಡುವೆ ನುಸುಳಿಕೊಂಡು ಮರೆಯಾಗಲು ಯತ್ನಿಸುತ್ತಿರುವ ತಮ್ಮದೇ ವಯಸ್ಸಿನ ಸಣಕಲಾದ ವ್ಯಕ್ತಿಯೊಬ್ಬನ ಬೆನ್ನು ಕಾಣಿಸಿತು. ಅವನು ಮೆಹತಾಬನಿರಬಹುದೇ ಎಂಬ ಅನುಮಾನ ಹುಟ್ಟಿತು.

ಛೆ!, ಸಾಧ್ಯವಿಲ್ಲ. ಕಲ್ಲುಗುಂಡಿನಂತಿದ್ದ ಮೆಹತಾಬನು ಈ ರೀತಿಯಲ್ಲಿ ನರಪೇತಲನಾಗಿರಲು ಸಾಧ್ಯವಿಲ್ಲ. ಮೆಹತಾಬನಾಗಿರುತ್ತಿದ್ದರೆ ಬಂದು ಮಾತನಾಡಿಸದೆ ಇರುತ್ತಿದ್ದನೇ? ದಕ್ಷಿಣ ಅಫ್ರಿಕಾದಲ್ಲಿ ಭಾರತೀಯರ ಪರವಾಗಿ ನಡೆಸಿದ್ದ ಚಳುವಳಿಗಳ ಬಗ್ಗೆ ಅವನಿಗೆ ಕುತೂಹಲವಿರಲಿಕ್ಕಿಲ್ಲವೇ? ಛೆ! ಹಾಗಿದ್ದಿರಲಾರದು. ಹಾಗಿರುತ್ತಿದ್ದರೆ, ಅವನು ಬರುತ್ತಲೇ ಇರಲಿಲ್ಲ. ತಾನಿನ್ನೂ ಜೀವಂತವಾಗಿದ್ದೇನೆ ಎಂಬುದನ್ನು ನನಗೆ ಗೊತ್ತುಪಡಿಸುವುದಷ್ಟೇ ಅವನು ಬಂದುದರ ಉದ್ದೇಶವಾಗಿದ್ದಿರಬಹುದೆ? ಅವನೀಗ ಎಲ್ಲಿರಬಹುದು? ರಂಗೂನಿನಲ್ಲಿಯೇ ಇದ್ದಾನೆಯೆ? ಏನು ಮಾಡುತ್ತಿರಬಹುದು? ಮತ್ತೊಮ್ಮೆ ಬಂದಾನೆಯೇ?'

ನೂರಾರು ಪ್ರಶ್ನೆಗಳು ಗಾಂಧೀಜಿಯನ್ನು ಏಕಕಾಲದಲ್ಲಿ ಮುತ್ತಿಕೊಂಡವು. ಗಾಂಧೀಜಿ ಗುಂಪಿನ ನಡುವೆ ಕಣ್ಣು ತೂರುವ ವ್ಯರ್ಥ ಪ್ರಯತ್ನ ಮಾಡಿದರು. ದೂರದಲ್ಲಿ, ಬಲು ದೂರದಲ್ಲಿ ಗಾಳಿಯಲ್ಲಿ ತೇಲುತ್ತಾ ಹೋಗುತ್ತಿರುವ ಕಡ್ಡಿಯಂತೆ ಕಾಣುತ್ತಿರುವವನು ಮೆಹತಾಬನೆ? ತನಗೆ ಅವನು ಅಲ್ಲಿಂದ ಕೈಬೀಸಿ ಅಭಿನಂದನೆ ಹೇಳಿದನೆ? ಅಥವಾ ತನ್ನದು ಕೇವಲ ಭ್ರಮೆಯಿರಬಹುದೇ? ನಾಟಕದ ದೇವರಂತೆ ಪ್ರತ್ಯಕ್ಷವಾಗಿ ಮಾಯವಾದವನು ಗಾಂಧೀಜಿಯ ಯೋಚನೆಗಳನ್ನು ಆವರಿಸಿಕೊಂಡು ಬಿಟ್ಟಿದ್ದನು.

ಗಾಂಧೀಜಿಗೆ ಉಳಿದುಕೊಳ್ಳಲು ಶಾಂತಿನಿಕೇತನದ ಆಶ್ರಮದಲ್ಲಿ ಒಂದು ವಿಶೇಷವಾದ ಕೋಣೆಯನ್ನು ಸಜ್ಜುಗೊಳಿಸಲಾಗಿತ್ತು. ಅವರ ಮಲಗುವ ಕೋಣೆಯನ್ನು ಬಹಳ ಸುಂದರವಾಗಿ ಅಲಂಕರಿಸಲಾಗಿತ್ತು. ಅದನ್ನು ಕಂಡು ಗಾಂಧೀಜಿಗೆ ಮುಜುಗರವಾಯಿತು. ಆದರೆ ಗುರುದೇವರ ಆತಿಥ್ಯವನ್ನು ನೇರವಾಗಿ ನಿರಾಕರಿಸುವುದು ಸೌಜನ್ಯವಲ್ಲವೆಂಬುದು ಗಾಂಧೀಜಿಗೆ ಗೊತ್ತಿತ್ತು. ಆದ್ದರಿಂದ, ತಮಾಶೆಯ ಧ್ವನಿಯಲ್ಲಿಯೇ ಪ್ರಶ್ನಿಸಿದ್ದರು, 'ಈ ಕೊಠಡಿ ಮದುಮಕ್ಕಳ ಮಧುಚಂದ್ರಕ್ಕೆ ಮಾತ್ರ ಸರಿಯಿದೆ. ನನ್ನಂತಹ ಮುದುಕನಿಗೆ ಇಲ್ಲಿ ನಿದ್ರೆ ಬರಲಾರದು. ನನಗೆ ಬೇರೆಲ್ಲಾದರೂ ಮೂಲೆಯಲ್ಲಿ ಒಂದಿಷ್ಟು ಜಾಗ ಸಿಗಲಾರದೆ?'

'ನೀವೀಗ ಒಬ್ಬ ಕವಿಯ ಮನೆಯಲ್ಲಿದ್ದೀರಿ ಎಂಬುದನ್ನು ಮರೆಯಬಾರದು ಬಾಪೂ. ಈ ಶಾಂತಿನಿಕೇತನವು ಯಾವಾಗಲೂ ಒಂದು ಕನ್ಯೆಯಿದ್ದಂತೆ. ಆಕೆ ನಿಮ್ಮ ಸೇವೆಗಾಗಿ ಸದಾ ಸಿದ್ಧಳಿದ್ದಾಳೆ. ನೀವು ಇಲ್ಲಿಯೇ ಸುಖದಿಂದ ನಿದ್ರಿಸಬಹುದು' ಪಕ್ಕದಲ್ಲೇ ನಿಂತಿದ್ದ ರವೀಂದ್ರನಾಥ ಠಾಗೂರರು ನಗುತ್ತಾ ಹೇಳಿದ್ದರು.

ಆ ದಿನಗಳಲ್ಲಿ ಶಾಂತಿನಿಕೇತನವು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿತ್ತು. ರಾಷ್ಟ್ರಪ್ರೇಮಕ್ಕೆ ವೇದಿಕೆಯಾಗಿತ್ತು. ಶಾಂತಿನಿಕೇತನದ ಮಾದರಿಯಲ್ಲಿ ದೇಶದ ಉದ್ದಗಲಕ್ಕೂ ನೂರಾರು ದೇಶಪ್ರೇಮದ ಹಣತೆಗಳು ಬೆಳಗುತ್ತಿದ್ದವು. ದೇಶದ ಉತ್ತರ ಭಾಗದಲ್ಲಿ ಮಹಾತ್ಮ ಮುನ್ಷಿರಾಮರು (ಶ್ರದ್ಧಾನಂದ ಸ್ವಾಮಿಗಳು) ಸ್ಥಾಪಿಸಿದ್ದ ಗುರುಕುಲದವರು, ರಾಮಕೃಷ್ಣ ಮಠದವರು, ಬ್ರಹ್ಮ ಸಮಾಜದ ರಾಜಾರಾಮ ಮೋಹನರಾಯರು, ದೇವೇಂದ್ರನಾಥ ಠಾಕೂರರು, ಕೇಶವಚಂದ್ರ ಸೇನ ಮೊದಲಾದವರು ಜನರಿಗೆ

ಪ್ರಗತಿಯ ಮಾರ್ಗದರ್ಶನ ಮಾಡುತ್ತಿದ್ದರು. ದಕ್ಷಿಣದಲ್ಲಿ ಅನಿಬೆಸೆಂಟರ ಥಿಯಾಸಫಿ ಕೇಂದ್ರ ಮತ್ತು ಅದರ ಜತೆಗೆ ನಾರಾಯಣಗುರು ಸಮಾಜದ ಕಾರ್ಯಕರ್ತರು ಸಾಮಾಜಿಕ ಪರಿವರ್ತನೆಗಾಗಿ ಕೆಲಸ ಮಾಡುತ್ತಿದ್ದರು. ಲೋಕಮಾನ್ಯ ಬಾಲಗಂಗಾಧರ ತಿಲಕರು, 'ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದರೆ, 'ನಾವದನ್ನು ಪಡೆದೇ ತೀರುತ್ತೇವೆ.' ಎಂಬುದಾಗಿ ಅರವಿಂದ ಘೋಷ್, ಬಿಪಿನ್ ಚಂದ್ರ ಪಾಲ್, ಲಾಲಾ ಲಜಪತ ರಾಯ್ ಮೊದಲಾದ ದೇಶನಾಯಕರು ಧ್ವನಿಗೂಡಿಸುತ್ತಿದ್ದರು.

ಗಾಂಧೀಜಿಗೆ ತಾನೂ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಬೇಕು; ಭಾರತದ ಜನರ ಒಳಿತಿಗಾಗಿ ಕೆಲಸ ಮಾಡಬೇಕು; ದಕ್ಷಿಣ ಆಫ್ರಿಕಾದಲ್ಲಿ ಜನರ ನಡುವೆ ತಾನು ಕಲಿತ ಅನುಭವಗಳನ್ನು ಇಲ್ಲಿಯೂ ಬಳಸಿಕೊಳ್ಳಬೇಕು ಎಂಬ ಉತ್ಸಾಹ ಮೂಡಿತ್ತು. ಆದರೆ, ಗಾಂಧೀಜಿಗೆ ರಾಜಕೀಯದ ಬಾಲಪಾಠ ಮಾಡಿದ್ದ ಗುರು ಗೋಪಾಲಕೃಷ್ಣ ಗೋಖಲೆಯವರು ಗಾಂಧೀಜಿಯನ್ನು ಬೊಂಬಾಯಿಯಿಂದ ಬೀಳ್ಕೊಡುವಾಗ, ಖಡಾಖಂಡಿತವಾದ ಆದೇಶ ನೀಡಿದ್ದರು.

'ನಿನಗೆ ನಾನು ಒಂದು ವರ್ಷದ ಕಾಲದ ಪರೀಕ್ಷೆ ನಿಗದಿಗೊಳಿಸಿರುವೆ. ನೀನು ಮೊದಲು, ಭಾರತದ ಉದ್ದಗಲಕ್ಕೂ ಸಂಚಾರ ಮಾಡಿ, ಇಲ್ಲಿಯ ಜನರ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕು. ಈ ಒಂದು ವರ್ಷದ ಪರೀಕ್ಷಾ ಕಾಲದಲ್ಲಿ ನೀನು ಯಾವುದೇ ಸಾರ್ವಜನಿಕ ಭಾಷಣ ಮಾಡಬಾರದು. ಸಾರ್ವಜನಿಕವಾಗಿ ಯಾವುದೇ ಅಭಿಪ್ರಾಯವನ್ನು ಪ್ರಕಟಿಸಬಾರದು. ಯಾವುದೇ ಸಾರ್ವಜನಿಕ ಪ್ರಶ್ನೆಗಳಿಗೆ ನೀನು ಉತ್ತರ ನೀಡಬಾರದು.'

ದೇಶ ಸಂಚಾರ ಮಾಡುವ ಮೊದಲು ಸ್ವಲ್ಪ ಕಾಲ ಶಾಂತಿನಿಕೇತನದಲ್ಲಿಯೇ ಇದ್ದು ಜನರ ಪರಿಚಯ ಮಾಡಿಕೊಳ್ಳಬೇಕೆಂಬುದು ಗಾಂಧೀಜಿಯ ಯೋಚನೆಯಾಗಿತ್ತು. ಆದರೆ ಅವರ ಆಸೆಗೆ ತಣ್ಣೀರೆರಚುವಂತಹ ಸುದ್ದಿಯೊಂದು ಒಂದೇ ವಾರದೊಳಗೆ ಬಂದಿತ್ತು. ಗೋಪಾಲಕೃಷ್ಣ ಗೋಖಲೆಯವರು ಪುಣೆಯಲ್ಲಿ ನಿಧನರಾಗಿದ್ದಾರೆಂಬ ವಾರ್ತೆ ಸಿಡಿಲಿನಂತೆ ಎರಗಿತ್ತು. ಸುದ್ದಿ ತಿಳಿದ ತತ್ಷಣ, ಹೆಂಡತಿ ಕಸ್ತೂರಿಬಾಯಿ ಮತ್ತು ಪ್ರೀತಿಯ ಶಿಷ್ಯ ಮಗನ್ ಲಾಲನನ್ನು ಕರೆದುಕೊಂಡು ಗಾಂಧೀಜಿಯು ಪುಣೆಗೆ ಹೊರಟರು.

ಮೂರನೇ ದರ್ಜೆಯ ಟಿಕೇಟು ಕೊಳ್ಳುವುದೂ ಒಂದು ವಿಧದ ಸತ್ಯಾಗ್ರಹವೇ.

ಬರ್ದವಾನ್‌ನಿಂದ ಪುಣೆಗೆ ರೈಲು ಪ್ರಯಾಣ. ಗಾಂಧೀಜಿಯು ಸಾಕಷ್ಟು ಮುಂಚಿತವಾಗಿಯೇ ಬರ್ದವಾನ್ ರೈಲು ನಿಲ್ದಾಣಕ್ಕೆ ಬಂದಿದ್ದರು. ಮೂರನೆಯ ದರ್ಜೆಯ ಟಿಕೇಟು ಕೊಡುವ ಕಿಂಡಿ ಇನ್ನೂ ತೆರೆದಿರಲಿಲ್ಲ. ಪಕ್ಕದಲ್ಲಿ ನಿಂತಿದ್ದ ಒಬ್ಬ ಪ್ರಯಾಣಿಕನು ಗಾಂಧೀಜಿಗೆ ಹೇಳಿದನು, 'ಮೂರನೇ ದರ್ಜೆಯ ಟಿಕೇಟನ್ನು ರೈಲು ಹೊರಡುವುದಕ್ಕಿಂತ ಸ್ವಲ್ಪ ಮುಂಚೆಯಷ್ಟೇ ಕೊಡುತ್ತಾರೆ. ನಿಮಗೆ ಮುಂದಾಗಿಯೇ ಟಿಕೇಟುಗಳು ಬೇಕು ಎಂದಾದರೆ, ನೀವು ಮೊದಲನೆಯ ಅಥವಾ ಎರಡನೆಯ

ದರ್ಜೆಯ ಟಿಕೇಟುಗಳನ್ನು ಖರೀದಿಸಬೇಕಾಗುತ್ತದೆ. ನೀವು ಕಚೇರಿಯ ಒಳಗಿರುವ ಸ್ಟೇಶನ್ ಮಾಸ್ಟರನನ್ನು ವಿನಂತಿಸಿರಿ.'

ಮೂರನೆಯ ದರ್ಜೆಯ ಬೋಗಿಯಲ್ಲಿಯೇ ಪ್ರಯಾಣಿಸುವುದೆಂದು ಗಾಂಧೀಜಿ ನಿರ್ಧರಿಸಿಬಿಟ್ಟಿದ್ದರು. ಟಿಕೇಟು ಮುಂದಾಗಿ ಸಿಕ್ಕಿದರೆ ಹೆಂಡತಿಗೂ ಸ್ವಲ್ಪ ಆರಾಮವಾಗುತ್ತದೆ; ಪ್ರಯತ್ನಿಸಿ ನೋಡೋಣವೆಂದು ಸ್ಟೇಶನ್ ಮಾಸ್ಟರನನ್ನು ಹುಡುಕಿಕೊಂಡು ಹೋಗಿ, ತನ್ನ ಸಮಸ್ಯೆಯನ್ನು ನಿವೇದಿಸಿಕೊಂಡರು.

ಬಾಯಿ ತುಂಬಾ ಕವಳ ತುಂಬಿಸಿಕೊಂಡಿದ್ದ ಆ ಸ್ಟೇಶನ್ ಮಾಸ್ಟರನು, ತಲೆಯೆತ್ತಿಯೂ ನೋಡಲಿಲ್ಲ. ಪಕ್ಕದಲ್ಲಿ ಇರುವ ಟಿಕೇಟು ಕೊಡುವ ಕಿಂಡಿಯತ್ತ ತನ್ನ ಎಡಗೈಯನ್ನು ಚಾಚುತ್ತ, 'ಹೂಂ. ., ಹೂಂ..' ಎಂದಷ್ಟೇ ಮುಲುಗಿದನು. ಗಾಂಧೀಜಿಗೆ ತುಂಬಾ ಬೇಸರವಾಯಿತು. ನಿರುಪಾಯರಾಗಿ ಹಿಂತಿರುಗಿ ಬಂದ ಗಾಂಧೀಜಿಯು, ಟಿಕೇಟು ಕೊಡುವ ಕಿಂಡಿಯತ್ತ ನಡೆದರು. ಆದರೆ, ಅಲ್ಲಿ ಅದಾಗಲೇ ನಲುವತ್ತರಷ್ಟು ಪ್ರಯಾಣಿಕರು ಘೇರಾಯಿಸಿದ್ದರು. ಗಾಂಧೀಜಿ ಅವರ ಜತೆಗೆ ಸೇರಿಕೊಂಡರು.

ಟಿಕೇಟು ಕೊಡುವ ಕಿಂಡಿ ತೆರೆದುಕೊಂಡದ್ದೇ ತಡ, ನಿಂತಿದ್ದ ಜನರೆಲ್ಲ ಒಮ್ಮೆಲೇ ಮುನ್ನುಗ್ಗ ತೊಡಗಿದ್ದರು. ಎಲ್ಲರೂ ಏಕಕಾಲದಲ್ಲಿ ಕಿಂಡಿಯೊಳಗೆ ಕೈ ತೂರಿಸಲು ಪ್ರಯತ್ನಿಸುತ್ತಿದ್ದರು. ಒಬ್ಬರ ಬೆನ್ನಿಗಂಟಿದಂತೆ ಇನ್ನೊಬ್ಬರು ಗಾಂಧೀಜಿಯನ್ನು ಹಿಂದಕ್ಕೆ ತಳ್ಳುತ್ತಾ ಮುಂದಕ್ಕೆ ಸಾಗುತ್ತಿದ್ದರು. ಗಾಂಧೀಜಿಗೆ, ಡಾರ್ವಿನ್ ತನ್ನ 'ವಿಕಾಸವಾದ'ದಲ್ಲಿ ಹೇಳಿದ್ದ, 'ಬಲಶಾಲಿಯಷ್ಟೇ ಬದುಕಬಲ್ಲುದು' ಎಂಬ ಮಾತು ನೆನಪಾಯಿತು. ಎಲ್ಲವನ್ನೂ ಸಹಿಸಿಕೊಂಡ ಗಾಂಧೀಜಿ ತನ್ನ ಸರದಿಗಾಗಿ ಕಾದರು.

ಟಿಕೇಟುಗಳೇನೋ ಸಿಕ್ಕವು. ಆದರೆ ರೈಲಿನ ಮೂರನೆಯ ದರ್ಜೆಯ ಬೋಗಿಗಳಲ್ಲಿ ಜಾಗ? ಅಲ್ಲಿಯೂ 'ವಿಕಾಸವಾದ'ವೇ ಅನ್ವಯವಾಗುತಿತ್ತು. ಗಾಂಧೀಜಿ, ತನ್ನ ಹೆಂಡತಿಯನ್ನು ಕೈ ಹಿಡಿದು ಎಳೆದುಕೊಂಡು ಇತ್ತಲಿಂದ ಅತ್ತ ಮೂರು ಬಾರಿ, ಅತ್ತಲಿಂದ ಇತ್ತ ಎರಡು ಬಾರಿ ದಾಪುಗಾಲು ಹಾಕಿದರು. ಆಯಾಸದಿಂದ ಏದುಸಿರು ಬಿಡುತ್ತಾ ಕಸ್ತೂರಿಬಾಯಿಯವರೂ ಗಂಡನ ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ಓಡಿದರು.

ಮೊದಲನೆಯ ಅಥವಾ ಎರಡನೆಯ ದರ್ಜೆಯ ಟಿಕೇಟು ಖರೀದಿಸಿದ್ದರೆ ಈ ಸಂಕಟ ಅನುಭವಿಸುವ ಅಗತ್ಯವಿತ್ತೇ ಎಂಬ ಪ್ರಶ್ನೆ ಅವರ ಗಂಟಲೊಳಗೇ ಉಳಿದುಬಿಡುತ್ತಿತ್ತು. ತನ್ನ ಗಂಡ ಬಹಳ ಮೊಂಡನೆಂಬುದು ಅವರಿಗೆ ಗೊತ್ತಿತ್ತು. ಒಮ್ಮೆ ನಿರ್ಧರಿಸಿದ ಬಳಿಕ ಗಾಂಧೀಜಿ ತನ್ನ ನಿರ್ಧಾರದಿಂದ ಹಿಂದಕ್ಕೆ ಬರುವುದಿಲ್ಲವೆಂಬುದು ಅವರ ಅನುಭವವಾಗಿತ್ತು.

ಮೂರನೆಯ ದರ್ಜೆಯ ಯಾವುದೇ ಬೋಗಿಯ ಬಳಿಗೆ ಹೋದರೂ, ಬಾಗಿಲ ಸಂದಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಪ್ರಯಾಣಿಕರು, ಒಳಗಿನಿಂದ ಹೊರಗೆ ಬರುವವರನ್ನೂ, ಹೊರಗಿನಿಂದ ಒಳಗೆ ಹೋಗುವವರನ್ನೂ ತಡೆದು ಗೋಡೆಯಂತೆ ನಿಂತಿದ್ದರು. ಯಾರಿಗೆ, ಯಾರು, ಯಾವಾಗ,

ಯಾಕೆ ಬೈಗುಳದ ಮಳೆಗರೆಯುತ್ತಿದ್ದಾರೆಂಬುದು ಯಾರಿಗೂ ತಿಳಿಯುತ್ತಿರಲಿಲ್ಲ. ರೈಲಿನ ಗಾರ್ಡನು ಈ ಎಲ್ಲ ಗದ್ದಲಗಳನ್ನೂ, ತನಗೆ ಸಂಬಂಧಿಸಿದ ಸಂಗತಿಗಳೇ ಅಲ್ಲವೆಂಬಂತೆ, ನೋಡುತ್ತಾ ನಿಂತಿದ್ದನು. ಗಾಂಧೀಜಿಯು ಗಾರ್ಡನ ಬಳಿಗೆ ಹೋಗಿ, ತಮಗೆ ಸಹಾಯ ಮಾಡುವಂತೆ ವಿನಂತಿಸಿದರು. ಆದರೆ ಆತನು ಇದೆಲ್ಲವೂ ಮಾಮೂಲಿ ಎಂಬಂತೆ 'ಎಲ್ಲಾದರೂ ನುಗ್ಗಿಬಿಡಿ, ಅಥವಾ ಮುಂದಿನ ಗಾಡಿಯಲ್ಲಿ ಪ್ರಯತ್ನಿಸಿ.' ಎಂದು ಸಲೀಸಾಗಿ ಉತ್ತರಿಸಿಬಿಟ್ಟಿದ್ದನು.

ರೈಲು ಹೊರಡುವ ಗಂಟೆ, ಸಿಳ್ಳು ಕೇಳಿಸಿದಾಗ ಗಾಂಧೀಜಿಗೆ ಗಾಬರಿಯಾಯಿತು. ಇನ್ನು ತಡ ಮಾಡಿದರೆ ಕೆಲಸ ಕೆಟ್ಟೀತೆಂದು ಭಯವಾಯಿತು. ಮಗನ್‌ಲಾಲನಿಗೆ 'ನೀನು ಎಲ್ಲಾದರೂ ನುಗ್ಗಿಬಿಡು' ಎಂದವರೇ, ಎದುರಿಗೆ ಕಾಣಿಸಿದ ಎರಡನೇ ದರ್ಜೆಯ ಬೋಗಿಗೆ ನುಗ್ಗಿದರು. ಹೆಂಡತಿಯನ್ನು ಒಳಕ್ಕೆ ಎಳೆದುಕೊಂಡರು. ರೈಲು ಹೊರಟಿತು. ಮೂರನೇ ದರ್ಜೆಯ ಟಿಕೇಟು ಖರೀದಿಸಿರುವ ಗಾಂಧೀಜಿ ಎರಡನೇ ದರ್ಜೆಯ ಬೋಗಿಗೆ ಹತ್ತಿರುವುದನ್ನು ರೈಲಿನ ಗಾರ್ಡನು ಕಂಡಿದ್ದನು. ಅಸನ್‌ಸಾಲ್ ಎಂಬ ನಿಲ್ದಾಣ ಬಂದಾಗ ಬೋಗಿಯೊಳಗೆ ಬಂದ ಗಾರ್ಡನು, 'ಟಿಕೆಟ್, ಟಿಕೆಟ್' ಎಂದು ವ್ಯಂಗ್ಯವಾಗಿ ನಗುತ್ತಾ, ಗಾಂಧೀಜಿಯ ಎದುರು ನಿಂತುಬಿಟ್ಟನು.

ತಮಗೆ ಮೂರನೆಯ ದರ್ಜೆಯಲ್ಲಿ ಜಾಗ ಸಿಗದ ಕಾರಣ ಅನಿವಾರ್ಯವಾಗಿ ಎರಡನೇ ದರ್ಜೆಯ ಬೋಗಿಗೆ ಏರಬೇಕಾಯಿತು. ಮೂರನೆಯ ದರ್ಜೆಯ ಟಿಕೇಟು ನೀಡಿದ ಬಳಿಕ ಅದೇ ಬೋಗಿಯಲ್ಲಿ ಸ್ಥಳಾವಕಾಶ ಒದಗಿಸುವುದು ರೈಲು ಅಧಿಕಾರಿಗಳ ಜವಾಬ್ದಾರಿ. ಮೂರನೆಯ ದರ್ಜೆಯ ಬೋಗಿಯಲ್ಲಿ ಜಾಗ ನೀಡಿದರೆ ತಾವಿಬ್ಬರೂ ಅದರಲ್ಲಿ ಪ್ರಯಾಣಿಸಲು ಸಿದ್ಧರಿದ್ದೇವೆ, ಎಂದೆಲ್ಲ ಹೇಳುತ್ತಾ ಗಾಂಧೀಜಿಯು ಗಾರ್ಡನ ಬಳಿ ತಮ್ಮ ಕಷ್ಟವನ್ನು ನಿವೇದಿಸಿಕೊಂಡರು. ಗಾಂಧೀಜಿಯ ಯಾವುದೇ ವಿನಂತಿಯನ್ನು ಆಲಿಸುವ ತಾಳ್ಮೆಯು ಆ ಗಾರ್ಡನಲ್ಲಿ ಇರಲಿಲ್ಲ. ' ಸುಮ್ಮನೆ ಚರ್ಚೆ ಮಾಡಬೇಡಿರಿ. ಒಂದೋ, ಹೆಚ್ಚುವರಿ ಹಣ ಕೊಟ್ಟುಬಿಡಿರಿ. ಕೊಡುವುದಿಲ್ಲವೆಂದಾದರೆ ರೈಲಿನಿಂದ ಇಳಿದು ಹೋಗಿರಿ.' ಎಂದು ಒರಟಾಗಿ ಹೇಳಿದನು.

ಗಾರ್ಡನ ನಿರ್ದಾಕ್ಷಿಣ್ಯ ವರ್ತನೆಯಿಂದ ಗಾಂಧೀಜಿಗೆ ಬಹಳ ಬೇಸರವಾಯಿತು. ಆದರೆ ಆತನ ಜತೆ ವಾದ ಮಾಡಿ ಗೆಲ್ಲುವುದು ಸಾಧ್ಯವೇ ಇಲ್ಲವೆಂಬುದು ಮನದಟ್ಟಾಗಿತ್ತು. ಆದ್ದರಿಂದ, ಅವನು ಹೇಳಿದಷ್ಟು ಹೆಚ್ಚುವರಿ ಹಣವನ್ನು ಕೊಟ್ಟುಬಿಟ್ಟರು.

ರೈಲು ಬೊಂಬಾಯಿ ನಗರದ ಕಲ್ಯಾಣ ರೈಲು ನಿಲ್ದಾಣವನ್ನು ತಲುಪುವಷ್ಟರಲ್ಲಿ ಗಾಂಧೀಜಿ ಬಹಳ ಆಯಾಸಗೊಂಡಿದ್ದರು. ರೈಲಿನಿಂದ ಇಳಿಯುತ್ತಿದ್ದಂತೆಯೇ ಮಗನ್‌ಲಾಲ ಗಾಂಧಿ ಓಡಿ ಬಂದಿದ್ದನು. ತಮ್ಮ ಬೇಸರವು ಅವನಿಗೆ ತಿಳಿಯಬಾರದೆಂಬ ಯೋಚನೆಯಿಂದ ಗಾಂಧೀಜಿ, ತನ್ನ ಮುಖಕ್ಕೆ ಮುಗುಳ್ನಗೆ ಲೇಪಿಸಿಕೊಳ್ಳುತ್ತಾ ಅವನನ್ನು ಪ್ರಶ್ನಿಸಿದ್ದರು,

'ನಾವಿನ್ನೂ ದಕ್ಷಿಣ ಆಫ್ರಿಕಾದಲ್ಲಿ ಇದ್ದೇವೆಯೇ ಮಗನ್ ಲಾಲ್?'

# ಗಾಂಧೀಜಿಯ ಕುಂಭಮೇಳ

ಗುರು ಗೋಖಲೆಯವರು ತೀರಿಕೊಂಡ ಮೇಲೆ ಗಾಂಧೀಜಿಗೆ ತಾನು ಭಾರತದಲ್ಲಿ ಒಂಟಿಯಾಗಿದ್ದೇನೆ ಎಂಬ ಭಾವನೆಯುಂಟಾಗಿತ್ತು. ಮುಂದಿನ ದಾರಿ ಸ್ಪಷ್ಟವಿದ್ದಿರಲಿಲ್ಲ. ಗೋಖಲೆಯವರ ಆದೇಶದಂತೆ ದೇಶ ಸುತ್ತಿ ಬರುವುದು ಕಷ್ಟದ ಕೆಲಸವೇನೂ ಆಗಿದ್ದಿರಲಿಲ್ಲ. ಆದರೆ, ಹಾಗೆ ಸುತ್ತಿಕೊಂಡು ಬಂದ ಬಳಿಕ ಮಾಡುವುದಾದರೂ ಏನೂ?

ದಕ್ಷಿಣ ಆಫ್ರಿಕಾದಲ್ಲಿಯಾಗಿರುತ್ತಿದ್ದರೆ, ಬ್ರಿಟಿಷರ ವಿರುದ್ಧದ ತಮ್ಮ 'ಸತ್ಯಾಗ್ರಹ'ಕ್ಕೆ ಬೆಂಬಲವಾಗಿ ಹಣ ಮತ್ತು ಜನ ಎರಡನ್ನೂ ಒದಗಿಸುವ ಅಬ್ದುಲ್ಲಾ ಸೇಠರಂತಹ ಹಲವಾರು ಸಿರಿವಂತರು ಇದ್ದರು. ಗೋಖಲೆಯವರು ಬದುಕಿದ್ದ ತನಕ ಗಾಂಧೀಜಿಯನ್ನು ಈ ಪ್ರಶ್ನೆ ಕಾಡಿದ್ದೇ ಇಲ್ಲ. ಗೋಖಲೆಯವರು ಸ್ಥಾಪಿಸಿದ್ದ 'ಭಾರತ ಸೇವಕ ಸಂಘ'ದ ಸದಸ್ಯನಾಗಿ ಕೆಲಸದಲ್ಲಿ ತೊಡಗೋಣವೆಂದರೆ, ತಮ್ಮ 'ಸತ್ಯಾಗ್ರಹ'ದ ನಿಯಮಗಳು ಆ ಸಂಘದ ತತ್ವಗಳಿಗೆ ಹೊಂದಿಕೆಯಾಗುತ್ತಿರಲಿಲ್ಲ. ಗೋಖಲೆಯವರು ಬದುಕಿದ್ದಾಗ ಆ ಸಂಘದ ಅಧಿಕೃತ ಸದಸ್ಯನಾಗುವ ಅಗತ್ಯವೇ ಇದ್ದಿರಲಿಲ್ಲ. ಗೋಖಲೆಯವರು ಹೇಳಿದಂತೆ ಕೇಳಿದ್ದರೆ ಸಾಕಾಗಿತ್ತು. ಆದರೆ ಈಗ ಹಾಗಲ್ಲ.

'ಭಾರತ ಸೇವಕ ಸಂಘ'ದ ನಿಲುವುಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಸಿದ್ಧರಿಲ್ಲದ 'ಸತ್ಯಾಗ್ರಹಿ' ಗಾಂಧೀಜಿಯನ್ನು ತಮ್ಮ ಜತೆಗೆ ಸೇರಿಸಿಕೊಳ್ಳಲು ಸಂಘದ ಕೆಲವು ನಿಷ್ಠಾವಂತ ಕಾರ್ಯಕರ್ತರುಗಳಿಗೆ ಇಷ್ಟವಿದ್ದಿರಲಿಲ್ಲ. ಅದನ್ನು ಬಾಯಿ ಬಿಟ್ಟು ಹೇಳಿರಲಿಲ್ಲವಾದರೂ, ಪುಣೆಯಲ್ಲಿ ಈ ಬಗ್ಗೆ ಚರ್ಚಿಸಲು ನಡೆದ ಕೆಲವು ಸಭೆಗಳು, ಯಾವುದೇ ತೀರ್ಮಾನವನ್ನು ಕೈಗೊಳ್ಳದೆ ಮುಂದಕ್ಕೆ ಹೋಗುತ್ತಿದ್ದವು. ಸಂಘದ ಬಹಳಷ್ಟು ಸದಸ್ಯರಿಗೆ ಗಾಂಧೀಜಿಯನ್ನು ತಮ್ಮ ಜತೆಗೆ ಸೇರಿಸಿಕೊಳ್ಳುವುದರಲ್ಲಿ ಅಭ್ಯಂತರವೇನೂ ಇದ್ದಿರಲಿಲ್ಲ. ಆದರೆ, ಬಹುಮತದ ಆಧಾರದಲ್ಲಿ ಯಾವುದೇ ಸಂಘದ ಸದಸ್ಯನಾಗುವುದು ತಪ್ಪು ಎಂಬುದು ಗಾಂಧೀಜಿಯ ಭಾವನೆಯಾಗಿತ್ತು. ಬಹಳಷ್ಟು ಯೋಚಿಸಿದ ನಂತರ ಗಾಂಧೀಜಿಯು, 'ಭಾರತ ಸೇವಕ ಸಂಘ'ದ ಸಂಘಕ್ಕೆ ಸೇರುವ ಸಲುವಾಗಿ ತಾವು ಸಲ್ಲಿಸಿದ್ದ ಅರ್ಜಿಯನ್ನು ವಾಪಸು ಪಡೆದರು. 'ಭಾರತ ಸೇವಕ ಸಂಘ'ದವರು ಸಮಾಧಾನದ ನಿಟ್ಟುಸಿರು ಬಿಟ್ಟರು.

ಗೋಖಲೆಯವರು ಸ್ಥಾಪಿಸಿದ್ದ ಸಂಘವನ್ನು ಸೇರಿಕೊಳ್ಳದೇ ಹೋದರೂ, ಗೋಖಲೆಯವರು ನೀಡಿದ್ದ ಆದೇಶವನ್ನು ಗಾಂಧೀಜಿಯು ಕಡೆಗಣಿಸಲಿಲ್ಲ. ಪುಣೆಯಿಂದ ಮರಳಿದ ಗಾಂಧೀಜಿ, ಡಾ. ಮೆಹತಾರವರನ್ನು ಕಾಣುವ ನೆಪದಿಂದ, ಹಡಗು ಹತ್ತಿ ನೇರವಾಗಿ ರಂಗೂನಿಗೆ ಹೊರಟರು. ಡಾ. ಮೆಹತಾರವರ ಮನೆಯಲ್ಲಿ, ಬಾಬು ಭೂಪೇಂದ್ರನಾಥ ಬಸು ಅವರು ಗಾಂಧೀಜಿಯ ಸ್ವಾಗತ ಮತ್ತು ಸತ್ಕಾರದ ಹೊಣೆ ಹೊತ್ತುಕೊಂಡಿದ್ದರು.

ಆ ದಿನಗಳಲ್ಲಿ ಗಾಂಧೀಜಿ, ಹಣ್ಣುಗಳನ್ನಲ್ಲದೆ ಬೇರೆ ಯಾವ ಬಗೆಯ ಆಹಾರವನ್ನೂ ಸೇವಿಸುತ್ತಿರಲಿಲ್ಲ. ಕಲಕತ್ತಾದಿಂದ ತರಿಸಲಾಗಿದ್ದ ಬಗೆ ಬಗೆಯ ಹಣ್ಣುಗಳಿಂದ ಹೊಸ ಹೊಸ ರುಚಿಗಳನ್ನು ಮಾಡಿ ಬಡಿಸುವುದೇ, ಬಸು ಅವರ ಮನೆಯ ಹೆಂಗಸರ ಕೆಲಸವಾಗಿತ್ತು. ಗಂಟೆಗೆಂಟುಬಾರಿಯಂತೆ ಅವರು ಪ್ರೀತಿಯಿಂದ ತಂದು ಎದುರಿಗೆ ಇರಿಸುತ್ತಿದ್ದ ವಿಧ ವಿಧದ ಹಣ್ಣಿನ ತಿನಸುಗಳನ್ನು ಕಾಣುತ್ತಿದ್ದಂತೆ ಗಾಂಧೀಜಿಯ ಹೊಟ್ಟೆ ಮತ್ತು ಕಣ್ಣುಗಳು, ಅವರ ಆಹಾರ ನಿಯಮಗಳ ವಿರುದ್ಧವೇ ಸತ್ಯಾಗ್ರಹ ಹೂಡುತ್ತಿದ್ದವು.

ದಿನಗಳೆದಂತೆ ಗಾಂಧೀಜಿಗೆ, ತಮಗೆ ತಾವೇ ವಿಧಿಸಿಕೊಂಡಿದ್ದ ಆಹಾರದ ನಿಯಮಗಳ ಬಗ್ಗೆಯೇ ಅನುಮಾನಗಳು ಮೂಡಲಾರಂಭಿಸಿದ್ದವು. ತಾವು ಹಣ್ಣುಗಳನ್ನು ಮಾತ್ರ ತಿಂದು ಬದುಕುತ್ತಿರುವುದೇನೋ ನಿಜ. ಆದರೆ, ಹೊತ್ತುಗೊತ್ತಿಲ್ಲದೆ ತಾವು ನುಂಗುತ್ತಿರುವ ಹಣ್ಣುಗಳ ಸಂಖ್ಯೆಗೆ ಯಾವ ಮಿತಿಯನ್ನೂ ವಿಧಿಸಿಕೊಳ್ಳದಿರುವುದು, ತಮಗೆ ತಾವೇ ಮಾಡಿಕೊಳ್ಳುತ್ತಿರುವ ಮೋಸವಲ್ಲವೇ? ಎಂಬ ಭಾವನೆ ಉಂಟಾಯಿತು. ಈ ಮನೆಯಿಂದ ಆದಷ್ಟು ಬೇಗ ಹೊರಡಬೇಕು ಎಂದು ನಿರ್ಧರಿಸಿದರು.

ಆ ವರ್ಷದಲ್ಲಿ ಹರಿದ್ವಾರದಲ್ಲಿ ಕುಂಭಮೇಳ ನಡೆಯಲಿರುವುದು ಗಾಂಧೀಜಿಗೆ ಗೊತ್ತಿತ್ತು. ಕುಂಭಮೇಳವನ್ನು ನೋಡಲೇಬೇಕೆನ್ನುವ ಕುತೂಹಲ ಗಾಂಧೀಜಿಗೇನೂ ಇರಲಿಲ್ಲ. ಆದರೆ, ಬಸು ಅವರ ಮನೆಯಿಂದ ಆದಷ್ಟು ಬೇಗನೆ ಹೊರಡಲು ಬಲವಾದ ಕಾರಣವೊಂದು ಬೇಕಾಗಿತ್ತು. ಹರಿದ್ವಾರಕ್ಕೆ ಹೋಗಿ ಕುಂಭಮೇಳದಲ್ಲಿ ಭಾಗವಹಿಸಬೇಕಾಗಿದೆ ಎಂದು ಗಾಂಧೀಜಿ, ಹೊರಡುವ ಸೂಚನೆ ನೀಡಿದಾಗ ಬಸು ಅವರಿಗೂ ಬಾಯಿ ಕಟ್ಟಿತ್ತು. ಬೇಡವೆನ್ನುವುದಾದರೂ ಯಾವ ನಾಲಗೆಯಲ್ಲಿ? ಕುಂಭಮೇಳ ನಡೆಯಲಿರುವ ಹರಿದ್ವಾರಕ್ಕೆ ಹೋಗಬೇಕಾಗಿದೆ ಎಂಬ ಕಾರಣದಿಂದ, ಬಸು ಅವರ ಆತಿಥ್ಯದಿಂದ ಬಿಡುಗಡೆಯಾಗಲು ಅನುಮತಿಯೇನೋ ಸಿಕ್ಕಿತ್ತು. ಇನ್ನು ಹೋಗದಿದ್ದರೆ ಸುಳ್ಳು ಹೇಳಿದಂತಾಗುತ್ತದೆ. ಗಾಂಧೀಜಿಯು ಹರಿದ್ವಾರಕ್ಕೆ ಹೊರಟರು.

ಹರಿದ್ವಾರಕ್ಕೆ ಹೋಗುವ ಯೋಚನೆ ಬರಲು ಪ್ರಮುಖವಾದ ಬೇರೆ ಕಾರಣಗಳೂ ಇದ್ದವು. ಹರಿದ್ವಾರದ ಗುರುಕುಲದಲ್ಲಿದ್ದ ಸ್ವಾಮಿ ಶ್ರದ್ಧಾನಂದರನ್ನು ಕಾಣುವ ಆಸೆ ಒಂದಾದರೆ, ಕುಂಭ ಮೇಳದಲ್ಲಿ ಸ್ವಯಂಸೇವಕರಾಗಿ ದುಡಿಯಲೆಂದು ಮಗನ್‌ಲಾಲ ಗಾಂಧಿಯ ನೇತೃತ್ವದಲ್ಲಿ 'ಫೀನಿಕ್ಸ್ ತಂಡ'ದವರೂ ಅಲ್ಲಿಗೆ ಹೋಗುತ್ತಿರುವುದು ಗಾಂಧೀಜಿಗೆ ತಿಳಿದಿತ್ತು.

ಕಲಕತ್ತಾದಿಂದ ಹರಿದ್ವಾರದ ವರೆಗೆ ಬಲು ಪ್ರಯಾಸದ ರೈಲು ಪ್ರಯಾಣ. ಸಹರನ್ ಪುರದಿಂದ ಮುಂದಕ್ಕೆ ಮೇಲ್ಛಾವಣಿಯಿಲ್ಲದ ರೈಲು ಬೋಗಿಗಳಲ್ಲಿ ಪ್ರಯಾಣಿಕರನ್ನು ಜಾನುವಾರುಗಳಂತೆ ಎಣಿಸಿ ತುಂಬಿಸಲಾಗುತ್ತಿತ್ತು. ನೆತ್ತಿಯ ಮೇಲೆ ಸುಡುತ್ತಿರುವ ಆಕಾಶ, ಕೆಳಗೆ ಕಾಲೂರಲಾಗದ ಸುಡುವ ಕಬ್ಬಿಣದ ಹಲಗೆಗಳು. ಬಾಯಾರಿದರೆ ಕುಡಿಯಲು ನೀರಿಗೂ ಬರ. ನೀರಿನಲ್ಲೂ ಎರಡು ಬಣ್ಣಗಳು.

ಖಾಯಿಲೆ ಬಿದ್ದಾಗ ವೈದ್ಯರ ಸಲಹೆಯಂತೆ ಗೋಮಾಂಸದ ಸೂಪನ್ನಾಗಲೀ, ಕ್ರೈಸ್ತ ಕಂಪೌಂಡರುಗಳು ಬಗ್ಗಿಸಿ ಕೊಡುವ ಯಾವುದೇ ಬಣ್ಣದ ನೀರನ್ನಾಗಲೀ ಯಾವುದೇ ಪ್ರಶ್ನೆ ಕೇಳದೆ ಕಣ್ಣು ಮುಚ್ಚಿ ಕುಡಿಯುವ ಜನರು, ರೈಲಿನೊಳಗೆ ಮುಸಲ್ಮಾನರು ತರುವ ನೀರನ್ನು ಮಾತ್ರ ಕಣ್ಣೆತ್ತಿ ನೋಡುತ್ತಲೂ ಇರಲಿಲ್ಲ. ತಮ್ಮ ಒಣಗಿದ ತುಟಿಗಳನ್ನು ನಾಲಗೆಯಿಂದ ತೇವ ಮಾಡಿಕೊಳ್ಳುತ್ತಾ, ತಮಗಾಗಿ ತಮ್ಮವರು ತರುವ ನೀರಿಗಾಗಿ ಕಾಯುತ್ತಾ ಕುಳಿತಿರುತ್ತಿದ್ದರು. ಹೇಗೋ ಹರಿದ್ವಾರವನ್ನು ತಲುಪಿ ದ್ದಾಯಿತು.

ಹರಿದ್ವಾರವನ್ನು ತಲುಪಿದ ಗಾಂಧೀಜಿಗೆ, ಭಾರತದಲ್ಲಿ ನಿಜವಾದ ಸುಧಾರಣೆ ಆರಂಭವಾಗಬೇಕಾದರೆ ಅದು ಕಕ್ಕಸುಗುಂಡಿಯಿಂದಲೇ ಪ್ರಾರಂಭಗೊಳ್ಳಬೇಕು ಎಂಬ ಸತ್ಯ ಅರಿವಾಯಿತು. ಶಾಂತಿನಿಕೇತನದ ವಾಸದಲ್ಲಿಯೇ ಈ ಸತ್ಯ ಅನುಭವಕ್ಕೆ ಬಂದಿತ್ತಾದರೂ, ಇಲ್ಲಿ ಹರಿದ್ವಾರದಲ್ಲಿ ಆ ಸತ್ಯ ಗಟ್ಟಿಯಾಯಿತು. ಸ್ವಯಂಸೇವಕರ ವಸತಿಗಾಗಿ ಧರ್ಮಶಾಲೆಯೊಂದರ ಬಯಲಿನಲ್ಲಿ ಗುಡಾರಗಳನ್ನು ಹಾಕಿದ್ದರು. ಪಕ್ಕದಲ್ಲೇ ಕಕ್ಕಸುಗುಂಡಿಗಳನ್ನು ತೋಡಲಾಗಿತ್ತು. ಕಕ್ಕಸುಗುಂಡಿಗಳ ನಿರ್ವಹಣೆಗಾಗಿ ಯೋಗ್ಯ ಜನರ ಹುಡುಕಾಟ ನಡೆದಿತ್ತು. ಗಾಂಧೀಜಿಯ ಆಗಮನದಿಂದ ಕಕ್ಕಸು ನಿರ್ವಹಣೆಯ ಸಮಸ್ಯೆ ಪರಿಹಾರಗೊಂಡಿತ್ತು.

ಶಾಂತಿನಿಕೇತನದಿಂದ ಬಂದಿದ್ದ ಫೀನಿಕ್ಸ್ ತಂಡಕ್ಕೆ ಗಾಂಧೀಜಿಯು ಈ ಕೆಲಸವನ್ನು ಒಪ್ಪಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯ ಜತೆಗೆ ಪಳಗಿದ್ದ ಮಗನ್‌ಲಾಲನೇ ಎಲ್ಲದರ ಉಸ್ತುವಾರಿ ನೋಡಿಕೊಳ್ಳಲು ಸಿದ್ಧನಾದ. ತಮ್ಮನ್ನು ಕಾಣಲು ಬರುವವರಿಗೆ 'ಧರ್ಮದರ್ಶನ' ನೀಡಲು ಕುಳಿತುಕೊಳ್ಳುವುದಷ್ಟೇ ಗಾಂಧೀಜಿಯ ಮುಖ್ಯ ದಿನಚರಿಯಯಿತು.

ದಿನಗಳೆದಂತೆ ಗಾಂಧೀಜಿಗೆ ಇಲ್ಲಿಯೂ ಅನುಮಾನಗಳು ಕಾಡತೊಡಗಿದವು. ಜನನಾಯಕರಾಗಲು ಜನಪ್ರಿಯತೆ ಬೇಕೆಂಬುದೇನೋ ನಿಜ. ಆದರೆ, ಜನಪ್ರಿಯತೆಯ ಬಗ್ಗೆ ಸಂತಸ ಪಡುವ ಅಧಿಕಾರ ನಾಯಕನಿಗೆ ಇರಬಾರದು. ತಾವು ತಮ್ಮ ಜನಪ್ರಿಯತೆಯಿಂದ ಸಂತೋಷಪಡುತ್ತಿದ್ದೇನೆಯೇ ಎಂಬ ಸಂಶಯ ಮೂಡಿತು. ಧರ್ಮದರ್ಶನದ ಕಾರ್ಯಕ್ರಮ ನಿಲ್ಲಿಸಿಬಿಟ್ಟರು. ಹೊರಗೆ ಹೋಗಿ ಅಪರಿಚಿತರ ನಡುವೆ ಬೆರೆಯತೊಡಗಿದರು. ಕುಂಭಮೇಳದ ಹದಿನೇಳು ಲಕ್ಷ ಜನರ ನಡುವೆ ಗಾಂಧೀಜಿಯೂ ಸೇರಿಹೋದರು.

ಗಾಂಧೀಜಿ ಹರಿದ್ವಾರಕ್ಕೆ ಯಾತ್ರಿಕನಾಗಿ ಹೋಗಿದ್ದಿರಲಿಲ್ಲ. ಧರ್ಮವನ್ನು ಹುಡುಕುತ್ತಾ ಯಾತ್ರಾ ಸ್ಥಳಗಳಿಗೆ ಹೋಗುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಕುಂಭಮೇಳದಲ್ಲಿ ಸಾಧುಗಳಿದ್ದರು. ಸನ್ಯಾಸಿಗಳಿದ್ದರು. ಗೃಹಸ್ಥರಿದ್ದರು. ಮದುವಣಿಗರಿದ್ದರು. ವಿಧವೆಯರಿದ್ದರು, ಮಕ್ಕಳಿದ್ದರು. ಕಳ್ಳರಿದ್ದರು. ಸುಳ್ಳರಿದ್ದರು. ಯಾತ್ರಿಕರಿದ್ದರು. ಪ್ರವಾಸಿಗರಿದ್ದರು. ಗುಂಪು ಗದ್ದಲಗಳಲ್ಲಿಯೇ ಸಂತಸ ಕಾಣಲು ಬಂದ ಸುಖಜೀವಿಗಳಿದ್ದರು.

ಅಲ್ಲಿ ಕೊಳಕು ಇತ್ತು, ಆಲಸ್ಯ ಇತ್ತು, ಬೂಟಾಟಿಕೆ ಇತ್ತು, ಕುರುಡು ನಂಬಿಕೆ ಇತ್ತು. ಸತ್ತ

ಮಗುವಿನ ಹೆಣದ ಮೇಲೆ ಬಟ್ಟೆ ಹಾಸಿ, ಶವಸಂಸ್ಕಾರಕ್ಕೆ ಸಹಾಯಮಾಡಿ ಎಂದು ಕಣ್ಣೀರಿಟ್ಟು ಗೋಗರೆಯುವ ನಿಜವಾದ ತಾಯಿ ಇದ್ದಳು. ಕರುವಿನ ಕಾಲು ಕತ್ತರಿಸಿ ಅದನ್ನು ಬೇರೊಂದು ಜೀವಂತ ದನದ ಕಾಲುಗಳ ನಡುವೆ ಅಂಟಿಸಿ, ಐದು ಕಾಲಿನ ಪವಿತ್ರ ಗೋವೆಂದು ಪ್ರದರ್ಶಿಸಿ ಮುಗ್ಧ ಭಾವುಕರ ಹಣ ದೋಚುವ ಸುಲಿಗೆಕೋರರೂ ಇದ್ದರು.

ಈ ಎಲ್ಲರನ್ನೂ ಮೀರಿಸುವಂತೆ ಅಲ್ಲಿ ಲಕ್ಷೋಪಲಕ್ಷ ಪವಿತ್ರಾತ್ಮಗಳಿದ್ದವು. ಇಡಿಯ ಹಿಂದೂದೇಶವೇ ಅಲ್ಲಿ ಇತ್ತು.

ಗಾಂಧೀಜಿಗೆ ಅಂದು ರಾತ್ರಿಯೂ ನಿದ್ರೆಯಿಲ್ಲ. ಹರಿದ್ವಾರಕ್ಕೆ ಬರುವುದೇ ಪಾಪದ ಕಾರ್ಯವಾಗಿದ್ದಲ್ಲಿ, ಅದನ್ನು ತಾವು ಬಹಿರಂಗವಾಗಿಯೇ ವಿರೋಧಿಸಬೇಕು. ಅಥವಾ, ಪುಣ್ಯದ ಕಾರ್ಯವಾಗಿದ್ದಲ್ಲಿ, ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಪಾಪದ ಕೃತ್ಯಗಳನ್ನು ಕಣ್ಣಾರೆ ಕಂಡಿರುವ ತಾವು, ಪ್ರಾಯಶ್ಚಿತ್ತವಾಗಿ ಏನಾದರೊಂದನ್ನು ತ್ಯಾಗ ಮಾಡಿ ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು. ಯಾವುದನ್ನು ತ್ಯಾಗ ಮಾಡಲೀ?

ರಂಗೂನಿನಲ್ಲಿ ತಮ್ಮನ್ನು ಸತ್ಕರಿಸಿದ ಮನೆಯ ಹೆಂಗಸರಿಗೆ ತಾನು ಕೊಟ್ಟಿದ್ದ ಕಷ್ಟದ ನೆನಪಾಯಿತು. ಅದುವೇ ಸರಿ. ಇನ್ನು ಮುಂದೆ ತಮ್ಮನ್ನು ಕರೆದು ಊಟ ಹಾಕುವ ಯಾರಿಗೂ ತೊಂದರೆ ಯಾಗಬಾರದು. ಜನರ ಸೇವೆಗೆಂದು ಹೊರಟಿರುವ ನನಗೇ ಜನರು ಸೇವೆ ಮಾಡುವಂತಾಗಬಾರದು.

'ಇನ್ನು ಮುಂದೆ ತಾವೆಂದೂ ಕತ್ತಲಾದನಂತರ ಊಟ ಮಾಡುವುದಿಲ್ಲ ಮತ್ತು ದಿನಕ್ಕೆ ಐದು ಪದಾರ್ಥಗಳಿಗಿಂತ ಹೆಚ್ಚು ತಿನ್ನುವುದಿಲ್ಲ' ಎಂದು ಶಪಥ ಹಾಕಿ, ವ್ರತ ತೊಟ್ಟರು. ಅನಂತರ ತೃಪ್ತಿಯಿಂದ ನಿದ್ರೆ ಮಾಡಿದರು. ಬೇರೆಯವರ ತಪ್ಪುಗಳಿಗಾಗಿ ಪ್ರಾಯಶ್ಚಿತ್ತ ರೂಪದಲ್ಲಿ ವ್ರತ ತೊಟ್ಟು ದೇಹದಂಡನೆ ಮಾಡಿಕೊಳ್ಳುವುದು ಗಾಂಧೀಜಿಯವರಿಗೆ ಹೊಸ ವಿಷಯವೇನೂ ಅಲ್ಲ. ಇಂದು ಇನ್ನೊಂದು ಹೊಸ ವ್ರತ ತೊಟ್ಟರು, ಅಷ್ಟೆ.

ಮರುದಿನ, ಕುಂಭಮೇಳದ ಗೌಜಿ ಗದ್ದಲಗಳಿಂದ ಸ್ವಲ್ಪ ದೂರದಲ್ಲಿದ್ದ ಶ್ರದ್ಧಾನಂದ ಸ್ವಾಮಿಯವರ ಗುರುಕುಲಕ್ಕೆ ಹೋದರು. ಶ್ರದ್ಧಾನಂದ ಸ್ವಾಮಿಯವರು ಅತ್ಯಂತ ಪ್ರೀತಿಯಿಂದ ಗಾಂಧೀಜಿಯನ್ನು ಬರಮಾಡಿಕೊಂಡರು. ಗುರುಕುಲದಲ್ಲಿ ಕೈಗಾರಿಕಾ ಶಿಕ್ಷಣವನ್ನು ಪ್ರಾರಂಭಿಸುವ ಬಗ್ಗೆ ಮಾತುಕತೆ ನಡೆಸುವ ಸಂದರ್ಭದಲ್ಲಿ, ಗಾಂಧೀಜಿಗೆ, ಆಚಾರ್ಯ ರಾಮದೇವಜೀಯ ನಿಕಟ ಪರಿಚಯವೂ ಆಯಿತು. ಕೆಲವು ದಿನಗಳ ಬಳಿಕ ಅಲ್ಲಿಂದ ಬೀಳ್ಕೊಂಡ ಗಾಂಧೀಜಿ, ಋಷಿಕೇಶದ ಬಳಿ ಗಂಗಾನದಿಗೆ ಅಡ್ಡವಾಗಿ ನಿರ್ಮಿಸಲಾಗಿದ್ದ ಕಬ್ಬಿಣದ ತೂಗು ಸೇತುವೆ 'ಲಕ್ಷ್ಮಣ ಝೂಲಾ' ವನ್ನು ನೋಡಲೆಂದು ಕಾಲ್ನಡಿಗೆಯಲ್ಲಿಯೇ ತೆರಳಿದರು.

ಭಗವಂತನು ದಾರಿಯುದ್ದಕ್ಕೂ ನಿರ್ಮಿಸಿದ್ದ ಪ್ರಕೃತಿ ಸೌಂದರ್ಯಕ್ಕೆ ಸರಿಸಾಟಿಯಾಗಿ, ಅದೇ ಭಗವಂತನ ಮಕ್ಕಳು ಅದೇ ದಾರಿಯುದ್ದಕ್ಕೂ ಪ್ರಕೃತಿಯ ಕರೆಗೆ ಓಗೊಡುತ್ತಾ ಕುಳಿತುಕೊಂಡಿರುತ್ತಿದ್ದ

ದೃಶ್ಯವನ್ನು ಕಂಡು ಗಾಂಧೀಜಿ ಬಹಳವಾಗಿ ಮರುಗಿದರು. ಗಂಡಸರು, ಹೆಂಗಸರೆಂಬ ಭೇದವಿಲ್ಲದೆ ರಸ್ತೆಯಂಚುಗಳಲ್ಲಿ ಕುಳಿತು ದೇಹಬಾಧೆಯನ್ನು ತೀರಿಸಿಕೊಳ್ಳುತ್ತಿರುವವರಿಗೆ ಅಕ್ಕಪಕ್ಕದಲ್ಲಿ ಓಡಾಡುತ್ತಿರುವ ಜನರ ಪರಿವೆಯಿದ್ದಿರಲಿಲ್ಲ; ತೊಳೆದುಕೊಳ್ಳುವಾಗ ಗಂಗಾನದಿ ಯಾವುದು, ಕೊಚ್ಚೆ ಗುಂಡಿ ಯಾವುದು ಎಂಬುದನ್ನು ನೋಡುತ್ತಿರಲಿಲ್ಲ. ಭಾರತದಲ್ಲಿ ನಿಜವಾದ ಸುಧಾರಣೆ ಮಾಡಬೇಕಾದರೆ, ಅದನ್ನು ಕಕ್ಕಸುಗುಂಡಿಯಿಂದಲೇ ಆರಂಭಿಸಬೇಕು ಎಂಬ ಮಾತು ಮತ್ತೊಮ್ಮೆ ನೆನಪಾಯಿತು.

ಹೃಷಿಕೇಶದಲ್ಲಿ ಉಳಿದುಕೊಂಡಿದ್ದ ದಿನಗಳಲ್ಲಿ ಗಾಂಧೀಜಿಯು, ಹಲವಾರು ಧಾರ್ಮಿಕ ನಾಯಕ ರೊಡನೆ ಭಾರತೀಯ ಸಂಸ್ಕೃತಿಯ ಬಗ್ಗೆ ಚರ್ಚೆ ನಡೆಸಿದರು. ಧಾರ್ಮಿಕ ವಿಷಯಗಳಲ್ಲಿ ಗಾಂಧೀಜಿಗಿರುವ ಆಳವಾದ ಶ್ರದ್ಧೆಯನ್ನು ಕಂಡು ಅವರಿಗೆಲ್ಲರಿಗೂ ಬಹಳ ಸಂತೋಷವಾಗಿತ್ತು. ಆದರೆ, ಆ ಸಂತೋಷ ಕರಗುವಂತಹ ಘಟನೆಯೊಂದು ಬಲು ಬೇಗನೆ ನಡೆದು ಹೋಯಿತು.

ಒಂದು ಮುಂಜಾನೆಯ ಹೊತ್ತು ಗಾಂಧೀಜಿ ಗಂಗಾನದಿಯಲ್ಲಿ ಸ್ನಾನ ಮುಗಿಸಿಕೊಂಡು ಮರಳುತ್ತಿದ್ದರು. ಅವರು ಅಂಗಿ ತೊಟ್ಟಿರಲಿಲ್ಲ. ತಲೆ ಬರಿದಾಗಿತ್ತು. ಗಾಂಧೀಜಿಯ ತಲೆಯಲ್ಲಿ ಜುಟ್ಟು ಇರಲಿಲ್ಲ. ಭುಜದಲ್ಲಿ ಜನಿವಾರ ಇರಲಿಲ್ಲ!. ಅದನ್ನು ಕಂಡ ಜನರೆಲ್ಲ ದಂಗಾಗಿಬಿಟ್ಟಿದ್ದರು!. ಮಾತುಕತೆ ಮತ್ತು ಚರ್ಚೆಯ ಸಂದರ್ಭಗಳಲ್ಲಿ, ಹಿಂದೂ ಧಾರ್ಮಿಕ ವಿಷಯಗಳ ಬಗ್ಗೆ ಆಳವಾದ ಶ್ರದ್ಧೆಯನ್ನು ಪ್ರಕಟಿಸುತ್ತಿದ್ದ ಗಾಂಧೀಜಿಯ ದೇಹದಲ್ಲಿ, ಹಿಂದೂ ಆಸ್ತಿಕನೊಬ್ಬನು ಪ್ರದರ್ಶಿಸಲೇ ಬೇಕಾಗಿದ್ದ ಯಾವುದೇ ಗುರುತುಗಳಿಲ್ಲದಿರುವುದನ್ನು ಕಣ್ಣಾರೆ ಕಂಡರೂ ನಂಬಲು ಕಷ್ಟವಾಗಿತ್ತು!.

ಗಾಂಧೀಜಿ ಹುಟ್ಟಿದ್ದ ಕಾಥೇವಾಡದ ಬನಿಯಾ ಕುಟುಂಬದಲ್ಲಿ ಜನಿವಾರ ಧರಿಸುವ ಸಂಪ್ರದಾಯ ವಿದ್ದಿರಲಿಲ್ಲ. ಆದರೆ ಪಕ್ಕದ ಬೀದಿಯಲ್ಲಿದ್ದ ಬ್ರಾಹ್ಮಣರ ಮನೆಯ ಹುಡುಗರು, ಜನಿವಾರ ಹಾಕಿಕೊಂಡು ಅದರಲ್ಲಿ ಬೀಗದ ಕೈಗೊಂಚಲುಗಳನ್ನು ಕಟ್ಟಿಕೊಂಡಿರುವುದನ್ನು ಕಂಡಾಗ, ಬಾಲಕ ಮೋಹನದಾಸ ನಿಗೂ ಜನಿವಾರ ಹಾಕಿಕೊಂಡು ಬೀಗದ ಕೈ ತೂಗಾಡಿಸುವ ಆಸೆಯಾಗಿತ್ತು. ಕೆಲವೇ ದಿನಗಳೊಳಗೆ, ಮೋಹನದಾಸನ ಆಸೆಯು ಸುಲಭದಲ್ಲಿ ಈಡೇರಿತ್ತು. ಯಾಕೆಂದರೆ, ಅದೇ ದಿನಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಜಾತಿಯವರೆಲ್ಲರೂ ಜನಿವಾರ ಧರಿಸಿರಬೇಕೆಂಬ ಪ್ರಚಾರವು ಆರಂಭವಾಗಿತ್ತು. ಮೋಹನದಾಸನಿಗೂ ಉಚಿತವಾಗಿ ಜನಿವಾರವೊಂದು ಸಿಕ್ಕಿತ್ತು. ಜನಿವಾರದಲ್ಲಿ ಬೀಗದ ಕೈ ತೂಗಾಡಿಸಿಕೊಂಡು ಸಂತೋಷಪಟ್ಟದ್ದೂ ಆಯಿತು. ಮುಂದೆ, ಅದು ಹಳೆಯದಾಗಿ ಕಿತ್ತು ಹೋದ ನಂತರ ಬೇರೆ ಜನಿವಾರ ಧರಿಸಿರಲಿಲ್ಲ, ಅಷ್ಟೆ.

ಜನಿವಾರ ಧರಿಸಿರದ ತಮ್ಮ ಬಗ್ಗೆ ಆಕ್ಷೇಪಿಸಿದವರನ್ನು, 'ಆತ್ಮೋದ್ಧಾರದ ಪ್ರತೀಕವಾಗಿರುವ ಪವಿತ್ರವಾದ ಜನಿವಾರವನ್ನು ಜಾತಿಯೊಂದರ ಸಮವಸ್ತ್ರವಾಗಿ ಪ್ರದರ್ಶಿಸುವುದು ನನಗೆ ಇಷ್ಟವಿಲ್ಲ.' ಎಂದು ಸ್ಪಷ್ಟವಾಗಿ ಹೇಳಿ ಸುಮ್ಮನಾಗಿಸಿದ್ದರು.

# ಸತ್ಯಾಗ್ರಹ ಆಶ್ರಮ

ಗಾಂಧೀಜಿ ಹೃಷಿಕೇಶದಿಂದ ಮರಳುತ್ತಿರುವಾಗಲೇ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಿ ಬಿಟ್ಟಿದ್ದರು. ತಾವಿನ್ನು ಯಾವುದೇ ಹೊಸ ಕೆಲಸಕ್ಕೆ ಕೈ ಹಚ್ಚುವ ಮೊದಲು, ಫೀನಿಕ್ಸ್ ಕೃಷಿಕ್ಷೇತ್ರದಿಂದ ಬಂದಿರುವ ಸತ್ಯಾಗ್ರಹಿಗಳಿಗೆ ಅಹಮದಾಬಾದಿನಲ್ಲಿ ಆಶ್ರಮವೊಂದನ್ನು ನಿರ್ಮಿಸಿ ಕೊಡುವ ಕೆಲಸ ಮಾಡಬೇಕು. ಉಳಿದದ್ದೆಲ್ಲವೂ ಆ ಬಳಿಕವೇ.

ಗಾಂಧೀಜಿ ಒಮ್ಮೆ ನಿರ್ಧರಿಸಿದರೆಂದರೆ ಮುಗಿಯಿತು. ಪಾದರಸದಂತೆ ಕೆಲಸ ಮಾಡುವವರಲ್ಲವೆ?. ಕೆಲವೇ ದಿನಗಳೊಳಗೆ, ಬ್ಯಾರಿಸ್ಟರ್ ಜೀವನ ಲಾಲ ದೇಸಾಯಿಯವರ 'ಕೊಚರಾಬ್' ಬಂಗಲೆಯಲ್ಲಿ, ಹದಿಮೂರು ಮಂದಿ ತಮಿಳರನ್ನು ಒಳಗೊಂಡಂತೆ, ದೇಶದ ನಾಲ್ಕೂ ಮೂಲೆಗಳಿಂದ ಬಂದಿದ್ದ ಇಪ್ಪತ್ತೈದು ಮಂದಿಗಳ ತುಂಬು ಕುಟುಂಬವು 'ಸತ್ಯಾಗ್ರಹ ಆಶ್ರಮ' ದಲ್ಲಿ ಹೊಸ ಬದುಕು ಆರಂಭಿಸಿತು. ಒಂದೇ ಒಲೆ. ಒಂದೇ ಅಡುಗೆ. ಒಂದೇ ಗುರಿ. ವೆಚ್ಚದ ಹಣಕ್ಕೆ ತೊಂದರೆಯಿಲ್ಲ; ದಾನಿಗಳಿದ್ದಾರೆ. ಆಡಳಿತದ ವ್ಯವಹಾರ ನೋಡಿಕೊಳ್ಳಲು ಮಗನ್‌ಲಾಲ ಇದ್ದಾನೆ. ಎಲ್ಲವೂ ಸಲೀಸಾಗಿ ಸಾಗುತ್ತಿದೆ. ಗಾಂಧೀಜಿಗೆ ನಿಶ್ಚಿಂತೆಯಾಗಿತ್ತು.

ಒಂದು ದಿನ ಥಕ್ಕರ್ ಬಾಬಾರ ಪತ್ರವೊಂದನ್ನು ಹಿಡಿದುಕೊಂಡು ಬಂದಿದ್ದ ಕುಟುಂಬವೊಂದು, 'ಸತ್ಯಾಗ್ರಹ ಆಶ್ರಮ'ದ ಬಾಗಿಲ ಬಳಿ ನಿಂತು 'ನಮ್ಮನ್ನೂ ನಿಮ್ಮ ಜತೆಗೆ ಸೇರಿಸಿಕೊಳ್ಳಿ' ಎಂದು ಪ್ರಾರ್ಥಿಸಿತು. ಹೊಸದಾಗಿ ಬಂದಿದ್ದವರು ಮೂವರು; ಮುಂಬಯಿಯಲ್ಲಿ ಶಿಕ್ಷಕರಾಗಿದ್ದ ದುದಾಭಾಯಿ, ಅವರ ಹೆಂಡತಿ ದಾನೀಬೆಹನ್ ಮತ್ತು ಅವರ ಪುಟ್ಟ ಮಗು ಲಕ್ಷ್ಮಿ. ಆದರೆ, ಅವರು ಜಾತಿಯಲ್ಲಿ ಅಸ್ಪೃಶ್ಯರೆಂದು ಪರಿಗಣಿತರಾಗಿದ್ದವರು.

ಗಾಂಧೀಜಿಯ ನಿಲುವುಗಳಿಗೀಗ ಅಗ್ನಿಪರೀಕ್ಷೆ. ಆಶ್ರಮವಾಸಿಗಳದ್ದೇನೂ ಅಂತಹ ತಕರಾರು ಇದ್ದಿರಲಿಲ್ಲ. ಅವರೆಲ್ಲರೂ ಆಶ್ರಮದ ನಿಯಮಗಳಿಗೆ ಬದ್ಧರಾಗಿದ್ದವರೇ. ಆದರೆ ತಕರಾರು ಹೊರಗಿನಿಂದ ಆರಂಭವಾಗಿತ್ತು. ತಾವು ಬಾಲ್ಯದಲ್ಲಿ ನೋಡಿದ್ದ ನಾಟಕದಲ್ಲಿ ಹರಿಶ್ಚಂದ್ರನನ್ನು ಪರೀಕ್ಷಿಸಲು ಒಬ್ಬ ವಿಶ್ವಾಮಿತ್ರನಿದ್ದ. ಈಗ ಆಶ್ರಮಕ್ಕೆ ಹಣದ ಸಹಾಯ ಮಾಡುತ್ತಿದ್ದ ಎಲ್ಲ ಮಿತ್ರರೂ ಒಮ್ಮಿಂದೊಮ್ಮೆಗೇ ವಿಶ್ವಾಮಿತ್ರರಾಗಿಬಿಟ್ಟಿದ್ದರು. ನಕ್ಷತ್ರಿಕನೂ ಇದ್ದನು.

ಆಶ್ರಮದ ಬಾವಿಯ ಪಕ್ಕದಲ್ಲೇ, ಆಶ್ರಮಕ್ಕಾಗಿ ಬಂಗಲೆಯನ್ನು ಬಾಡಿಗೆಗೆ ಕೊಟ್ಟಿದ್ದ ಯಜಮಾನನ ಮನೆಯೂ ಇತ್ತು. ಯಜಮಾನನ ಮನೆಗೆ ನೀರು ಎತ್ತಿ ಒಯ್ಯುವ ಆಳಿಗೆ, ಅಸ್ಪೃಶ್ಯನಾಗಿದ್ದ ದುದಾಭಾಯಿ ಅದೇ ಬಾವಿಯಿಂದ ನೀರೆತ್ತುವುದನ್ನು ನೋಡಿ ಸಹಿಸಲು ಸಾಧ್ಯವಾಗಲಿಲ್ಲ. ತನಗೆ ಗೊತ್ತಿರುವ ಎಲ್ಲ ಬೈಗುಳವನ್ನೂ ಪ್ರಯೋಗಿಸಿ ದುದಾಭಾಯಿಗೆ ಅವಮಾನ ಮಾಡತೊಡಗಿದ. ದುದಾಭಾಯಿ ಮಾತ್ರ ತುಟಿ ಎರಡು ಮಾಡಲಿಲ್ಲ. ಆ ಆಳಿಗೆ ಅಚ್ಚರಿಯಾಯಿತು. ಮನುಷ್ಯರಲ್ಲಿ ಇಷ್ಟೊಂದು ತಾಳ್ಮೆಯಿರುವ ಜಾತಿಯವರೂ ಇರುತ್ತಾರೋ ಎಂಬ ಯೋಚನೆ ಮೂಡಿತು. ತನ್ನ ಬಗ್ಗೆಯೇ ನಾಚಿಕೆಯೆನ್ನಿಸಿತು. ಸುಮ್ಮನಾಗಿಬಿಟ್ಟ.

ನಕ್ಷತ್ರಿಕನೇನೋ ಸುಮ್ಮನಾಗಿಬಿಟ್ಟಿದ್ದ. ಆದರೆ, ಆಶ್ರಮಕ್ಕೆ ದಾನ ನೀಡುತಿದ್ದ ವಿಶ್ವಾಮಿತ್ರರು ಮಾತ್ರ ಸುಮ್ಮನಿರಲು ಸಿದ್ಧರಿರಲಿಲ್ಲ. ಹಣದ ನೆರವು ನಿಲ್ಲಿಸುವುದರ ಜತೆಗೆ ಅಶ್ರಮವಾಸಿಗಳಿಗೆಲ್ಲ 'ಸಾಮಾಜಿಕ ಬಹಿಷ್ಕಾರ' ಹಾಕುವ ಮಾತುಗಳೂ ಕೇಳಿಸತೊಡಗಿದವು. ಆಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮಗನ್‌ಲಾಲ ಒಂದು ದಿನ ನಗುತ್ತಾ ಹೇಳಿದ್ದ, 'ಬಾಪೂ, ಮುಂದಿನ ತಿಂಗಳಿನಿಂದ ನಾವೆಲ್ಲ ಆಹಾರವಿಲ್ಲದೆ ಉಪವಾಸ ಸತ್ಯಾಗ್ರಹ ಮಾಡಬೇಕಾಗುತ್ತದೆ. ಸತ್ಯಾಗ್ರಹಕ್ಕೆ ಒಂದು ಕಾರಣವನ್ನು ಬೇಗನೆ ಹುಡುಕಿ ಹೇಳಿ.'

ಗಾಂಧೀಜಿಗೆ ಆ ರಾತ್ರಿಯೂ ನಿದ್ರೆ ಬರಲಿಲ್ಲ. ದಾನಿಗಳ ಸಿಟ್ಟಿಗೆ ಅವರದೇ ಆದ ಕಾರಣಗಳಿರಬಹುದು. ಆ ಕಾರಣಗಳು ತಮಗೆ ತಪ್ಪಾಗಿ ಕಾಣಿಸಿದ ಕಾರಣಕ್ಕೇ, ಅವರಿಗೂ ತಪ್ಪಾಗಿ ಕಾಣಬೇಕೆಂದು ತಾವು ಬಯಸುವುದೂ ತಪ್ಪಾಗುತ್ತದೆ. ಸುಧಾರಣೆಗೆ ಮನಸ್ಸು ಮಾಡಿರುವ ಅವರೆಲ್ಲ ಅದೇ ಸುಧಾರಣೆಗೆ ಪೂರ್ತಿಯಾಗಿ ಸಿದ್ಧರಾಗಿಲ್ಲದೇ ಇರುವುದೇ ಸಧ್ಯದ ಸಮಸ್ಯೆಗೆ ಕಾರಣ.

ತಮ್ಮ ಅಮ್ಮ ಬದುಕಿದ್ದರೂ ಹೀಗೇ ಮಾಡುತ್ತಿದ್ದರೇನೋ. ತಾವು ಸಣ್ಣವರಿದ್ದಾಗ ಮನೆ ಹೊರಗಿನ ಕೆಲಸದಾಳೊಬ್ಬನ ಜತೆಗೆ ಮುಟ್ಟಿ ಆಟವಾಡಿದ ಕಾರಣಕ್ಕೇ, ಅಮ್ಮ ಬೈದು ಎಳೆದುಕೊಂಡು ಹೋಗಿದ್ದು ಅವರಿಗೆ ಇನ್ನೂ ನೆನಪಿನಲ್ಲಿದೆ. ಅಂದ ಮೇಲೆ ತಮಗೆ ಯಾರೊಬ್ಬರ ಮೇಲೂ ಕೋಪಗೊಳ್ಳುವ ಅಧಿಕಾರವಿಲ್ಲ. ಅದಲ್ಲದೆ, ಸತ್ಯಾಗ್ರಹಿಯಾದವನು ತನ್ನ ವಿರೋಧಿಯ ಮೇಲೂ ಕೋಪಗೊಳ್ಳಬಾರದೆಂಬ ನಿಯಮವಿದೆ.

ದಾನಿಗಳು ಹಣದ ನೆರವು ನಿಲ್ಲಿಸಿದರೆ ಹೆದರಬಾರದು. ಆಶ್ರಮವಾಸಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ ಮಾತ್ರಕ್ಕೆ ತಾವು ಸೋಲೊಪ್ಪಿಕೊಳ್ಳಬಾರದು. ಅಸ್ಪೃಶ್ಯ ಕುಟುಂಬವೊಂದು ಆಶ್ರಮಕ್ಕೆ ಸೇರಿಕೊಂಡ ಕಾರಣಕ್ಕೆ, ಆಶ್ರಮವನ್ನೇ ಬಹಿಷ್ಕರಿಸ ಬಯಸುವ ಸಮಾಜವನ್ನು ತಾವೇ ಮೊದಲು ಬಹಿಷ್ಕರಿಸಬೇಕು. ಅಸ್ಪೃಶ್ಯರ ಕೇರಿಗೇ ಆಶ್ರಮವನ್ನು ಸ್ಥಳಾಂತರಿಸಿ, ಅಲ್ಲಿ ಕೂಲಿ ಮಾಡಿ ಬದುಕಬೇಕು ಎಂದು ನಿರ್ಧರಿಸಿದರು.

ಆದರೆ ಗಾಂಧೀಜಿಗೆ, ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಅಗತ್ಯ ಬೀಳಲಿಲ್ಲ. ವಾರವೊಂದು ದಾಟುವಷ್ಟರಲ್ಲಿ ಮೋಟಾರು ಕಾರೊಂದು ಬಂದು ಆಶ್ರಮದ ಎದುರು ನಿಂತಿತು. ಗಾಂಧೀಜಿಗೆ ಕರೆ ಬಂತು. ಅವರು ಹೊರಗೆ ಬಂದರು. ಕಾರಿನ ಹಿಂದಿನ ಆಸನದಲ್ಲಿ ಅಹಮದಾಬಾದಿನ ಶ್ರೀಮಂತ **ಉದ್ಯಮಿ** ಅಂಬಾಲಾಲ ಸಾರಾಭಾಯಿ ಕುಳಿತಿದ್ದರು. ಕಾಗದದಲ್ಲಿ ಕಟ್ಟಿ ತಂದಿದ್ದ ಹದಿಮೂರು ಸಾವಿರ ರೂಪಾಯಿಗಳನ್ನು ಗಾಂಧೀಜಿಯ ಕೈಯಲ್ಲಿರಿಸಿದ ಅವರು, 'ನಿಮ್ಮ ಹಳೆಯ ದೋಸ್ತನೊಬ್ಬನಿಂದ ನಿಮ್ಮ ಕಷ್ಟ ತಿಳಿಯಿತು. ಆದರೆ, ನನ್ನ ಹೆಸರನ್ನು ಯಾರಿಗೂ ಹೇಳಬೇಡಿ. ಈ ಜನರು ನನ್ನನ್ನೂ ಬಹಿಷ್ಕಾರ ಮಾಡಿಬಿಟ್ಟಾರು.' ಎಂದು ಹೇಳಿದವರೇ, ಚಾಲಕನಿಗೆ 'ಹೊರಡು ಮೆಹತಾಬ್.' ಎಂದು ಆದೇಶ ನೀಡಿದರು.

'ಮೆಹತಾಬ್!' ಗಾಂಧೀಜಿಗೆ ಗರ ಬಡಿದಂತಾಗಿತ್ತು; ಗಾಂಧೀಜಿ ಎಚ್ಚರಗೊಳ್ಳುವ ಮೊದಲೇ ಕಾರು ಹೊರಟು ಹೋಗಿತ್ತು.

ಅಂಬಾಲಾಲ ಸಾರಾಭಾಯಿಯವರ ಕೃಪೆಯಿಂದ 'ಸತ್ಯಾಗ್ರಹ ಆಶ್ರಮ' ಹೊಸ ಉತ್ಸಾಹದಿಂದ ಕೆಲಸ ಮಾಡತೊಡಗಿತು. ಆಶ್ರಮವು ಸಬರಮತಿ ನದೀತೀರಕ್ಕೆ ಸ್ಥಳಾಂತರಗೊಂಡಿತು. ವಿಸ್ತಾರವಾದ ಹೊಸ ಜಾಗದಲ್ಲಿ ಸಣ್ಣ ಸಣ್ಣ ಕುಟೀರಗಳು ನೋಡು ನೋಡುತ್ತಿದ್ದಂತೆಯೇ ಎದ್ದುನಿಂತವು.

ಆಶ್ರಮಕ್ಕೆ ಸೇರಬಯಸುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತು. ಶಾಂತಿನಿಕೇತನ ದಿಂದ ಆಚಾರ್ಯ ಕಾಕಾ ಕಾಲೇಲ್ಕರ್ ಬಂದರು. ಗುಜರಾತಿನಿಂದ ಶಂಕರಲಾಲ ಬ್ಯಾಂಕರ್, ಮಹದೇವ ದೇಸಾಯಿ, ವಿದ್ವಾಂಸ ಕಿಶೋರಿಲಾಲ ಮಶ್ರುವಾಲ ಹೀಗೆ ಒಬ್ಬೊಬ್ಬರಾಗಿ ಬಂದು ಸೇರಿದರು. ಆಶ್ರಮಕ್ಕೆ ಮೂರು ಬೊಂಬೆಮಂಗಗಳೂ ಬಂದು ಕೂತವು. ಒಂದು ಮಂಗವು, 'ಕೆಟ್ಟದ್ದನ್ನು ನೋಡದಿರಿ.' ಎಂದು ಹೇಳುವಂತೆ ತನ್ನ ಎರಡೂ ಕಣ್ಣುಗಳನ್ನು ಕೈಗಳಿಂದ ಮುಚ್ಚಿಕೊಂಡು ಕುಳಿತಿದ್ದರೆ, ಎರಡನೆಯ ಬೊಂಬೆಮಂಗವು ತನ್ನೆರಡೂ ಕಿವಿಗಳನ್ನು ಮುಚ್ಚಿಕೊಂಡು, 'ಕೆಟ್ಟದ್ದನ್ನು ಕೇಳದಿರಿ.' ಎಂದು ಸಾರುತ್ತಿತ್ತು. ಮೂರನೆಯ ಬೊಂಬೆಮಂಗವು ತನ್ನ ಕೈಗಳಿಂದ ಬಾಯಿಯನ್ನು ಮುಚ್ಚಿಕೊಂಡು 'ಕೆಟ್ಟದ್ದನ್ನು ಹೇಳದಿರಿ.' ಎಂದು ಸೂಚಿಸುತ್ತಿತ್ತು.

ಸತ್ಯ, ಅಹಿಂಸೆ, ನಿರ್ಭಯತೆ, ಸಂಯಮದ ಜೀವನ, ಸಚ್ಚಾರಿತ್ರ್ಯ, ಸರ್ವಧರ್ಮ ಸಮಭಾವ, ಶ್ರಮನಿಷ್ಠೆ, ಸ್ವದೇಶೀ ವ್ರತ, ಅಸ್ಪೃಶ್ಯತೆಯ ನಿವಾರಣೆ, ಅಸ್ವಾದ, ಅಸಂಗ್ರಹ ಹೀಗೆ ಈ ಹನ್ನೊಂದು ಬಗೆಯ ಸೂತ್ರಗಳು 'ಸತ್ಯಾಗ್ರಹ ಆಶ್ರಮ'ದ ನಿತ್ಯ ಜಪಗಳಾದವು.

ಕಟ್ಟಕಡೆಯವನಿಗೆ ಬದುಕುವ ಹಕ್ಕು ಮತ್ತು ಸೌಲಭ್ಯಗಳನ್ನು ಪಡೆಯಲು ಅಹಿಂಸೆಯೊಂದೇ ಬ್ರಹ್ಮಾಸ್ತ್ರ. ಬ್ರಿಟಿಷರ ಗುಲಾಮತನದಿಂದ ಮುಕ್ತಿ ಪಡೆಯಬೇಕಾದರೆ ಮೊದಲು ವಿದೇಶೀಯರ ಯಂತ್ರಗಳಿಂದ ಮುಕ್ತಿ ಪಡೆಯಬೇಕು. ಗ್ರಾಮೋದ್ಯೋಗವೊಂದೇ ಮಂತ್ರವಾಗಬೇಕು. ಆಶ್ರಮವಾಸಿಗಳೆಲ್ಲರೂ ಕಡ್ಡಾಯವಾಗಿ ಭಾರತದ ಗಿರಣಿಗಳಲ್ಲಿ ತಯಾರಾದ ನೂಲಿನಿಂದ ತಯಾರಾದ ಕೈಮಗ್ಗದ ವಸ್ತ್ರಗಳನ್ನೇ ಧರಿಸಬೇಕು. ದೇಶೀಯ ಕೈಮಗ್ಗದ ಅಭಿವೃದ್ಧಿಯಾಗಬೇಕು. ಹೀಗೆ, ಗ್ರಾಮಾಭಿಮುಖವಾದ ಸರ್ವೋದಯ ಸಮಾಜ ರಚನೆಯ ಮೊದಲ ಪಾಠಗಳು 'ಸತ್ಯಾಗ್ರಹ ಆಶ್ರಮ' ದಲ್ಲಿ ಪ್ರಾರಂಭಗೊಂಡವು.

ಗಾಂಧೀಜಿಗೆ ತಮ್ಮ ದೇಶೀಯ ವಸ್ತ್ರದ ಚಳುವಳಿಯಲ್ಲಿ 'ಚರಕಾ'ವನ್ನು ಸ್ವಾವಲಂಬನೆಯ ಸಂಕೇತವನ್ನಾಗಿ ಬಳಸಿಕೊಳ್ಳಬೇಕು ಎಂಬ ಆಸೆಯಿತ್ತು. ಆದರೆ ಅವರು ಚರಕಾದ ಬಗ್ಗೆ ಕೇಳಿದ್ದರೇ ಹೊರತು ಅದನ್ನು ಕಣ್ಣಾರೆ ಕಂಡಿರಲಿಲ್ಲ. ಭಾರತೀಯ ಗಿರಣಿಗಳಲ್ಲಿ ತಯಾರಾದ ನೂಲಿನಿಂದ ಕೈಮಗ್ಗದಲ್ಲಿ ಬಟ್ಟೆ ತಯಾರಿಸಿ ತೊಟ್ಟುಕೊಳ್ಳುವುದೇನೋ ಸರಿ. ಆದರೆ ಅದು ಅಲ್ಲಿಗೇ ನಿಲ್ಲಬಾರದು. ಆಶ್ರಮವಾಸಿಗಳು ತಮಗೆ ಅಗತ್ಯವಾದ ವಸ್ತ್ರಗಳಿಗೆ ಬೇಕಾದಷ್ಟು ನೂಲನ್ನು ಚರಕಾದಲ್ಲಿ ಹಿಂಜಿ ತಯಾರಿಸಿಕೊಳ್ಳಬೇಕು.

ಆದರೆ ಹತ್ತಿಯನ್ನು ಹಿಂಜಿ ನೂಲು ತೆಗೆಯಬಲ್ಲ ಚರಕಾ ಎಲ್ಲಿದೆ? ಚರಕಾ ಸಿಕ್ಕಿದರೂ ಅದರಿಂದ ನೂಲು ತೆಗೆಯುವ ಕಲೆ ಗೊತ್ತಿರುವರು ಯಾರಿದ್ದಾರೇ?

ಗಾಂಧೀಜಿ ಹೋದಲ್ಲಿ, ಬಂದಲ್ಲಿ ಸಿಕ್ಕ ಸಿಕ್ಕವರಲ್ಲಿ ಚರಕಾದ ಬಗ್ಗೆ ವಿಚಾರಿಸತೊಡಗಿದರು. ಆದರೆ, ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಕೊನೆಗೆ ಬರೋಡಾದ ಶ್ರೀಮತಿ ಗಂಗಾಬೆಹನ್ ಮುಜುಮ್ದಾರ ಎಂಬ ಮಹಿಳೆ ಗಾಂಧೀಜಿಯ ನೆರವಿಗೆ ಬಂದರು. ಬರೋಡಾದ ವಿಜಾಪುರ ಎಂಬ ಹಳ್ಳಿಯಲ್ಲಿ ಹತ್ತಿಯಿಂದ ನೂಲನ್ನು ಹಿಂಜಿ ತೆಗೆಯುವ ರಾಟೆಗಳಿವೆ ಎಂಬುದು ಆಕೆಗೆ ಗೊತ್ತಿತ್ತು. ಆದರೆ, ಬ್ರಿಟಿಷರು ಭಾರತದ ರೈತರು ಬೆಳೆದ ಹತ್ತಿಯನ್ನು ಬ್ರಿಟನ್ನಿಗೆ ಸಾಗಿಸಿ, ಅಲ್ಲಿ ತಮ್ಮ ಗಿರಣಿಗಳಲ್ಲಿ ಬಟ್ಟೆ ತಯಾರಿಸಿ ಭಾರತಕ್ಕೆ ತಂದು ಮಾರಾಟ ಮಾಡಲು ಆರಂಭಿಸಿದ ಬಳಿಕ, ಚರಕಾದಲ್ಲಿ ನೂಲುವ ನೇಕಾರರಿಗೆ ಕೆಲಸವಿಲ್ಲದಂತಾಗಿತ್ತು. ಹಾಗಾಗಿ ರಾಟೆಗಳೆಲ್ಲವೂ ಅಟ್ಟ ಸೇರಿದ್ದವು.

ಗಾಂಧೀಜಿ, ಬರೋಡಾದ ವಿಜಾಪುರ ಗ್ರಾಮದಲ್ಲಿರುವ ಎಲ್ಲ ಚರಕಾಗಳನ್ನೂ ಅಟ್ಟದಿಂದ ಭೂಮಿಗಿಳಿಸಿದರು. ಅಲ್ಲಿಯ ನೇಕಾರರಿಗೆ 'ಹಿಂಜಿದ ಹತ್ತಿ'ಯನ್ನು ತಮ್ಮ ಗೆಳೆಯ ಉಮರ ಸೋಬಾನಿಯವರ ಗಿರಣಿಯಿಂದ ತರಿಸಿ ರವಾನಿಸಿದರು. ವಿಜಾಪುರದಲ್ಲಿ ಚರಕಾ ತಿರುಗ ಲಾರಂಭಿಸಿತು. ಅಲ್ಲಿಯ ನೇಕಾರರು ನೂತ ನೂಲು, 'ಸತ್ಯಾಗ್ರಹ ಅಶ್ರಮದ' ಕೈಮಗ್ಗದ ರಾಟೆಗಳಲ್ಲಿ ಬಟ್ಟೆಯಾಯಿತು. ಆದರೆ, ಗಾಂಧೀಜಿಗೆ ಮತ್ತೆ ಅನುಮಾನ ಆರಂಭವಾಯಿತು.

ಗಿರಣಿಯಿಂದ, ಅದು ದೇಸೀಯ ಗಿರಣಿಯೇ ಅಗಿದ್ದರೂ, ಅದರಲ್ಲಿ ಹಿಂಜಿದ ಹತ್ತಿಯನ್ನು ನೇಕಾರರಿಗೆ ಒದಗಿಸಿದರೆ ಸ್ವಾವಲಂಬನೆಯನ್ನು ಪೂರ್ತಿಯಾಗಿ ಸಾಧಿಸಿದಂತಾಗುವುದಿಲ್ಲ. ಗಿರಣಿಯಲ್ಲಿ ಯಂತ್ರದ ಮೂಲಕ ಹಿಂಜಿದ ಹತ್ತಿಯನ್ನು ಪಡೆಯುವುದು ಮತ್ತು ಗಿರಣಿಯಲ್ಲಿ ತಯಾರಾದ ನೂಲನ್ನು ಪಡೆಯುವುದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ರೈತನೊಬ್ಬ ಹೊಲದಲ್ಲಿ ಬೆಳೆದ ಹತ್ತಿಯನ್ನು ಕೈಗಳಲ್ಲೇ ಎಕ್ಕಿ ಹಿಂಜಿ ಮಾಡಲು ಸಾಧ್ಯವಿರುವಾಗ, ಯಂತ್ರದ ಸಹಾಯದಿಂದ ಹಿಂಜುವುದು ಸ್ವಾವಲಂಬನೆಯಾಗದು. ಆದ್ದರಿಂದ ಹತ್ತಿಯನ್ನು ಎಕ್ಕಿ ಹಿಂಜುವುದರಿಂದಾರಂಭಿಸಿ, ಚರಕಾದಲ್ಲಿ ನೂಲು ತೆಗೆದು ರಾಟೆಯಲ್ಲಿ ಬಟ್ಟೆ ತಯಾರಿಸುವ ಎಲ್ಲ ಕೆಲಸಗಳನ್ನೂ ಯಾವುದೇ ಯಂತ್ರದ ಸಹಾಯವಿಲ್ಲದೆ ಆಶ್ರಮವಾಸಿಗಳು ತಾವೇ ಮಾಡುವಂತಾಗಬೇಕು.

ಗಾಂಧೀಜಿ, ತಮ್ಮ ಯೋಚನೆಯನ್ನು ಬಲು ಬೇಗನೆ ಕಾರ್ಯರೂಪಕ್ಕಿಳಿಸಿದರು. ಆಶ್ರಮವಾಸಿಗಳಿಗೆ ಹತ್ತಿಯನ್ನು ಎಕ್ಕುವುದು, ಹಿಂಜುವುದು, ಆನಂತರ, ಹಿಂಜಿದ ಹತ್ತಿಯನ್ನು ಚರಕಾದಲ್ಲಿ ನೂಲುವುದು ಮತ್ತು ಬಟ್ಟೆ ತಯಾರಿಸುವುದು, ಹೀಗೆ ಎಲ್ಲ ಕಲೆಗಳನ್ನೂ ಕಲಿಸುವ ಏರ್ಪಾಡು ಮಾಡಿದರು. ಈ ಎಲ್ಲ ಕಸುಬು ತಿಳಿದವರನ್ನು ಕರೆಸಿ ತಾವೂ ಕಲಿತರು. ಆಶ್ರಮವಾಸಿಗಳಿಗೂ ಕಲಿಸಿದರು. ಶ್ರೀಮತಿ ಅವಂತಿಕಾಬಾಯಿ, ಶ್ರೀಮತಿ ರಮೀಬಾಯಿ ಕಾಮದಾರ್, ಶ್ರೀಮತಿ ವಸುಮತಿ ಬೆಹನ್ ಮೊದಲಾದ ಮಹಿಳೆಯರು ಈ ವಿದ್ಯೆಯಲ್ಲಿ ಗಾಂಧೀಜಿಯವರನ್ನೂ ಮೀರಿಸಿಬಿಟ್ಟರು.

ದಿನಗಳೆದಂತೆ ಗಾಂಧೀಜಿಯ ಸತ್ಯಾಗ್ರಹದ ತೋಳುಗಳು ಆಶ್ರಮದ ಹೊರಗೆಯೂ ನಿಧಾನವಾಗಿ

ಚಾಚತೊಡಗಿದವು. ಬಿಹಾರದ ಚಂಪಾರಣ್ಯದ ರೈತನಾಗಿದ್ದ ರಾಜಕುಮಾರ ಶುಕ್ಲಾ ಎಂಬವರು, ಗಾಂಧೀಜಿಯನ್ನು ತನ್ನೊಡನೆ ಚಂಪಾರಣ್ಯಕ್ಕೆ ಬಂದು, ಅಲ್ಲಿ ತೊಂದರೆಗೊಳಗಾಗಿದ್ದ ರೈತರ ಬವಣೆಯನ್ನು ಕಣ್ಣಾರೆ ಕಂಡು ಪರಿಹಾರ ಸೂಚಿಸಬೇಕೆಂದು ಒತ್ತಾಯಿಸತೊಡಗಿದ್ದರು. ತಮ್ಮ ಆಶ್ರಮದ ಕೆಲಸಗಳಲ್ಲಿ ಮುಳುಗಿ ಹೋಗಿದ್ದ ಗಾಂಧೀಜಿ, ಕಾರಣಗಳನ್ನು ಹೇಳುತ್ತಾ ಆತನೊಡನೆ ಹೋಗುವ ದಿನವನ್ನು ಮುಂದಕ್ಕೆ ಹಾಕುತ್ತಿದ್ದರು.

ಆದರೆ, ಶುಕ್ಲಾರವರ ತಾಳ್ಮೆ ಅಗಾಧವಾದದ್ದು. ಹಟ ಬಿಡದ ತ್ರಿವಿಕ್ರಮನಂತೆ ಗಾಂಧೀಜಿ ಹೋದೆಡೆಗಳಲ್ಲೆಲ್ಲಾ ಹಿಂಬಾಲಿಸಿಕೊಂಡು ಹೋಗಿ ಅವರು ಎದುರಾದಾಗಲೆಲ್ಲಾ, ತನ್ನ ಜತೆಗೆ ಚಂಪಾರಣ್ಯಕ್ಕೆ ಬರುವಂತೆ ದುಂಬಾಲು ಬೀಳುತ್ತಿದ್ದರು. ಅವರ ಹಟದೆದುರು ಗಾಂಧೀಜಿ ಕೊನೆಗೂ ಸೋತು ಹೋಗಬೇಕಾಯಿತು. ಶುಕ್ಲಾರವರ ಜತೆಯಲ್ಲಿ ಚಂಪಾರಣ್ಯಕ್ಕೆ ಹೊರಡಲು ಗಾಂಧೀಜಿ ಸಮ್ಮತಿಸಿದರು.

# ನೀಲಿ ಸತ್ಯಾಗ್ರಹ

ಜನಕರಾಜನ ನಾಡೆಂದು ಕರೆಯಲಾಗುತ್ತಿದ್ದ ಚಂಪಾರಣ್ಯವು, ಬಿಳಿಯರಾದ ತೋಟದ ಮಾಲೀಕರ ಕ್ರೌರ್ಯದಿಂದ ರಾವಣರಾಜ್ಯವಾಗಿತ್ತು. ಚಂಪಾರಣ್ಯದಲ್ಲಿ ಪ್ರಚಲಿತವಿದ್ದ 'ತೀನ್ ಕಠಿಯಾ' ಪದ್ಧತಿಯಂತೆ, ಪ್ರತಿಯೊಬ್ಬ ರೈತನೂ ತಾನು ದುಡಿಯುವ ಜಮೀನಿನ ಇಪ್ಪತ್ತನೇ ಮೂರು ಭಾಗದಷ್ಟು ಹೊಲದಲ್ಲಿ ನೀಲಿಬೆಳೆಯನ್ನು ಕಡ್ಡಾಯವಾಗಿ ಬೆಳೆಯಲೇಬೇಕಾಗಿತ್ತು. ಅಷ್ಟೇ ಆಗಿದ್ದರೆ ಯಾರದೂ ತಕರಾರು ಇದ್ದಿರಲಿಲ್ಲ. ಆದರೆ ರೈತರು ಬೆವರಿಳಿಸಿ ಬೆಳೆದ ನೀಲಿಬೆಳೆಯನ್ನು ಯಾವುದೇ ಪ್ರತಿಫಲವನ್ನು ಅಪೇಕ್ಷಿಸದೆ ಜಮೀನ್ದಾರರಿಗೆ ಕಾಣಿಕೆಯ ರೂಪದಲ್ಲಿ ಸಲ್ಲಿಸಬೇಕಾಗಿತ್ತು.

ಆ ರೈತರಲ್ಲಿ ಬಹುಪಾಲು ಜನರು ಅನಕ್ಷರಸ್ಥರು, ಅವಿದ್ಯಾವಂತರು. ತಮ್ಮ ದೇಶದಲ್ಲಿಯೇ ತಾವು ಬ್ರಿಟಿಷರ ಗುಲಾಮರಾಗಿದ್ದೇವೆ ಎಂಬುದನ್ನೂ ಅರಿಯದ ಅಮಾಯಕರು. 'ರಾಷ್ಟ್ರೀಯ ಕಾಂಗ್ರೆಸ್'ನ ಸಭೆಯೊಂದರಲ್ಲಿ ಚಂಪಾರಣ್ಯದ ರೈತರಿಗೆ ಸಹಾನುಭೂತಿ ತೋರಿಸುವ 'ನಿರ್ಣಯ' ವೊಂದು ಸರ್ವಾನುಮತದಿಂದ ಸ್ವೀಕಾರಗೊಂಡು ಬಹಳ ದಿನಗಳಾಗಿವೆ, ಎಂಬುದನ್ನೂ ತಿಳಿದಿರದ ಮುಗ್ಧ ರೈತರು ಅವರು.

ಚಂಪಾರಣ್ಯದ ದಾರಿಯಲ್ಲಿದ್ದ ಪಾಟ್ನಾದಲ್ಲಿ, ಗಾಂಧೀಜಿಯವರನ್ನು ಸುಪ್ರಸಿದ್ಧ ವಕೀಲರಾದ ಬ್ರಿಜ್ ಕಿಶೋರ ಬಾಬು, ಬಾಬು ರಾಜೇಂದ್ರ ಪ್ರಸಾದ, ಮುಜಫ್ಫರನಗರದಲ್ಲಿ ಕಾಲೇಜೊಂದರ ಪ್ರಾಂಶುಪಾಲರಾಗಿದ್ದ ಆಚಾರ್ಯ ಕೃಪಲಾನಿ ಮೊದಲಾದವರು ಭೇಟಿಯಾಗಿ ಚಂಪಾರಣ್ಯದ ಸಮಸ್ಯೆಗಳ ಹಲವು ಮುಖಗಳ ಪರಿಚಯ ನೀಡಿದರು. ಗಾಂಧೀಜಿಯ ಎದುರು ಸಮಸ್ಯೆಗಳ

ದೊಡ್ಡ ಬೆಟ್ಟವೇ ನಿಂತಂತಾಗಿತ್ತು. ಆದರೆ, ಚಂಪಾರಣ್ಯದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದೆ ಹಿಂತಿರುಗಲಾರೆ ಎಂಬುದಾಗಿ ಗಾಂಧೀಜಿ ನಿರ್ಧರಿಸಿ ಆಗಿತ್ತು. ನಿರ್ಧರಿಸಿದ ಕೆಲಸವನ್ನು ಪೂರ್ತಿಗೊಳಿಸಲು ಏನು ಮಾಡಬೇಕೋ ಅದೆಲ್ಲವನ್ನೂ ಮಾಡಲಾರಂಭಿಸಿದರು.

ಆಚಾರ್ಯ ಕೃಪಲಾನಿಯವರಿಗೆ ಸ್ಥಳೀಯ ಬಿಹಾರಿಗಳ ನಿಕಟ ಸಂಪರ್ಕವಿತ್ತು. ವಕೀಲ ಬ್ರಿಜ್ ಕಿಶೋರ್ ಬಾಬು ಮತ್ತು ರಾಜೇಂದ್ರ ಬಾಬು ಅವರ ಹಿಂದೆ ಯುವ ವಕೀಲರುಗಳಿದ್ದರು. ಶುಕ್ಲಾರ ಬೆನ್ನಹಿಂದೆ, ಅವರು ಕರೆದಾಗಲೆಲ್ಲ ಓಡಿ ಬರುವ ಸಾವಿರಾರು ರೈತರ ದಂಡೇ ಇತ್ತು. ಈ ಎಲ್ಲ ನಾಯಕರ ಜತೆಗೆ ಹಲವು ದಿನಗಳ ಕಾಲ ಹಗಲೂ ರಾತ್ರಿ ಚರ್ಚಿಸಿದ ಗಾಂಧೀಜಿ, ತಮ್ಮ ಮುಂದಿನ ಹೋರಾಟದ ನೀತಿಯನ್ನು ನಿರೂಪಿಸಿದರು.

ಹೋರಾಟದ ಸಂದರ್ಭದಲ್ಲಿ ಕಾಂಗ್ರೆಸ್‌ನ ಹೆಸರನ್ನು ಹೇಳಿದರೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂಬ ಕಾರಣದಿಂದ ಕಾಂಗ್ರೆಸ್ಸಿನ ಹೆಸರನ್ನು ಹೋರಾಟದ ಸಂದರ್ಭಗಳಲ್ಲಿ ಬಳಸದಿರಲು ನಿರ್ಧರಿಸಲಾಯಿತು. ಯಾಕೆಂದರೆ, ತೋಟದ ಮಾಲೀಕರುಗಳಿಗೆ ಕಾಂಗ್ರೆಸ್ಸಿನ ಹೆಸರು ಕೇಳಿದರೇ ಕೋಪ ನೆತ್ತಿಗೇರುತ್ತಿತ್ತು; ನೀಲಿ ಬೆಳೆಯ ರೈತರಿಗೆ ಕಾಂಗ್ರೆಸ್ ಎಂದರೇನೆಂಬುದೇ ಗೊತ್ತಿರಲಿಲ್ಲ.

ಚಳುವಳಿಯ ಸಂದರ್ಭದಲ್ಲಿ ಪೋಲೀಸರಿಂದ ದಸ್ತಗಿರಿಯಾಗುವ ಸಾಧ್ಯತೆಗಳು ಇವೆ; ಅವರಿಂದ ಏಟುಗಳನ್ನೂ ತಿನ್ನಬೇಕಾಗಬಹುದು. ಆದರೆ, 'ಸತ್ಯಾಗ್ರಹ'ದ ನಿಯಮದಂತೆ ಯಾವುದೇ ಸಂದರ್ಭದಲ್ಲೂ ಜನರು ರೊಚ್ಚಿಗೇಳಬಾರದು. ಆದ್ದರಿಂದ ಸತ್ಯಾಗ್ರಹಿಗಳ ಉತ್ಸಾಹವನ್ನು ಎಲ್ಲೆಮೀರದಂತೆ ನಿಭಾಯಿಸುವ ಯುವಕರ ತಂಡವೊಂದನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಶುಕ್ಲಾರವರಿಗೆ ವಹಿಸಲಾಯಿತು. ಸತ್ಯಾಗ್ರಹದ ಸಂದರ್ಭದಲ್ಲಿ ನಾಯಕರುಗಳ ಬಂಧನವಾದರೆ, ಮಾರ್ಗದರ್ಶನದ ಗೊಂದಲವಾಗಬಾರದೆಂಬ ಯೋಚನೆಯಿಂದ, ಯಾರು ಯಾವಾಗ ಏನು ಮಾಡಬೇಕು ಎಂಬುದನ್ನು ಎಲ್ಲರಿಗೂ ಬರೆದು ಕೊಡಲಾಯಿತು.

ಗಾಂಧೀಜಿ ಮೊದಲು ಬಿಳಿಯ ಜಮೀನ್ದಾರರ ಸಂಘದ ಕಾರ್ಯದರ್ಶಿಯನ್ನು ಕಂಡು ಮಾತನಾಡಿದರು. ಆತ ನೇರವಾಗಿಯೇ ಹೇಳಿಬಿಟ್ಟಿದ್ದ, 'ನೀವು ಹೊರಗಿನವರು. ಜಮೀನ್ದಾರರು ಮತ್ತು ಗೇಣಿದಾರರ ನಡುವೆ ಪ್ರವೇಶ ಮಾಡುವ ಅಧಿಕಾರ ನಿಮಗಿಲ್ಲ'. ಗಾಂಧೀಜಿ ಆತನಷ್ಟೇ ಖಂಡಿತವಾಗಿ ಉತ್ತರಿಸಿದ್ದರು, 'ನೀನು ಹೇಳುವಂತಹ ಅಧಿಕಾರವಿಲ್ಲದಿರಬಹುದು. ಆದರೆ, ಈ ದೇಶದ ನೆಲದಲ್ಲಿ, ಈ ದೇಶದ ನೆಲದವರಿಗೆ, ಈ ದೇಶದವರಲ್ಲದವರಿಂದ ತೊಂದರೆಯಾದಾಗ ವಿಚಾರಿಸುವ ಹಕ್ಕಂತೂ, ಈ ದೇಶದಲ್ಲಿ ಹುಟ್ಟಿ ಬೆಳೆದ ನನಗೆ ಇದೆ.'

ಮುಂದಿನದು ಅಲ್ಲಿಯ ಜಿಲ್ಲಾಡಳಿತಾಧಿಕಾರಿಯ ಸರದಿ. ಆತನಂತೂ ಗಾಂಧೀಜಿಗೆ ಕೋಪದಿಂದಲೇ ಹೇಳಿದ್ದ, 'ನೀವಿಲ್ಲಿಂದ ಕೂಡಲೇ ಹಿಂತಿರುಗಿ ಹೋಗಬೇಕು. ನನ್ನ ಬಾಯಿಮಾತಿನ ಆದೇಶವನ್ನು ಕಡೆಗಣಿಸಿದರೆ, ನಿಮ್ಮ ವಿರುದ್ಧ ಅಧಿಕೃತವಾದ ನಿಷೇಧಾಜ್ಞೆ ಹೊರಡಿಸುವುದು ಅನಿವಾರ್ಯವಾಗುತ್ತದೆ.'

ಗಾಂಧೀಜಿಗೆ ಈ ಎರಡೂ ಪ್ರತಿಕ್ರಿಯೆಗಳು ನಿರೀಕ್ಷಿತವೇ ಆಗಿದ್ದವು. ಆದ್ದರಿಂದ, ಎದೆಗುಂದದೆ ಮುಂದಿನ ಕಾರ್ಯತಂತ್ರದ ನೀಲಿನಕ್ಷೆ ಸಿದ್ಧಪಡಿಸಿದರು.

ಮೋತಿಹಾರಿ ಎಂಬ ಊರು ಚಂಪಾರಣ್ಯ ಜಿಲ್ಲೆಯ ಪ್ರಮುಖ ಸ್ಥಳ. ಗಾಂಧೀಜಿಯನ್ನು ಕರೆದು ಕೊಂಡು ಬಂದಿದ್ದ ರಾಜಕುಮಾರ ಶುಕ್ಲಾ ಇರುವುದು ಪಕ್ಕದ ಬೆಟ್ಟಯ್ಯ ಎಂಬ ಪ್ರಾಂತ್ಯದಲ್ಲಿ. ಮೊದಲು ಮೋತಿಹಾರಿ ವಿಭಾಗದ ರೈತರ ಅಹವಾಲುಗಳನ್ನು ಆಲಿಸುವುದೆಂದು ಗಾಂಧೀಜಿ ನಿರ್ಧರಿಸಿದ್ದರು. ಅಂತೆಯೇ, ಗಾಂಧೀಜಿ ಆನೆಯ ಮೇಲೆ ಕುಳಿತು ಮೋತಿಹಾರಿಗೆ ಹೊರಟರು. ಆದರೆ ಆಳುವ ಸರಕಾರವು ಎಲ್ಲವನ್ನೂ ಮುಂದಾಗಿಯೇ ಗ್ರಹಿಸಿದಂತಿತ್ತು. ಗಾಂಧೀಜಿ ಮೋತಿಹಾರಿಗೆ ತಲುಪಿದರೆ ಸರಕಾರಕ್ಕೆ ಅಪಾಯವಾದೀತು ಎಂಬ ಭಯದಿಂದ ಪೋಲೀಸರು ಅವರನ್ನು ದಾರಿಯಲ್ಲಿಯೇ ತಡೆದರು; ಮೋಟಾರು ವಾಹನವೊಂದರಲ್ಲಿ ಕರೆದುಕೊಂಡು ಹೋದರು. 'ತತ್‌ಕ್ಷಣದಲ್ಲಿ ಚಂಪಾರಣ್ಯದಿಂದ ಮರಳಿಹೋಗಬೇಕು.' ಎಂಬ ನೋಟೀಸನ್ನು ನೀಡಿದರು. ಎಲ್ಲವನ್ನೂ ಮೊದಲೇ ಊಹಿಸಿದ್ದ ಗಾಂಧೀಜಿ ಸರಕಾರದ ನೋಟೀಸನ್ನು ಸ್ವೀಕರಿಸಿ, ಅದರ ಮೇಲೇಯೇ, 'ನಾನು ಬಂದಿರುವ ಕೆಲಸವನ್ನು ಪೂರ್ತಿಯಾಗಿ ಮುಗಿಸುವವರೆಗೆ ಚಂಪಾರಣ್ಯದಿಂದ ಮರಳಲಾರೆ.' ಎಂದು ಬರೆದು ಕೊಟ್ಟರು.

ಗಾಂಧೀಜಿಯನ್ನು ಬಂಧಿಸಿ ಮೊಕದ್ದಮೆ ಹೂಡಲಿದ್ದಾರೆ ಎಂಬ ಸುದ್ದಿಯು ಕಾಳ್ಗಿಚ್ಚಿನಂತೆ ಚಂಪಾರಣ್ಯದ ತುಂಬ ಹರಡಿತು. ಮರುದಿನ ಮುಂಜಾನೆಯಿಂದಲೇ ತಂಡತಂಡವಾಗಿ ಬರಲಾರಂಭಿಸಿದ ರೈತರು ನ್ಯಾಯಾಲಯದ ಎದುರಿನ ಬಯಲಲ್ಲಿ ಗುಂಪಾಗಿ ನಿಂತುಕೊಳ್ಳ ಲಾರಂಭಿಸಿದ್ದರು. ಆದರೆ, ಯಾರೂ ಯಾವುದೇ ಘೋಷಣೆಗಳನ್ನು ಕೂಗುತ್ತಿರಲಿಲ್ಲ. ಗಲಾಟೆ ಮಾಡುತ್ತಿರಲಿಲ್ಲ. ಗಾಂಧೀಜಿಯ ಮುನ್ಸೂಚನೆಗಳನ್ನು ಕೆಲವು ಕಾರ್ಯಕರ್ತರು ಚಾಚೂ ತಪ್ಪದೆ ಪಾಲಿಸುತ್ತಾ ರೈತರ ಗುಂಪನ್ನು ನಿಯಂತ್ರಿಸುತ್ತಿದ್ದರು. ಪೋಲೀಸರಿಗೆ ಈ ಬಗೆಯ ಪ್ರತಿಭಟನೆ ಹೊಸದು. ಅವರಿಗೆ ಅಲ್ಲಿ ಕೆಲಸವೇ ಇದ್ದಿರಲಿಲ್ಲ.

ಗಾಂಧೀಜಿ ಬಂದರು. ನ್ಯಾಯಾಲಯದ ಒಳಗೆ ಹೋದರು. ಕಟಕಟೆಗೆ ಹತ್ತಿ ವಿಚಾರಣೆಗೆ ಸಿದ್ಧವಾಗಿ ನಿಂತರು. ಸತ್ಯದ ಮೇಲೆ ಆಣೆಯಿಟ್ಟು 'ತಾವು ಹೇಳುತ್ತಿರುವುದೆಲ್ಲವೂ ಸತ್ಯ. ಸತ್ಯವನ್ನಲ್ಲದೆ ಬೇರೇನನ್ನೂ ಹೇಳುವುದಿಲ್ಲ.' ಎಂದು ಪ್ರಮಾಣ ಮಾಡಿದರು. ನ್ಯಾಯಾಲಯ ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧರಾಗಿ ನಿಂತರು.

ಆದರೆ ಗಾಂಧೀಜಿಯನ್ನು ಕಾನೂನಿನಂತೆ ದಂಡಿಸಬಹುದಾದ ಯಾವುದೇ ಆರೋಪಗಳನ್ನು ನ್ಯಾಯಾಲಯಕ್ಕೆ ಪೋಲೀಸರು ಸಲ್ಲಿಸಿದ್ದಿರಲಿಲ್ಲ. ಸರಕಾರದ ಕಾನೂನನ್ನು ಭಂಗಗೊಳಿಸುವಂತಹ ಅಪರಾಧವನ್ನು ಗಾಂಧೀಜಿ ಮಾಡಿಯೂ ಇರಲಿಲ್ಲ.

ಯಾವ ಪ್ರಶ್ನೆ ಕೇಳುವುದರ ಮೂಲಕ ಗಾಂಧೀಜಿಯ ವಿಚಾರಣೆಯನ್ನು ಆರಂಭಿಸಬೇಕು ಎಂಬುದು ಗಾಂಧೀಜಿಯನ್ನು ಬಂಧಿಸಿದವರಿಗೂ, ತೀರ್ಪು ನೀಡಲಿರುವ ನ್ಯಾಯಾಧೀಶರಿಗೂ ಹೊಳೆದಿರಲಿಲ್ಲ.

ಭಾರತೀಯ ನಾಗರಿಕನೊಬ್ಬ, ಭಾರತೀಯ ರೈತರ ಸಮಸ್ಯೆಗಳನ್ನು ಯಾವುದೇ ಗಲಾಟೆ ಗದ್ದಲಗಳಿಗೆ ಅವಕಾಶವಿಲ್ಲದಂತೆ, ರೈತರ ಮನೆಬಾಗಿಲಿಗೆ ಹೋಗಿ ವಿಚಾರಿಸಿಕೊಳ್ಳುವುದು ಕಾನೂನಿನಂತೆ ಅಪರಾಧವಾಗಿದ್ದಿರಲಿಲ್ಲ. ಆದ್ದರಿಂದ ಗಾಂಧೀಜಿಯನ್ನು ನಿರಪರಾಧಿ ಎಂದು ಘೋಷಿಸಿ ಬಿಡುಗಡೆ ಮಾಡಲಾಯಿತು.

ಗಾಂಧೀಜಿಯ ಬಿಡುಗಡೆಯ ಸುದ್ದಿಯೂ ಚಂಪಾರಣ್ಯದ ತುಂಬ ಹರಡಿತು. ನೀಲಿ ಬೆಳೆಯುವ ರೈತರಿಗೆ ನ್ಯಾಯ ಒದಗಿಸಲು ದೇವರು ಗಾಂಧೀಜಿಯ ವೇಷದಲ್ಲಿ ಬಂದಿದ್ದಾನಂತೆ. ಗಾಂಧೀಜಿಗೆ ಪೋಲೀಸರ ಏಟುಗಳೇನೂ ತಾಗುವುದಿಲ್ಲವಂತೆ. ಗಾಂಧೀಜಿಯು ನ್ಯಾಯಾಲಯದ ಒಳಗೆ ಹೋಗುತ್ತಿದ್ದಾಗ, ನ್ಯಾಯಾಧೀಶರಿಗೆ ಅವರ ದೇವರಾದ ಯೇಸುಸ್ವಾಮಿಯನ್ನೇ ಕಂಡಂತಾಯಿತಂತೆ. ನ್ಯಾಯಾಧೀಶರೇ ಎದ್ದುನಿಂತು ಗಾಂಧೀಜಿಗೆ ನಮಸ್ಕರಿಸಿದರಂತೆ. ಗಾಂಧೀಜಿ ಎಲ್ಲರನ್ನೂ ಆಶೀರ್ವದಿಸಿ ಹೊರಟು ಹೋದರಂತೆ. ಈ ರೀತಿಯ ಅಂತೆ ಕಂತೆಗಳ ಕತೆಗಳು ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿದವು. ದೇವರು ಕಳುಹಿಸಿದ ಗಾಂಧೀಜಿಯನ್ನು ನೋಡಲು ನೀಲಿಬೆಳೆಯ ರೈತರು ಸಾಲುಗಟ್ಟಿ ಬರತೊಡಗಿದರು. ಎಲ್ಲರೂ ಜಮೀನ್ದಾರರಿಂದ ದುಃಖಕ್ಕೆ ಒಳಗಾದವರೇ. ಬಂದವರೆಲ್ಲರೂ ದೂರು ನೀಡುವವರೇ. ರೈತರ ಮನೆಬಾಗಿಲಿಗೆ ಗಾಂಧೀಜಿ ಹೋಗಿ ವಿಚಾರಿಸುವ ಅಗತ್ಯವೇ ಬೀಳಲಿಲ್ಲ. ಬಂದ ರೈತರುಗಳ ದೂರುಗಳನ್ನು ದಾಖಲಿಸಲು ಏಳು ಮಂದಿ ಸ್ವಯಂಸೇವಕ ಗುಮಾಸ್ತರುಗಳು ಹಗಲು ರಾತ್ರಿಯೆನ್ನದೆ ಕೆಲಸ ಮಾಡಿದರು.

ನೀಲಿಬೆಳೆಯ ರೈತರನ್ನು 'ತೀನ್ ಕಠಿಯಾ' ಪದ್ಧತಿಯಿಂದ ಬಿಡುಗಡೆಗೊಳಿಸಿದ ಕೂಡಲೇ ಮರಳುವುದೆಂದು ಗಾಂಧೀಜಿ ಮೊದಲು ಯೋಚಿಸಿದ್ದರು. ಆದರೆ, ನೀಲಿಬೆಳೆಯ ರೈತರ ಸಮಸ್ಯೆಯು 'ತೀನ್ ಕಠಿಯಾ' ಪದ್ಧತಿಯಿಂದ ಬಿಡುಗಡೆಗೊಳಿಸಿದ ಮಾತ್ರಕ್ಕೆ ಪರಿಹಾರಗೊಳ್ಳುವುದಿಲ್ಲ ಎಂಬುದು ಗಾಂಧೀಜಿಗೆ ಕ್ರಮೇಣ ಅರಿವಾಗತೊಡಗಿತು. ಆ ರೈತರೆಲ್ಲರೂ ಅನಕ್ಷರಸ್ಥರು ಮಾತ್ರವಲ್ಲ, ದಡ್ಡರೂ ಆಗಿದ್ದರು. ಯೋಗ್ಯವಾದ ಶಿಕ್ಷಣವನ್ನೊದಗಿಸದಿದ್ದರೆ ಅವರು ಉದ್ಧಾರವಾಗುವುದು ಸಾಧ್ಯವೇ ಇದ್ದಿರಲಿಲ್ಲ. ಆದ್ದರಿಂದ ಕೆಲವು ಕಾಲ ಚಂಪಾರಣ್ಯದಲ್ಲೇ ಇದ್ದು, ಕೆಲಸ ಮಾಡಲು ಗಾಂಧೀಜಿ ನಿರ್ಧರಿಸಿದರು.

ಯೋಗ್ಯವಾದ ಶಿಕ್ಷಣ ನೀಡಲು ಯೋಗ್ಯರಾದ ಶಿಕ್ಷಕರು ಬೇಕಾಗಿದ್ದರು. ನೀಲಿಬೆಳೆಯ ರೈತರಿಗೆ ಶಿಕ್ಷಣ ನೀಡುವ **ತಮ್ಮ** ಚಳುವಳಿಯಲ್ಲಿ ಸ್ವಯಂಸೇವಕರಾಗಿ ಭಾಗವಹಿಸಲು ಸಿದ್ಧರಿರುವ ಶಿಕ್ಷಕರು ಚಂಪಾರಣ್ಯಕ್ಕೆ ಬರಬೇಕೆಂದು ಗಾಂಧೀಜಿ ಸಾರ್ವಜನಿಕ ಮನವಿ ಪ್ರಕಟಿಸಿದರು. ಶ್ರೀಯುತರುಗಳಾದ ಬಾಬಾಸಾಹೇಬ ಸೋಮಣ್, ಪುಂಡಲೀಕ, ಶ್ರೀಮತಿ ಅವಂತಿಕಾಬಾಯಿ ಗೋಖಲೆ, ಆನಂದೀಬಾಯಿ ವೈಶಂಪಾಯನ ಮೊದಲಾದವರು ಗಾಂಧೀಜಿಯ ಕರೆಗೆ ಓಗೊಟ್ಟು ಚಂಪಾರಣ್ಯಕ್ಕೆ ಬಂದರು. ಗಾಂಧೀಜಿಯ 'ಸತ್ಯಾಗ್ರಹ ಆಶ್ರಮ'ದಿಂದ ಚೋಟಾಲಾಲ, ಸುರೇಂದ್ರನಾಥ, ಮಹದೇವ ದೇಸಾಯಿ ಮತ್ತು ನರಹರಿ ಪರೇಖ್ ಅವರು ಸಂಸಾರ ಸಹಿತ ಬಂದರು. ಗಾಂಧೀಜಿಯ ಮಗನಾದ ದೇವದಾಸ ಗಾಂಧಿಯು ತಾಯಿ ಕಸ್ತೂರಿಬಾಯಿಯವರ ಜತೆ ಬಂದಿಳಿದ. ಕೂಡಲೇ

ಮಹಿಳೆಯರಿಗಾಗಿ ಪ್ರತ್ಯೇಕವಾದ 'ವಯಸ್ಕರ ಶಿಕ್ಷಣ' ತರಗತಿಗಳು ಪ್ರಾರಂಭಗೊಂಡವು. ಕೊಳಚೆ ಗುಂಡಿಗಳಂತಿದ್ದ ಊರು ಕೇರಿಗಳು, ಸ್ವಯಂಸೇವಕರ ಮಾರ್ಗದರ್ಶನದಲ್ಲಿ ನಿಧಾನವಾಗಿ ಶುಚಿಯಾಗತೊಡಗಿದವು. ಭಾರತ ಸೇವಾಸಂಘದ ವೈದ್ಯರಾದ ಶ್ರೀದೇವ ಅವರ ನೇತೃತ್ವದಲ್ಲಿ ಪುಟ್ಟದೊಂದು ಆರೋಗ್ಯ ಕೇಂದ್ರವೂ ಆರಂಭವಾಯಿತು.

ಈ ನಡುವೆ ಲೆಫ್ಟಿನೆಂಟ್ ಗವರ್ನರ್ ಸರ್ ಎಡ್ವರ್ಡ್ ಅವರು, ನೀಲಿಬೆಳೆಯ ರೈತರ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು 'ವಿಚಾರಣಾ ಸಮಿತಿ' ಯೊಂದನ್ನು ರಚಿಸಿದರು. ಗಾಂಧೀಜಿಯನ್ನೂ ಆ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿದರು.

ಸಮಿತಿ ಸಲ್ಲಿಸಿದ ವರದಿ ಸಹಜವಾಗಿ ರೈತರ ಪರವಾಗಿಯೇ ಇತ್ತು. ಇದು ತೋಟದ ಮಾಲೀಕರನ್ನು ರೊಚ್ಚಿಗೆಬ್ಬಿಸಿತು. ಆದರೆ, ತೋಟದ ಮಾಲೀಕರ ಪ್ರತಿಭಟನೆಯನ್ನು ಲೆಕ್ಕಿಸದ ಸರ್ ಎಡ್ವರ್ಡ್ ಅವರು, ಕಳೆದ ಒಂದು ಶತಮಾನದಿಂದ ಜಾರಿಯಲ್ಲಿದ್ದ 'ತೀನ್ ಕಠಿಯಾ' ಪದ್ಧತಿಯನ್ನು ರದ್ದುಗೊಳಿಸುವ ಆದೇಶ ಹೊರಡಿಸಿಯೇಬಿಟ್ಟರು. ಭಾರತದಲ್ಲಿ ನಡೆದ ಮೊತ್ತ ಮೊದಲ ಅಹಿಂಸಾತ್ಮಕವಾದ ಸತ್ಯಾಗ್ರಹಕ್ಕೆ ಅನಿರೀಕ್ಷಿತವಾದ ಜಯ ದೊರೆತಿತ್ತು.

## ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು

ಬಿಹಾರದ ಚಂಪಾರಣ್ಯದಲ್ಲಿ ಗಾಂಧೀಜಿಯು, ತಮ್ಮ ಅಹಿಂಸಾತ್ಮಕ 'ಸತ್ಯಾಗ್ರಹ'ದ ಮೂಲಕ ನೀಲಿಬೆಳೆಯ ರೈತರಿಗೆ ನ್ಯಾಯವಾದ ಹಕ್ಕುಗಳನ್ನು ದೊರಕಿಸಿ ಕೊಟ್ಟ ಸುದ್ದಿ ದೇಶಾದ್ಯಂತ ಹರಡಿತು. ಭಾರತವನ್ನು ತನ್ನ ಗುಲಾಮನಂತೆ ನಡೆಸಿಕೊಳ್ಳುತ್ತಿರುವ ಬ್ರಿಟಿಷರನ್ನು ಮಣಿಸಲು ಯಾವುದೇ ಹಿಂಸಾತ್ಮಕ ಹೋರಾಟದ ಅಗತ್ಯವಿಲ್ಲ ಎಂಬ ಹೊಸದೊಂದು ಸೂತ್ರವು ಚಂಪಾರಣ್ಯದ ಸತ್ಯಾಗ್ರಹದಲ್ಲಿ ಪ್ರಕಟವಾಗಿತ್ತು.

ತಮ್ಮ ಜನಪರವಾದ ಹೋರಾಟಗಳಿಗೆ ಮಾರ್ಗದರ್ಶನ ನೀಡುವಂತೆ ಗಾಂಧೀಜಿಗೆ, ದೇಶದ ಹಲವು ಭಾಗಗಳಿಂದ ಒತ್ತಾಯ ಬರಲಾರಂಭಿಸಿತು. ಆ ದಿನಗಳಲ್ಲಿ, ಅಹಮದಾಬಾದಿನ ಕೂಲಿಕಾರರ ನೇತಾರರಾಗಿದ್ದ ಶ್ರೀಮತಿ ಅನಸೂಯಾ ಬಾಯಿಯವರು, ಗಿರಣಿ ಮಾಲೀಕರಾಗಿದ್ದ ತಮ್ಮ ಅಣ್ಣನ ವಿರುದ್ಧವೇ ಕೂಲಿಯಾಳುಗಳ ಪರವಾಗಿ ಹೋರಾಟ ನಡೆಸ ಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿದ್ದರು.

ಅಹಮದಾಬಾದಿಗೆ ತಲುಪಿದ ಗಾಂಧೀಜಿಯವರು, ಮೊದಲಿಗೆ ತಮ್ಮ ಸ್ನೇಹಿತರೇ ಆಗಿದ್ದ ಗಿರಣಿ ಮಾಲೀಕರನ್ನು ಕಂಡು, ಎದುರಾಗಿದ್ದ ಸಮಸ್ಯೆಯನ್ನು ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಲು ಒತ್ತಾಯಿಸಿದರು. ಆದರೆ ಗಿರಣಿಗಳ ಮಾಲೀಕರು ಗಾಂಧೀಜಿಯ ಸಲಹೆಯನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಮುಷ್ಕರಕ್ಕೆ ಕರೆ ಕೊಡದೆ ಬೇರೆ ದಾರಿಯಿದ್ದಿರಲಿಲ್ಲ. ವಲ್ಲಭ ಭಾಯಿ ಪಟೇಲರು ಗಾಂಧೀಜಿಗೆ ಬೆಂಬಲವಾಗಿ ನಿಂತರು.

ಗಾಂಧೀಜಿಯ ಮಾರ್ಗದರ್ಶನದಲ್ಲಿ ಕೂಲಿಯಾಳುಗಳೆಲ್ಲ ಮುಷ್ಕರದ ಪ್ರತಿಜ್ಞೆ ಮಾಡಿದರು. ಆ ಪ್ರತಿಜ್ಞೆಯಂತೆ, ಮುಷ್ಕರದಲ್ಲಿ ಭಾಗವಹಿಸುವ ಕೂಲಿಯಾಳುಗಳು ಯಾವುದೇ ಬಗೆಯ ಹಿಂಸೆಗೆ ಕೈಹಾಕಬಾರದು. ಮುಷ್ಕರದಲ್ಲಿ ಭಾಗವಹಿಸದೆ ಗಿರಣಿಗಳಿಗೆ ಕೆಲಸಕ್ಕೆ ಹೋಗುವವರನ್ನು ಯಾರೂ ತಡೆಯಬಾರದು. ಯಾರೂ ಭಿಕ್ಷೆ ಬೇಡಬಾರದು ಮತ್ತು ಬೇಡಿಕೆಗಳು ಈಡೇರುವ ವರೆಗೂ ಹೋರಾಟವು ನಿಲ್ಲಬಾರದು.

'ಒಂದೇ ಮಾತು' ಎಂದು ಬರೆದ ಫಲಕಗಳನ್ನು ಹಿಡಿದುಕೊಂಡು ಹಗಲೆಲ್ಲ ನಗರದ ಬೀದಿಗಳಲ್ಲಿ ಮೆರವಣಿಗೆ ಹೋಗುತ್ತಿದ್ದ ನೂರಾರು ಕೂಲಿಯಾಳುಗಳು ಸಂಜೆಯಾಗುತ್ತಲೇ ಸಬರಮತಿ ನದಿತೀರದಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ಸಭೆ ಸೇರುತ್ತಿದ್ದರು. ಸತ್ತರೂ ಸರಿಯೇ, ಬೇಡಿಕೆಗಳು ಈಡೇರುವ ತನಕ ಹೋರಾಡುತ್ತೇವೆ ಎಂದು ಕೂಲಿಯಾಳುಗಳೆಲ್ಲ ವೀರಾವೇಶದಿಂದ ಘೋಷಿಸುತ್ತಿದ್ದರು.

ಆದರೆ, ಎರಡುವಾರದೊಳಗೆ ಕೂಲಿಯಾಳುಗಳು ತಾಳ್ಮೆಯನ್ನು ಕಳೆದುಕೊಳ್ಳಲಾರಂಭಿಸಿದರು. ಮುಷ್ಕರದಲ್ಲಿ ಭಾಗವಹಿಸುವ ಮುನ್ನ ಮಾಡಿದ್ದ ಪ್ರತಿಜ್ಞೆಯ ಶರತ್ತುಗಳನ್ನು ಕಡೆಗಣಿಸಲಾರಂಭಿಸಿದ್ದರು. ಮುಷ್ಕರದಲ್ಲಿ ಭಾಗವಹಿಸದೆ ಕೆಲಸಕ್ಕೆ ಹೋಗುವವರ ವಿರುದ್ಧ ಸಣ್ಣ ಪುಟ್ಟ ಹಲ್ಲೆಗಳೂ ನಡೆದುವು. ಇದರಿಂದಾಗಿ ಮುಷ್ಕರ ನಿರತ ಕೂಲಿಯಾಳುಗಳು ಎರಡು ಗುಂಪುಗಳಲ್ಲಿ ಒಡೆದು ಹೋದರು. ಗಾಂಧೀಜಿಯು ನಡೆಸುತ್ತಿದ್ದ ಸಂಜೆಯ ಸಭೆಗಳಿಗೆ ಬರುವ ಮುಷ್ಕರ ನಿರತ ಕೂಲಿಯಾಳುಗಳ ಸಂಖ್ಯೆ ಕಡಿಮೆಯಾಗತೊಡಗಿತು.

ಗಾಂಧೀಜಿಗೆ ತಾವು ಎಲ್ಲೋ ತಪ್ಪಿದ್ದೇವೆ ಎಂದು ಭಾಸವಾಗತೊಡಗಿತು. ಬಡ ಕೂಲಿಯಾಳುಗಳಿಂದ, ಅವರಿಗೆ ನೆರವೇರಿಸಲು ಸಾಧ್ಯವಾಗದಂತಹ ಪ್ರತಿಜ್ಞೆಯನ್ನು ಮಾಡಿಸಿದ್ದು ತಪ್ಪು ಎಂಬ ಭಾವನೆ ಮೂಡಿತು. ತಮ್ಮ ತಪ್ಪಿಗೆ ಪ್ರಾಯಶ್ಚಿತ್ತವಾಗಲೇ ಬೇಕು.

ಒಂದು ದಿನ ಮುಂಜಾನೆಯ ಹೊತ್ತು, ಮುಷ್ಕರ ನಿರತ ಕೂಲಿಕಾರರೊಂದಿಗೆ ಮಾತನಾಡುತ್ತಿದ್ದ ಗಾಂಧೀಜಿ ಇದ್ದಕ್ಕಿದ್ದಂತೆ ಹೇಳಿಬಿಟ್ಟಿದ್ದರು, ' ಎಲ್ಲರೂ ಒಂದಾಗಿ ಮುಷ್ಕರವನ್ನು ಗೆಲ್ಲಿಸುವವರೆಗೆ ನಾನು ಆಹಾರವನ್ನು ಮುಟ್ಟುವುದಿಲ್ಲ'.

ಗಾಂಧೀಜಿಯ ಪ್ರತಿಜ್ಞೆ ಅನಿರೀಕ್ಷಿತವಾಗಿತ್ತು. ಕೂಲಿಯಾಳುಗಳಿಗೆ ದಿಗ್ಭ್ರಮೆಯಾಗಿತ್ತು. ಪ್ರತಿಜ್ಞೆಯನ್ನು ಹಿಂದಕ್ಕೆ ಪಡೆಯುವಂತೆ ಎಲ್ಲರೂ ಗಾಂಧೀಜಿಯನ್ನು ಪ್ರಾರ್ಥಿಸಿದರು. ಅನಸೂಯಾಬಾಯಿಯವರಂತೂ ಗಳಗಳನೆ ಅಳಲಾರಂಭಿಸಿದರು.

ಗಾಂಧೀಜಿಯ ಉಪವಾಸದ ಘೋಷಣೆಯು ಗಿರಣಿ ಮಾಲೀಕರ ವಲಯದಲ್ಲಿ ಗಲಿಬಿಲಿ ಮೂಡಿಸಿತು. ಮೂರೇ ದಿನಗಳಲ್ಲಿ ಶ್ರೀ ಆನಂದ ಶಂಕರ ಧ್ರುವ ಎಂಬ ಹಿರಿಯರ ಪಂಚಾಯತಿಯಲ್ಲಿ ಮಾಲೀಕರ ಮತ್ತು ಕೂಲಿಯಾಳುಗಳ ನಡುವೆ ಒಪ್ಪಂದ ಏರ್ಪಟ್ಟಿತು. ಇಪ್ಪತ್ತೊಂದು ದಿನಗಳ ಕೂಲಿಕಾರರ ಮುಷ್ಕರವೂ, ಮೂರುದಿನಗಳ ಗಾಂಧೀಜಿಯ ಉಪವಾಸವೂ ಏಕಕಾಲದಲ್ಲಿ ಮುಕ್ತಾಯಗೊಂಡಿತು.

ಅದೇ ದಿನಗಳಲ್ಲಿ ಖೇಡಾ ಜಿಲ್ಲೆಯು ಕ್ಷಾಮಕ್ಕೆ ಬಲಿಯಾಗಿತ್ತು. ಸರಕಾರಕ್ಕೆ ಭೂಕಂದಾಯವನ್ನು ಸಲ್ಲಿಸಲು ರೈತರು ವಿಫಲರಾಗಿದ್ದರು. ಭೂಕಂದಾಯದ ನಿಯಮದಂತೆ, ನಾಲ್ಕಾಣೆಗಿಂತ ಕಡಿಮೆ ಬೆಳೆಯಾಗಿದ್ದ ವರ್ಷದಲ್ಲಿ ಭೂಕಂದಾಯವನ್ನು ನೀಡಬೇಕಾಗಿದ್ದಿರಲಿಲ್ಲ. ಆದರೆ, ನಾಲ್ಕಾಣೆಗಿಂತ ಹೆಚ್ಚು ಬೆಳೆಯಾಗಿದೆ ಎಂಬ ಸುಳ್ಳು ತರ್ಕವನ್ನು ಮುಂದಿಟ್ಟು ಸರ್ಕಾರದ ಅಧಿಕಾರಿಗಳು ಕಂದಾಯ ವಸೂಲಿಗೆ ಆದೇಶ ಹೊರಡಿಸಿದ್ದರು. ಸರಕಾರಕ್ಕೆ ಸಲ್ಲಿಸಿದ ಮನವಿ, ಪ್ರಾರ್ಥನೆಗಳೆಲ್ಲವೂ ವ್ಯರ್ಥವಾದ ಬಳಿಕ ಗಾಂಧೀಜಿಯ ನೇತೃತ್ವದಲ್ಲಿ ರೈತರು ಸತ್ಯಾಗ್ರಹಕ್ಕೆ ಮುಂದಾದರು.

ಗಾಂಧೀಜಿಯ ಅಹಿಂಸಾತ್ಮಕ ಹೋರಾಟದಲ್ಲಿ ಯಾವುದೇ ಶಕ್ತಿಯಿಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡುವ ಸಲುವಾಗಿ, ಸರಕಾರವು ಅಗತ್ಯಕ್ಕಿಂತ ಹೆಚ್ಚು ಕಠಿಣ ಕ್ರಮಗಳನ್ನು ಪ್ರಯೋಗಿಸತೊಡಗಿತು. ರೈತರ ಮೇಲೆ ವಿನಾಕಾರಣ ಬಲಪ್ರಯೋಗ ಮಾಡಲಾರಂಭಿಸಿತು. ರೈತರ ದನ ಕರುಗಳನ್ನು, ಚರಾಸ್ತಿಗಳನ್ನು ಜಪ್ತಿ ಮಾಡಿದ ಸರಕಾರವು ಅವನ್ನು ಸಿಕ್ಕ ಬೆಲೆಗೆ ಮಾರಿ, ತನ್ನ ಬೊಕ್ಕಸವನ್ನು ತುಂಬಿಕೊಳ್ಳತೊಡಗಿತು. ಬೆಳೆದು ನಿಂತ ಪೈರನ್ನು ಕಟಾವು ಮಾಡುವ ಅಧಿಕಾರವನ್ನು ರೈತರಿಂದ ಸರಕಾರವು ಕಿತ್ತುಕೊಂಡಿತು. ಇದನ್ನು ಪ್ರಶ್ನಿಸಿದವರನ್ನು ಹಿಡಿದೆಳೆದು ಜೈಲಿಗೆ ಹಾಕಲಾಯಿತು.

ಮೊದಲ ಬಾರಿ ಭಯದಿಂದಲೇ ಜೈಲಿಗೆ ಹೋಗಿದ್ದ ರೈತರಿಗೆ, ಎರಡನೆಯ ಬಾರಿ ಹೋಗುವಾಗ ಯಾವ ಅಳುಕೂ ಇರಲಿಲ್ಲ. ಕ್ರಮೇಣ ರೈತರಿಗೆ ಜೈಲಿನ ಭಯವೇ ಮಾಯವಾಗಿಬಿಟ್ಟಿತ್ತು. ಜೈಲಿಗೆ ಹೋದವರನ್ನು ಜನರು ಗೌರವದಿಂದ ಕಾಣಲು ಆರಂಭಿಸಿದರು. ಜೈಲಿನಿಂದ ಬಿಡುಗಡೆಯಾಗಿ ಹೊರಗೆ ಬರುವ ಸತ್ಯಾಗ್ರಹಿಗಳ ಕೊರಳಿಗೆ ಹಾರ ಹಾಕಿ ಮೆರವಣಿಗೆ ಮಾಡುವ ಸಂಪ್ರದಾಯ ಆರಂಭಗೊಂಡಿತು. ದಿನದಿಂದ ದಿನಕ್ಕೆ ಸತ್ಯಾಗ್ರಹದ ಕಾವು ಏರತೊಡಗಿತು. ಸರಕಾರವು ಕೊನೆಗೂ ರಾಜಿಸೂತ್ರವೊಂದನ್ನು ಎದುರಿಟ್ಟಿತು.

ಶ್ರೀಮಂತ ರೈತರು ಕಂದಾಯ ಕೊಟ್ಟರೆ ಬಡವರ ಕಂದಾಯ ಮಾಫಿ ಮಾಡುವುದಾಗಿ ಸರಕಾರವು ಘೋಷಿಸಿತು. ಗಾಂಧೀಜಿಯ ಸಲಹೆಯಂತೆ ಸರಕಾರದ ಸೂತ್ರಕ್ಕೆ ಸಮ್ಮತಿಸಿದ ಸತ್ಯಾಗ್ರಹಿಗಳು ತಮ್ಮ ಸತ್ಯಾಗ್ರಹ ಚಳುವಳಿಯನ್ನು ಮುಕ್ತಾಯಗೊಳಿಸಿದರು. ತಮ್ಮ ಮುಕ್ತಿ ತಮ್ಮಲ್ಲೇ ಇದೆ ಎಂಬ ಸತ್ಯವನ್ನು ಅರಿತುಕೊಂಡರು. ಗಾಂಧೀಜಿಗಿರುವ ಅಸಾಧಾರಣ ಸಂಘಟನಾ ಸಾಮರ್ಥ್ಯಕ್ಕೆ ಎಲ್ಲರೂ ಅಚ್ಚರಿಗೊಂಡರು. ಸರಕಾರದಲ್ಲಿರುವ ಕೆಲವು ಜಾಣರು ಗಾಂಧೀಜಿಯ ಜನಪ್ರಿಯತೆಯನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳಲು ತಂತ್ರವೊಂದನ್ನು ಹೂಡಿದರು. ಮೊದಲನೆಯ ಮಹಾಯುದ್ಧದ ಕಾಲ ಅದು. ಬ್ರಿಟಿಷರ ಸೈನ್ಯದಲ್ಲಿ ಕೆಚ್ಚೆದೆಯಿಂದ ಹೋರಾಡಬಲ್ಲ ಪ್ರಾಮಾಣಿಕ ಸೈನಿಕರ ಕೊರತೆಯಿತ್ತು. ಭಾರತಕ್ಕೆ 'ಸ್ಥಳೀಯ ಸ್ವಯಮಾಡಳಿತ'ದ ಹಕ್ಕು ನೀಡುತ್ತೇವೆ ಎಂದು ಆಸೆ ಹುಟ್ಟಿಸಿ, ಗಾಂಧೀಜಿಯ ನೇತೃತ್ವದಲ್ಲಿ ಭಾರತೀಯ ಸಿಪಾಯಿಗಳನ್ನು ತಮ್ಮ ಸೇನೆಗೆ ಕೂಡಿ ಹಾಕಲಾರಂಭಿಸಿದರು.

ಆದರೆ, ಯುದ್ಧದಲ್ಲಿ ಜಯಗಳಿಸಿದ ನಂತರ ಬ್ರಿಟಿಷರು ಗಾಂಧೀಜಿಗೆ ನೀಡಿದ ವಚನದಿಂದ

ಹಿಂದಕ್ಕೆ ಸರಿದರು. ಮಾತ್ರವಲ್ಲ, ಸ್ವಾತಂತ್ರ್ಯದ ಆಸೆ ಹೊತ್ತ ಭಾರತೀಯರ ರಾಜಕೀಯ ಚಟುವಟಿಕೆಗಳನ್ನೆಲ್ಲ ಕಾನೂನು ಬಾಹಿರ ಎಂದು ಸಾರುವ 'ರೌಲಟ್ ಕಾಯಿದೆ'ಯನ್ನು ಪ್ರಕಟಿಸಿದರು.

ಈ ಕಾಯಿದೆಯಂತೆ, ಸರಕಾರವು ತನಗಿಷ್ಟ ಬಂದವರ ವಿರುದ್ಧ ರಾಜದ್ರೋಹದ ಆರೋಪ ಹೊರಿಸಿ, ಯಾವುದೇ ವಿಚಾರಣೆ ನಡೆಸದೆ ಬಂಧನದಲ್ಲಿ ಇರಿಸಬಹುದಾಗಿತ್ತು. ಗಾಂಧೀಜಿಗೆ ಇದರಿಂದಾಗಿ ಬಹಳ ಸಂಕಟವಾಯಿತು. ಆತ್ಮಗೌರವವುಳ್ಳ ಯಾವನೇ ಭಾರತಿಯನೂ 'ರೌಲಟ್ ಕಾಯಿದೆ'ಯನ್ನು ಒಪ್ಪಿಕೊಳ್ಳಬಾರದು ಎಂದು ಗಾಂಧೀಜಿ ಸಾರಿದರು. ವಲ್ಲಭ ಭಾಯಿ ಪಟೇಲ್, ಸರೋಜಿನಿ ನಾಯ್ಡು, ಇಂದುಲಾಲ್ ಯಾಜ್ನಿಕ್ ಮೊದಲಾದವರನ್ನೆಲ್ಲ ಸೇರಿಕೊಂಡು ಮುಂಬಯಿ ಯಲ್ಲಿ 'ಸತ್ಯಾಗ್ರಹ ಸಭಾ' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ಆಗ ಮದರಾಸಿಗೆ ಹೋದ ಗಾಂಧೀಜಿಯವರು ರಾಜಗೋಪಾಲಾಚಾರಿ, ಮಹದೇವ ದೇಸಾಯಿ ಮೊದಲಾದವರೊಡನೆ ಚರ್ಚಿಸಿ ರಾಷ್ಟ್ರಮಟ್ಟದಲ್ಲಿ ಒಂದು ದಿನದ ಹರತಾಳವನ್ನು ಘೋಷಿಸಿದರು. ದೇಶಾದ್ಯಂತ ಮಿಂಚಿನ ಸಂಚಾರವಾದಂತಾಯಿತು.

ಗಾಂಧೀಜಿಯೇ ಅಚ್ಚರಿಪಡುವಷ್ಟು ಉತ್ಸಾಹದಲ್ಲಿ ಜನರೆಲ್ಲ ಬೀದಿಗಿಳಿದಿದ್ದರು. ಗಾಂಧೀಜಿಯನ್ನು ಕವಿಗುರು ರವೀದ್ರನಾಥ ಟಾಗೋರರು ಮಹಾತ್ಮ ಎಂದು ಸಂಬೋಧಿಸಿದ್ದಾರೆ ಎಂಬುದನ್ನು ಕೆಲವರು ಪತ್ರಿಕೆಗಳಲ್ಲಿ ಓದಿದ್ದರು. ಹರತಾಳದ ದಿನ ಬೀದಿಗಿಳಿದ ಬಳಿಕ ಬೇರೇನು ಮಾಡಬೇಕು ಎಂಬುದನ್ನು ತಿಳಿಯದೆ ಜನರೆಲ್ಲರೂ ಒಕ್ಕೊರಲಿನಿಂದ 'ಮಹಾತ್ಮಾ ಗಾಂಧೀಕೀ ಜೈ' ಮತ್ತು 'ಭಾರತ್ ಮಾತಾಕೀ ಜೈ' ಎಂಬ ಘೋಷಣೆಗಳನ್ನು ಕೂಗತೊಡಗಿದ್ದರು. ಗಾಂಧೀಜಿಯು ವಾರವೊಂದರೊಳಗೆ ದೇಶನಾಯಕರಾಗಿಬಿಟ್ಟಿದ್ದರು. ಮಹಾತ್ಮ ಎನ್ನಿಸಿಕೊಂಡಿದ್ದರು.

ಸರಕಾರವು ಕಂಗಾಲಾಯಿತು. ಗಾಂಧೀಜಿಯನ್ನು ಬಂಧಿಸಿದ್ದಾರೆ ಎಂಬ ಸುಳ್ಳು ಸುದ್ದಿ ಹೊರಟಿತು. ಜನರು ರೊಚ್ಚಿಗೆದ್ದರು. ದೇಶಾದ್ಯಂತ ಗಲಭೆಗಳಾದವು. ಪೋಲೀಸರು ಸಿಕ್ಕ ಸಿಕ್ಕವರನ್ನು ಹಿಡಿದು ಬಡಿದರು. ಬ್ರಿಟಿಷರ ಕಾನೂನನ್ನು ಆವೇಶದಿಂದ ವಿರೋಧಿಸುತ್ತಿದ್ದವರಿಗೆ ತಾವೇನು ಮಾಡುತ್ತಿದ್ದೇವೆ ಎಂಬ ಸ್ಪಷ್ಟ ಕಲ್ಪನೆಯಿದ್ದಿರಲಿಲ್ಲ. ಅವರಿಗೆ ಮಾರ್ಗದರ್ಶನ ನೀಡಬಲ್ಲ ಸ್ಥಳೀಯ ಮುಖಂಡರುಗಳೂ ಇದ್ದಿರಲಿಲ್ಲ. ಗುಜರಾತಿನಲ್ಲಿ ಹಿಂಸೆ ಮುಗಿಲು ಮುಟ್ಟಿತು. ಗಾಂಧೀಜಿಗೆ ದಿಗಿಲಾಯಿತು. ಗುಜರಾತಿಗೆ ಧಾವಿಸಿದರು. ಸತ್ಯಾಗ್ರಹವನ್ನು ನಿಲ್ಲಿಸುವಂತೆ ಕರೆಕೊಟ್ಟರು. ಜನರನ್ನು ಸತ್ಯಾಗ್ರಹ ಮಾರ್ಗದಲ್ಲಿ ಪ್ರತಿಭಟನೆಗೆ ಸಜ್ಜುಗೊಳಿಸಿವ ಮೊದಲೇ ಹರತಾಳಕ್ಕೆ ಕರೆಕೊಟ್ಟು ದುಡುಕಿದೆ ಎಂದು ಪರಿತಪಿಸಿದರು. ಪ್ರಾಯಶ್ಚಿತ್ತವಾಗಿ ಮೂರುದಿನದ ಉಪವಾಸ ವ್ರತ ಕೈಗೊಂಡರು.

ಆದರೆ ಪಂಜಾಬದಲ್ಲಿ ಸತ್ಯಾಗ್ರಹ ಮುಂದುವರಿದೇ ಇತ್ತು. ಸತ್ಯಾಗ್ರಹವನ್ನು ನಿಲ್ಲಿಸಲು ಗಾಂಧೀಜಿ ಮಾಡಿದ್ದ ವಿನಂತಿ ಅವರಿಗೆ ಗೊತ್ತೇ ಇರಲಿಲ್ಲ. ಪೋಲೀಸರು ವಿನಾಕಾರಣ ಬಂಧನದಲ್ಲಿರಿಸಿದ್ದ, ಡಾ.ಸೈಫುದ್ದೀನ್ ಕಿಲ್ಚ್ ಮತ್ತು ಡಾ. ಸತ್ಯಪಾಲರನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಸಾವಿರಾರು ಜನರು ಮೆರವಣಿಗೆ ಹೊರಟಿದ್ದರು.

ಜಲಿಯನ್‌ವಾಲಾ ಬಾಗ್ ಮೈದಾನದಲ್ಲಿ ಸಭೆ ನಡೆಸುತ್ತಿದ್ದಾಗ, ಬ್ರಿಟಿಷರ ಸೈನ್ಯಾಧಿಕಾರಿ ಜನರಲ್ ಡಾಯರ್ ಎಂಬವನು ಸೈನ್ಯದ ದಂಡನ್ನೇ ಕರೆದುಕೊಂಡು ಬಂದು ಮೈದಾನದ ಬಾಗಿಲಿಗೆ ಅಡ್ಡವಾಗಿ ನಿಂತುಬಿಟ್ಟನು. ಸೇರಿದ್ದ ಜನರೆಲ್ಲ ತಮ್ಮೆದುರು ಸಾಲುಗಟ್ಟಲು ತೊಡಗಿದ್ದ ಸೈನಿಕರನ್ನು ಕುತೂಹಲದಿಂದ ನೋಡುತ್ತಿದ್ದರು. ಇದ್ದಕ್ಕಿದ್ದಂತೆಯೇ ಜನರಲ್ ಡಾಯರ್ ನಿರಾಯುಧರಾದ ಜನರ ಮೇಲೆ ಗುಂಡಿನ ಮಳೆಗರೆಯುವಂತೆ ಸೈನಿಕರಿಗೆ ಆದೇಶ ನೀಡಿದ್ದನು. ಈ ಅನಿರೀಕ್ಷಿತ ಆಕ್ರಮಣದಿಂದ ಕಂಗಾಲಾದ ಜನರು ದಿಕ್ಕಾಪಾಲಾಗಿ ಓಡತೊಡಗಿದರು. ಆದರೆ ಮೈದಾನದ ಹೆಬ್ಬಾಗಿಲಿಗೆ ಸೈನಿಕರು ಬಂದೂಕಿನ ಗೋಡೆ ಕಟ್ಟಿದ್ದರು. ಸಾವಿನಿಂದ ತಪ್ಪಿಸಿಕೊಳ್ಳಲು ದಾರಿಯೇ ಇದ್ದಿರಲಿಲ್ಲ. ಗಂಡಸರು, ಹೆಂಗಸರು, ಮುದುಕರು ಮಕ್ಕಳೆನ್ನದೆ ಒಬ್ಬೊಬ್ಬರಾಗಿ ನೆಲಕ್ಕುರುಳ ತೊಡಗಿದರು. ನಾಲ್ಕು ನೂರಕ್ಕಿಂತಲೂ ಹೆಚ್ಚು ಸತ್ಯಾಗ್ರಹಿಗಳು ಸೈನಿಕರ ಗುಂಡಿಗೆ ಆಹುತಿಯಾದರು; ಹುತಾತ್ಮರಾದರು.

## ಕಟ್ಟುವೆವು ನಾವು

ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ದೇಶಕ್ಕೆ ದೇಶವೇ ಪ್ರತಿಭಟಿಸಿತು. ಗಾಂಧೀಜಿಯವರು, ತಮಗೆ ಬ್ರಿಟಿಷರು ನೀಡಿದ್ದ 'ಕೈಸರ್-ಇ-ಹಿಂದ್' ಪದಕವನ್ನು ಮರಳಿಸಿದರು. ತಾವೇ ಸಂಪಾದಿಸುತ್ತಿದ್ದ 'ಯಂಗ್ ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳಲ್ಲಿ, ತಮ್ಮ ಅಹಿಂಸಾತ್ಮಕವಾದ ಸತ್ಯಾಗ್ರಹದಲ್ಲಿ ಅಡಕವಾಗಿರುವ ಕಟ್ಟುಪಾಡುಗಳ ಬಗ್ಗೆ ಲೇಖನಗಳನ್ನು ಬರೆದು ಜನರನ್ನು ನಾಡು ಕಟ್ಟುವ ಕೆಲಸಕ್ಕೆ ಸಿದ್ಧಪಡಿಸತೊಡಗಿದರು.

ಆಳುವ ಸರಕಾರಕ್ಕೆ ಅಹಿಂಸಾತ್ಮಕವಾಗಿ ಅಸಹಕಾರ ನೀಡುವ ಮೂಲಕವೇ ಆಳುವವರನ್ನು ಮಣಿಸಲು ಸಾಧ್ಯವೆಂಬುದನ್ನು ಉದಾಹರಣೆಗಳೊಂದಿಗೆ ಬರೆದರು. ಸರ್ವಧರ್ಮ ಸಮಭಾವ, ಅಸ್ಪೃಶ್ಯತೆಯ ನಿವಾರಣೆ, ಖಾದಿ ಮತ್ತು ಗ್ರಾಮೋದ್ಯೋಗ, ಗ್ರಾಮ ನೈರ್ಮಲ್ಯ, ವಯಸ್ಕರ ಶಿಕ್ಷಣ, ಆರ್ಥಿಕ ಸಮಾನತೆಗಳನ್ನು ಪ್ರತಿಪಾದಿಸಿದರು. ಅಂತೆಯೇ, ರಾಷ್ಟ್ರೀಯ ಸಂಪರ್ಕ ಭಾಷೆಯ ಅಗತ್ಯ, ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ, ರೈತರ ಕಲ್ಯಾಣ ಕಾರ್ಯಕ್ರಮಗಳು, ಆದಿವಾಸಿಗಳ ಉದ್ಧಾರ, ಕುಷ್ಠರೋಗ ನಿವಾರಣೆ, ವಿದ್ಯಾರ್ಥಿಗಳ ಅಭಿವೃದ್ಧಿಗೆ ಮಾಡಬೇಕಾದ ಕೆಲಸಗಳು, ಹೀಗೆ ಎಲ್ಲವನ್ನೂ ವಿವರಿಸತೊಡಗಿದರು. ಗಾಂಧೀಜಿಯ ಮಾತುಗಳನ್ನು ಜನರು ನಿಧಾನವಾಗಿ ಅರ್ಥಮಾಡಿಕೊಳ್ಳತೊಡಗಿದರು.

ಅಕ್ಷರ ಬಲ್ಲವರು ಅನಕ್ಷರಸ್ಥರಿಗೆ ಗಾಂಧೀಜಿಯ ಕತೆ ಹೇಳತೊಡಗಿದರು, ಗಾಂಧೀಜಿಯ ಸಂದೇಶವನ್ನು ವಿವರಿಸತೊಡಗಿದರು. ಊರು ಕೇರಿಗಳು, ಸಂತೆ ಮಾಳಗಳು, ಬಸ್-ರೈಲು ನಿಲ್ದಾಣಗಳು, ಗಾಂಧೀಜಿಯು ಪ್ರತಿಪಾದಿಸುವ 'ಸತ್ಯಾಗ್ರಹ'ದ ಮಹತ್ವವನ್ನು ಕಲಿಸುವ ತರಗತಿಗಳಾದವು.

ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳ ಜತೆ ಅಧ್ಯಾಪಕರುಗಳೂ ಅಸಹಕಾರ ಚಳುವಳಿಯಲ್ಲಿ ನಾಯಕತ್ವ ವಹಿಸತೊಡಗಿದರು. ಸರಳ ಜೀವನ, ಖಾದಿ ಬಟ್ಟೆ ಧರಿಸುವುದು, ಸಮಾಜದ ಬಡಜನರ ಸೇವೆ ಮಾಡುವುದು ಇವೆಲ್ಲವೂ ಗೌರವದ ಸಂಕೇತಗಳಾದವು.

ದೇಶದ ಹಲವು ಮಹಾನಗರಗಳಲ್ಲಿ ಸ್ಥಳೀಯವಾಗಿ ನಡೆದ ಚುನಾವಣೆಗಳಲ್ಲಿ ಜನಸೇವಕರು ಗೆದ್ದುಬರತೊಡಗಿದರು. ಕಲಕತ್ತಾದಲ್ಲಿ ದೇಶಬಂಧು ಸಿ.ಆರ್. ದಾಸ್, ಬೊಂಬಾಯಿಯಲ್ಲಿ ವಿಠಲಭಾಯಿ ಪಟೇಲ್, ಅಹಮದಾಬಾದಿನಲ್ಲಿ ವಲ್ಲಭಭಾಯಿ ಪಟೇಲ್, ಪಾಟ್ನಾದಲ್ಲಿ ಬಾಬು ರಾಜೇಂದ್ರ ಪ್ರಸಾದ್, ಅಲಹಾಬಾದಿನಲ್ಲಿ ಜವಾಹರಲಾಲ್ ನೆಹರೂ ಜನನಾಯಕರಾಗಿ ಮೂಡಿ ಬಂದರು.

ಇಂತಹ ನೂರಾರು ಹಿರಿಯ ವಕೀಲರುಗಳ ಬೆನ್ನಹಿಂದೆ ಸಾವಿರಾರು ವಕೀಲರುಗಳು, ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಅಸಹಕಾರ ಚಳುವಳಿಯ ನೇತೃತ್ವ ವಹಿಸಿದರು. ಸುಭಾಸ್ ಚಂದ್ರ ಬೋಸ್, ಸರೋಜಿನಿ ನಾಯ್ಡು, ಲಾಲಾ ಲಜಪತರಾಯ್, ಖಾನ್ ಅಬ್ದುಲ್ ಗಫ್ಫಾರ್ ಖಾನ್, ಮೌಲಾನ ಅಬ್ದುಲ್ ಕಲಾಮ್ ಅಜಾದ್, ಅಸಫ್ಹಾಲಿ, ಹಕೀಮ್ ಅಜಮಲ್ ಖಾನ್, ಡಾ. ನ. ಸು. ಹರ್ಡಿಕರ್, ಚಿತ್ತರಂಜನದಾಸ್, ಹೀಗೆ ನೂರಾರು ಗಣ್ಯರು ಗಾಂಧೀಜಿಯ ಸತ್ಯಾಗ್ರಹಕ್ಕೆ ಬೆಂಬಲವಾಗಿ ನಿಂತರು. ಸರಕಾರದ ಉದ್ಯೋಗದಲ್ಲಿದ್ದವರು ಕೆಲಸ ಬಿಟ್ಟು ಬಂದರು; ವಿದ್ಯಾರ್ಥಿಗಳು, ಶಿಕ್ಷಕರು ಸರಕಾರೀ ಶಾಲೆಗಳಿಗೆ ಬೀಗ ಜಡಿದು ರಸ್ತೆಗಿಳಿದರು.

ಬ್ರಿಟಿಷರ ಆಗಮನದಿಂದ ನಿಂತುಹೋಗಿದ್ದ ಕೈಮಗ್ಗದ ರಾಟೆಗಳು ಮತ್ತೊಮ್ಮೆ ಗರಗರನೆ ತಿರುಗ ತೊಡಗಿದವು. ರಸ್ತೆಯಲ್ಲೆಲ್ಲ ಖಾದಿ ವಸ್ತ್ರ ತೊಟ್ಟವರೇ ಕಾಣಿಸಲಾರಂಭಿಸಿದರು. ಗಾಂಧೀ ಟೋಪಿ ಎಲ್ಲರ ತಲೆಗಳಲ್ಲೂ ಶೋಭಿಸತೊಡಗಿದವು. ದೇಶದ ತುಂಬೆಲ್ಲ ಸಂಚರಿಸಿದ ಗಾಂಧೀಜಿ, ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಿ ಭಾಷಣಗಳನ್ನು ಮಾಡುತ್ತಾ ಜನರನ್ನು ಅಹಿಂಸಾತ್ಮಕ ಹೋರಾಟಕ್ಕೆ ಸಿದ್ಧಗೊಳಿಸತೊಡಗಿದರು; ಊರೂರು ತಿರುಗುತ್ತಾ ಭಾಷಣ ಮಾಡುತ್ತಾ ಜನಸಂಘಟನೆ ಮಾಡಿದರು. ದೆಹಲಿಯ ಸಿಂಹಾಸನದ ಕಾಲುಗಳಿಗೆ ನಡುಕ ಆರಂಭವಾಯಿತು.

ಗಾಂಧೀಜಿಯ ಜನಪ್ರಿಯತೆಯನ್ನು ನಿಯಂತ್ರಿಸದೆ ಹೋದರೆ, ತಮ್ಮ ಸಿಂಹಾಸನ ಉರುಳುವುದು ಖಂಡಿತವೆಂಬುದು ಬ್ರಿಟಿಷರಿಗೆ ಮನದಟ್ಟಾಗಿತ್ತು. ಗಾಂಧೀಜಿಯನ್ನು ಬಂಧಿಸಿ ಸ್ವಲ್ಪ ಕಾಲವಾದರೂ ಜನರಿಂದ ದೂರ ಮಾಡುವ ಅವಕಾಶಕ್ಕಾಗಿ ಅವರು ಚಾತಕ ಪಕ್ಷಿಯಂತೆ ಕಾಯುತ್ತಿದ್ದರು. ಅವರಿಗೆ ಆ ಅವಕಾಶವನ್ನು ಬಲುಬೇಗ ಚಳುವಳಿಗಾರರೇ ಒದಗಿಸಿಕೊಟ್ಟರು.

ಗೋರಖ್‌ಪುರಕ್ಕೆ ಸಮೀಪದಲ್ಲಿದ್ದ ಚೌರಿಚೌರಾ ಎಂಬ ಊರಿನಲ್ಲಿ ಸತ್ಯಾಗ್ರಹಿಗಳ ಗುಂಪೊಂದು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಹೊರಟಿತ್ತು. ಶಾಂತವಾಗಿಯೇ ಸಾಗುತ್ತಿದ್ದ ಮೆರವಣಿಗೆಯನ್ನು ಪೋಲೀಸನೊಬ್ಬ ಕೆಣಕಿದ್ದ. ಜನರು ಒಮ್ಮಿಂದೊಮ್ಮೆಗೆ ರೊಚ್ಚಿಗೆದ್ದು ಬಿಟ್ಟರು. ಅತಿಯಾದ ಆವೇಶದ ಹುಚ್ಚಿನಲ್ಲಿ, ಪೋಲಿಸ್ ಸ್ಟೇಶನ್‌ನಲ್ಲಿದ್ದ ಇಪ್ಪತ್ತೆಂಟು ಪೋಲೀಸರನ್ನು

ಬೆಂಕಿಯಲ್ಲಿ ಸುಟ್ಟು ಕೊಂದುಬಿಟ್ಟರು; ಗಾಂಧೀಜಿಯನ್ನು ಬಂಧಿಸಲು ಹೊಂಚುಹಾಕುತ್ತಿದ್ದ ಬಿಳಿಯರ ಆಸೆಯನ್ನು ಸತ್ಯಾಗ್ರಹಿಗಳೇ ಪೂರೈಸಿಬಿಟ್ಟಿದ್ದರು.

ತಮ್ಮ ಸತ್ಯಾಗ್ರಹದ ಕಲ್ಪನೆಗೆ ವಿರೋಧವಾಗಿ ನಡೆದ ಈ ಘಟನೆಯಿಂದ ಗಾಂಧೀಜಿ ಬಹಳವಾಗಿ ನೊಂದುಕೊಂಡರು. ಪ್ರಾಯಶ್ಚಿತ್ತವಾಗಿ ಐದು ದಿನಗಳ ಉಪವಾಸ ವ್ರತ ತೊಟ್ಟರು. ಗಾಂಧೀಜಿ ಉಪವಾಸ ನಿಲ್ಲಿಸಿದ ನಂತರ, ಪೋಲೀಸರು ಸಬರಮತಿ ಆಶ್ರಮಕ್ಕೆ ದಾಳಿಯಿಟ್ಟರು. ಗಾಂಧೀಜಿಯ ವಿರುದ್ಧ ರಾಜದ್ರೋಹದ ಆಪಾದನೆ ಹೊರಿಸಿ ಬಂಧಿಸಿ ಕರೆದುಕೊಂಡು ಹೋದರು.

ಗಾಂಧೀಜಿ ತಮ್ಮ ಮೇಲೆ ಹೊರಿಸಿದ ಆರೋಪವನ್ನು ನ್ಯಾಯಾಲಯದಲ್ಲಿ ಅಲ್ಲಗಳೆಯಲಿಲ್ಲ. ಗಾಂಧೀಜಿಯ ಮಾತುಗಳಿಂದ ಪ್ರಭಾವಿತರಾದ ನ್ಯಾಯಾಧೀಶ ಬ್ಲೂಮ್ ಫೀಲ್ಡ್ ಎದ್ದುನಿಂತು ಗಾಂಧೀಜಿಗೆ ಗೌರವ ಅರ್ಪಿಸಿದರು; ಬಳಿಕ ಆರು ವರ್ಷಗಳ ಶಿಕ್ಷೆ ವಿಧಿಸಿರುವುದಾಗಿ ತೀರ್ಪು ನೀಡಿ ಗಾಂಧೀಜಿಯನ್ನು ಜೈಲಿಗೆ ಕಳುಹಿಸಿದರು.

ಜೈಲಿನಲ್ಲಿ ಸಾಧಾರಣ ಕೈದಿಯಂತೆಯೇ ಬದುಕುತ್ತಿದ್ದ ಗಾಂಧೀಜಿ ' ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ಪುಸ್ತಕ ಬರೆದರು. ಸಾಮಾನ್ಯ ಕೈದಿಯಂತೆಯೇ ಜೈಲಿನಲ್ಲಿ ಎರಡನೇ ವರ್ಷದ ಶಿಕ್ಷೆ ಅನುಭವಿಸುತ್ತಿದ್ದ ಗಾಂಧೀಜಿ, ಕರುಳುಬೇನೆಗಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಅನಾರೋಗ್ಯ ದಿಂದಿದ್ದ ಗಾಂಧೀಜಿಯನ್ನು ಜೈಲಿನಲ್ಲಿಟ್ಟರೆ ಅಪಾಯವೆಂದು ಮನಗಂಡ ಸರಕಾರವು ಅವರನ್ನು ಬಿಡುಗಡೆ ಮಾಡಿತು.

ಆ ದಿನಗಳಲ್ಲಿ ದೇಶದೊಳಗೆ ನಡೆಯುತ್ತಿದ್ದ ಎಲ್ಲ ಮುಷ್ಕರಗಳನ್ನೂ ಬ್ರಿಟಿಷರು ತಮ್ಮ 'ಒಡೆದು ಆಳುವ ನೀತಿ' ಮೂಲಕ ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟಿ ಸದೆಬಡಿಯಲಾರಂಭಿಸಿದ್ದರು. ಭಾರತೀಯರ ಒಗ್ಗಟ್ಟಿನ ಸ್ವಾತಂತ್ರ್ಯದ ದಾಹವನ್ನು ಅಳಿಸಿಹಾಕಲು, ಹಿಂದುಗಳನ್ನು ಮುಸ್ಲಿಮರ ವಿರುದ್ಧ, ಮುಸ್ಲಿಮರನ್ನು ಹಿಂದುಗಳ ವಿರುದ್ಧ ಎತ್ತಿ ಕಟ್ಟುವ ಆಟವಾಡಲಾರಂಭಿಸಿದರು. ಊರೊಳಗೆ ನಡೆಯುವ ಸಣ್ಣ ಪುಟ್ಟ ಜಗಳಗಳಿಗೂ ಕೋಮುಬಣ್ಣ ಬಳಿದು ಊರಿಗೆ ಊರೇ ಉರಿಯುವಂತೆ ಮಾಡುತ್ತಿದ್ದರು. ಇದರಿಂದ ನೊಂದ ಗಾಂಧೀಜಿ, ಇಪ್ಪತ್ತೊಂದು ದಿನಗಳ ಉಪವಾಸ ವ್ರತ ತೊಟ್ಟು 'ಕೋಮು ಸೌಹಾರ್ದ'ಕ್ಕಾಗಿ ಪ್ರಾರ್ಥಿಸಿದರು.

ಅದೇ ದಿನಗಳಲ್ಲಿ 'ಅಖಿಲಭಾರತ ನೇಕಾರರ ಸಂಘ'ವನ್ನು ಹುಟ್ಟು ಹಾಕಿದ ಗಾಂಧೀಜಿ, ದೇಶೀ ಚಳುವಳಿಗೆ ಮರುಜೀವ ತುಂಬಿದರು. ಖಾದಿಯ ಪ್ರಚಾರಕ್ಕಾಗಿ ದೇಶದ ಉದ್ದಗಲಕ್ಕೂ ಸಂಚಾರ ಮಾಡಿದರು. ಜನರಿಗೆ ಸ್ವದೇಶೀ ವಸ್ತುಗಳ ಮಹತ್ವವನ್ನು ವಿವರಿಸಲು ವಿದೇಶೀ ವಸ್ತ್ರವನ್ನು ಸುಡುವ ಚಳುವಳಿ ನಡೆಸಿದರು. ಬಾರ್ದೋಲಿಯಲ್ಲಿ ನಡೆದ ರೈತರ ಸತ್ಯಾಗ್ರಹವನ್ನು ಮುನ್ನಡೆಸಿ ರೈತರಲ್ಲಿ ಆತ್ಮವಿಶ್ವಾಸ ತುಂಬಿದರು.

ದೇಶಾದ್ಯಂತ ನಡೆಯತೊಡಗಿದ್ದ 'ಸ್ವಾತಂತ್ರ್ಯ ಸಮರ'ದ ಬಿಸಿ ಲಂಡನ್ನಿಗೂ ಮುಟ್ಟಿತು. ಕಣ್ಣೊರೆಸುವ ತಂತ್ರವಾಗಿ, ಭಾರತೀಯರು ಸ್ವರಾಜ್ಯ ಪಡೆಯಲು ಯೋಗ್ಯರಿದ್ದಾರೆಯೇ ಇಲ್ಲವೇ ಎಂಬುದನ್ನು

ಸಮೀಕ್ಷೆ ಮಾಡಿ ವರದಿ ಸಲ್ಲಿಸಲು, ಸರ್ ಜಾನ್ ಸೈಮನ್ ಎಂಬವರ ನೇತೃತ್ವದಲ್ಲಿ ಆಯೋಗವೊದನ್ನು ಬ್ರಿಟಿಷ್ ಸರಕಾರವು ಕಳುಹಿಸಿತು. ಆ ಸಮಿತಿಯಲ್ಲಿ ಭಾರತೀಯರಿಗೆ ಪ್ರತಿನಿಧಿತ್ವ ಇದ್ದಿರಲಿಲ್ಲ. ಇದರಿಂದ ರೋಷಗೊಂಡ ಕಾಂಗ್ರೆಸ್ ನಾಯಕರು ಪ್ರತಿಭಟನೆಗೆ ಕರೆ ನೀಡಿದರು. ದೇಶಕ್ಕೆ ದೇಶವೇ ಪ್ರತಿಭಟಿಸಿತು. 'ಸೈಮನ್ ಹಿಂದಕ್ಕೆ ನಡಿ' ಎಂಬ ಘೋಷಣೆ ಮುಗಿಲು ಮುಟ್ಟಿತು.

ಪೋಲಿಸರಿಂದ ಬಂಧಿಸಲ್ಪಡುವುದು ಮತ್ತು ನ್ಯಾಯಾಲಯದಿಂದ ಬಿಡುಗಡೆಗೊಳ್ಳುವುದು ಎರಡೂ ಜನಸಾಮಾನ್ಯರ ದಿನಚರಿಯೇ ಆಗಿ ಹೋಯಿತು. ಗಾಂಧೀಜಿ, ತಾವೇ ಪ್ರಕಟಿಸುತ್ತಿದ್ದ 'ಯಂಗ್ ಇಂಡಿಯಾ' ವಾರಪತ್ರಿಕೆಯಲ್ಲಿ 'ಸತ್ಯಶೋಧನೆ' ಎಂಬ ಆತ್ಮಕತೆಯನ್ನು ಪ್ರಕಟಿಸತೊಡಗಿದರು. ಅದೇ ಸಮಯದಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ, ಅದಾಗಲೇ ಜನಪ್ರಿಯರಾಗಿದ್ದ ಜವಾಹರಲಾಲ್ ನೆಹರೂ ಎಂಬ ಹೊಳಪು ಕಣ್ಣುಗಳ ಸುಂದರ ಯುವಕನನ್ನು, ತನ್ನ ರಾಜಕೀಯ ಉತ್ತರಾಧಿಕಾರಿ ಎಂದು ಗಾಂಧೀಜಿ ಘೋಷಿಸಿದರು.

## ಬರಿಮೈ ತಣ್ಣಗೆ...

'ದೇಶದ ಆಡಳಿತದ ಜವಾಬ್ದಾರಿಯನ್ನು ಹೊರಲು ಹೋರಾಡುತ್ತಿರುವ ನಾವೆಲ್ಲ ಇನ್ನು ಮುಂದೆ ಉಪ್ಪಿನ ಚೀಲ ಹೊರಬೇಕೇ?!'

ವಾರ್ಧಾದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರೀ ಸಭೆಯಲ್ಲಿ ಗಾಂಧೀಜಿ 'ಉಪ್ಪಿನ ಸತ್ಯಾಗ್ರಹ'ದ ಸಲಹೆ ನೀಡಿದಾಗ, ಕಾಂಗ್ರೆಸ್ಸಿನ ಅಧ್ಯಕ್ಷ ಜವಾಹರಲಾಲ ನೆಹರೂ ನಕ್ಕು ಪ್ರಶ್ನಿಸಿದ್ದರು, 'ಬಾಪೂ, ನಿಮಗೆ ಇದಕ್ಕಿಂತ ತಮಾಶೆಯಾದ ಬೇರೆ ಸಲಹೆಗಳು ಹೊಳೆಯುವುದೇ ಇಲ್ಲವೆ?'

ನೆಹರೂ ಬಗ್ಗೆ ಬಹಳ ಪ್ರೀತಿ ಮತ್ತು ಭರವಸೆಗಳನ್ನು ಇರಿಸಿಕೊಂಡಿದ್ದ ಗಾಂಧೀಜಿಯೂ ಮನಸಾರೆ ನಗುತ್ತಾ, 'ಸಲಹೆಗಳೇನೋ ಸಾವಿರದಷ್ಟು ಹೊಳೆಯುತ್ತವೆ. ಆದರೆ ಇಡೀ ದೇಶದ ಎಲ್ಲ ಜಾತಿಯ ಜನರಿಗೆ ಅರ್ಥವಾಗುವ ಮತ್ತು ಎಲ್ಲರೂ ಭಾಗವಹಿಸಲು ಸಾಧ್ಯವಾಗುವ ಸತ್ಯಾಗ್ರಹ ಚಳುವಳಿ ಇದೊಂದೇ. ಹೇಗೂ ಬಿಳಿಯರ ಸರಕಾರವು ಉಪ್ಪಿನ ತಯಾರಕರ ಮೇಲೆ ತೆರಿಗೆ ವಿಧಿಸಿದೆ. ಈ ತೆರಿಗೆಯನ್ನು ವಿರೋಧಿಸುವುದೆಂದರೆ ಅವರ ಶಾಸನವನ್ನು ಭಂಗ ಮಾಡಿದಂತಾಗುತ್ತದೆ. ಕಳೆದೊಂದು ವರ್ಷದಲ್ಲಿ ನಾವು ದೇಶವಿಡೀ ಭಾಗವಹಿಸುವಂತಹ ಯಾವುದೇ ಚಳುವಳಿ ನಡೆಸಲಾಗಲಿಲ್ಲ. ನಾವು ನಾಯಕರೆನ್ನಿಸಿಕೊಂಡವರನ್ನು ಬಿಟ್ಟರೆ ಬೇರೆಯವರೆಲ್ಲ ಸ್ವಾತಂತ್ರ್ಯದ ಬಗ್ಗೆ ನಿರುತ್ಸಾಹ ತೋರುತ್ತಿದ್ದಾರೇನೋ ಎಂಬ ಯೋಚನೆ ಬರತೊಡಗಿದೆ. ಏನಂತೀರೀ?' ಎಂದು ಪ್ರಶ್ನಿಸಿದ್ದರು.

ಯಾರೂ ಏನೂ ಅನ್ನಲಿಲ್ಲ. ಎಲ್ಲವನ್ನೂ ಸರಿಯಾಗಿಯೇ ಯೋಚಿಸಿದ ಬಳಿಕವೇ ಗಾಂಧೀಜಿ ಸಲಹೆ ನೀಡುತ್ತಾರೆ ಮತ್ತು ಒಮ್ಮೆ ನಿರ್ಧರಿಸಿದ ನಂತರ ಅದನ್ನು ಸಾಧಿಸಲು ಅವರು ಏನು

ಬೇಕಾದರೂ ಮಾಡುವವರು ಎಂಬುದು ಕಾರ್ಯಕಾರೀ ಸಮಿತಿಯ ಎಲ್ಲರಿಗೂ ಗೊತ್ತಿರುವ ಗುಟ್ಟು. ಸಮಿತಿಯ ಸದಸ್ಯರೆಲ್ಲ ಸರ್ವಾನುಮತದಿಂದ ಗಾಂಧೀಜಿಯ ಸಲಹೆಯನ್ನು ಅನುಮೋದಿಸಿದರು.

ಲಾರ್ಡ್ ಇರ್ವಿನರ ಸರಕಾರಕ್ಕೆ ಕಾನೂನು ಭಂಗ ಚಳುವಳಿಯ ನೋಟೀಸು ಹೋಯಿತು. ಉಪ್ಪಿನ ತಯಾರಕರ ಮೇಲೆ ವಿಧಿಸಲಾಗಿರುವ ತೆರಿಗೆಯನ್ನು ಹಿಂದಕ್ಕೆ ಪಡೆಯುವಂತೆ ಪ್ರಾರ್ಥಿಸಲಾಯಿತು. ಸರಕಾರವು ಯಥಾಪ್ರಕಾರ ಚಳುವಳಿಗಾರರ ವಿನಂತಿಯನ್ನು ತಳ್ಳಿ ಹಾಕಿತು. ಉಪ್ಪಿನ ಸತ್ಯಾಗ್ರಹದ ಘೋಷಣೆಯಾಯಿತು.

ಸಬರಮತಿ ಆಶ್ರಮದಿಂದ ಸುಮಾರು ಇನ್ನೂರ ನಲುವತ್ತು ಮೈಲಿ ದೂರದಲ್ಲಿರುವ ದಂಡಿ ಎಂಬ ಪುಟ್ಟ ಹಳ್ಳಿಯಲ್ಲಿ ಬದುಕುವ ಬಡ ಜನರಿಗೆ, ಉಪ್ಪು ತಯಾರಿಸಿ ಮಾರುವುದೇ ಕುಲ ಕಸುಬು. ಆಶ್ರಮದಿಂದ ದಂಡಿಯ ವರೆಗಿನ ಇಪ್ಪತ್ತನಾಲ್ಕು ದಿನಗಳ ಪಾದಯಾತ್ರೆ ಮಾಡಲಿರುವ ಎಪ್ಪತ್ತೊಂಭತ್ತು ಮಂದಿ ಸತ್ಯಾಗ್ರಹಿಗಳಿಗೆ ಸಬರಮತಿ ಆಶ್ರಮದಲ್ಲಿ ಇಪ್ಪತ್ತೊಂದು ದಿನಗಳ ತರಬೇತಿ ಶಿಬಿರ ನಡೆಯಿತು. ತರಬೇತಿಯ ಬಳಿಕ ತುಂಡು ಖಾದಿಯುಟ್ಟ, ಕೋಲಿನಾಸರೆಯಲ್ಲಿ ಹೆಜ್ಜೆಯಳೆಯುವ ಕಡ್ಡಿ ದೇಹದ ಅರುವತ್ತರ ಅರೆಬೆತ್ತಲ ಹುಡುಗ ಗಾಂಧೀಜಿಯ ಬೆನ್ನಹಿಂದೆ ಊರಿಗೆ ಊರೇ ಹೊರಟಿತು.

ದಿನವೊಂದರ ಹತ್ತು ಮೈಲಿಯಂತೆ ಇಪ್ಪತ್ತೈದು ದಿನಗಳ ಪಾದಯಾತ್ರೆ. 'ರಾಮನಾಮ'ದ ರಾಗಕ್ಕೆ ತಾಳ ಹಾಕುವ ಸಾವಿರಾರು ಜೋಡಿ ಹೆಜ್ಜೆಗಳು. ತಂಗಿದ ಪ್ರತಿಯೊಂದು ಹಳ್ಳಿಯಲ್ಲೂ 'ರಾತ್ರಿಸಭೆ'ಗಳು. ಜಾತಿಪದ್ಧತಿಯ ಕಳಂಕ, ಅಸ್ಪೃಶ್ಯತೆಯ ಶಾಪ, ಕುಡಿತದ ದುಷ್ಪರಿಣಾಮ, ಖಾದಿಯ ಮಹತ್ವಗಳ ಬಗ್ಗೆ ನೇತಾರರಿಂದ ಭಾಷಣಗಳು.

ಉತ್ಸಾಹಗೊಳ್ಳುತ್ತಿದ್ದ ಗ್ರಾಮಸ್ಥರು, ಮರುದಿನದ ಯಾತ್ರೆಯಲ್ಲಿ ಜತೆಗೂಡುತ್ತಿದ್ದರು. ಗಂಡಸರು, ಹೆಂಗಸರು, ಮಕ್ಕಳು ಎಷ್ಟು ದೂರ ಸಾಧ್ಯವೋ ಅಷ್ಟು ದೂರ ನಡೆದು ಬಂದು ಬೀಳ್ಕೊಡುತ್ತಿದ್ದರು. ದಂಡೀಯಾತ್ರೆಯ ಸುದ್ದಿಯನ್ನು ವರದಿ ಮಾಡುವಲ್ಲಿ ದೇಶವಿದೇಶಗಳ ಪತ್ರಕರ್ತರ ನಡುವೆ ಸ್ಪರ್ಧೆ ಏರ್ಪಟ್ಟಂತಿತ್ತು. ಜಾಗತಿಕ ಪತ್ರಿಕೆಗಳಲ್ಲಿ 'ದಂಡಿಯಾತ್ರೆ' ಪ್ರತಿದಿನವೂ ಮುಖಪುಟದ ಸುದ್ದಿ; ಬಿಳಿಯರ ಬೆವರಿಳಿಸಿ ಅದರಿಂದಲೂ ಉಪ್ಪು ಸೋಸಬಲ್ಲ ಬರಿಮೈ ಫಕೀರನ ನಗುವ ಭಾವಚಿತ್ರ.

ಬ್ರಿಟಿಷ್ ಸರಕಾರಕ್ಕೆ ಉಪ್ಪಿನ ಸತ್ಯಾಗ್ರಹವು ನುಂಗಲಾರದ ತುತ್ತಾಯಿತು. ಸತ್ಯಾಗ್ರಹಿಗಳು ತಂಗುತ್ತಿದ್ದ ಪ್ರತಿಯೊಂದು ಊರಿನಲ್ಲಿ ನಡೆಯುತ್ತಿದ್ದ 'ರಾತ್ರಿಸಭೆ'ಗಳಿಗೆ ಸಹಸ್ರ ಸಂಖ್ಯೆಯಲ್ಲಿ ಜನರು ಬರುತ್ತಿದ್ದರೂ ಯಾವುದೇ ಗದ್ದಲವಾಗುತ್ತಿರಲಿಲ್ಲ. ಅಲ್ಲಿ ಹಿಂಸೆಗೆ ಅವಕಾಶವೇ ಇರಲಿಲ್ಲ. ಸಭೆಗಳಿಗೆ ಜನರನ್ನು ಬಾರದಂತೆ ತಡೆದು ಪತ್ರಿಕೆಗಳಿಗೆ ಆಹಾರವಾಗುವುದು ಸರಕಾರಕ್ಕೂ ಬೇಕಿದ್ದಿರಲಿಲ್ಲ. ಕಾನೂನು ಭಂಗವಾಗುವ ತನಕವೂ ಪೋಲೀಸರಿಗೆ ಕೆಲಸವಿದ್ದಿರಲಿಲ್ಲ. ಗಾಂಧೀಜಿಯ ಹೆಜ್ಜೆಯಲ್ಲಿ ಹೆಜ್ಜೆಯಿರಿಸಿ

ಇಪ್ಪತ್ತನಾಲ್ಕು ದಿನಗಳ ಕಾಲ ನಡೆದು ಬಂದ ಸಾವಿರಾರು ಸತ್ಯಾಗ್ರಹಿಗಳು, ಇಪ್ಪತ್ತೈದನೆಯ ದಿನ ದಂಡಿಯ ಕಡಲ ಕಿನಾರೆ ತಲುಪಿದಾಗ, ಸ್ವಾಗತಕ್ಕೆ ಸೇರಿದ್ದ ಲಕ್ಷಕ್ಕೂ ಹೆಚ್ಚು ಮಂದಿ ಕಡಲಿನ ಭೋರ್ಗರೆತವನ್ನೂ ಮೀರಿಸಿ ಜಯಘೋಷ ಕೂಗಿದ್ದರು.

'ನಾಳೆ ಬೆಳಗ್ಗೆ ಉಪ್ಪು ತಯಾರಿಸುವ ಮೂಲಕ ಬ್ರಿಟಿಷ್ ಸರಕಾರವು ಅನ್ಯಾಯವಾಗಿ ವಿಧಿಸಿದ್ದ ಕಾನೂನನ್ನು ಮೊತ್ತ ಮೊದಲು ನಾನು ಭಂಗ ಮಾಡಲಿದ್ದೇನೆ. ನಂತರ, ಎರಡನೆಯವರಾಗಿ ನಿವೃತ್ತ ನ್ಯಾಯಾಧೀಶರಾಗಿರುವ ಅಬ್ಬಾಸ್ ಕಯಾಬ್ಜಿಯವರು ಕಾನೂನು ಭಂಗ ಮಾಡಲಿದ್ದಾರೆ. ಆ ನಂತರ, ಈ ದೇಶದ ಎಲ್ಲಜನರೂ ದೇಶದ ಎಲ್ಲ ಕಡೆಗಳಲ್ಲೂ ಇದೇ ರೀತಿಯಲ್ಲಿ ಅಹಿಂಸಾತ್ಮಕವಾದ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸುತ್ತಾರೆ.' ಎಂದು ಗಾಂಧೀಜಿ ಬಹಿರಂಗವಾಗಿ ಘೋಷಿದಾಗ ಆಡಳಿತ ಯಂತ್ರ ನಡುಗಿತು; ಭಯಪಟ್ಟ ಸೂರ್ಯ ತಪ್ಪಿಸಿಕೊಳ್ಳುವವನಂತೆ ಕಡಲೊಳಗೆ ಮುಳುಗಿಬಿಟ್ಟ.

ಮರುದಿನ ಗಾಂಧೀಜಿ ಸಮುದ್ರದಲ್ಲಿ ಸ್ನಾನ ಮಾಡಿ ಬಂದು ಒಂದು ಮುಷ್ಟಿಯಷ್ಟು ಉಪ್ಪನ್ನು ಕೈಯಲ್ಲಿ ಹಿಡಿದು ತೋರಿಸುತ್ತಾ, ' ನಾನು ಸರಕಾರವು ವಿಧಿಸಿದ ಕಾನೂನನ್ನು ಬಹಿರಂಗವಾಗಿ ಭಂಗ ಮಾಡಿದ್ದೇನೆ. ಈ ದೇಶದ ಪ್ರಜೆಗಳಾದ ನಾವು ಬ್ರಿಟಿಷರ ಆಡಳಿತದಲ್ಲಿರುವ ಗುಲಾಮಗಿರಿಯನ್ನು ಸಹಿಸಲಾರೆವು ಎಂಬುದರ ಸಂಕೇತ ಈ ಉಪ್ಪಿನ ಸತ್ಯಾಗ್ರಹ.' ಎಂದರು.

ಸರಕಾರಕ್ಕೆ ಬೇರೆ ದಾರಿಯೇ ಇದ್ದಿರಲಿಲ್ಲ. ತನ್ನೆಲ್ಲಾ ಕ್ರೌರ್ಯವನ್ನು ನಿರಾಯುಧರಾದ ಜನರ ಮೇಲೆ ಪ್ರಯೋಗಿಸಿತು. ಲಾಟಿ ಬೀಸಿತು, ಬೂಟುಗಾಲಲ್ಲಿ ತುಳಿಯಿತು, ಗುಂಡು ಹಾರಿಸಿತು. ಆದರೂ ಜನರು ಹಿಂಸೆಗಿಳಿಯಲಿಲ್ಲ; ಯಾರೂ ಕೈಯೆತ್ತಲಿಲ್ಲ. ಲಾಟಿಗೆ ಮೈಯೊಡ್ಡಿದರು; ಗುಂಡಿಗೆ ಎದೆಯೊಡ್ಡಿದರು. ಗಾಂಧೀಜಿ, ಮೋತಿಲಾಲ್ ನೆಹರೂ, ಸ್ವರೂಪರಾಣಿ ನೆಹರೂ, ಸರೋಜಿನಿದೇವಿ, ರಾಜೇಂದ್ರ ಪ್ರಸಾದ್, ರಾಜಾಜಿ, ಸರ್ದಾರ್ ಪಟೇಲ್, ಸುಭಾಸ್‌ಚಂದ್ರ ಭೋಸ್, ಆಚಾರ್ಯ ಕೃಪಲಾನಿ, ಮೌಲಾನಾ ಆಝಾದ್, ಅಸಫ್ ಆಲಿ, ನಾರಿಮನ್ ಮೊದಲಾದವರನ್ನೆಲ್ಲ ಪೋಲೀಸರು ಬಂಧಿಸಿ ಜೈಲಿಗೆ ತಳ್ಳಿದರು. ಆದರೆ ಸತ್ಯಾಗ್ರಹಿಗಳ ಉತ್ಸಾಹ ಕಡಿಮೆಯಾಗಲಿಲ್ಲ.

ದೇಶಾದ್ಯಂತ ಅಸಹಕಾರ, ಪ್ರತಿಭಟನೆ, ಮೆರವಣಿಗೆ, ಮುಷ್ಕರಗಳು ದಿನದಿಂದ ದಿನಕ್ಕೆ ಹೆಚ್ಚಾಗ ತೊಡಗಿದವು. ಗಾಂಧೀಜಿಯ ಒಡನಾಡಿಯಾಗಿದ್ದುಕೊಂಡು, ಗಡಿನಾಡ ಗಾಂಧಿಯೆಂದೇ ಕರೆಯಲ್ಪಡುತ್ತಿದ್ದ ಖಾನ್ ಅಬ್ದುಲ್ ಗಫಾರ್ ಖಾನರು, ಗಡಿನಾಡಿನಲ್ಲಿ ಸಾವಿರಾರು ಪಠಾಣರನ್ನು ಅಹಿಂಸಾತ್ಮಕ ಹೋರಾಟಕ್ಕೆ ಇಳಿಸಿಬಿಟ್ಟರು.

ಮೂವತ್ತು ಸಾವಿರ ನಾಯಕರುಗಳ ಜತೆ ಲಕ್ಷಾಂತರ ಸತ್ಯಾಗ್ರಹಿಗಳು ಜೈಲು ಸೇರಿದರು. ಜೈಲುಗಳೆಲ್ಲವೂ ಸತ್ಯಾಗ್ರಹಿಗಳಿಂದ ತುಂಬಿ ಹೋದವು. ಸರಕಾರಕ್ಕೆ ದಿಕ್ಕು ತೋಚದಂತಾಯಿತು. ಇಂಗ್ಲೆಂಡಿನ ಸಿಂಹಾಸನ ಅದುರತೊಡಗಿತು.

ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್ಡೊನಾಲ್ಡ್‌ರವರು ಲಂಡನ್ನಿನಿಂದ ಭಾರತದ ವೈಸರಾಯಿ ಲಾರ್ಡ್

ಇರ್ವಿನ್ನರಿಗೆ ಸಂದೇಶ ಕಳುಹಿಸಿದರು, 'ಇನ್ನು ತಡ ಮಾಡಿದರೆ ಅನಾಹುತವಾದೀತು. ಇಡಿಯ ಜಗತ್ತು ನಮ್ಮನ್ನೇ ದಿಟ್ಟಿಸಿ ನೋಡುತ್ತಿದೆ, ಗಾಂಧೀಜಿಯನ್ನು ಹೇಗಾದರೂ ಒಪ್ಪಿಸಿ ಲಂಡನ್ನಿಗೆ ಕಳುಹಿಸಿರಿ. ದುಂಡುಮೇಜಿನ ಸುತ್ತ ಕುಳಿತು ನಾವಿಲ್ಲಿ ಮಾತನಾಡಿ ಏನಾದರೊಂದು ತೀರ್ಮಾನ ಮಾಡುತ್ತೇವೆ.'

ಲಂಡನ್ನಿನ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧೀಜಿ ಉಟ್ಟಿದ್ದ ತುಂಡು ಬಟ್ಟೆಯಲ್ಲೇ ಹೊರಟುಬಿಟ್ಟಿದ್ದರು.

ಹಿಂದೊಮ್ಮೆ ಮದರಾಸು ಪ್ರಾಂತ್ಯದಲ್ಲಿ ಗಾಂಧೀಜಿ ಪ್ರವಾಸ ನಡೆಸುತ್ತಿದ್ದ ಸಂದರ್ಭದಲ್ಲಿ, ಅಲ್ಲಿಯ ರೈತರು ಬರಿಯ ಲಂಗೋಟಿಯಲ್ಲಿ ಹೊಲದ ಕೆಲಸ ಮಾಡುತ್ತಿರುವುದನ್ನು ಕಂಡು ತಮ್ಮ ಉಡುಪಿನ ಕ್ರಮವನ್ನೇ ಬದಲಿಸಿಕೊಂಡು ಬಿಟ್ಟಿದ್ದರು. ಒಂದು ತುಂಡು ಪಂಚೆ ಮತ್ತು ಹೆಗಲ ಮೇಲೊಂದು ತುಂಡು ಬೈರಾಸು ತೊಟ್ಟು, ಮಧುರೆಯ ನೇಕಾರರ ಸಭೆಯೊಂದರಲ್ಲಿ ಭಾಷಣ ಮಾಡಲು ಅಂದು ಗಾಂಧೀಜಿ ವೇದಿಕೆಯೇರಿದ್ದಾಗ ಅಲ್ಲಿ ಸೇರಿದ್ದ ಸಭಿಕರೆಲ್ಲ ರೋಮಾಂಚನಗೊಂಡಿದ್ದರು. ಅದೇ ರೀತಿಯಲ್ಲಿ ಇಂದು ಇಂಗ್ಲೆಂಡಿನಲ್ಲಿ, ಬರ್ನಾಡ್ ಷಾ, ಚಾರ್ಲಿ ಚಾಪ್ಲಿನ್, ಗಿಲ್ಬರ್ಟ್ ಮುರ್ರಿ, ಹೆರಾಲ್ಡ್ ಲಾಸ್ಕಿ ಮೊದಲಾದ ಜಗದ್ವಿಖ್ಯಾತ ಚಿಂತಕರು ಗಾಂಧೀಜಿಯ ತಣ್ಣನೆಯ ಬರಿಮೈ ಹಿಂದಿದ್ದ ಸ್ವಾತಂತ್ರ್ಯದ ಕೆಚ್ಚನ್ನು ಕಂಡು ಅಭಿನಂದಿಸಿದ್ದರು.

ಆದರೆ, ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್ಡೊನಾಲ್ಡ್‌ರವರು ಕರೆದ 'ದುಂಡುಮೇಜಿನ ಪರಿಷತ್ತಿನ' ಉದ್ದೇಶವೇ ಬೇರೆಯಿತ್ತು; ಭಾರತವನ್ನು ಒಡೆದು ಹೋಳು ಮಾಡುವುದಾಗಿತ್ತು. ಭಾರತವನ್ನು ಆಳುತ್ತಿದ್ದ ರಾಜಪರಂಪರೆಯ ಕೊನೆಯ ಕೊಂಡಿಗಳಾಗಿದ್ದ ಮಾಜಿ ರಾಜರುಗಳನ್ನು, ಬ್ರಿಟಿಷರ ಸರಕಾರದಲ್ಲಿಯೇ ಅಧಿಕಾರದ ರುಚಿ ಕಂಡ ಅಧಿಕಾರದಾಹಿಗಳನ್ನು, ಹಿಂದೂಗಳನ್ನು, ಸಿಖ್ಖರನ್ನು, ಮುಸಲ್ಮಾನರನ್ನು, ಕ್ರಿಶ್ಚಿಯನ್ನರನ್ನು, ಪಾರ್ಸಿಗಳನ್ನು, ಪರಿಶಿಷ್ಟ ಜಾತಿಯವರನ್ನು ಬೇರೆ ಬೇರೆ ಗುಂಪುಗಳಲ್ಲಿ ವಿಭಜಿಸಿ, ಈ ಎಲ್ಲ ಗುಂಪುಗಳಿಗೂ, ಸ್ವತಂತ್ರ ಭಾರತದ ಆಡಳಿತದಲ್ಲಿ ಸಮರ್ಪಕವಾದ ಸ್ಥಾನ ನೀಡಬೇಕೆಂಬ ಹೊಸ ಪ್ರಸ್ತಾಪವನ್ನು ಗಾಂಧೀಜಿಯ ಮುಂದಿಟ್ಟರು. ಗಾಂಧೀಜಿ ಈ ಸಲಹೆಯನ್ನು ಖಂಡತುಂಡವಾಗಿ ವಿರೋಧಿಸಿದರು.

'ಸ್ವತಂತ್ರ ಭಾರತವನ್ನು ಆಳುವ ಹಕ್ಕು ಕೇವಲ ಕಾಂಗ್ರೆಸ್‌ಗೆ ಮಾತ್ರವಿದೆ. ಅಂತೆಯೇ, ಸ್ವತಂತ್ರ ಭಾರತದಲ್ಲಿ ವಾಸಿಸುವ ಪ್ರತಿಯೊಂದು ಜಾತಿ, ಪಂಗಡ, ಧರ್ಮ, ಗುಂಪುಗಳಿಗೆ ನ್ಯಾಯ ವನ್ನೊದಗಿಸುವ ಜವಾಬ್ದಾರಿಯೂ ಕಾಂಗ್ರೆಸ್‌ಗೇ ಇದೆ. ಆದ್ದರಿಂದ ಇಡಿಯ ದೇಶದ ಜನರಿಗೆ, ಅವರ ಮೂಲಭೂತ ಹಕ್ಕಾದ ಸ್ವಾತಂತ್ರ್ಯವನ್ನು ಕೊಡಿರಿ. ಉಳಿದ್ದದ್ದನ್ನು ನಾವೇ ಪರಿಹರಿಸಿ ಕೊಳ್ಳುತ್ತೇವೆ.' ಎಂದರು ಗಾಂಧೀಜಿ. ಆದರೆ ಬ್ರಿಟಿಷರು ಗಾಂಧೀಜಿಯ ಈ ಸೂತ್ರವನ್ನು ಒಪ್ಪಲು ತಯಾರಿರಲಿಲ್ಲ.

ದೇಶವನ್ನು ಬ್ರಿಟಿಷರ ಆಳ್ವಿಕೆಯಲ್ಲಿಯೇ ಉಳಿಸಿಕೊಂಡು ಅಧಿಕಾರದ ಲಾಭ ಪಡೆಯಲು ಬಯಸಿದ್ದ

ಕೆಲವು ಜನನಾಯಕರು ಗಾಂಧೀಜಿಯ ವಾದವನ್ನು ವಿರೋಧಿಸುತ್ತಿದ್ದರು. ಇಂಥವರ ಸ್ವಾರ್ಥ ವಾದವನ್ನು ಬ್ರಿಟಿಷರು ಗಾಂಧೀಜಿಯ ವಿರುದ್ಧ ಯಶಸ್ವಿಯಾಗಿ ಬಳಸಿಕೊಂಡರು. ಆದರೆ, ದುಂಡುಮೇಜಿನ ಪರಿಷತ್ತಿನಲ್ಲಿ ತಮ್ಮ ಮೇಲೆ ಹೇರಲಾದ ಎಲ್ಲ ಬಗೆಯ ಒತ್ತಡ ತಂತ್ರಗಳನ್ನೂ ಗಾಂಧೀಜಿ ಬಂಡೆಯಂತೆ ಮೆಟ್ಟಿ ನಿಂತರು.

ದುಂಡುಮೇಜಿನ ಪರಿಷತ್ತಿನಲ್ಲಿ, ಬಿಳಿಯರಿಂದ ಮಂಡಿತವಾದ ಯಾವುದೇ ಸಲಹೆಗಳಿಗೂ ಗಾಂಧೀಜಿ ತಮ್ಮ ಸಮ್ಮತಿ ಸೂಚಿಸಲಿಲ್ಲ. ದಿನಗಳ ಮೇಲೆ ದಿನಗಳು ಉರುಳಿದವು. ಕೊನೆಗೆ ಇಂಗ್ಲೆಂಡಿನ ಚಕ್ರವರ್ತಿ ಜಾರ್ಜ್ ಸಾಹೇಬರನ್ನೂ ಅರಮನೆಯ ಶಿಷ್ಟಾಚಾರವನ್ನೆಲ್ಲ ಬದಿಗಿಟ್ಟು ಬರಿಮೈಯಲ್ಲೇ ಕಂಡು ಮಾತನಾಡಿಸಿದ್ದೂ ವ್ಯರ್ಥವಾಯಿತು.

ಹೋದ ಕೆಲಸವಾಗಲಿಲ್ಲ; ನಿರಾಶರಾದ ಬರಿಮೈ ಗಾಂಧೀಜಿ ಬರಿಗೈಯ್ಯಲ್ಲಿಯೇ ಮರಳಿದರು.

ಇಂಗ್ಲೆಂಡಿನಿಂದ ಸ್ವದೇಶಕ್ಕೆ ಮರಳಿಬಂದ ಗಾಂಧೀಜಿ ತಮ್ಮ ಅಸಹಕಾರ ಚಳುವಳಿಯನ್ನು ಮುಂದುವರಿಸಿದರು. ಸರಕಾರವೂ ಸಿಟ್ಟಿಗೆದ್ದಿತು. ಗಾಂಧೀಜಿಯನ್ನು ಬಂಧಿಸಿ ಸೆರೆಮನೆಯಲ್ಲಿ ಕೂಡಿ ಹಾಕಿತು. ಮುಸ್ಲಿಮರಿಗೂ, ಅಸ್ಪೃಶ್ಯರಿಗೂ ಪ್ರತ್ಯೇಕ ಚುನಾವಣೆಯ ಅವಕಾಶ ಕಲ್ಪಿಸುವ 'ಕಮ್ಯೂನಲ್ ಅವಾರ್ಡ್' (ಜಾತಿ ಆಧಾರಿತ ಮಸೂದೆ) ಪ್ರಕಟಿಸಿತು. ಈ ಮಸೂದೆಯನ್ನು ವಿರೋಧಿಸಿದ ಗಾಂಧೀಜಿ ಜೈಲಿನಲ್ಲೇ ಆಮರಣಾಂತ ಉಪವಾಸ ವ್ರತ ತೊಟ್ಟರು. ಜನರೆಲ್ಲ ರೊಚ್ಚಿಗೆದ್ದರು.

ಎಲ್ಲ ಜಾತಿಗಳ, ಎಲ್ಲ ಧರ್ಮಗಳ, ಎಲ್ಲ ಪಕ್ಷಗಳ ನಾಯಕರು ಆತಂಕಕ್ಕೊಳಗಾದರು. ಗಾಂಧೀಜಿಯ ಹಟ ಎಲ್ಲರಿಗೂ ಗೊತ್ತಿತ್ತು. ಎಲ್ಲ ಮುಖಂಡರೂ ಪರಸ್ಪರ ಸಂಧಾನ ನಡೆಸಿ ಒಂದು ಒಪ್ಪಂದಕ್ಕೆ ಬಂದರು. ಎಲ್ಲರೂ ಸಾಮೂಹಿಕವಾಗಿ ಸರಕಾರಕ್ಕೆ ಮೊರೆಯಿಟ್ಟರು. ಸರಕಾರವು ಕೊನೆಗೂ ಕರುಣೆ ತೋರಿತು. 'ಕಮ್ಯೂನಲ್ ಅವಾರ್ಡ್' ಹಿಂತೆಗೆದುಕೊಂಡಿರುವುದಾಗಿ ಆದೇಶ ಹೊರಡಿಸಿತು. ಗಾಂಧೀಜಿ ತಮ್ಮ ಉಪವಾಸವನ್ನು ನಿಲ್ಲಿಸಿದರು. ಗಾಂಧೀಜಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ಸೆರೆಮನೆಯಿಂದ ಹೊರಬರುತ್ತಿರುವಾಗಲೇ ಗಾಂಧೀಜಿ, ತಮ್ಮ ಮುಂದಿನ ಕಾರ್ಯಕ್ರಮದ ರೂಪವನ್ನು ನಿರ್ಧರಿಸಿಬಿಟ್ಟಿದ್ದರು. ತಮ್ಮ ಎಲ್ಲ ಶಕ್ತಿಯನ್ನೂ ಅಸ್ಪೃಶ್ಯರ ಉದ್ಧಾರಕ್ಕಾಗಿಯೇ ಮೀಸಲಿಟ್ಟ ಗಾಂಧೀಜಿ ಅಸ್ಪೃಶ್ಯರ ಸಂಘಟನೆಗೆ ಮುಂದಾದರು.

ಅಸ್ಪೃಶ್ಯರು ದೇವರ ಮಕ್ಕಳು. ಅವರು ದೇವರಿಗೆ ಹೆಚ್ಚು ಹತ್ತಿರವಾದವರು. ಆದ್ದರಿಂದ ಅವರನ್ನು 'ಹರಿಜನರು' ಎಂದು ಬಾಪೂಜಿ ಕರೆದರು. 'ಹರಿಜನ ಸೇವಕ ಸಂಘವನ್ನು' ಸ್ಥಾಪಿಸಿದರು. 'ಹರಿಜನ' ಎಂಬ ವಾರಪತ್ರಿಕೆ ಪ್ರಕಟಿಸಲಾರಂಭಿಸಿದರು. ತಮ್ಮ ಲೇಖನಗಳಲ್ಲಿ, ಅಸ್ಪೃಶ್ಯತೆಯನ್ನು ಹಿಂದೂ ಧರ್ಮದ ಶಾಪ ಎಂದರು. 'ಹಿಂದೂ ಧರ್ಮ ನಿರ್ನಾಮವಾದರೂ ಸಹಿಸಿಯೇನು, ಆದರೆ ಹಿಂದೂ ಧರ್ಮಕ್ಕೆ ಶಾಪದಂತೆ ಅಂಟಿಕೊಂಡಿರುವ ಅಸ್ಪೃಶ್ಯತೆಯನ್ನು ಸಹಿಸಲಾರೆ'. ಎಂದು ಬರೆದರು. ಹಿಂದೂ ದೇವಸ್ಥಾನಗಳಲ್ಲಿ ಹರಿಜನರಿಗೂ ಪ್ರವೇಶ ನೀಡುವಂತೆ ಗಾಂಧೀಜಿ ಕರೆ

ನೀಡಿದರು. ಗಾಂಧೀಜಿಯ ಕರೆಯನ್ನು ಗೌರವಿಸಿದ ಹಲವಾರು ದೇವಸ್ಥಾನಗಳು ಅಸ್ಪೃಶ್ಯರಿಗಾಗಿ ತಮ್ಮ ಬಾಗಿಲು ತೆರೆದವು. ಬರಿಮೈ ಫಕೀರನ ಹೆಜ್ಜೆಯಲ್ಲಿ ಹೆಜ್ಜೆಯಿರಿಸಿದ ಅಸ್ಪೃಶ್ಯರು ದೇವರ ದರ್ಶನ ಪಡೆದರು. ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯವನ್ನೊದಗಿಸುವ ಗಾಂಧೀಜಿಯವರ ಚಳುವಳಿಗೆ ಕವಿಗುರು ರವೀಂದ್ರನಾಥ ಟಾಗೋರ, ಡಾ. ಭೀಮರಾವ್ ಅಂಬೇಡ್ಕರ್, ಬಾಬು ಜಗಜೀವನರಾಮ್, ಡಾ. ರಾಜೇಂದ್ರ ಪ್ರಸಾದ್, ರಾಜಾಜಿ ಮೊದಲಾದ ಹಿರಿಯ ನಾಯಕರು ಬೆಂಬಲ ನೀಡಿದರು.

'ಬಾಪೂ', ಅಂಬೇಡ್ಕರ್ ಹೇಳಿದ್ದರು, 'ಅಂದು ಗೋಖಲೆಯವರು, ನಿಮಗೆ ಒಂದು ವರ್ಷದ ದೇಶ ಸಂಚಾರದ ಆದೇಶ ನೀಡುವ ಸಂದರ್ಭದಲ್ಲಿ ನೀಡಿದ್ದ ಸೂಚನೆ ನೆನಪಿದೆಯೇ? ಆ ಒಂದು ವರ್ಷ ನೀವು ಯಾವುದೇ ಹೇಳಿಕೆ ನೀಡಬಾರದು, ಸಾರ್ವಜನಿಕ ಸಭೆಯಲ್ಲಿ ಮಾತನಾಡಬಾರದು ಎಂದು ಅವರು ಹೇಳಿದ್ದರಲ್ಲವೇ?. ಇಂದು ನಾನು ನಿಮಗೊಂದು ಆದೇಶ ನೀಡುತ್ತಿದ್ದೇನೆ; ಇನ್ನೊಂದು ವರ್ಷ ನೀವು ಮತ್ತೊಮ್ಮೆ ದೇಶ ಸಂಚಾರ ಮಾಡಬೇಕು. ಹೋದಲ್ಲೆಲ್ಲಾ ಮಾತೂ ಆಡಬೇಕು. ಹೇಳಿಕೆಗಳನ್ನೂ ಕೊಡಬೇಕು. ಆದರೆ, ಆ ಮಾತು, ಹೇಳಿಕೆಗಳೆಲ್ಲವೂ ಅಸ್ಪೃಶ್ಯತೆಯ ಬಗ್ಗೆಯೇ ಇರಬೇಕು.'

'ಜೀ ಹುಜೂರ್' ಎಂದ ಗಾಂಧೀಜಿ ನಕ್ಕರು. ಪ್ರವಾಸದ ಸಿದ್ಧತೆ ನಡೆಸತೊಡಗಿದರು.

# ರಾಗಿಕುಮೇರಿನ ಬಾವಿ

'ಹಮಾರಾ ಟ್ರಾನ್ಸ್‌ಲೇಟರ್ ಜನರಲ್ ಕಹಾಂ ಹೇ?' ಹರಿಜನೋದ್ಧಾರ ಕಾರ್ಯಕ್ರಮದ ಪ್ರಚಾರಕ್ಕಾಗಿ, ಮೈಸೂರು ರಾಜ್ಯದ ಪುತ್ತೂರಿಗೆ ಹೋಗಿದ್ದ ಗಾಂಧೀಜಿ, ಪೇಟೆಬೀದಿಯಲ್ಲಿ ಸಾರ್ವಜನಿಕ ಸಭೆ ಆರಂಭಿಸುವ ಮೊದಲು, ತಮ್ಮ ಪಕ್ಕದಲ್ಲಿ ಕುಳಿತಿದ್ದ ವಕೀಲ ಸದಾಶಿವರಾಯರನ್ನು ಪ್ರಶ್ನಿಸಿದಾಗ, ವಕೀಲರು ಕಕ್ಕಾಬಿಕ್ಕಿ. ಗಾಂಧೀಜಿಯ ಹಿಂಬದಿಯಲ್ಲಿ ಮೀರಾಬೆನ್ ಜೊತೆಯಲ್ಲಿ ಮಾತನಾಡುತ್ತಾ ನಿಂತಿದ್ದ ಲೇಖಕ ಶಿವರಾಮ ಕಾರಂತರಿಗೆ, ಗಾಂಧೀಜಿಯ ಪ್ರಶ್ನೆಯೂ ಕೇಳಿಸಿತ್ತು; ಸದಾಶಿವರಾಯರ ಗಡಿಬಿಡಿಯೂ ಕಾಣಿಸುತ್ತಿತ್ತು. ವಕೀಲರ ಬೆನ್ನಿಗೆ ಬೆರಳಿನಿಂದ ತಿವಿದು ಎಚ್ಚರಿಸಿದ ಕಾರಂತರು, ವೇದಿಕೆಯ ಕೆಳಗೆ ಕುಕ್ಕರಗಾಲಲ್ಲಿ ಕುಳಿತು 'ಗ್ಯಾಸ್‌ಲೈಟಿಗೆ' ಟುಸ್ಕ್ ಟುಸ್ಕ್ ಎಂದು ಗಾಳಿ ಹೊಡೆಯುತ್ತಿದ್ದ ನಾರಾಯಣ ಕಿಲ್ಲೆಯವರತ್ತ ಬೊಟ್ಟು ಮಾಡಿ, 'ಟ್ರಾನ್ಸ್‌ಲೇಟರ್ ಜನರಲ್' ಅಂದರೆ ಅವರೇ ಎಂದು ಸಂಜ್ಞೆ ಮಾಡಿದರು. ವಕೀಲರ ಮುಖ ಊರಗಲವಾಗಿತ್ತು.

ಗಾಂಧೀಜಿ ಮತ್ತು ಅಂಬೇಡ್ಕರ್ ಚಿಂತನೆಗಳನ್ನು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಮಾಡುತ್ತಿದ್ದ ನಾರಾಯಣ ಕಿಲ್ಲೆಯವರು, ಆ ಹೊತ್ತಿಗಾಗಲೇ ಅಸ್ಪೃಶ್ಯರ ನಡುವೆ ನಡೆದಾಡುವ ದೇವರೆನಿಸಿಕೊಂಡಿದ್ದರು. ಜಿಲ್ಲೆಗೆ ಆಗಮಿಸಿದ್ದ ಗಾಂಧೀಜಿಯನ್ನು ಕೊಡಗಿನ ಶುಂಟಿಕೊಪ್ಪದಲ್ಲಿ ಸ್ವಾಗತಿಸಿ, ಮಡಿಕೇರಿಯ ಸಭೆಯ ಬಳಿಕ, ಸಂಪಾಜೆ ಮಾರ್ಗವಾಗಿ ಪುತ್ತೂರಿಗೆ ಕರೆದುಕೊಂಡು ಬಂದಿದ್ದವರೂ ಅವರೇ.

ಗಾಂಧೀಜಿಯ ಹಿಂದಿ ಭಾಷಣವನ್ನು ಸ್ಥಳೀಯ ಭಾಷೆಗಳಲ್ಲಿ ನಿರರ್ಗಳವಾಗಿ ಅನುವಾದಿಸುತ್ತಿದ್ದ ಕಿಲ್ಲೆಯವರನ್ನು ಗಾಂಧೀಜಿ 'ಟ್ರಾನ್ಸ್‌ಲೇಟರ್ ಜನರಲ್' ಎಂದೇ ಕರೆದಿದ್ದರು. 'ನನ್ನನ್ನು ಯಾರೇ ಆಳಲಿ; ನನಗದರಲ್ಲಿ ಆಸಕ್ತಿಯಿಲ್ಲ. ಆದರೆ ಆಳುವವನು ನನ್ನ ಇಷ್ಟದಂತೆ ಆಳದಿದ್ದರೆ ಅವನ ವಿರುದ್ಧ ಸತ್ಯಾಗ್ರಹ ಹೂಡುವೆ.' ಎಂಬುದಾಗಿ ಗಾಂಧೀಜಿಯ ಮಾತುಗಳನ್ನು, ಕನ್ನಡ ಭಾಷೆಗೆ ಅನುವಾದಿಸುತ್ತಾ ಕಿಲ್ಲೆಯವರು ಹೇಳಿದಾಗ, ಹೆಡ್ಮಾಸ್ಟರ್ ರಾಮನ್ ನಂಬಿಯಾರರು ಪಕ್ಕದಲ್ಲಿ ನಿಂತಿದ್ದ ಕಾರಂತರಿಗೆ ಹೇಳಿದ್ದರು, 'ಇದಕ್ಕಿಂತ ಚೆನ್ನಾಗಿ ಗಾಂಧೀಜಿಯ ಮಾತುಗಳನ್ನು ಕನ್ನಡ ಭಾಷೆಗೆ ಅನುವಾದಿಸಲು ಯಾರಿಂದಲೂ ಸಾಧ್ಯವಿಲ್ಲ!'

ಗಾಂಧೀಜಿಯ ಭಾಷಣ ಮುಂದುವರಿದಿತ್ತು, 'ಇಲ್ಲಿಗೆ ಬರುವ ಮೊದಲೇ ಈ ಊರಿನ ಬಗ್ಗೆ ಅಲ್ಪ ಸ್ವಲ್ಪ ಕೇಳಿ ತಿಳಿದುಕೊಂಡಿದ್ದೇನೆ. ಇಲ್ಲಿಯ ಕೆಲವು ಉತ್ಸಾಹಿ ಯುವಕರು ಊರ ಹೊರಗೆ ಇರುವ ಹರಿಜನ ಕೇರಿಗಳಲ್ಲಿ ಬಾವಿ ತೋಡಿಸಿ ಕೊಡುತ್ತಿದ್ದಾರಂತೆ. ಅದು ಒಳ್ಳೆಯ ಕೆಲಸವೇನೋ ಹೌದು. ಆದರೆ, ನಾನು ಅದೊಂದರಿಂದಲೇ ಸಂಪೂರ್ಣವಾಗಿ ಸಂತೋಷ ಪಡಲಾರೆ. ಯಾವಾಗ ನೀವು, ಊರೊಳಗಿನ ನಿಮ್ಮ ಮನೆ ಬಾವಿಗಳಿಂದಲೂ ನೀರೆತ್ತಿ ಕುಡಿಯಲು ಹರಿಜನರಿಗೆ ಅನುಮತಿ ನೀಡುತ್ತೀರೋ, ಆ ದಿನ ನಿಮ್ಮ ಬಗ್ಗೆ ಹೆಮ್ಮೆ ಪಡುತ್ತೇನೆ. ಇಂದು ಸಂಜೆ ನಾನು ಹರಿಜನರ ಮನೆಗಳಿಗೆ ಹೋಗಿ ಅವರು ಕೊಟ್ಟ ನೀರು ಕುಡಿಯಲಿರುವೆ. ನೀವೆಲ್ಲರೂ ನನ್ನ ಜತೆಗೆ ಬರುತ್ತೀರೆಂದು ನಾನು ನಂಬುವೆ.'

ಗಾಂಧೀಜಿ ಒಮ್ಮೆ ನಿರ್ಧರಿಸಿದರೆಂದರೆ ಅದನ್ನು ಪೂರೈಸದೆ ಸುಮ್ಮನಿರುವವರಲ್ಲ ಎಂಬುದು ಎಲ್ಲರಿಗೂ ಗೊತ್ತಿತ್ತು. ಬೊಳುವಾರಿನಿಂದ ಸುಮಾರು ಎರಡು ಮೈಲು ದೂರದ 'ಬೊಟ್ಟತ್ತಾರು' ಎಂಬ ಅಸ್ಪೃಶ್ಯರ ಕೇರಿಯಲ್ಲಿ ಗಾಂಧೀಜಿಯ ಸ್ವಾಗತಕ್ಕೆ ದಿಢೀರ್ ಸಿದ್ಧತೆ ನಡೆಯಿತು. ಗಾಂಧೀಜಿ 'ಬೊಟ್ಟತ್ತಾರು' ಕೇರಿಗೆ ಕಾಲಿರಿಸಿದಾಗ ಊರಿಗೆ ಊರೇ ಅಲ್ಲಿ ನೆರೆದಿತ್ತು. ಗಾಂಧೀಜಿಗೆ ಹಾರ ಹಾಕುವ ಮೊದಲ ಗೌರವವನ್ನು, ಚೀಂಕ್ರಮೇರ ಎಂಬ ಅಸ್ಪೃಶ್ಯ ಹಿರಿಯರೊಬ್ಬರಿಗೆ ಮೀಸಲಾಗಿಡಲಾಗಿತ್ತು. ಆದರೆ, ಗಾಂಧಿದೇವರು ಎದುರು ಬಂದು ನಿಂತಾಗ, ಚೀಂಕ್ರಮೇರರು ದೈವದರ್ಶನವಾದವರಂತೆ ತರತರನೆ ನಡುಗತೊಡಗಿದ್ದರು. ಅವರ ಕಂಪಿಸುವ ಕೈಗಳು ಗಾಂಧೀಜಿಯ ಕೊರಳು ಮುಟ್ಟಲು ನಿರಾಕರಿಸಿದ್ದವು. ಅದನ್ನು ಗಮನಿಸಿದ ಗಾಂಧೀಜಿ, ಚೀಂಕ್ರಮೇರರ ಎರಡೂ ಕೈಗಳನ್ನು ಹಿಡಿದುಕೊಂಡು, ತಲೆ ಬಾಗಿಸಿ ಅವರು ಹಿಡಿದುಕೊಂಡಿದ್ದ ಖಾದಿನೂಲಿನ ಹಾರದೊಳಗೆ ತಮ್ಮ ತಲೆಯನ್ನು ತೂರಿಸಿಕೊಂಡರು. ಅನಂತರ ಗಾಂಧೀಜಿ ಅಸ್ಪೃಶ್ಯ ಹೆಂಗಸೊಬ್ಬರನ್ನು ಕರೆದು, ಕುಡಿಯಲು ನೀರು ತರುವಂತೆ ಹೇಳಿದರು. ಲಕಲಕನೆ ಹೊಳೆಯುತ್ತಿದ್ದ ಹಿತ್ತಾಳೆಯ ಲೋಟವಲ್ಲಿ ನೀರು ತುಂಬಿಸಿ ತಂದ ಆ ತಾಯಿ, ಗಾಂಧೀಜಿಯೆದುರು ನಿಂತಾಗ ನೆರೆದವರ ಎದೆಬಡಿತವೂ ನಿಂತುಬಿಟ್ಟಿತು. ಗಾಂಧೀಜಿ ತೀರಾ ಸಹಜವೆಂಬಂತೆ ಲೋಟೆಯನ್ನೆತ್ತಿ ನೀರನ್ನು ಗಟಗಟನೆ ಕುಡಿದರು. ಸೇರಿದ್ದವರ ನಡುವೆ ಮಿಂಚಿನ ಸಂಚಾರವಾಗಿತ್ತು.

ಗಾಂಧೀಜಿಯ ಪಕ್ಕದಲ್ಲೇ ನಿಂತು ಈ 'ಪವಾಡ'ವನ್ನು ನೋಡುತ್ತಿದ್ದ ವಕೀಲ ಸದಾಶಿವರಾಯರು,

ತನಗರಿವಿಲ್ಲದೇ ಗಟ್ಟಿಯಾಗಿ ಘೋಷಿಸಿಬಿಟ್ಟಿದ್ದರು: 'ಎಲ್ಲರೂ ಕೇಳಿರಿ, ಇಂದಿನಿಂದ ನನ್ನ ಮನೆಯ ದೇವರ ಕೋಣೆ, ಅಡುಗೆ ಕೋಣೆಗಳಿಗೆ ಹರಿಜನರು ಪ್ರವೇಶಿಸುವುದನ್ನು ಸ್ವತಃ ಶ್ರೀಹರಿಗೇ ತಡೆಯಲು ಸಾಧ್ಯವಿಲ್ಲ!' ಗಾಂಧೀಜಿಗೆ, ಸದಾಶಿವರಾಯರ ಮಾತು ಅರ್ಥವಾಗಿದ್ದಿರಲಿಲ್ಲ. ಗಾಂಧೀಜಿಯ ಗೊಂದಲವನ್ನು ಗಮನಿಸಿದ ಡಾಕ್ಟರ್ ಸುಂದರರಾಯರು, ತಮ್ಮ ವಕೀಲ ಗೆಳೆಯ ಸದಾಶಿವರಾಯರ ಪ್ರತಿಜ್ಞೆಯ ಅರ್ಥವನ್ನು ವಿವರಿಸಿದಾಗ ಗಾಂಧೀಜಿಯ ಕಣ್ಣುಗಳು ಹೊಳೆದವು. ತೃಪ್ತಿಯಿಂದ ಸದಾಶಿವರಾಯರ ತೋಳು ಮುಟ್ಟಿ ಅದುಮುತ್ತಾ ಗಾಂಧೀಜಿ, ತಮ್ಮ ಕೃತಜ್ಞತೆಯನ್ನು ಸೂಚಿಸಿದ್ದರು.

ಅಂದು ರಾತ್ರಿ, ಡಾಕ್ಟರ್ ಸುಂದರರಾಯರ ಕೋರ್ಟ್ ರಸ್ತೆಯ ಮನೆಯಲ್ಲಿ ಗಾಂಧೀಜಿಯ ತಂಡಕ್ಕೆ ಉಳಿದುಕೊಳ್ಳುವ ಏರ್ಪಾಡು ಮಾಡಲಾಗಿತ್ತು. ರಾತ್ರಿಯ ಹೊತ್ತು ಗಾಂಧೀಜಿ ಮಲಗುವ ಕೋಣೆಗೆ ಕಾಲಿರಿಸಿದ ಥಕ್ಕರ್ ಬಾಬಾ, ಅನುಮಾನಿಸುತ್ತಾ ಗೋಡೆಗೊರಗಿ ನಿಂತಾಗ, ಗಾಂಧೀಜಿ ಕೂತೂಹಲದಿಂದ ಅವರ ಮುಖ ನೋಡಿ, 'ಏನನ್ನೋ ಹೇಳಲು ಬಯಸಿದಂತಿದೇ?' ಎಂದು ಪ್ರಶ್ನಿಸಿದರು. 'ಹೌದು, ಆದರೆ ಹೇಳಬೇಕೋ ಬೇಡವೋ ಎಂದು ನಿರ್ಧರಿಸಲು ಸಾಧ್ಯವಾಗಿಲ್ಲ. ಹೇಳದಿದ್ದರೆ ಆಶ್ರಮದ ನೀತಿಗೆ ವಿರುದ್ಧವಾಗುತ್ತದೆ. ನಿಮ್ಮ ವಿರುದ್ಧ ದೂರೊಂದು ಬಂದಿದೆ. ಹೇಳಿದರೆ ನಿಮಗೆ ಅವಮಾನವಾಗುತ್ತದೆ; ಏನು ಮಾಡಲೀ?' ಥಕ್ಕರ್ ಬಾಬಾ ಮೆತ್ತಗೆ ಪ್ರಶ್ನಿಸಿದ್ದರು.

ಗಾಂಧೀಜಿ ಹೋದೆಡೆಯಲ್ಲೆಲ್ಲಾ, ತಮ್ಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಹಣ, ಕಾಣಿಕೆ, ಸಂಗ್ರಹಿಸುತ್ತಿದ್ದರು. ಗಂಡಸರು ಸಂತೋಷದಿಂದ ತಮ್ಮ ಕೈಲಾದಷ್ಟು ನೀಡುತ್ತಿದ್ದರೆ, ಹೆಂಗಸರು ಉತ್ಸಾಹದಿಂದ ತಮ್ಮ ಆಭರಣಗಳನ್ನು ಕಳಚಿ ಗಾಂಧೀಜಿಗೆ ಕಾಣಿಕೆಯಾಗಿ ಸಲ್ಲಿಸುತ್ತಿದ್ದರು. ಅವೆಲ್ಲವನ್ನೂ ಥಕ್ಕರ್ ಬಾಬಾ ಲೆಕ್ಕ ಬರೆದು ಜೋಪಾನವಾಗಿ ತೆಗೆದಿರಿಸಿಕೊಳ್ಳುತ್ತಿದ್ದರು. ಖಜಾನೆಗೆ ಅವರದು ಯಾವಾಗಲೂ ಸರ್ಪಗಾವಲು. ಒಂದೊಂದು ನಾಣ್ಯಕ್ಕೂ ಲೆಕ್ಕವಿರಿಸಿಕೊಳ್ಳುತ್ತಿದ್ದರು. ಖರ್ಚಿನ ವಿಷಯದಲ್ಲಿ ಥಕ್ಕರ್ ಬಾಬಾ ಬಹಳ ಜಿಪುಣ, ಹತ್ತಾಣೆಯ ಕೆಲಸ ಮಾಡಿದವರಿಗೆ ಆರಾಣೆ ಕೊಡುವವರು ಅವರು. 'ದುಡ್ಡಿನ ಲೆಖ್ಖಾಚಾರದಲ್ಲಿ ಈ ಬಾಬಾ ನನಗಿಂತಲೂ ದೊಡ್ಡ ಬನಿಯಾ.' ಎಂದು ಗಾಂಧೀಜಿಯೇ ಬಾಬಾರನ್ನು ಕೆಲವೊಮ್ಮೆ ಛೇಡಿಸಿದ್ದುಂಟು.

ಹಿಂದಿನ ವಾರ ಕೊಡಗಿನಲ್ಲಿ ನಡೆದ ಸಭೆಯಲ್ಲಿ, ಗೌರಮ್ಮ ಎಂಬ ಹೆಂಗಸು ತನ್ನ ಮನೆಯಲ್ಲಿದ್ದ ಎಲ್ಲ ಆಭರಣಗಳನ್ನೂ ತಂದು ಗಾಂಧೀಜಿಯ ಮಡಿಲಿಗೆ ಹಾಕಿದ್ದಾಳೆಂಬ ಸುದ್ದಿ, ಗಾಂಧೀಜಿಗಿಂತ ಮೊದಲೇ ಪುತ್ತೂರನ್ನು ತಲುಪಿತ್ತು. ಕೊಡಗಿನವರಿಗಿಂತ ತಾವೇನು ಕಮ್ಮಿ, ಎಂಬ ಉತ್ಸಾಹದಿಂದ, ಪುತ್ತೂರಿನ ಕೆಲವು ಮುಖಂಡರು ಆಸುಪಾಸಿನ ಗ್ರಾಮಗಳಲ್ಲಿ ಗಾಂಧೀಜಿಗೆ ಕಾಣಿಕೆ ಸಲ್ಲಿಸುವಂತೆ ಪ್ರಚಾರ ನಡೆಸಿದ್ದರು. ಪ್ರಚಾರದ ಫಲವಾಗಿ ಪುತ್ತೂರಿನ ಪೇಟೆ ಬೀದಿಯಲ್ಲಿ ಕಾಣಿಕೆ ನೀಡಲು ನಿಂತ ಜನರಲ್ಲಿ ನೂಕು ನುಗ್ಗಲು ಉಂಟಾಗಿತ್ತು. ಈ ನೂಕು ನುಗ್ಗಲಿನ ನಡುವೆ, ಲುಂಗಿ-ಬನಿಯನ್ ತೊಟ್ಟಿದ್ದ ಸುಮಾರು ಹದಿನೈದು ವರ್ಷದ ಬೋಳುಮಂಡೆಯ ತೆಳ್ಳಗಿನ ಹುಡುಗನೊಬ್ಬ, ಸ್ವಯಂ ಸೇವಕರ ರಕ್ಷಣಾ ಬೇಲಿ ಭೇದಿಸಿ ಗಾಂಧೀಜಿ ಕುಳಿತ ಕಟ್ಟೆಯತ್ತ ಧಾವಿಸಿದ್ದ. ಕಟ್ಟೆಯನ್ನು ಚಕಚಕನೆ ಏರಿ ಗಾಂಧೀಜಿಯತ್ತ ನುಗ್ಗಿದ್ದ ಹುಡುಗ, ತನ್ನ ಮುಷ್ಟಿಯಲ್ಲಿದ್ದ ನಾಣ್ಯವೊಂದನ್ನು

ಅವರ ತೊಡೆಯ ಮೇಲಿರಿಸಿ, ಗಾಂಧೀಜಿಗೆದುರಾಗಿ ನಮಾಜಿಗೆ ಕುಳಿತವನ ಭಂಗಿಯಲ್ಲಿ ಕನ್ನಡಿಯಂತೆ ಕುಳಿತುಬಿಟ್ಟಿದ್ದ! ಗಲಿಬಿಲಿಗೊಂಡಿದ್ದ ಗಾಂಧೀಜಿ ಸಾವರಿಸಿಕೊಳ್ಳುವ ಮೊದಲೇ, ಹುಡುಗನ ಮೇಲೆರಗಿದ್ದ ಸ್ವಯಂ ಸೇವಕರು ಅವನನ್ನು ಎತ್ತಿಕೊಂಡು ಹೋಗಿದ್ದರು. ತಮ್ಮ ತೊಡೆಯ ಮೇಲಿದ್ದ ನಾಲ್ಕಾಣೆಯ ನಾಣ್ಯವನ್ನು ಎತ್ತಿಕೊಂಡ ಗಾಂಧೀಜಿ ಅದನ್ನು ತಮ್ಮ ಧೋತರದ ಸೊಂಟದಲ್ಲಿ ಇರುಕಿಕೊಂಡಿದ್ದರು. ಈ ದೃಶ್ಯಕ್ಕೆ ಮೀರಾಬೆನ್‌ಳ ತುಂಟ ಕಣ್ಣುಗಳು ಸಾಕ್ಷಿಯಾಗಿದ್ದವು.

'ಆ ಹುಡುಗ ಕೊಟ್ಟಿದ್ದ ನಾಲ್ಕಾಣೆ ನಾಣ್ಯದ ಬಗ್ಗೆ ಪ್ರಶ್ನಿಸಲು ನೀವು ಬಂದವರಲ್ಲವೇ? ಆ ನಾಣ್ಯವನ್ನು ನನ್ನ ಬಳಿಯೇ ಇರಿಸಿಕೊಂಡದನ್ನು ಮೀರಾ ಗಮನಿಸಿದ್ದಾಗಲೇ ನಾನು ಊಹಿಸಿದ್ದೆ; ನಿಮ್ಮ ಬಳಿ ನನ್ನ ವಿರುದ್ಧ ದೂರು ಕೊಟ್ಟೇ ಕೊಡುತ್ತಾಳೆಂದು. ಹಾಗೇ ಆಯಿತು ನೋಡಿ. ಆದರೂ, ನಾನು ಈ ನಾಣ್ಯವನ್ನು ನಿಮಗೆ ಕೊಡಲಾರೆ. ಯಾಕೊ, ಆ ಹುಡುಗನ ಅಪರೂಪದ ವರ್ತನೆ ಕಂಡ ನಂತರ, ಈ ನಾಣ್ಯ ಬಹಳ ಅಮೂಲ್ಯವಾದದ್ದು ಎಂದು ಅನ್ನಿಸುತ್ತಿದೆ. ಇದನ್ನು ನಾನು ನಿಮ್ಮಿಂದ ಪಡೆದಿರುವ ಸಾಲ ಎಂದು ನಿಮ್ಮ ಕಡತಗಳಲ್ಲಿ ಬರೆದುಕೊಳ್ಳಬಹುದು. ಮುಂದೊಂದು ದಿನ, ಸ್ವತಂತ್ರ ಭಾರತದಲ್ಲಿ ನಾನು ವಕೀಲಿ ಕೆಲಸ ಆರಂಭಿಸಿದಾಗ, ನಿಮ್ಮ ಸಾಲ ತೀರಿಸುವೆ.' ಗಾಂಧೀಜಿ ನಿರ್ಧಾರದ ಧ್ವನಿಯಲ್ಲಿಯೇ ಹೇಳಿದಾಗ ಥಕ್ಕರ್ ಬಾಬಾರ ಬಾಯಿ ಕಟ್ಟಿಹೋಯಿತು. ಏನು ಹೇಳಬೇಕೆಂದೇ ಹೊಳೆಯಲಿಲ್ಲ. ತೆಳುವಾಗಿ ನಕ್ಕರು ಅಷ್ಟೆ.

ಎರಡು ತಿಂಗಳ ಬಳಿಕ ಥಕ್ಕರ್ ಬಾಬಾರಿಗೆ ಪುತ್ತೂರಿನಿಂದ ಒಂದು ಪತ್ರ ಬಂತು. ಪತ್ರ ಒಡೆದು ಓದಿದ ಥಕ್ಕರ್ ಬಾಬಾಗೆ ಗಾಬರಿಯಾಯಿತು. ಕಾಣಿಕೆಯಾಗಿ ಬಂದಿದ್ದ ಪ್ರತಿಯೊಂದು ಪೈಗೂ ಲೆಕ್ಕ ಬರೆದಿದ್ದ ತಾನು, ಇಂತಹ ಬೇಜವಾಬ್ದಾರಿ ಕೆಲಸ ಮಾಡಿದ್ದಾದರೂ ಹೇಗೆ? ತನ್ನ ತಪ್ಪಿಗೆ ಪ್ರಾಯಶ್ಚಿತ್ತವಾಗಲೇಬೇಕು, ಎಂದು ಪರಿತಪಿಸಿಕೊಳ್ಳುತ್ತಾ ಗಾಂಧೀಜಿಯ ಬಳಿಗೆ ಹೋಗಿ ಎಲ್ಲವನ್ನೂ ನಿವೇದಿಸಿಕೊಂಡರು. ಪುತ್ತೂರಿನಿಂದ ಬಂದ ಪತ್ರದ ಸಾರಾಂಶ ಇಷ್ಟು:

'ನೀವು ಹೊರಟು ಹೋದ ನಂತರ, ಕೋಣೆಯನ್ನು ಶುಚಿಗೊಳಿಸುವಾಗ ನಮಗೆ ಬಂಗಾರದ ಒಂದು ನೆಕ್ಲೆಸ್ ಸಿಕ್ಕಿದೆ. ನೀವು ಮರೆತು ಬಿಟ್ಟು ಹೋಗಿದ್ದಿರಬೇಕು. ಆ ನೆಕ್ಲೆಸ್ ಮಾರಾಟ ಮಾಡಿ ಸಿಕ್ಕಿದ ಹಣದಲ್ಲಿ, ರಾಗಿಕುಮೇರು ಎಂಬ ಹರಿಜನರ ಕೇರಿಯಲ್ಲಿ ಹೊಸತಾದ ಬಾವಿಯೊಂದನ್ನು ತೋಡಿಸಿದ್ದೇವೆ. ಈ ವಿಷಯವನ್ನು ಗಾಂಧೀಜಿಗೆ ತಿಳಿಸುವುದು.'

ತನ್ನ ಅಜಾಗರೂಕತೆಗೆ ಏನನ್ನುತ್ತಾರೋ ಎಂದು ಮುಜುಗರಪಡುತ್ತಾ ನಿಂತಿದ್ದ ಥಕ್ಕರ್ ಬಾಬಾಗೆ, ಗಾಂಧೀಜಿ ಹೇಳಿದರು, 'ಈವತ್ತೇ ಆ ಊರಿನ ಹಿರಿಯರಿಗೆ ಒಂದು ಉತ್ತರ ಬರೆದುಬಿಡಿ ಬಾಬಾ, – ರಾಗಿಕುಮೇರುವಿನ ಹರಿಜನರಿಗೆ ಬಾವಿ ತೋಡಿ ಕೊಟ್ಟದ್ದು ಒಳ್ಳೆಯ ಕೆಲಸ. ಹೀಗೆಂದು ಮೊದಲೇ ತಿಳಿದಿದ್ದರೆ ಇನ್ನೂ ಕೆಲವು ಆಭರಣಗಳನ್ನು ಅಲ್ಲೇ ಬಿಟ್ಟು ಬರಬಹುದಾಗಿತ್ತು ಎಂದು ಬರೆಯಿರಿ. ಅವರಿಗೆಲ್ಲ ನನ್ನ ಅಭಿನಂದನೆ ತಿಳಿಸಿ. ಹಾಗೆಯೇ, ಮುಂದಿನ ಪತ್ರದ ಜತೆಗೆ ರಾಗಿಕುಮೇರಿನ ಹರಿಜನರು, ಊರೊಳಗಿರುವ ಮನೆ ಬಾವಿಗಳಿಂದ ನೀರೆತ್ತಿ ಕುಡಿಯುತ್ತಿರುವ ಫೋಟೋಗಳನ್ನು ಕಳುಹಿಸಲು ತಿಳಿಸಿರಿ.'

# ಭೂಪಟಕ್ಕೆ ಮಸಿಯಲ್ಲಿ ಗೆರೆ ಎಳೆದರು

ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಪರಸ್ಪರ ಸಹಕರಿಸುತ್ತಿದ್ದ ಅಮೇರಿಕಾ, ಬ್ರಿಟನ್, ರಷ್ಯಾ, ಚೀನಾಗಳನ್ನು ಮಿತ್ರರಾಷ್ಟ್ರಗಳೆಂದು ಕರೆಯುತ್ತಿದ್ದರು. ಈ ಮಿತ್ರರಾಷ್ಟ್ರಗಳಿಗೆ, ಜರ್ಮನಿಯ ಹಿಟ್ಲರ್ ಎಂಬ ಸರ್ವಾಧಿಕಾರಿಯ ಜತೆ ಸೇರಿದ್ದ ಇಟಲಿ, ಸ್ಪೇಯ್ನ್, ಜಪಾನ್ ದೇಶಗಳು ಶತ್ರು ರಾಷ್ಟ್ರಗಳಾಗಿದ್ದವು.

ಆ ದಿನಗಳಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತವು ಮಿತ್ರರಾಷ್ಟ್ರದ ಗುಂಪಿನಲ್ಲಿ ಸಹಜವಾಗಿ ಗುರುತಿಸಿಕೊಂಡಿತ್ತು. ಆದ್ದರಿಂದ, ಭಾರತೀಯರ ಒಪ್ಪಿಗೆಯಿಲ್ಲದಿದ್ದರೂ ಭಾರತದ ಸೈನ್ಯ, ಸಂಪತ್ತು ಎಲ್ಲವನ್ನೂ ಬ್ರಿಟಿಷರು ತಮ್ಮ ಯುದ್ಧಕ್ಕಾಗಿ ಬಳಸಿಕೊಳ್ಳತೊಡಗಿದ್ದರು. ಸೈನ್ಯದ ಅಗತ್ಯಗಳಿಗಾಗಿ ಬಿಳಿಯರ ಸರಕಾರದ ಸೈನ್ಯವು ಬಂಗಾಳದ ಸುತ್ತ ಮುತ್ತಲಿನ ಊರುಗಳನ್ನು ಕೊಳ್ಳೆ ಹೊಡೆಯಿತು. ಇದ್ದ ಬಿದ್ದ ದವಸ ಧಾನ್ಯವನ್ನೆಲ್ಲ ಸೈನಿಕರು ಹೊತ್ತು ಒಯ್ಯತೊಡಗಿದ್ದರಿಂದ, ಜನರು ಹಸಿವಿನಿಂದ ಸಾಯತೊಡಗಿದರು. ಸೈನಿಕರ ದರೋಡೆಯನ್ನು ಪ್ರತಿಭಟಿಸಿದ ಎಲ್ಲರನ್ನೂ ಸರಕಾರವು ಬಂಧಿಸಿ ಸೆರೆಮನೆಗೆ ತಳ್ಳಿತು.

ಈ ನಡುವೆ ಕಲಕತ್ತಾದ ಜೈಲಿನಲ್ಲಿದ್ದ ಸುಭಾಸ್‌ಚಂದ್ರ ಬೋಸರು ತಪ್ಪಿಸಿಕೊಂಡರು. ಜರ್ಮನಿ ತಲುಪಿ, ಹಿಟ್ಲರನ ನೆರವು ಪಡೆದರು. ಆ ನಂತರ, ಜಾಪಾನೀಯರ ವಶದಲ್ಲಿದ್ದ ಬರ್ಮಾ ಸೇರಿ 'ಸ್ವತಂತ್ರ ಭಾರತ ರಾಷ್ಟ್ರೀಯ ಸೇನೆ' (ಐ.ಎನ್.ಎ.) ಕಟ್ಟಿದರು. ಬ್ರಿಟಿಷರ ವಿರುದ್ಧ ಯುದ್ಧ ಸಾರಿದರು. ಬ್ರಿಟಿಷರ ವಸಾಹತು ಆಗಿದ್ದ ಬಂಗಾಳದ ಗಡಿಗೆ ಬಂದ ಜಪಾನಿಯರ ವಿಮಾನಗಳು ಬಾಂಬುಗಳ ಸುರಿಮಳೆಗರೆದವು.

ಬ್ರಿಟಿಷ್ ಸರಕಾರವು ಕಂಗಾಲಾಯಿತು. 'ಅರೆಬೆತ್ತಲೆಯ ಫಕೀರನೊಂದಿಗೆ ಏನು ಮಾತು' ಎಂದು ಹಿಂದೊಮ್ಮೆ ಉಡಾಫೆಯ ಮಾತಾಡಿದ್ದ ಬ್ರಿಟಿಷ್ ಪ್ರಧಾನಿ ಚರ್ಚಿಲ್, ಗಲಿಬಿಲಿಗೊಂಡು ಗಾಂಧೀಜಿಯ ಮೊರೆ ಹೊಕ್ಕರು. ಸರ್ ಸ್ಟಾಫರ್ಡ್ ಕ್ರಿಪ್ಸ್ ಎಂಬ ಹಿರಿಯ ಅಧಿಕಾರಿಯನ್ನು ಗಾಂಧೀಜಿಯ ಜತೆ ಸಂಧಾನ ನಡೆಸಲು ಕಳುಹಿಸಿದರು. ಆದರೆ, ಇದುವರೆಗೆ ಸಾಕಷ್ಟು ಸಂಧಾನದ ಮಾತುಗಳಿಗೆ ಬಲಿಯಾಗಿ ಮೋಸಹೋಗಿದ್ದ ಭಾರತೀಯ ನಾಯಕರು ಮತ್ತೊಮ್ಮೆ ಮೋಸಹೋಗಲು ಸಿದ್ಧರಿರಲಿಲ್ಲ. ಬಿಳಿಯರ ಸಂಧಾನದ ಮಾತುಗಳನ್ನು ಭಾರತೀಯರು ನಂಬಲು ಸಿದ್ಧರಿರಲಿಲ್ಲ.

ಬೊಂಬಾಯಿಯಲ್ಲಿ ಲಕ್ಷಾಂತರ ಮಂದಿ ಕಾಂಗ್ರೆಸ್ಸಿಗರು ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಸಭೆಯಲ್ಲಿ ಎರಡು ತಾಸುಗಳ ಭಾಷಣ ಮಾಡಿದ ಗಾಂಧೀಜಿ, ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂಬ ಆದೇಶ ನೀಡಿದರು, ಎಲ್ಲ ಭಾರತೀಯರಿಗೆ 'ಮಾಡು ಇಲ್ಲವೇ ಮಡಿ' ಎಂಬ ಕರೆ ನೀಡಿದರು. ಗಾಂಧೀಜಿಯ ಕರೆಗೆ ಓಗೊಟ್ಟ ಜನರು ದೇಶಾದ್ಯಂತ ಬೀದಿಗಿಳಿದು ಒಕ್ಕೊರಲಿನಿಂದ ಘೋಷಿಸಿದರು, 'ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ'.

ಸರಕಾರವೂ ತನ್ನ ಸೈನಿಕರನ್ನು ಬೀದಿಯಲ್ಲಿ ಮೆರವಣಿಗೆ ಮಾಡಿಸಿತು. ಪೋಲೀಸರು ಸಿಕ್ಕಿಸಿಕ್ಕಿದವರನ್ನು ಸೆರೆಹಿಡಿದು ಜೈಲಿಗೆ ತುಂಬಿದರು. ಮೂರೇ ದಿನಗಳಲ್ಲಿ ದೇಶದ ಜೈಲುಗಳೆಲ್ಲ ತುಂಬಿ ಹೋದವು. ಜೈಲುಗಳಲ್ಲಿ ಜಾಗ ಸಾಕಾಗದಾದಾಗ ಶಾಲೆಗಳು, ಛತ್ರಗಳು ಮಾತ್ರವಲ್ಲ ತುಂಡರಸರುಗಳ ಅರಮನೆಗಳೂ ಜೈಲುಗಳಾಗಿ ಮಾರ್ಪಟ್ಟುವು. ಗಾಂಧೀಜಿ, ಕಸ್ತೂರಿಬಾಯಿ, ಸರೋಜಿನಿ ನಾಯ್ಡು ಮೊದಲಾದವರು ಪುಣೆಯ ಜೈಲು ಸೇರಿದರು. ಗಾಂಧೀಜಿಯವರ ಜತೆ ಜೈಲಿನಲ್ಲಿದ್ದ ಮಹದೇವ ದೇಸಾಯಿಯವರು ಅಲ್ಲಿಯೇ ನಿಧನರಾದರು. ಜಯಪ್ರಕಾಶ್ ನಾರಾಯಣ, ರಾಮಮನೋಹರ ಲೋಹಿಯಾ, ಅಚ್ಯುತ ಪಟವರ್ಧನ್ ಮತ್ತು ಶ್ರೀಮತಿ ಅರುಣ ಅಸಫ್ ಆಲಿ ಜೈಲಿನಿಂದ ತಪ್ಪಿಸಿಕೊಂಡರು; ಭೂಗತರಾಗಿ ಕೆಲಸಮಾಡತೊಡಗಿದರು.

ನಾಯಕರೆಲ್ಲ ಸೆರೆಮನೆಯಲ್ಲಿದುದರಿಂದ, ರೊಚ್ಚಿಗೆದ್ದ ಜನರನ್ನು ನಿಯಂತ್ರಿಸುವವರೇ ಇರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರ ನಡುವೆ ಕಳ್ಳರು, ಸುಳ್ಳರು, ದರೋಡೆಕೋರರು, ಸಮಯಸಾಧಕರು ಸೇರಿಕೊಂಡರು. ದೇಶದೆಲ್ಲೆಡೆ ಅರಾಜಕತೆ ಹಬ್ಬಿತು. ಈ ಎಲ್ಲ ಗೊಂದಲಗಳಿಗೂ ಗಾಂಧೀಜಿಯೇ ಕಾರಣವೆಂದು ಸರಕಾರವು ಅಪಪ್ರಚಾರ ಆರಂಭಿಸಿತು. ನೊಂದ ಗಾಂಧೀಜಿ ಸೆರೆಮನೆಯಲ್ಲಿರುವಾಗಲೇ ಇಪ್ಪತ್ತೊಂದು ದಿನಗಳ ಉಪವಾಸ ಘೋಷಿಸಿದರು.

ಜಗತ್ತಿನಾದ್ಯಂತ ಭಾರತದ ಸ್ವಾತಂತ್ರ್ಯದ ಸಮರವು ಸುದ್ದಿ ಮಾಡಿತು. ಬರ್ನಾಡ್ ಷಾ ರಂತಹ ಬುದ್ಧಿಜೀವಿಗಳು ಬ್ರಿಟಿಷ್ ಸರಕಾರದ ವರ್ತನೆಯನ್ನು ಬಲವಾಗಿ ಖಂಡಿಸಿದರು. ಈ ನಡುವೆ ಜೈಲಿನಲ್ಲಿ ಬಂಧಿಯಾಗಿದ್ದ ಕಸ್ತೂರಿಬಾಯಿ ನಿಧನರಾದರು. ಎಪ್ಪತ್ತೆಂಟು ವರ್ಷಗಳ ಮುದುಕ ಗಾಂಧೀಜಿಯನ್ನು ಎರಡು ವರ್ಷಗಳ ಕಾಲ ಜೈಲಿನಲ್ಲಿ ಕೂಡಿ ಹಾಕಿದ್ದ ಬಿಳಿಯರು, ಕೊನೆಗೂ ಅವರನ್ನು ಬಿಡುಗಡೆ ಮಾಡಿದರು. ಅಮೇರಿಕನ್ನರು ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬು ಎಸೆದು ಲಕ್ಷಾಂತರ ನಾಗರಿಕರ ಹತ್ಯೆ ನಡೆಸಿದರು. ಜಗತ್ತೇ ದಿಗ್ಭ್ರಮೆಗೊಂಡಿತು. ಸಮರ ನಿಂತಿತು.

ಆದರೆ ಭಾರತದ ಸ್ವಾತಂತ್ರ್ಯ ಸಮರ ನಿಲ್ಲುವ ಯಾವ ಲಕ್ಷಣವೂ ಬ್ರಿಟಿಷರಿಗೆ ಕಾಣಿಸಲಿಲ್ಲ. ಭಾರತೀಯರು ಸ್ವಾತಂತ್ರ್ಯ ಪಡೆಯದೆ ವಿರಮಿಸುವವರಲ್ಲ ಎಂಬ ಸತ್ಯ ಅವರಿಗೆ ಅರಿವಾಗಿಬಿಟ್ಟಿತ್ತು. ತಮಗೆ ಭಾರತದಲ್ಲಿ ಇನ್ನು ಉಳಿಗಾಲವಿಲ್ಲ ಎಂಬುದು ಖಂಡಿತವಾಗಿತ್ತು. ಆದರೂ, ಗಂಟು ಮೂಟೆ ಕಟ್ಟಿ ಹೊರಡುವ ಮೊದಲು, ತಮ್ಮ 'ಒಡೆದು ಆಳುವ ನೀತಿ'ಯ ವಿಷವನ್ನು ಈ ನೆಲದ ತುಂಬೆಲ್ಲ ಬೆರೆಸಿಯೇ ಬಿಟ್ಟರು.

ದೇಶ ವಿಭಜನೆಯ ವಿಷ ತನ್ನ ಕೆಲಸವನ್ನು ಆರಂಭಿಸಿತು. ಅದುವರೆಗೂ ಗಾಂಧೀಜಿಯ 'ಸತ್ಯಾಗ್ರಹ'ದಲ್ಲಿ ಅಣ್ಣ ತಮ್ಮಂದಿರಂತೆ ಜತೆಗೂಡಿ ಭಾಗವಹಿಸಿದ್ದ ಹಿಂದೂ ಮತ್ತು ಮುಸ್ಲಿಮರು ಇದ್ದಕ್ಕಿದ್ದಂತೆ ಪರಮ ಶತ್ರುಗಳಂತೆ ಜಗಳಾಡತೊಡಗಿದರು. ನಿನ್ನೆಯವರೆಗೆ ಗಾಂಧೀಜಿಯ ಅಹಿಂಸಾತ್ಮಕ ಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಎಲ್ಲ ಕಷ್ಟ ನಷ್ಟಗಳನ್ನು ಸಹಿಸಿಕೊಂಡಿದ್ದವರು, ಇಂದು ಹಿಂಸೆ, ಪ್ರತಿಹಿಂಸೆಗೆ ಶರಣಾದರು. ಬ್ರಿಟಿಷ್ ಪೋಲೀಸರ ಬೂಟುಗಾಲಿಗೆ ಬೆದರದಿದ್ದ

ಹಿಂದೂಭಾರತೀಯನು ನೆರೆಮನೆಯ ಮುಸ್ಲಿಮನ ಹೆಜ್ಜೆಸಪ್ಪಳಕ್ಕೂ ಬೆವರತೊಡಗಿದನು. ಬ್ರಿಟಿಷ್ ಪೋಲೀಸರ ಬಂದೂಕಿನ ಗುಂಡಿಗೆ ಎದೆಯೊಡ್ಡಲು ಅಂಜದಿದ್ದ ಮುಸ್ಲಿಂಭಾರತೀಯನು ನೆರೆಮನೆಯ ಹಿಂದೂವಿನ ಕೆಮ್ಮಿನ ಸದ್ದಿಗೇ ನಡುಗತೊಡಗಿದನು. ಎರಡೂ ಧರ್ಮಗಳಲ್ಲಿದ್ದ ಮತೀಯವಾದಿ ನಾಯಕರು ತಮ್ಮ ಸ್ವಾರ್ಥಕ್ಕಾಗಿ ಜನರನ್ನು ಹುರಿದುಂಬಿಸಿದರು. ಉತ್ತರ ಭಾರತದ ಬಹುಪಾಲು ಹಾದಿ ಬೀದಿಗಳೆಲ್ಲ ರಣರಂಗವಾಯಿತು. ಬಂಗಾಳದ ಮನೆಮಠಗಳೆಲ್ಲ ಅಗ್ನಿಗಾಹುತಿ ಯಾಯಿತು. ಪಂಜಾಬದ ಜನರೆಲ್ಲ ದಿಕ್ಕಾಪಾಲಾಗಿ ಓಡತೊಡಗಿದರು. ಜನರೆಲ್ಲ ಆವೇಶಭರಿತ ರಾಗಿದ್ದರು. ಅವರಿಗೆ ತಾವೇನು ಮಾಡುತ್ತಿದ್ದೇವೆ ಎಂಬ ಕಲ್ಪನೆಯಿದ್ದಿರಲಿಲ್ಲ. ಅದೊಂದು ಹುಚ್ಚು ಆವೇಶ.

ಎಲ್ಲವೂ ತಮ್ಮ ನಿರೀಕ್ಷೆಯಂತೆಯೇ ನಡೆಯುತ್ತಿದೆಯೆಂಬುದನ್ನು ಖಚಿತ ಪಡಿಸಿಕೊಂಡ ಭಾರತದ ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್, ಬ್ರಿಟಿಷ್ ಸರಕಾರದ 'ಒಡೆದು ಆಳುವ' ವಿಷದ ಕೊನೆಯ ಹನಿಯನ್ನು ಭಾರತದ ನೆಲದ ಮೇಲೆ ಸುರಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯ ನೇತೃತ್ವದಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಒಟ್ಟಾಗಿ ಹೋರಾಡಿದ್ದ ದೇಶನಾಯಕರ ಎದುರು, ವಿಭಜನೆಯ ಕರಾಳ ಸೂತ್ರ ಮಂಡಿಸಿದರು.

ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ, ಮೌಲಾನ ಅಬ್ದುಲ್ ಕಲಾಂ ಆಝಾದ್, ವಲ್ಲಭಭಾಯಿ ಪಟೇಲ್, ಜವಾಹರಲಾಲ ನೆಹರೂ, ಮಹಮ್ಮದಾಲೀ ಜಿನ್ನಾ ಮುಂತಾದ ಜನನಾಯಕರು ದೇಶವಿಭಜನೆಗೆ ಸಮ್ಮತಿ ಸೂಚಿಸಿದರು. ಗಡಿನಾಡ ಗಾಂಧೀ ಖಾನ್ ಅಬ್ದುಲ್ ಗಫಾರ್ ಖಾನ್ ಮಾತ್ರ ಕೋಪದಿಂದ ಸಭಾತ್ಯಾಗ ಮಾಡಿದರು. ಹತಾಶರಾದ ಗಾಂಧೀಜಿಗೆ ಮಾತೇ ಹೊರಡಲಿಲ್ಲ.

ಮುಂದೆ ಕೆಲವೇ ದಿನಗಳಲ್ಲಿ, ಭಾರತ ಮತ್ತು ಪಾಕಿಸ್ಥಾನ ವೆಂಬ ಎರಡು ರಾಷ್ಟ್ರಗಳು ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲಿಸಿಕೊಂಡವು. ಸತ್ಯಾಗ್ರಹ ಚಳುವಳಿಯಲ್ಲಿ ಗಾಂಧೀಜಿಯ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿ ಅವರ ಪ್ರೀತಿಯನ್ನು ಗೆದ್ದುಕೊಂಡಿದ್ದ ಜವಾಹರಲಾಲ್ ನೆಹರೂ ಮತ್ತು ಮಹಮ್ಮದಾಲೀ ಜಿನ್ನಾ, ಈ ಇಬ್ಬರು ನಾಯಕರೂ, ಎರಡು ಸ್ವತಂತ್ರ ಗಣರಾಜ್ಯಗಳ ಪ್ರಧಾನ ಮಂತ್ರಿಗಳಾಗಿ ಅಧಿಕಾರಕ್ಕೇರಿದರು.

'ಪ್ರಪಂಚವೇ ನಿದ್ರೆ ಹೋಗಿರುವ ಈ ನಡುರಾತ್ರಿಯಲ್ಲಿ ಭಾರತವು ನವಜೀವನಕ್ಕಾಗಿ ಎಚ್ಚೆತ್ತಿದೆ.' ಎಂದು ನವಭಾರತದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಾಹಲಾಲ್ ನೆಹರೂ ಸಂಸತ್ ಭವನದಲ್ಲಿ ಸಂಭ್ರಮದಿಂದ ಭಾಷಣ ಮಾಡಿದರು. ದೇಶಕ್ಕೆ ದೇಶವೇ ಹುಚ್ಚೆದ್ದು ಕುಣಿಯಿತು. ಗಾಂಧೀಜಿ ಎಲ್ಲಿದ್ದಾರೇ?

ಆ ದಿನ ಗಾಂಧೀಜಿ ದೆಹಲಿಯಿಂದ ಬಲುದೂರದ ಕಲಕತ್ತಾದ ಬೆಲಿಯಾಘಾಟ್ ಎಂಬ ಕೊಳಕು ಕೊಂಪೆಯ 'ಹೈದರ್‌ಮ್ಯಾನ್ಸನ್' ಎಂಬ ಮನೆಯೊಂದರಲ್ಲಿದ್ದರು. ದಿನವಿಡೀ ಅನ್ನ ನೀರು ಮುಟ್ಟದೆ ಚರಕದ ಎದುರು ಕುಳಿತು ಸಂಕಟಪಡುತ್ತಿದ್ದರು. ಅವರ ನೋವಿಗೆ ಕಾರಣವಿತ್ತು.

ಭೂಪಟವೊಂದನ್ನು ತಂದು ಎದುರಿಗೆ ಇರಿಸಿಕೊಂಡ ಜನನಾಯಕರು ತಮಗಿಷ್ಟ ಬಂದಲ್ಲಿ ಮಸಿಯಲ್ಲಿ ಗಡಿರೇಖೆ ಎಳೆದುದನ್ನು ಅವರು ಕಣ್ಣಾರೆ ಕಂಡಿದ್ದರು. ಮಸಿಯಲ್ಲಿ ಎಳೆದ ಗಡಿರೇಖೆಯು, ನಾಳೆಯ ದಿನ ನೆತ್ತರ ಹೊಳೆಯಾಗಿ ಹರಿಯಲಿದೆ ಎಂಬುದನ್ನು ಜನನಾಯಕರೆಲ್ಲ ತಿಳಿದೂ ತಿಳಿಯದವರಂತೆ ವರ್ತಿಸಿದ್ದರು.

ಜನನಾಯಕರು ತಮ್ಮ ಅಧಿಕಾರಕ್ಕಾಗಿ ಎಳೆದ ಗೆರೆಯಿಂದಾಗಿ, ನಿನ್ನೆ ಮಧ್ಯರಾತ್ರಿಯ ವರೆಗೆ ನೆರೆಮನೆಯವನಾಗಿದ್ದವನು ಇಂದು ಮುಂಜಾನೆ, ಶತ್ರುದೇಶಧ ಪ್ರಜೆಯಾಗಿಬಿಟ್ಟಿದ್ದನು. ಚೊಚ್ಚಲ ಹೆರಿಗೆಗೆಂದು ತವರಿಗೆ ಬಂದಿದ್ದ ತಂಗಿಯನ್ನು ಅವಳಣ್ಣ, ಶತ್ರುದೇಶದ ಪಾಲಾಗಿದ್ದ ಗಂಡನ ಮನೆಗೆ ವಾಪಸು ಕಳುಹಿಸುವಂತಿರಲಿಲ್ಲ. ಪಕ್ಕದ ಮನೆಯವನ ದನದ ಕೊಟ್ಟಿಗೆಯಿಂದ ದಿನವೂ ಹಾಲು ತರುತ್ತಿದ್ದ ಆರು ವರ್ಷದ ಹುಡುಗನಿಗೆ ಅವನ ಅಪ್ಪ ಹೇಳಿದ್ದರು, 'ಇನ್ನು ಮುಂದೆ ನೀನು ಬೇಲಿ ದಾಟಿ ಆ ಬದಿಗೆ ಹೋಗಬಾರದು ಮಗೂ. ಅದು ನಮ್ಮ ದೇಶವಲ್ಲ. ಅದು ಶತ್ರು ರಾಷ್ಟ್ರ.'

ಯಾಕೆಂದರೆ, ಕಳೆದ ಮಧ್ಯರಾತ್ರಿಯ ಹೊತ್ತಲ್ಲಿ ಭಾರತ ದೇಶಕ್ಕೆ ಸ್ವಾತಂತ್ರ್ಯದ ಘೋಷಣೆಯಾಗಿತ್ತು.

## ವಿಭಜನೆಯ ಶಾಪ

ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಯ ಬಳಿಕದ ಎರಡನೆಯ ದಿನ ಮುಂಜಾನೆ ಬೆಲಿಯಾಘಾಟಿನ ನಡು ಬೀದಿಯಲ್ಲಿ, ಬಾಪೂಜಿ ಚಪ್ಪಲಿ ಹಿಡಿದುಕೊಂಡು ನಿಂತಿದ್ದರು! ಬಾಪೂಜಿಯ ಹೊಸ ಅವತಾರವನ್ನು ಕಂಡ ಶಾಹಿದ್ ಸುಹ್ರವರ್ದಿ ಸಾಹೇಬರು ಗಾಬರಿಗೊಂಡು ಪ್ರಶ್ನಿಸಿದ್ದರು, 'ಛೆ!, ಏನಿದು ಬಾಪೂ?'

ಬಾಪೂಜಿ, ಕಳೆದ ಕೆಲವು ದಿನಗಳಿಂದ ಬೆಲಿಯಾಘಾಟಿನ ಬೀದಿ ಬೀದಿಗಳಲ್ಲಿ, ಮುಸ್ಲಿಂ ಲೀಗಿನ ಮುಖಂಡ ಶಾಹಿದ್ ಸುಹ್ರವರ್ದಿ ಎಂಬವರನ್ನು ಜೊತೆಗಿರಿಸಿಕೊಂಡು, 'ಶಾಂತಿಗಾಗಿ ಪಾದಯಾತ್ರೆ' ಕಾರ್ಯಕ್ರಮ ನಡೆಸುತ್ತಿದ್ದರು. ಹಿಂದೂ ಮುಸ್ಲಿಮರ ನಡುವೆ ಸೌಹಾರ್ದಕ್ಕಾಗಿ ಪ್ರಾರ್ಥಿಸುತ್ತಿದ್ದರು. ಆ ದಿನಗಳಲ್ಲಿ ಉತ್ತರ ಭಾರತವಿಡೀ ಕೋಮುಗಲಭೆಯಿಂದ ತತ್ತರಿಸುತ್ತಿತ್ತಾದರೂ, ಬಾಪೂಜಿಯ ವಿನಂತಿಯನ್ನು ಗೌರವಿಸಿದ ಕಲಕತ್ತಾದ ಜನರು ಶಾಂತವಾಗಿದ್ದರು. ತಮ್ಮೆಲ್ಲಾ ನೋವುಗಳನ್ನು ನುಂಗಿಕೊಂಡು ಪರಸ್ಪರ ಸೌಹಾರ್ದವನ್ನು ಕಾಯ್ದುಕೊಂಡಿದ್ದರು. ಇದಕ್ಕೆ ಸಾಕ್ಷಿಯೆಂಬಂತೆ ಆಗಸ್ಟ್ ಹದಿನೈದರಂದು ಬೆಲಿಯಾಘಾಟಿನಲ್ಲಿ ಬಾಪೂಜಿ ನಡೆಸಿಕೊಟ್ಟ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಹಿಂದೂ ಮುಸ್ಲಿಮರೆನ್ನದೆ ಮೂವತ್ತು ಸಾವಿರ ಜನರು ಭಾಗವಹಿಸಿದ್ದರು!.

ಅಷ್ಟೊಂದು ಸಂಖ್ಯೆಯಲ್ಲಿ ಜನರು ಸೇರಿದರೆಂದ ಮೇಲೆ ಆ ಪ್ರದೇಶದಲ್ಲಿ ಕಸ ರಾಶಿಯಾಗುವುದು ಸಹಜವೇ. ಆದರೆ, ಸ್ವತಂತ್ರ ಭಾರತದ ಎರಡನೆಯ ದಿನ, ಬೆಲಿಯಾಘಾಟನಲ್ಲಿ ಕಸ ಗುಡಿಸಿ

ತೆಗೆಯುವವರಿದ್ದಿರಲಿಲ್ಲ. ಯಾಕೆಂದರೆ, ಕಳೆದೆರಡು ದಿನಗಳ ಹಿಂದೆಯೇ ಕಲಕತ್ತಾದ ಪೌರಾಡಳಿತವು ತಮ್ಮ ಕೆಲಸವನ್ನು ನಿಲ್ಲಿಸಿಬಿಟ್ಟಿತ್ತು. ಮುಂಜಾನೆಯ ಹೊತ್ತು, ನಡುರಸ್ತೆಯಲ್ಲಿದ್ದ ಕೊಳಕು ಕೊಚ್ಚೆಯ ಮೇಲೆ, ಬರಿಗಾಲಲ್ಲಿ ನಿಂತಿದ್ದ ಬಾಪೂಜಿಯನ್ನು ಕಂಡ ಜನರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ಬಾಪೂಜಿಯ ಸಂದೇಶ ಸ್ಪಷ್ಟವಾಗಿತ್ತು.

ನೋಡು ನೋಡುತ್ತಿರುವಂತೆಯೇ ನೂರಾರು ಮನೆಗಳೊಳಗಿನಿಂದ ಪೊರಕೆಗಳು ಹೊರಗೆ ಬಂದವು. ಯಾರೂ ಭಾಷಣ ಮಾಡಲಿಲ್ಲ. ಯಾವುದೇ ಘೋಷಣೆ ಕೂಗಲಿಲ್ಲ. ಒಬ್ಬನೂ ತುಟಿ ಬಿಚ್ಚಲಿಲ್ಲ. ಎರಡು ತಾಸುಗಳೊಳಗೆ ಕೊಳೆ ಕೊಚ್ಚೆಯೆಲ್ಲವೂ ಬಾಪೂಜಿಯ ಕಣ್ಣೆದುರಿನಿಂದ ಮಾಯವಾಗಿ ಬಿಟ್ಟಿದ್ದವು. ನಸು ನಕ್ಕ ಬಾಪೂಜಿ, ಚಪ್ಪಲಿ ತೊಟ್ಟುಕೊಂಡರು. ಕಣ್ಣು ಬಾಯಿ ಬಿಟ್ಟು ತಮ್ಮನ್ನೇ ನೋಡುತ್ತಿದ್ದ ಶಾಹಿದ್ ಸಾಹೇಬರತ್ತ ತೃಪ್ತಿಯ ನಗು ಚೆಲ್ಲಿದ ಬಾಪೂಜಿ, ' ಇನ್ನು ಹೊರಡೋಣ' ಎಂದರು. ಇಬ್ಬರೂ ಹೊರಟರು.

ದಾರಿಯಲ್ಲಿ ಶಾಹಿದ್ ಸಾಹೇಬರು ಸಹಜವಾಗಿ ಹೇಳಿದ್ದರು, 'ನೀವು ನೆನ್ನೆ ದೆಹಲಿಯಲ್ಲಿದ್ದರೆ ಚೆನ್ನಾಗಿತ್ತು ಬಾಪೂ. ನಿನ್ನೆ ಸಂಸತ್ತಿನಲ್ಲಿ ಬಾಬೂ ರಾಜೇಂದ್ರ ಪ್ರಸಾದರು ಮಾಡಿದ ಭಾಷಣವನ್ನು ರೇಡಿಯೋದಲ್ಲಿ ಕೇಳಿದೆ. ನೆಹರೂ ಅವರ ಮಾತುಗಳನ್ನೂ ಕೇಳಿದೆ. ಎಲ್ಲರೂ ನಿಮ್ಮನ್ನು ಹೊಗಳುವವರೇ'

'ಹೌದಾ!, ಅವರಿಗೆ ನನ್ನ ನೆನಪು ಇನ್ನೂ ಇದೆಯಾ?' ಬಾಪೂಜಿ ತೆಳುವಾಗಿ ನಕ್ಕರು. ತತ್‌ಕ್ಷಣ ವಿಷಾದದಿಂದ ಹೇಳಿದರು,

'ಗೆಳೆಯಾ, ಇದು ನನ್ನ ನಂಬಿಕೆಯ ಪರೀಕ್ಷೆಯ ದಿನಗಳು. ದೇಶವಿಭಜನೆಗೆ ನಾವು ಸಮ್ಮತಿಸಿದರೆ ಮಾತ್ರ ದೇಶದಲ್ಲಿ ಶಾಂತಿ ನೆಲೆಸುತ್ತದೆಂದು ಪಟೇಲ್ ಮತ್ತು ನೆಹರೂ ಬಲವಾಗಿ ನಂಬಿದ್ದರು. ನಾನದನ್ನು ಒಪ್ಪಿದ್ದಿರಲಿಲ್ಲ.

'ಬ್ರಿಟಿಷರು ಮೊದಲು ಭಾರತ ಬಿಟ್ಟು ಹೊರಟು ಹೋಗಲಿ. ಆ ನಂತರ ನಾವೆಲ್ಲ ಸಮಾಧಾನದಿಂದ ಒಂದು ಕಡೆ ಕುಳಿತುಕೊಂಡು ದೇಶವನ್ನು ತುಂಡು ಮಾಡಬೇಕೇ ಬೇಡವೇ ಎಂಬುದನ್ನು ಚರ್ಚಿಸಿ ತೀರ್ಮಾನಿಸೋಣ ಎಂದಿದ್ದೆ. ಆದರೆ, ವಿಭಜನೆಯ ಸೂತ್ರಕ್ಕೆ ಒಪ್ಪಿಗೆ ಸೂಚಿಸದಿದ್ದರೆ, ಬ್ರಿಟಿಷರು ದೇಶ ಬಿಟ್ಟು ಹೋಗುವುದನ್ನು ಮುಂದೂಡುತ್ತಾರೆಂದೇ ಅವರೆಲ್ಲ ವಾದಿಸಿದ್ದರು. ಸ್ವತಂತ್ರವಾದ ದೇಶವನ್ನು ಆಳುವ ಅವಸರ ನಮ್ಮ ನಾಯಕರುಗಳಿಗೆ. ನನ್ನ ಸಲಹೆಯನ್ನು ಅವರೆಲ್ಲ ತಿರಸ್ಕರಿಸಿದರು. ನಾನು ಮುದುಕನಲ್ಲವೇ? ನನಗೆ ಅರಳು ಮರುಳು ಎಂದು ಭಾವಿಸಿದ್ದಿರಬೇಕು. ಆ ದೇವರು ನಮ್ಮವರ ಮೂರ್ಖತನವನ್ನು ನೋಡಿ ನಗುತ್ತಿರಬಹುದು.'

'ಹೈದರ್‌ಮ್ಯಾನ್ಸನ್'ನ ಗೇಟಿನ ಬಳಿ ಒಂದು ಕ್ಷಣ ನಿಂತು, ಆಕಾಶದತ್ತ ಕಣ್ಣು ನೆಟ್ಟ ಬಾಪೂಜಿ, 'ನಾವು ದೇಶ ಒಡೆದು ತಪ್ಪು ಮಾಡಿಬಿಟ್ಟೆವು ಶಾಹಿದ್. ಇದರ ಪರಿಣಾಮ ಈ ದಿನ

ಮಸುಕಾಗಿರಬಹುದು. ಆದರೆ, ಮುಂದೊಂದು ದಿನ ನಾವೆಲ್ಲ ಈ ತಪ್ಪಿಗೆ ಪರಿತಪಿಸಬೇಕಾಗುತ್ತದೆ. ವಿಭಜನೆಯ ಶಾಪ ಹೊತ್ತೇ ನಾವೆಲ್ಲ ಬದುಕಬೇಕಾಗುತ್ತದೆ. ಆ ದಿನಗಳನ್ನು ನಾನು ನೋಡಲಾರೆ. ಆ ದಿನಗಳವರೆಗೆ ದೇವರು ನನ್ನನ್ನು ಜೀವಂತವಾಗಿರಿಸುವುದು ಬೇಡ ಎಂದು ಪ್ರಾರ್ಥಿಸುತ್ತಿದ್ದೇನೆ. ಭಾರತದ ವಿಭಜನೆಯಲ್ಲಿ ನಾನೂ ಪಾಲುಗಾರನೆಂದು ಜನ ಹೇಳದಿದ್ದರೆ ಸಾಕು.'

ಮರುದಿನವೇ, ಕಲಕತ್ತಾದ 'ಮೊಹಮಡನ್ ಸ್ಪೋರ್ಟಿಂಗ್ ಮೈದಾನ'ದಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ಸೇರಿದ್ದ ಐದು ಲಕ್ಷ ಮಂದಿ, ದೇಶದ ವಿಭಜನೆಗೆ ಬಾಪೂಜಿ ಪಾಲುಗಾರನಲ್ಲ ಎಂಬ ಮಾತಿಗೆ ಸಾಕ್ಷಿಯಾಗಿದ್ದರು. ವೇದಿಕೆಯ ಮೇಲೆ ಎಪ್ಪತ್ತೆಂಟು ವರ್ಷಗಳ ನೋವಿನ ಭಾರವನ್ನು ಹೊತ್ತುಕೊಂಡು ಕೈಮುಗಿದು ನಿಂತ ಬರಿಮೈ ಮಹಾತ್ಮನನ್ನು, ಧನ್ಯತೆಯಿಂದ ದಿಟ್ಟಿಸುತ್ತಾ ತಮ್ಮ ಕಣ್ಣುಗಳನ್ನು ತುಂಬಿಕೊಂಡಿದ್ದರು.

ಮೂರನೆಯ ದಿನ ಸಂಜೆ ನಡೆದ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಹೇಳಿದರು, 'ಇಂದು ಈದ್. ಮುಸ್ಲಿಮರಿಗೆ ಪವಿತ್ರವಾದ ಹಬ್ಬ. ಇಲ್ಲಿರುವ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಆಲಿಂಗಿಸಿಕೊಳ್ಳುತ್ತಿರುವುದನ್ನು ಕಾಣುತ್ತಿರುವ ನನಗೆ, ದಕ್ಷಿಣ ಆಫ್ರಿಕಾದ ದಿನಗಳು ನೆನಪಿಗೆ ಬರುತ್ತಿವೆ. ನಾನು ಅಲ್ಲಿ ಬದುಕಿದ್ದ ಇಪ್ಪತ್ತು ವರ್ಷಗಳಲ್ಲೂ ಮುಸ್ಲಿಮರ ಹಬ್ಬಗಳಲ್ಲಿ ಭಾಗವಹಿಸುತ್ತಿದ್ದೆ. ಇಂತಹ ಪ್ರೀತಿಯ ದೃಶ್ಯಗಳೇ ಕಾಣುತ್ತಿರುವ ಜಗತ್ತಿನಲ್ಲಿ ಸಾವಿರ ವರ್ಷವಾದರೂ ಬದುಕುವ ಆಸೆಯುಂಟಾಗಿದೆ.'

'ನಿಮ್ಮಲ್ಲಿ ಕೆಲವರಿಗಾದರೂ ಗೊತ್ತಿರಬಹುದು. ಕಳೆದ ವರ್ಷ ನಾನು ನೌಖಲಿಯಲ್ಲಿ ಉರಿದು ಬೂದಿಯಾಗಿದ್ದ ಮನೆಗಳನ್ನು ನೋಡಿದ್ದೆ. ರಸ್ತೆಗಳಲ್ಲಿ ಮನುಷ್ಯರ ರಕ್ತದ ಹಸಿ ಕಲೆಗಳನ್ನು ನೋಡಿದ್ದೆ. ಮನುಷ್ಯರು ಮೃಗಗಳಂತೆ ವರ್ತಿಸುತ್ತಿರುವುದನ್ನು ಕಂಡಿದ್ದೆ. ಅವರಿಗೆ ತಾವೇನು ಮಾಡುತ್ತಿದ್ದೇವೆಂಬುದು ಗೊತ್ತಿರಲಿಲ್ಲ. ಅವರ ಬಳಿ ಪ್ರಶ್ನೆಗಳ ಬೆಟ್ಟವೇ ಇದ್ದವು. ಅವರಿಗೆ ಉತ್ತರಿಸುವವರು ಯಾರೂ ಇರಲಿಲ್ಲ. ನಾನು ಪ್ರತಿ ಗ್ರಾಮಗಳಲ್ಲೂ ಹಿಂದೂ ಮುಸ್ಲಿಮರನ್ನೊಳಗೊಂಡ 'ಶಾಂತಿ ಸಮಿತಿಗಳು' ಕೆಲಸ ಮಾಡುವಂತೆ ನೋಡಿಕೊಂಡೆ. ಪ್ರತಿದಿನವೂ 'ಶಾಂತಿ ಸಮಿತಿಗಳು' ಸಭೆ ನಡೆಸಿದವು. ಹೊಡೆದಾಡುತ್ತಿದ್ದವರೆಲ್ಲರೂ ನಿಮ್ಮಂತೆಯೇ ಹೃದಯವಂತ ಮನುಷ್ಯರೇ ಆಗಿದ್ದರು. ಆದ್ದರಿಂದ, ಅವರಿಗೆ ತಮ್ಮ ತಪ್ಪಿನ ಅರಿವಾಯಿತು. ಅವರು ನನಗೆ ಮತ್ತೆ ಬದುಕುವ ಆಸೆ ಕೊಟ್ಟರು.'

ಪ್ರತಿದಿನ ಸಂಜೆಯೂ ಪ್ರಾರ್ಥನಾಸಭೆಯಲ್ಲಿ ಕಿಕ್ಕಿರಿದು ನೆರೆದ ಜನರು ಬಾಪೂಜಿಯ ಮಾತುಗಳಿಗೆ ಕಿವಿಗೊಟ್ಟರು. 'ಭಾರತದಲ್ಲಿ ಮುಸ್ಲಿಮರನ್ನು ಹಿಂದೂಗಳು, ಪಾಕಿಸ್ಥಾನದಲ್ಲಿ ಹಿಂದೂಗಳನ್ನು ಮುಸ್ಲಿಮರು ತಾಯಿಯಂತೆ ಕಾಪಾಡುತ್ತಿರಬೇಕು. ಮಕ್ಕಳು ತಪ್ಪು ಮಾಡಿದರೆ ತಾಯಿ ಅವರನ್ನು ಕೊಂದು ಹಾಕುವುದಿಲ್ಲ. ಕ್ಷಮಿಸುತ್ತಾಳೆ; ತಪ್ಪುಗಳನ್ನು ತಿದ್ದಿ ತೀಡುತ್ತಾಳೆ.

ಅದೇ ರೀತಿಯಲ್ಲಿ, ಜಗತ್ತಿನ ಎಲ್ಲ ದೇಶಗಳಲ್ಲೂ ಬಹುಸಂಖ್ಯಾತರಾದವರು ಅಲ್ಪಸಂಖ್ಯಾತರಾದವರನ್ನು ಕ್ಷಮಿಸುತ್ತಿರಬೇಕು. ತಪ್ಪುಗಳನ್ನು ತಿಳಿಯ ಹೇಳಿ ಕಾಪಾಡುತ್ತಿರಬೇಕು. ನನ್ನ ಕನಸಿನ ರಾಮರಾಜ್ಯದ ಸೂತ್ರ ಇದು.'

ಕಲಕತ್ತಾದಲ್ಲಿ ಶಾಹಿದ್ ಸಾಹೇಬರ ಜತೆಗೂಡಿ ಬಾಪೂಜಿ ನಡೆಸುತ್ತಿದ್ದ ಸಂಜೆಯ ಪ್ರಾರ್ಥನಾ ಸಭೆಗಳಿಗೆ, ಶಾಂತಿ ಮೆರವಣಿಗೆ ಗಳಿಗೆ ಜನರು ಪ್ರವಾಹದಂತೆ ಬರುತ್ತಿದ್ದರು. ಇಂದು ಬಾರಕ್ಪೋರ, ನಾಳೆ ಕಂಚರಪಾರ, ನಾಡದ್ದು ಪೊಲ್ಲಕ್ ರಸ್ತೆಯ ಮೈದಾನ. ಅದರ ಮರುದಿನ, ಪಾರ್ಕ್ ಸರ್ಕಸ್ ಮೈದಾನದಲ್ಲಿ ನಡೆದ ಸಭೆಗೆ ಏಳು ಲಕ್ಷ ಜನರು! ಹೀಗೆ ಬಾಪೂಜಿ ಹೋದೆಡೆಗಳಲ್ಲಿ ಲಕ್ಷ ಲಕ್ಷ ಜನರು ಸೇರಿದರು. ಸಭೆಗಳಲ್ಲಿ ಪ್ರಶ್ನೆಗಳನ್ನು ಕೇಳುವವರಿಗೆ ಮುಕ್ತ ಅವಕಾಶವಿತ್ತು. 'ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಮಗಳೆಂಬ ಕಾರಣಕ್ಕೆ ಹದಿನೆಂಟು ವರ್ಷದ ಹುಡುಗಿಯನ್ನು ಭಾರತದ ರಾಯಭಾರಿಯಾಗಿ ಅಮೇರಿಕಾಕ್ಕೆ ಕಳುಹಿಸಿದ್ದು ಎಷ್ಟು ಸರೀ?' ಎಂದು ಸಭಿಕನೊಬ್ಬ ಪ್ರಶ್ನಿಸಿದಾಗ, ಬಾಪೂಜಿ ಉತ್ತರಿಸಿದ್ದರು, ' ಅದು ಸರಕಾರಕ್ಕೆ ಸಂಬಂಧಿಸಿದ ವಿಷಯ. ನಾನು ಪ್ರತಿಕ್ರಿಯೆ ನೀಡಲಾರೆ.'

ಈ ಕಾರ್ಯಕ್ರಮಗಳ ಪತ್ರಿಕಾ ವರದಿ ಓದುತ್ತಿದ್ದ, ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ ಅಚ್ಚರಿಯಿಂದ, ' ದೇಶದ ಇತರ ಭಾಗಗಳಲ್ಲಿ ಹಲವು ಲಕ್ಷ ಪೋಲಿಸರು ಸಾಧಿಸಲಾಗದ್ದನ್ನು, ಈ ಮಹಾತ್ಮನ ಏಕವ್ಯಕ್ತಿಯ ಶಾಂತಿಪಡೆ ಸಾಧಿಸಿದೆ.' ಎಂದು ಉದ್ಗರಿಸಿದ್ದು ಕೂಡಾ ಪತ್ರಿಕೆಗಳ ತಲೆಬರಹವಾಯಿತು.

ಪೋಲೀಸರ ಲಾಟಿ ಬೂಟುಗಳಿಂದ ನಿಯಂತ್ರಿಸಲಾಗದ ಕೋಮು ಗಲಭೆಗಳನ್ನು, ಬಾಪೂಜಿಯ ವಾಸ್ತವ್ಯವೊಂದರಿಂದಷ್ಟೇ ನಿಗ್ರಹಿಸಲು ಸಾಧ್ಯವೆಂಬ ಸತ್ಯ ನಾಡಿನೆಲ್ಲೆಡೆ ಹರಡಿತ್ತು. ದೂರದ ಊರುಗಳಿಂದ ಅವರಿಗೆ ಕರೆ ಬರತೊಡಗಿತು. ಪಂಜಾಬು ಪ್ರಾಂತ್ಯವು ಹೊತ್ತಿ ಉರಿಯುತ್ತಿತ್ತು. ನೌಖಲಿಗೆ ಮತ್ತೆ ಬರುವುದಾಗಿ ಬಾಪೂಜಿ ಬಲು ಹಿಂದೇಯೇ ಮಾತು ಕೊಟ್ಟಿದ್ದರು. ಬಿಹಾರದ ಜನರೂ ಬಾಪೂಜಿಯ ದರ್ಶನಕ್ಕಾಗಿ ಕಾತರಿಸುತ್ತಿದ್ದರು.

ಆದರೂ, ಬಾಪೂಜಿ ತಮ್ಮ ಪ್ರಾರ್ಥನಾ ಸಭೆಯ ಭಾಷಣಗಳಲ್ಲಿ ಮುಸ್ಲಿಮರ ಪರವಾಗಿಯೇ ವಾದಿಸುತ್ತಿದ್ದಾರೆಂಬುದಾಗಿ ಕೆಲವು ಮತೀಯವಾದೀ ಹಿಂದುಗಳು ಭಾವಿಸಿದ್ದರು. ಅಲ್ಲಲ್ಲಿ ನಡೆಯುತ್ತಿರುವ ಕೋಮು ಗಲಭೆಗಳಲ್ಲಿ, ಮುಸ್ಲಿಮರ ತಪ್ಪುಗಳನ್ನು ಮರೆಮಾಚಿ ಕೇವಲ ಹಿಂದೂಗಳ ತಪ್ಪುಗಳನ್ನಷ್ಟೇ ಬಾಪೂಜಿ ಬೊಟ್ಟು ಮಾಡಿ ತೋರಿಸುತ್ತಿದ್ದಾರೆಂದು ಅವರು ವಾದಿಸುತ್ತಿದ್ದರು. ಬಾಪೂಜಿ ಕಲಕತ್ತಾವನ್ನು ತೊರೆದು ನೌಖಲಿಗೆ ಹೊರಡುವ ಸೂಚನೆ ನೀಡುತ್ತಿದ್ದಂತೆಯೇ, ಕಲಕತ್ತಾದಲ್ಲಿ ಕೋಮು ಗಲಭೆ ಮತ್ತೊಮ್ಮೆ ಸ್ಫೋಟಗೊಂಡಿತು. ಮಧ್ಯರಾತ್ರಿಯ ಹೊತ್ತು 'ಹೈದರ್‌ಮ್ಯಾನ್ಸನ್'ಗೆ ದಾಳಿಯಿಟ್ಟ ಯುವಕರ ಗುಂಪೊಂದು, ಕಿಟಿಕಿ ಬಾಗಿಲುಗಳನ್ನು ಒಡೆದು ಹಜಾರಕ್ಕೆ ನುಗ್ಗಿಬಿಟ್ಟಿತು.

ನಿದ್ರೆಯಲ್ಲಿದ್ದ ಬಾಪೂಜಿ ಎಚ್ಚರಗೊಂಡರು. ಎದ್ದು ಹೊಸ್ತಿಲ ಬಳಿಗೆ ಹೋಗಿ ಕೈಮುಗಿದು ನಿಂತುಬಿಟ್ಟರು. ಯುವಕರು ಶಾಹಿದ್ ಸಾಹೇಬರನ್ನು ಹುಡುಕುತ್ತಿದ್ದರು. ಆದರೆ ಅವರು ಅಂದು ಮನೆಯಲ್ಲಿದ್ದಿರಲಿಲ್ಲ. ಮಾರನೆಯ ದಿನ ನೌಖಾಲಿಗೆ ಹೋಗಲಿದ್ದುದರಿಂದ, ಅದರ ತಯಾರಿಗಾಗಿ ತಮ್ಮ ಮನೆಗೆ ಹೋಗಿದ್ದರು. ಆದರೆ, ಬಂದಿದ್ದ ಯುವಕರು ಈ ಸತ್ಯವನ್ನು ನಂಬಲು ಸಿದ್ಧರಿರಲಿಲ್ಲ. ಆವೇಶದಿಂದ ವಿವೇಕವನ್ನು ಕಳೆದುಕೊಂಡಿದ್ದ ಯುವಕನೊಬ್ಬ ಬಾಪೂಜಿಯ ಮೇಲೆ ಗುರಿಯಿಟ್ಟು ಇಟ್ಟಿಗೆ ತುಂಡೊಂದನ್ನು ಎಸೆದ. ಬಾಪೂಜಿಯ ಪಕ್ಕದಲ್ಲಿ ನಿಂತಿದ್ದ ಯುವಕನೊಬ್ಬ ತತ್‌ಕ್ಷಣ ಬಾಪೂಜಿಯನ್ನು ಬಳಸಿ ನಿಂತು ರಕ್ಷಿಸಿದ. ಅಷ್ಟರಲ್ಲಿ ಡಾ. ಪಿ.ಸಿ.ಘೋಷ್, ಅನ್ನದಾ ಬಾಬು, ಡಾ. ನೃಪೇನ್ ಚಕ್ರವರ್ತಿ ಮೊದಲಾದ ಹಿರಿಯರು ಬಂದು ಕೋಪಗೊಂಡಿದ್ದ ಯುವಕರನ್ನು ಶಾಂತರಾಗಲು ವಿನಂತಿಸಿದರು. ಆನಂತರ ಪೋಲೀಸರೂ ಬಂದರು. ಗುಂಪು ಮರಳಿ ಹೋಯಿತು.

ಮರುದಿನ ಬಾಪೂಜಿ ಘೋಷಿಸಿದರು, 'ಕಲಕತ್ತಾದ ಜನರಿಗೆ ವಿವೇಕವು ಮರಳಿ ಬರುವ ವರೆಗೆ ನಾನು, ಇಂದು ರಾತ್ರಿಯಿಂದ ಉಪವಾಸ ಸತ್ಯಾಗ್ರಹ ಹೂಡುತ್ತೇನೆ. ಪಂಜಾಬಿಗೆ ನಾನು ಹೋಗಿ ಅಲ್ಲಿಯ ಜನರಿಗೆ ಸಹಾಯಮಾಡಬೇಕೆಂದು ಕಲಕತ್ತಾದ ಜನರು ಬಯಸುವುದಾದರೆ ನನ್ನ ಉಪವಾಸವು ಬೇಗ ಮುಕ್ತಾಯಗೊಳ್ಳುವಂತೆ ನೋಡಿಕೊಳ್ಳಲಿ.'

ಸುದ್ದಿ ತಿಳಿದು ಗಾಬರಿಗೊಂಡ ಕಲಕತ್ತಾದ ರಾಜ್ಯಪಾಲ ಸಿ. ರಾಜಗೋಪಾಲಾಚಾರಿಯವರು ಧಾವಿಸಿ ಬಂದು ಬಾಪೂಜಿಯವರ ಮನವೊಲಿಸಲು ಯತ್ನಿಸಿದರು. 'ನಿಮ್ಮ ಉಪವಾಸವನ್ನು ಗೂಂಡಾಗಳು ಗಂಭೀರವಾಗಿ ಪರಿಗಣಿಸುತ್ತಾರೆಂದು ತಿಳಿಯುವುದು ಮೂರ್ಖತನ' ಎಂದರು. ಆದರೆ, ಎಪ್ಪತ್ತೊಂಬತ್ತು ವರ್ಷಗಳಿಂದ ತಮ್ಮ ಜತೆಗೇ ಹೊತ್ತು ತಂದಿದ್ದ ಹಟವನ್ನು ಬಾಪೂಜಿ ಬಿಟ್ಟುಕೊಡಲಿಲ್ಲ. ರಾಜ್ಯಪಾಲರನ್ನು ನೇರವಾಗಿ ಪ್ರಶ್ನಿಸಿ ತಬ್ಬಿಬ್ಬು ಮಾಡಿದ್ದರು, 'ನಮ್ಮ ಸಹಾನುಭೂತಿ ಮತ್ತು ಪರೋಕ್ಷ ಬೆಂಬಲವಿಲ್ಲದೇ ಹೋಗಿದ್ದರೆ ಅವರು ಎಲ್ಲಿರುತ್ತಿದ್ದರು? ನಾನು ನನ್ನ ಉಪವಾಸದ ಮೂಲಕ, ಈ ಗೂಂಡಾಗಳನ್ನು ಪೋಷಿಸುತ್ತಿರುವವರ ಹೃದಯವನ್ನು ಮುಟ್ಟಬಯಸುವೆ.'

'ಬೇಡ ಬಾಪೂಜಿ, ಒಂದು ವೇಳೆ ನಿಮಗೇನಾದರೂ ಆಗಿಬಿಟ್ಟರೆ ಅನಾಹುತವಾದೀತು.' ರಾಜ್ಯಪಾಲರು ಆತಂಕದಿಂದ ಹೇಳಿದ್ದರು. ಬಾಪೂಜಿ ತಣ್ಣನೆಯ ಸ್ವರದಲ್ಲಿ ಉತ್ತರಿಸಿದ್ದರು, 'ಆಗ ನಾನಿರುವುದಿಲ್ಲವಲ್ಲಾ? ಮನುಷ್ಯನೊಬ್ಬ ಮಾಡಬಹುದಾದದ್ದನ್ನೆಲ್ಲ ನಾನು ಮಾಡಿದ್ದೇನೆಂಬ ತೃಪ್ತಿಯಾದರೂ ನನ್ನೊಂದಿಗೆ ಇರುತ್ತದೆ.'

ತಪ್ಪುದಾರಿಗಿಳಿದ ಕೆಲವು ಹಿಂದೂ ಯುವಕರೇ ಕಲಕತ್ತಾದಲ್ಲಿ ಗಲಭೆ ಮರುಕಳಿಸಲು ಕಾರಣವೆಂಬುದು ಬಾಪೂಜಿಯವರ ಕಲ್ಪನೆಯಾಗಿತ್ತು. ಈ ಬಗ್ಗೆ ಬಾಪೂಜಿಯವರ ಜತೆ ಚರ್ಚಿಸಲೆಂದು ಹಿಂದೂ ಮುಖಂಡರುಗಳಾದ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ, ಎನ್. ಸಿ. ಚಟರ್ಜಿ ಮೊದಲಾದ ಕೆಲವು ಹಿಂದೂ ನಾಯಕರು ಹೈದರ್ ಮ್ಯಾನ್ಸನ್‌ಗೆ ಬಂದರು. ಗಲಭೆಗೆ ಕಾರಣರಾಗಿದ್ದಾರೆಂದು ಬಾಪೂಜಿ ಭಾವಿಸುತ್ತಿರುವ ಹಿಂದೂಗಳಿಗೆ ಶಾಂತವಾಗಿರಲು, ತಾವೆಲ್ಲ ಒಟ್ಟಾಗಿ ಕರೆ ನೀಡುವುದಾಗಿ

ಭರವಸೆ ನೀಡಿದರು. ಬೆಂಗಾಲಿ ಮುಸ್ಲಿಮ್ ಲೀಗಿನ ಹಿರಿಯ ನಾಯಕರೊಬ್ಬರು ಬಂದು ಪ್ರಾರ್ಥಿಸಿದರು, 'ಬಾಪೂಜಿ, ಹಿಂದೆ ಖಿಲಾಫತ್ ಚಳುವಳಿಯಲ್ಲಿ ನಿಮ್ಮ ಜತೆಗೆ ಕೆಲಸ ಮಾಡಿದವನು ನಾನು. ಈ ದಿನ ಕಲಕತ್ತಾದ ಎಲ್ಲ ಮುಸ್ಲಿಮರ ಪರವಾಗಿ ನಾನು ನಿಮಗೆ ಮಾತು ಕೊಡುತ್ತೇನೆ. ಅವರು ಹಿಂಸೆಗೆ ಇಳಿಯುವುದಿಲ್ಲ. ದಯವಿಟ್ಟು ಉಪವಾಸ ನಿಲ್ಲಿಸಿರಿ.' ಆದರೆ ಬಾಪೂಜಿ, ತಮ್ಮ ಮೊಂಡುತನ ಬಿಡಲಿಲ್ಲ. ಕಲಕತ್ತಾದಲ್ಲಿ ಶಾಂತಿ ನೆಲೆಸುವ ತನಕ ಉಪವಾಸ ನಿಲ್ಲಿಸುವುದಿಲ್ಲ ಎಂದು ಖಡಾಖಂಡಿತವಾಗಿ ಎಲ್ಲರಿಗೂ ಹೇಳಿಬಿಟ್ಟರು.

ಬಾಪೂಜಿಯ ಹಟ ಕೊನೆಗೂ ಗೆದ್ದಿತು. ಗಲಭೆ ಸ್ಫೋಟಗೊಂಡಿದ್ದ ಬೋ ಬಜ಼ಾರ್, ಹರೆ ರಸ್ತೆ, ಬುರ್ರಾ ಬಜ಼ಾರ್, ಜೋರಸೊಂಕೋ, ಮುಚಿಪರ, ಬೆನಿಯಾಪುಕುರ್, ಎಂಟಲ್ಲಿ, ಟ್ಟಾಲ್ಟೊಲ್ಲಾ, ಬಲ್ಲುಗುಂಜೆ ಮತ್ತು ಭೋವಾನಿಪೋರೆ ಪ್ರದೇಶಗಳಲ್ಲಿ ಕಳೆದ ಇಪ್ಪತ್ತನಾಲ್ಕು ತಾಸುಗಳಲ್ಲಿ ಯಾವುದೇ ಗಲಭೆಗಳು ನಡೆದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ಬಾಪೂಜಿ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಲು ಸಮ್ಮತಿಸಿದರು. ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ. ರಾಜಗೋಪಾಲಾಚಾರಿಯವರು ಖುದ್ದಾಗಿ ಅಷ್ಟೂ ಪ್ರದೇಶಗಳಲ್ಲಿ ಸಂಚರಿಸಿ ವರದಿ ತಂದು ಒಪ್ಪಿಸಿದ ಬಳಿಕವೇ ಬಾಪೂಜಿ ತಮ್ಮ ಉಪವಾಸ ಸತ್ಯಾಗ್ರಹ ನಿಲ್ಲಿಸಲು ಒಪ್ಪಿದ್ದು.

ಸಿಹಿನಿಂಬೆಯ ರಸವನ್ನು ಬಾಪೂಜಿಗೆ ನೀಡುವ ಮೊದಲು ಪುಟ್ಟದೊಂದು ಪ್ರಾರ್ಥನಾ ಸಭೆ ನಡೆಯಿತು. 'ಈಶ್ವರ ಅಲ್ಲಾ ತೇರೇ ನಾಮ್, ಸಬ್ ಕೋ ಸನ್ಮತಿ ದೇ ಭಗವಾನ್.' ಎಲ್ಲರೂ ಒಕ್ಕೊರಲಿನಿಂದ ಪ್ರಾರ್ಥಿಸಿದರು. ಆನಂತರ ಬಾಪೂಜಿ ಸಿಹಿನಿಂಬೆಯ ರಸ ಕುಡಿದರು. ತಮ್ಮ ಎಪ್ಪತ್ತೈದು ತಾಸುಗಳ ಉಪವಾಸಕ್ಕೆ ಮುಕ್ತಾಯ ಹಾಡಿದರು.

ದೆಹಲಿಗೆ ಹೊರಟು ನಿಂತ ಬಾಪೂಜಿಯವರನ್ನು ಅಭಿನಂದಿಸಲು ಚೌರಂಗೀ ಮೈದಾನದಲ್ಲಿ ಸೇರಿದ್ದ ಸಾವಿರಾರು ಜನರ ಸಭೆಯಲ್ಲಿ, ಕಲಕತ್ತಾದ ಮೇಯರ್ ಶ್ರೀ ಘೋಗ್ ಗೋವಿಯವರು ಎದೆತುಂಬಿ ಹೇಳಿದ್ದರು, 'ಬಾಪೂಜಿಯವರಂತಹ ಮಹಾತ್ಮರ ಜತೆಗೆ ಬದುಕುತ್ತಿರುವ ನಾವೆಲ್ಲ ತುಂಬಾ ಅದೃಷ್ಟವಂತರು.'

ಕಲಕತ್ತಾದ ರಾಜ್ಯಪಾಲ ಚಕ್ರವರ್ತಿ ರಾಜಗೋಪಾಲಾಚಾರಿಯವರು, ಬಾಪೂಜಿಯವರಿಗೆ ಕೃತಜ್ಞತೆ ಅರ್ಪಿಸುತ್ತಾ, 'ಬಾಪೂಜಿಯವರು ಇದುವರೆಗೆ ನೂರು ಸಾಧನೆಗಳನ್ನು ಮಾಡಿದ್ದಿರಬಹುದು. ದೇಶಕ್ಕೆ ಸ್ವಾತಂತ್ರ್ಯವನ್ನೂ ತಂದು ಕೊಟ್ಟಿರಬಹುದು. ಆದರೆ, ಕಲಕತ್ತಾದ ಶಾಂತಿಗಾಗಿ ಅವರು ಮಾಡಿದ ಕೆಲಸಗಳು ಅವೆಲ್ಲವನ್ನೂ ಮೀರಿಸುವಂಥದ್ದು.' ಎಂದು ಕೊಂಡಾಡಿದರು.

ಕೊನೆಯಲ್ಲಿ ಬಾಪೂಜಿ ಹೇಳಿದರು, 'ಶಾಂತಿಪ್ರಿಯರಾದ ಕಲಕತ್ತಾದ ಜನರು ಇಡಿಯ ಜಗತ್ತಿಗೇ ಮಾದರಿಯಾಗಲಿ.'

# ಮಹಾತ್ಮನ ಮನಸು

ಕಲಕತ್ತಾದ ಬೇಲೂರು ರೈಲು ನಿಲ್ದಾಣದಿಂದ ಬಾಪೂಜಿಯನ್ನು ಹೊತ್ತುಕೊಂಡ ರೈಲು ದೆಹಲಿಯತ್ತ ಹೊರಟಿತು. ಒಟ್ಟು ಇಪ್ಪತ್ತನಾಲ್ಕು ತಾಸುಗಳ ಪ್ರಯಾಣ. ಪತ್ರ ಬರೆಯುವುದು, 'ಹರಿಜನ' ಪತ್ರಿಕೆಗೆ ಲೇಖನ ಬರೆಯುವುದರಲ್ಲೇ ಹಗಲನ್ನು ಕಳೆದ ಬಾಪೂಜಿಗೆ ರಾತ್ರಿ ಹಾಸಿಗೆಗೆ ತಲೆಯಿರಿಸಿದ ಕೂಡಲೇ ನಿದ್ರೆ ಆವರಿಸಿತ್ತು. ಮರುದಿನ ಮುಂಜಾನೆ ದೆಹಲಿಯ ನಿಲ್ದಾಣವನ್ನು ರೈಲು ತಲುಪಿದಾಗ, ಇಪ್ಪತ್ತೈದು ದಿನಗಳ ಹಿಂದೆಯಷ್ಟೇ ಬ್ರಿಟಿಷರ ದಾಸ್ಯದಿಂದ ಕಳಚಿಕೊಂಡಿದ್ದ ದೇಶದ ರಾಜಧಾನಿಯ ನೆತ್ತಿಯ ಮೇಲೆ ಮುಂಜಾನೆಯ ಕಪ್ಪು ಮೋಡಗಳು ಗೂಡು ಕಟ್ಟಿದ್ದವು.

ಬಾಪೂಜಿಯನ್ನು ಸ್ವಾಗತಿಸಲು ದೇಶದ ಗೃಹಮಂತ್ರಿಯಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರೇ ಬಂದಿದ್ದರು. ಆದರೆ ಪಟೇಲರ ಮುಖದಲ್ಲಿ ಎಂದಿನ ನಗುವಿರಲಿಲ್ಲ. ಮುಖದ ತುಂಬೆಲ್ಲ ನೋವಿನ ಗೆರೆಗಳಿದ್ದವು. ಬಾಪೂಜಿಗೆ ವಂದಿಸಿದ ಉಕ್ಕಿನ ಮನುಷ್ಯನ ಕೈಗಳು ನಡುಗುತ್ತಿದ್ದವು. ಬಾಪೂಜಿಯನ್ನು ಬರಸೆಳೆದು ಆಲಿಂಗಿಸಿದ ತೋಳುಗಳಲ್ಲಿ ಬಲವಿದ್ದಿರಲಿಲ್ಲ; ಬೆದರಿದ ಮಗುವಿನ ನಡುಕವಿತ್ತು. ನಿಲ್ದಾಣದಲ್ಲಿ ಸೇರಿದ್ದವರೆಲ್ಲ ಸಾವಿನ ಮನೆಯಿಂದ ಬಂದವರಂತಿದ್ದರು.

ದೆಹಲಿಗೆ ಗರಬಡಿದಿತ್ತು. ಹೆಚ್ಚು ಕಮ್ಮಿ ನಿರ್ಜನವಾಗಿದ್ದ ರಸ್ತೆಯ ಮೇಲೆ ಮೌನ ಹರಿದಾಡುತ್ತಿತ್ತು. ಅಂಗಡಿಗಳ ಮುಚ್ಚಿದ ಬಾಗಿಲುಗಳ ಎದುರು ನಾಯಿಗಳು ಮಲಗಿದ್ದವು. ಮಿಲಿಟರಿ ವಾಹನವೊಂದು ಉಗುಳಿದ ಹೊಗೆಯಲ್ಲಿ ತೇಲುತ್ತಿದ್ದ ಹರಿದ ಕಾಗದದ ತುಂಡೊಂದನ್ನು ದಿಟ್ಟಿಸಿ ನೋಡುತ್ತಾ, ಪಟೇಲರ ಎಲ್ಲ ವಿವರಣೆಗಳನ್ನೂ ಬಾಪೂಜಿ ಮೌನವಾಗಿ ಆಲಿಸಿದರು. ಐದು ದಿನಗಳ ಹಿಂದೆಯಷ್ಟೇ ದೆಹಲಿಯಲ್ಲಿ ಗಲಭೆ ಸ್ಫೋಟಗೊಂಡಿತ್ತು.

ವಿಭಜನೆಯಾಗುವುದು ನಿಶ್ಚಿತವೆಂದು ಗೊತ್ತಾಗುತ್ತಿದ್ದಂತೆ, ಸುತ್ತಮುತ್ತಲಿನ ಹಳ್ಳಿಗಳ ಜನರು ತಮ್ಮ ಮನೆ ಮಾರು ತೊರೆದು, ಸಾವಿರ ಸಾವಿರ ಸಂಖ್ಯೆಯಲ್ಲಿ ದೆಹಲಿಯತ್ತ ಬರಲಾರಂಭಿಸಿದ್ದರು. ಹಾಗೆ ಬರುವಾಗ ಅವರು, ತಮ್ಮ ಬಂಧು ಬಳಗವನ್ನು ಮಾತ್ರ ಕರೆದು ತಂದಿರಲಿಲ್ಲ; ತಮ್ಮ ನೋವಿಗೆ ಕಾರಣರಾದವರ ಬಗ್ಗೆ ರೋಷದ ಮೂಟೆಗಳನ್ನೇ ಹೊತ್ತು ತಂದಿದ್ದರು. ನಿರಾಶ್ರಿತರ ಶಿಬಿರಗಳೆಲ್ಲ ಕಣ್ಣೀರಿನ ಕತೆಗಳಿಂದ ಮುಳುಗಿ ಹೋಗಿದ್ದವು. ಜನರು ರೊಚ್ಚಿಗೆದ್ದಿದ್ದರು, ಆವೇಶಗೊಂಡಿದ್ದರು; ಪ್ರತೀಕಾರಕ್ಕಾಗಿ ಹಲ್ಲು ಮಸೆಯುತ್ತಿದ್ದರು. ಯಾರ ಮಾತುಗಳನ್ನೂ ಕೇಳುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಶಾಂತಿ ಕಾಪಾಡಲು ಸರಕಾರವು ಮಾಡುತ್ತಿರುವ ಪ್ರಯತ್ನಗಳಾವುವೂ ಯಶಸ್ವಿಯಾಗುತ್ತಿರಲಿಲ್ಲ.

ಬಾಪೂಜಿ ಕಲಕತ್ತಾಕ್ಕೆ ಹೊರಡುವ ಮೊದಲು ವಾಸಿಸುತ್ತಿದ್ದದ್ದು ದೆಹಲಿಯ ಹೊರವಲಯದಲ್ಲಿದ್ದ ಕಸಗುಡಿಸುವವರ ಕಾಲನಿಯಲ್ಲಿ. ಕಲಕತ್ತಾದಿಂದ ಮರಳಿದ ಬಳಿಕವೂ ಅಲ್ಲಿಯೇ ವಾಸಿಸಲು ಬಯಸಿದ್ದರು. ಆದರೆ, ಆ ಪ್ರದೇಶವು ಇದೀಗ ನಿರಾಶ್ರಿತರ ತಾತ್ಕಾಲಿಕ ಶಿಬಿರವಾಗಿ ರೂಪುಗೊಂಡಿತ್ತು.

ಬಾಪೂಜಿ ಅಲ್ಲಿಗೇ ಹೋಗಿ ನಿರ್ಗತಿಕರ ನಡುವೆ ಇರಲು ಬಯಸಿದರಾದರೂ, ಕಾನೂನು ಪಾಲನೆಯ ಸಮಸ್ಯೆಗಳನ್ನು ಎದುರಿಟ್ಟ ಪಟೇಲರು, ಬಾಪೂಜಿಯ ಬೇಡಿಕೆಯನ್ನು ನಿರಾಕರಿಸಿದರು. ಬಾಪೂಜಿಯ ವಾಸ್ತವ್ಯಕ್ಕಾಗಿ 'ಬಿರ್ಲಾ ಭವನ'ವನ್ನು ಅದಾಗಲೇ ಸಜ್ಜುಗೊಳಿಸಲಾಗಿತ್ತು.

ಬಾಪೂಜಿ, ಬಿರ್ಲಾ ಭವನ ತಲುಪಿ ಎರಡು ನಿಮಿಷ ದಾಟಿದ್ದಿರಬಹುದು. ದೇಶದ ಪ್ರಧಾನಿ ಪಂಡಿತ ಜವಾಹರ ಲಾಲ್ ನೆಹರೂ ಧಾವಿಸಿ ಬಂದರು. ತಮ್ಮ ರಾಜಕೀಯ ಉತ್ತರಾಧಿಕಾರಿಯ ಮುಖದಲ್ಲಿದ್ದ ಅಸಹಾಯಕತೆ ಮತ್ತು ಆತಂಕವನ್ನು ಕಂಡ ಬಾಪೂಜಿ ಭಾವುಕರಾದರು. ನೆಹರೂ ತನ್ನೆಲ್ಲಾ ಗೊಂದಲಗಳನ್ನು ಬಾಪೂಜಿಯ ಎದುರು ತೆರೆದಿಟ್ಟರು. ಇಪ್ಪತ್ತನಾಲ್ಕು ತಾಸುಗಳ ಕರ್ಫ್ಯೂ ವಿಧಿಸಿ, ಗಲಭೆಕೋರರ ಮೇಲೆ ಕಂಡಲ್ಲಿ ಗುಂಡು ಹಾರಿಸುವ ಆದೇಶ ನೀಡಿದ ಬಳಿಕವೂ ಗಲಭೆಗಳನ್ನು ನಿಯಂತ್ರಿಸಲಾಗದ ಬಗ್ಗೆ ವಿಷಾದಿಸಿದರು. ಅವರ ಧ್ವನಿ ಭಾರವಾಗಿತ್ತು. ಅವರು ಗದ್ಗದಿತರಾಗಿದ್ದರು.

'ಬಾಪೂ, ನೀವೇ ಹೇಳಿ, ದೆಹಲಿಯ ರಸ್ತೆಗಳಲ್ಲಿ ಹೆಣಗಳ ರಾಶಿ ಬೀಳುತ್ತಿರುವಾಗ, ಲಾಹೋರು ಮತ್ತು ಪೂರ್ವ ಬಂಗಾಳಗಳ ಬಗ್ಗೆ ಯಾವ ನಾಲಗೆಯಲ್ಲಿ ಜಿನ್ನಾ ಮತ್ತು ಲಿಯಾಖತ್ ಅವರನ್ನು ದೂರಲಿ?'

ಯಾವ ಮಾತಿಗೂ ಉದ್ವೇಗಗೊಳ್ಳದ ಬಾಪೂಜಿ, ಎಲ್ಲವನ್ನೂ ಕಿವಿಗೊಟ್ಟು ಆಲಿಸಿದರು. ಕೊನೆಗೆ ತಮ್ಮ ಪ್ರೀತಿಯ ಶಿಷ್ಯನನ್ನು ಸಮಾಧಾನಗೊಳಿಸುತ್ತಾ ಹೇಳಿದರು, 'ನೀನು ಕೋಪ ಮಾಡಿಕೊಳ್ಳುವುದೇಕೇ?'

ನೆಹರೂ ಸಿಟ್ಟಿನಿಂದಲೇ ಉತ್ತರಿಸಿದ್ದರು, 'ಹೌದು, ನಾನು ನನ್ನ ಬಗ್ಗೆಯೇ ಕೋಪಗೊಂಡಿದ್ದೇನೆ. ಈ ದೇಶಕ್ಕೆ ರಕ್ಷಣೆ ಕೊಡಬೇಕಾಗಿರುವ ನಾವು ಮಂತ್ರಿಗಳು, ಪೋಲೀಸರ ರಕ್ಷಣೆಯಲ್ಲಿ ತಲೆಮರೆಸಿಕೊಂಡು ಓಡಾಡಬೇಕಾದ ನಾಚಿಕೆಯ ಪರಿಸ್ಥಿತಿ ಇದೆ. ಕೋಪ ಮಾಡಿಕೊಳ್ಳದೆ ಇನ್ನೇನು ಮಾಡಬೇಕೂ?'

ಬಾಪೂಜಿ ಆ ಸಂಜೆಯೇ ಒಂದು ಪತ್ರಿಕಾ ಹೇಳಿಕೆ ನೀಡಿದರು, 'ಇಂದು ಇಡಿಯ ದಿನ ದೆಹಲಿಯ ನೋವಿನ ಕತೆ ಕೇಳಿರುವೆ. ನಾಳೆಯಿಂದ ನಾನು ನನ್ನ 'ಮಾಡು ಇಲ್ಲವೇ ಮಡಿ' ಕಾರ್ಯಕ್ರಮವನ್ನು ಮತ್ತೊಮ್ಮೆ ಅರಂಭಿಸುವೆ'

ಆದರೆ ದೆಹಲಿಯ ಪರಿಸ್ಥಿತಿ ಹದಗೆಟ್ಟು ಹೋಗಿತ್ತು. ಪಾಕಿಸ್ಥಾನದಿಂದ ಹೊರದೂಡಲ್ಪಟ್ಟವರು, ಭಾರತದಿಂದ ಹೊರದೂಡಲ್ಪಡಬೇಕಾಗಿದ್ದವರು, ಎಲ್ಲರೂ ದೆಹಲಿ ತಲುಪಿದ್ದರು. ರಸ್ತೆಯಂಚುಗಳೆಲ್ಲವೂ ನಿರಾಶ್ರಿತರ ಶಿಬಿರಗಳಾಗಿ ಮಾರ್ಪಟ್ಟಿದ್ದವು. ಮಂದಿರ ಮಸೀದಿಗಳಲ್ಲಿ ಜನರು ಕುರಿಮಂದೆಯಂತೆ ತುಂಬಿಸಲ್ಪಟ್ಟಿದ್ದರು. ಹಸಿದವರಿಗೆ ರೊಟ್ಟಿ ಕೊಡುವವರಿರಲಿಲ್ಲ. ಬಾಯಾರಿದವರಿಗೆ ನೀರು ಹನಿಸುವವರಿರಲಿಲ್ಲ. ಅಳುವ ಮಕ್ಕಳಿಗೆ ಹಾಲುಣಿಸುವವರಿರಲಿಲ್ಲ. ಎಲ್ಲರೂ ಅಳುವವರೇ ಆದಾಗ ಸಾಂತ್ವನ ಹೇಳುವವರಾರೂ? ತಮ್ಮದೆಲ್ಲವನ್ನೂ

ಕಳೆದುಕೊಂಡಿರುವವರು ತಮ್ಮ ವಿವೇಕವನ್ನಾದರೂ ಉಳಿಸಿಕೊಂಡಿರಬೇಕಿತ್ತು ಎಂದು ನಿರೀಕ್ಷಿಸುವುದೂ ಮೂರ್ಖತನವಾಗುತ್ತದೆ. ಸಣ್ಣದೊಂದು ವದಂತಿಗೂ ಅವರು ರೊಚ್ಚಿಗೇಳುತ್ತಿದ್ದರು. ಸ್ವಂತ ನೆರಳು ಕೂಡಾ ಶತ್ರುವಿನಂತೆ ಕಾಣಿಸುತ್ತಿತ್ತು.

ಆದರೆ, ಬಾಪೂಜಿ ನಿರಾಶರಾಗಲಿಲ್ಲ. ಎಂಭತ್ತರ ಹೊಸ್ತಿಲಲ್ಲಿ ನಿಂತಿದ್ದ ಆ ಮಹಾತ್ಮನ ಮನಸ್ಸು, ಅದಾಗಲೇ ಪ್ರಾಪಂಚಿಕ ಮೋಹಗಳಿಂದ ಮುಕ್ತವಾಗಿತ್ತು. ಅದು ಎಲ್ಲ ಬಗೆಯ ಆವೇಶಗಳಿಗೆ ನಿರ್ಲಿಪ್ತವಾಗಿತ್ತು. ಸಮಸ್ಯೆಯೊಂದನ್ನು ಹೊರಗಿನಿಂದ ನಿಂತು ನೋಡಲು ಶಕ್ತವಾಗಿತ್ತು.

ನಿರಾಶ್ರಿತರು ತುಂಬಿಕೊಂಡಿದ್ದ ಶಿಬಿರಗಳಿಗೆ ಬಾಪೂಜಿ ಭೇಟಿ ನೀಡಿ ಸಾಂತ್ವನ ಹೇಳಲಾರಂಭಿಸಿದರು. ಅಲ್ವಾರ್ ಪ್ರಾಂತ್ಯದಿಂದ ಹೊರದೂಡಲ್ಪಟ್ಟರೂ, ದೇಶ ಬಿಟ್ಟು ಹೋಗಲು ಮನಸ್ಸಿಲ್ಲದೆ ದೆಹಲಿಯ ಹುಮಾಯೂನ್ ಗೋರಿಯ ಬಳಿ, ಸಾವನ್ನು ತಪ್ಪಿಸಿಕೊಳ್ಳಲು ಅವಿತು ಕುಳಿತ ನೀಳಗಡ್ಡದ ಮುದುಕನನ್ನು ಬಾಪೂಜಿ ಅಪ್ಪಿಕೊಂಡರು. ನಿನ್ನೆಯಷ್ಟೇ ತನ್ನ ಹೆತ್ತವರ ಬರ್ಬರ ಕೊಲೆಯನ್ನು ಕಣ್ಣಾರೆ ಕಂಡು ಭಯದಿಂದ ಬುರ್ಖಾ ಎಸೆದು ಓಡಿ ಬಂದು, ಓಕ್ಲಾದ ಜಾಮಿಯಾ ಮಿಲಿಯಾದ ಆವರಣದಲ್ಲಿ ಆಶ್ರಯ ಪಡೆದ ಮಗಳ ತಲೆ ನೇವರಿಸಿದರು. ಕಸ್ತೂರ್ಬಾ ಆಶ್ರಮದ ಜಗಲಿಯಲ್ಲಿ ಕುಳಿತುಕೊಂಡು ಅಳುತ್ತಿದ್ದ, ಕುಂಕುಮ ಕಳೆದುಕೊಂಡಿದ್ದ ವಿಧವೆಯ ಕಣ್ಣೀರು ಒರೆಸಿದರು. ಚಾಂದನೀ ಚೌಕದಲ್ಲಿ ಲೂಟಿಯಾಗಿದ್ದ ಅಂಗಡಿಗಳ ಸಾಲುಗಳನ್ನು ನೋಡಲಾಗದೆ ಕಣ್ಣು ಮುಚ್ಚಿಕೊಂಡರು.

ಜುಮ್ಮಾ ಮಸೀದಿಯಲ್ಲಿ ಮೂವತ್ತು ಸಾವಿರ ನಿರಾಶ್ರಿತರಿದ್ದರು. ದಿವಾನ್ ಸಭಾಂಗಣ, ವಾವೆಲ್ ಕ್ಯಾಂಟೀನ್, ಕಾನಾಟ್ ಸರ್ಕಸ್‌ನ ನಿಜಾಮರ ಮನೆಯ ಸುತ್ತಲಿನ ಪ್ರದೇಶ, ಎಲ್ಲ ಕಡೆಗಳಿಂದಲೂ ನಿರಾಶ್ರಿತರ ನಿಟ್ಟುಸಿರು ಕೇಳಿಸುತ್ತಿತ್ತು. ಎಲ್ಲರಿಗೂ ಬಾಪೂಜಿ ಒಂದೇ ಮಾತು ಹೇಳಿದರು, 'ನೀವು ಭೂಮಿಯಲ್ಲಿ ಗಳಿಸಿದ ಎಲ್ಲವನ್ನೂ ಕಳೆದುಕೊಂಡಿರಬಹುದು. ಆದರೆ, ದೇವರನ್ನು ನೀವು ಕಳೆದುಕೊಂಡಿಲ್ಲ, ಅವನು ನಿಮ್ಮ ಜತೆಗೆ ಇನ್ನೂ ಇದ್ದಾನೆ.'

ಬಿರ್ಲಾ ಭವನದಲ್ಲಿ ನಡೆದ ಸಂಜೆಯ ಪ್ರಾರ್ಥನಾ ಸಭೆಯ ಬಳಿಕ ಬಾಪೂಜಿ ಸುದೀರ್ಘವಾದ ಭಾಷಣ ಮಾಡುತ್ತಾ ಹೇಳಿದರು:

'ನೀವು ಹುಚ್ಚು ಆವೇಶಕ್ಕೆ ಬಲಿಯಾಗಬಾರದು. ನಮ್ಮ ಸಹೋದರರನ್ನು ಪಾಕಿಸ್ಥಾನದಲ್ಲಿ ಮುಸ್ಲಿಮರು ಕೊಲೆ ಮಾಡಿದ್ದಾರೆ. ಅದರ ಪ್ರತೀಕಾರವಾಗಿ ನಾವೂ ಯಾಕೆ ಭಾರತದಲ್ಲಿರುವ ಮುಸ್ಲಿಮರನ್ನು ಕೊಲೆ ಮಾಡಬಾರದೂ ಎಂದು ಅನ್ನಿಸುವುದೂ ಸಹಜವೇ. ಆದರೆ ಅಲ್ಲಿ ಹಿಂದೂಗಳನ್ನು ಮುಸ್ಲಿಮರು ಕೊಲ್ಲುತ್ತಿರುವ ಕಾರಣಕ್ಕೆ, ಇಲ್ಲಿ ಮುಸ್ಲಿಮರನ್ನು ಹಿಂದುಗಳು ಕೊಲ್ಲತೊಡಗಿದರೆ ಇದಕ್ಕೆ ಕೊನೆಯೆಲ್ಲಿ ? ನನ್ನ ಸಹೋದರನನ್ನು ಕೊಂದ ಮನುಷ್ಯನನ್ನೂ ನಾನು ಕೊಲೆ ಮಾಡಲಾರೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬ ಮಾತನ್ನು ನಾನು ಒಪ್ಪಲಾರೆ. ಕೆಟ್ಟ ಮಾತು ಆಡುವವನು, ಕೆಟ್ಟ ಕೆಲಸ ಮಾಡುವವನು ಮನುಷ್ಯನಾಗಿ ಉಳಿಯಲಾರ. ಅವನು ಕ್ರೂರ ಪಶುವಿಗಿಂತಲೂ ಕೆಟ್ಟವನೆಂದು ನಾನು ಭಾವಿಸುತ್ತೇನೆ'.

'ಇಂದು ನಾನು ಕೆಲವು ನಿರಾಶ್ರಿತರ ಶಿಬಿರಗಳಿಗೆ ಭೇಟಿ ನೀಡಿದ್ದೆ. ಅಲ್ಲಿ, ಅಪ್ಪನನ್ನು ಕಳೆದುಕೊಂಡ ಎಳೆಮಗುವನ್ನು ತಂದು ನನ್ನೆದುರು ಇರಿಸಿ ಬಿಕ್ಕಿ ಬಿಕ್ಕಿ ಅಳುವ ತಾಯಿಯನ್ನು ಸಂತೈಸುವ ಬದಲು ನಿನ್ನೆಯಷ್ಟೇ ಸಿಖ್ಖರ ಹುಡುಗಿಯೊಬ್ಬಳ ಮೇಲೆ ಮುಸ್ಲಿಮರು ನಡೆಸಿದ ಸಾಮೂಹಿಕ ಅತ್ಯಾಚಾರದ ಕತೆ ವಿವರಿಸಲೇ? ಹಾಗೆ ವಿವರಿಸುವುದರಿಂದ ಆ ತಾಯಿಯ ದುಃಖ ಪರಿಹಾರ ವಾಗುತ್ತದೆಯೇ? ನಾವು ಭಾರತದ ಹಿಂದುಗಳು ಕೊನೆಯತನಕವೂ ಒಳ್ಳೆಯವರಾಗಿ ಉಳಿದರೆ, ಅಲ್ಲಿ ಪಾಕಿಸ್ಥಾನದ ಮುಸ್ಲಿಮರು ಒಳ್ಳೆಯವರಾಗಲೇಬೇಕಾಗುತ್ತದೆ. ಇದು ಪ್ರಕೃತಿ ನಿಯಮ. ಯಾರೂ ಆ ನಿಯಮವನ್ನು ಬದಲಿಸಲಾರರು. ನಾನು ಧರ್ಮವನ್ನು ಸಾಕಷ್ಟು ಅಭ್ಯಾಸ ಮಾಡಿದ್ದೇನೆ. ನಾನು ಸನಾತನ ಹಿಂದೂ ಆಗಿರುವ ಕಾರಣದಿಂದಲೇ, ಏಕ ಕಾಲದಲ್ಲಿ ಹಿಂದುವೂ, ಮುಸ್ಲಿಮನೂ, ಕ್ರಿಶ್ಚಿಯನ್ನನೂ, ಸಿಖ್ಖನೂ, ಪಾರ್ಸಿಯವನೂ ಆಗಿದ್ದೇನೆ.

'ಭಾರತದಲ್ಲಿ ಉಳಿದಿರುವ ಮುಸ್ಲಿಮರಿಗೆ ನಾನು ಹೇಳುತ್ತಿದ್ದೇನೆ. ನೀವು ಭಾರತದ ಒಕ್ಕೂಟಕ್ಕೆ ವಿಧೇಯರಾಗಿರುತ್ತೇವೆ ಎಂಬುದನ್ನು ಹೃದಯಪೂರ್ವಕ ಹೇಳಬೇಕು. ಪಾಕಿಸ್ಥಾನದ ಮುಸ್ಲಿಮರಿಗೆ ನೀವು ಒಕ್ಕೊರಲಿನಿಂದ ಕರೆ ಕೊಡಬೇಕು. ಹಿಂದೂಗಳನ್ನು ಕೊಲ್ಲಬೇಡಿ ಎಂದು ಮನಃಪೂರ್ವಕ ಪ್ರಾರ್ಥಿಸಬೇಕು. ಇಲ್ಲಿ ಬದುಕಲು ಬಯಸುವ ಮುಸ್ಲಿಮರು ಈ ದೇಶದ ತ್ರಿವರ್ಣ ಧ್ವಜಕ್ಕೆ, ಈ ದೇಶವನ್ನಾಳುವ ಸರಕಾರದ ಆಜ್ಞೆಗಳಿಗೆ ತಲೆಬಾಗಲೇ ಬೇಕು. ನೀವು ದೇವರಿಗೆ ಸತ್ಯವಾಗಿ ನಡೆದುಕೊಳ್ಳುವವರಾದರೆ ಹಿಂದುಗಳನ್ನು ದ್ವೇಷಿಸಲು ನಿಮಗೆ ಸಾಧ್ಯವಾಗುವುದೇ ಇಲ್ಲ'.

'ಪಾಕಿಸ್ಥಾನದ ಸರಕಾರವು ತನ್ನ ಕರ್ತವ್ಯವನ್ನು ಮರೆತುಬಿಟ್ಟಿದೆ. ಅಲ್ಲಿ ಉಳಿದುಕೊಂಡಿರುವ ಹಿಂದುಗಳು, ಸಿಖ್ಖರುಗಳು ಭಯಭೀತರಾಗಿದ್ದಾರೆ. ಅವರು ಸಾವಿಗೆ ಭಯಪಡುತ್ತಿದ್ದಾರೆ. ಅವರ ಹೆಂಡಂದಿರ ಮಾನ ಕಾಪಾಡಲಾಗದೆ ಅವಮಾನಿತರಾಗಿದ್ದಾರೆ; ಹತಾಶರಾಗಿದ್ದಾರೆ. ಇಂತಹ ಅನ್ಯಾಯಗಳನ್ನು ತಡೆಯಬೇಕೆಂದು ನಾನು ಪಾಕಿಸ್ಥಾನದ ಗವರ್ನರ್ ಜನರಲ್, ಖಾಯದ್ ಅಜ಼ಮ್ ಜಿನ್ನಾರಲ್ಲಿ ವಿನಂತಿ ಮಾಡುತ್ತಿದ್ದೇನೆ. ಅಲ್ಲಿ ಹಿಂದುಗಳು ಮತ್ತು ಸಿಖ್ಖರು ಅಲ್ಲಿಯೇ ಉಳಿದುಕೊಂಡಿರುವುದು ನಿಮ್ಮ ಸರಕಾರದ ಸೇವೆಗೆ ಎಂಬುದಾಗಿ ನಾನವರಿಗೆ ಹೇಳುತ್ತೇನೆ.'

ಆ ದಿನದ ಪ್ರಾರ್ಥನಾ ಸಭೆಯ ಭಾಷಣದ ಬಳಿಕ ಬಾಪೂಜಿಯವರು, ಡಾ. ದಿನ್‌ಶಾ ಮೆಹತಾರ ಜತೆಗೂಡಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುರು ಶ್ರೀ ಎಂ. ಎಸ್. ಗೋಲ್ವಲ್ಕರ್ ಅವರ ಜತೆಗೆ ಬಹಳ ಹೊತ್ತು ಚರ್ಚೆ ನಡೆಸಿದರು. ಬ್ರಿಟಿಷರು ವಿಧಿಸಿದ್ದ ದೇಶ ವಿಭಜನೆಯ ಕರಾರಿನಂತೆ, ಭಾರತವು ಪಾಕಿಸ್ಥಾನಕ್ಕೆ ಐದೂವರೆ ಕೋಟಿ ರೂಪಾಯಿಗಳನ್ನು ಸಂದಾಯ ಮಾಡಬೇಕಿತ್ತು. ಆದರೆ ಎರಡೂ ದೇಶಗಳ ಗಡಿಗಳಲ್ಲಿ ಹಿಂಸಾಚಾರ ನಿಲ್ಲುವ ವರೆಗೆ, ಭಾರತ ಸರಕಾರವು ನಿಧಿಯ ವರ್ಗಾವಣೆಯನ್ನು ತಡೆಹಿಡಿದಿತ್ತು. ಇದನ್ನು ಸಹಿಸದ ಬಾಪೂಜಿ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಹೂಡಿದರು.

'ದೆಹಲಿಯ ಎಲ್ಲ ಜಾತಿ, ಮತ, ಪಂಥ, ಕೋಮುಗಳ ನಾಯಕರೂ ಒಟ್ಟಿಗೆ ಸೇರಿ 'ಶಾಂತಿಸಮಿತಿ'

ರಚಿಸಿ, ಪರಸ್ಪರ ಸ್ನೇಹದಿಂದ ಬದುಕುತ್ತೇವೆಂದು ಪ್ರಮಾಣ ಮಾಡುವ ವರೆಗೆ ಉಪವಾಸ ನಿಲ್ಲಿಸಲಾರೆ, ಎಂದು ಹಟ ತೊಟ್ಟರು. ಐದು ದಿನಗಳ ಅವಧಿಯಲ್ಲಿ, ಬೇರೆ ಬೇರೆ ನಾಯಕರು ಬೇರೆ ಬೇರೆಯಾಗಿ ಬಾಪೂಜಿಯ ಬಳಿಗೆ ಬಂದು ಅವರ ಮನವೊಲಿಸಲು ಯತ್ನಿಸಿದರು; ಸೋತರು. ಆರನೆಯದಿನ, ಎಲ್ಲ ನಾಯಕರೂ ಒಟ್ಟಾಗಿ ಬಂದರು; ಬಾಪೂಜಿಗೆ ವಚನ ಕೊಟ್ಟರು. ಬಾಪೂಜಿ ಆರುದಿನಗಳ ತಮ್ಮ ಉಪವಾಸವನ್ನು ನಿಲ್ಲಿಸಿದರು.

ಆದರೆ, ಕೆಲವೊಂದು ತೀವ್ರವಾದಿ ಹಿಂದೂ ಯುವಕರಿಗೆ ಬಾಪೂಜಿಯ ವರ್ತನೆ ಇಷ್ಟವಾಗಲಿಲ್ಲ. ಬಾಪೂಜಿಯವರು ಮುಸ್ಲಿಮರ ಪರವಾಗಿ ಅತಿಯಾದ ಪಕ್ಷಪಾತದ ಧೋರಣೆಯನ್ನು ಅನುಸರಿಸುತ್ತಿದ್ದಾರೆ ಎಂದು ಅವರು ಭಾವಿಸಿದ್ದರು. ಪ್ರತಿದಿನ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಮಾಡುತ್ತಿದ್ದ ಭಾಷಣಗಳಲ್ಲಿ, ಹಿಂದೂ ವಿರೋಧಿ ಧೋರಣೆಗಳೇ ಹೆಚ್ಚಾಗಿರುತ್ತದೆಯೆಂದು ಅವರು ಅಸಹನೆಗೊಂಡಿದ್ದರು. ಪ್ರಾರ್ಥನಾ ಸಭೆಗಳಲ್ಲಿ ಒಂದು ಬಾರಿ ನಾಡ ಬಾಂಬುಗಳನ್ನು ಸ್ಫೋಟಿಸಿ ಬಾಪೂಜಿಯನ್ನು ಬೆದರಿಸಲು ಯತ್ನಿಸಿದ್ದೂ ವ್ಯರ್ಥವಾಗಿತ್ತು. ಯಾಕೆಂದರೆ ಬಾಂಬುಸ್ಫೋಟದ ನಂತರವೂ ಬಾಪೂಜಿ ತನ್ನ ದಿನಚರಿಯನ್ನು ಬದಲಿಸಲಿಲ್ಲ. ಬಾಂಬು ಎಸೆದವರನ್ನು ಬಾಪೂಜಿ ಬಹಿರಂಗವಾಗಿಯೇ ಕ್ಷಮಿಸಿಬಿಟ್ಟಿದ್ದರು.

ಸಾವಿಗೂ ಭಯಪಡದ ಬಾಪೂಜಿಯ ನಿರ್ಧಾರಗಳನ್ನು, ಬೇರಾವುದೇ ಶಕ್ತಿ ಬದಲಿಸಲಾರವು ಎಂಬುದು ಆ ಯುವಕರ ಗುಂಪಿಗೆ ಖಂಡಿತವಾಗಿತ್ತು. ಬಾಪೂಜಿಯ ಬಾಯಿ ಮುಚ್ಚಿಸಲು ಅವರು ಏನು ಮಾಡಲೂ ಸಿದ್ಧರಿದ್ದರು.

ಆದರೆ, ಬಾಪೂಜಿಯ ದೈನಂದಿನ ಚಟುವಟಿಕೆಗಳಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಮುಂಜಾನೆ ಮೂರು ಗಂಟೆಗೆ ಎಚ್ಚರಗೊಳ್ಳುವ ಅವರ ದಿನಚರಿ ಮುಂದುವರೆದಿತ್ತು. ಎದ್ದ ಕೂಡಲೇ ಪ್ರಾರ್ಥನೆ ತಯಾರಿ. ಸ್ವಲ್ಪ ಹೊತ್ತು ಚರಕಾದಲ್ಲಿ ನೂಲು ತೆಗೆಯುವ ಕಾಯಕ. ಬಳಿಕ 'ಹರಿಜನ' ಪತ್ರಿಕೆಯ ಸಂಪಾದಕೀಯ ಮತ್ತು ಲೇಖನಗಳ ಬರಹ. ಜತೆಯಲ್ಲಿ ದೂರದ ಊರಿನಿಂದ ಬಂದವರಿಗೆ ಸಂದರ್ಶನ. ಪುರುಸೊತ್ತು ಸಿಕ್ಕಿದರೆ ಸ್ವಲ್ಪ ಹೊತ್ತು ಮಣ್ಣು ಮಾಲೀಸು. ಆ ಮೇಲೆ ಸ್ನಾನ. ಆ ನಂತರ, ಹದಿನೈದು ಅಥವಾ ಇಪ್ಪತ್ತು ನಿಮಿಷಗಳ ಒಂದು ಸಣ್ಣ ನಿದ್ರೆ. ತಮ್ಮ ಸೊಂಟದಲ್ಲಿ ಸದಾ ತೂಗುತ್ತಿದ್ದ ಗಡಿಯಾರವನ್ನು ನೋಡಿಕೊಂಡು ತಮ್ಮ ನಿದ್ರೆಯ ಅವಧಿಯನ್ನು ನಿರ್ಧರಿಸುತ್ತಿದ್ದರು. ನಿಗದಿತ ಅವಧಿ ಮುಗಿದ ಕೂಡಲೇ ಹೊಡೆದು ಎಬ್ಬಿಸಿದವರಂತೆ ಎಚ್ಚರಗೊಳ್ಳುತ್ತಿದ್ದರು. ಹಿಂದೆ ಬೊಂಬಾಯಿಯ ನ್ಯಾಯಾಲಯಗಳಲ್ಲಿ, ನಿದ್ರೆಯ ಜತೆ ಬಾಪೂಜಿ ನಡೆಸಿದ್ದ ಪ್ರಯೋಗಗಳು ಇಲ್ಲಿ ಅವರಿಗೆ ನೆರವಾಗಿದ್ದವು. ಹಗಲಿಡೀ ನಗರ ಪ್ರದಕ್ಷಿಣೆ, ನೊಂದವರ ಜತೆ ಮಾತು. ಸಂಜೆಗೆ ಪ್ರಾರ್ಥನಾ ಸಭೆ. ಸೋಮವಾರ, ಮಂಗಳವಾರ, ಬುಧವಾರ, ಗುರುವಾರಗಳ ವ್ಯತ್ಯಾಸವಿಲ್ಲದೆ ಅವರು ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದರು; ಪ್ರಾರ್ಥನೆಯ ಬಳಿಕ ಭಾಷಣ. ಬಾಪೂಜಿಯವರ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುವುದು ಜನರಿಗೆ ಪ್ರತಿಷ್ಠೆಯ ಸಂಗತಿಯೇ ಆಗಿಬಿಟ್ಟಿತ್ತು.

# ಯುಗಪುರುಷನ ಯುಗಳ

ಶುಕ್ರವಾರದ ಸಂಜೆಯ ಹೊತ್ತು. ಸುಮಾರು ಸಾವಿರದಷ್ಟು ಮಂದಿ ಬಾಪೂಜಿಯ ದರ್ಶನಕ್ಕಾಗಿ ಬಿರ್ಲಾ ಭವನದಲ್ಲಿ ಕಾದು ನಿಂತಿದ್ದರು. ಸಂಜೆಯ ಪ್ರಾರ್ಥನಾ ಸಭೆಗೆ ಬಾಪೂಜಿ ಹೊರಟರು. ತಮ್ಮ ಕೊಠಡಿಯಿಂದ ಹೊರಗೆ ಬಂದರು. ತಮ್ಮ ಮೊಮ್ಮಕ್ಕಳಾದ ಅಭಾ ಮತ್ತು ಮನು ಹೆಗಲುಗಳ ಮೇಲೆ ಕೈಯಿರಿಸಿಕೊಂಡು ನಡೆದರು. ಸಭೆ ನಡೆಯಲಿರುವ ಅಂಗಳದ ಮೆಟ್ಟಲು ಏರಿದ ಬಾಪೂಜಿ, ಸಭಿಕರ ವಂದನೆಗಳಿಗೆ ಕೈಮುಗಿದು ಪ್ರತಿವಂದಿಸುತ್ತಾ ಹೆಜ್ಜೆ ಹಾಕಿದರು. ಗುಂಪಿನ ನಡುವಿನಿಂದ ಎದುರು ಬಂದ ಯುವಕ ನಾಥೂರಾಮ ಗೋಡ್ಸೆಯ ನಮಸ್ಕಾರವನ್ನೂ ಬಾಪೂಜಿ ಎದೆತುಂಬಿ ಸ್ವೀಕರಿಸಿದರು. ಬಳಿಕ, ಅವನ ಪಿಸ್ತೂಲಿನಿಂದ ಸಿಡಿದು ಬಂದ ಮೂರೂ ಗುಂಡುಗಳನ್ನು ತಮ್ಮ ಎದೆಯೊಳಗೆ ತುಂಬಿಕೊಂಡರು; ಭೂಮಿಗೆ ಬಿದ್ದರು. ಬಾಪೂಜಿಗೆ ಕಣ್ಣು ಕತ್ತಲೆ ಬಂದಂತಾಯಿತು. ತನ್ನನ್ನು ಯಾರೋ ಮಡಿಲಲ್ಲಿ ಮಲಗಿಸಿ ತಲೆಯನ್ನು ಪ್ರೀತಿಯಿಂದ ನೇವರಿಸುತ್ತಿದ್ದಾರೆ ಎಂದು ಭಾಸವಾಯಿತು. ಕಣ್ಣು ತೆರೆಯಲು ಯತ್ನಿಸಿದರು; ಸಾಧ್ಯವಾಗಲಿಲ್ಲ.

'ಈ ದಿನಕ್ಕಾಗಿಯೇ ಕಾಯುತ್ತಿದ್ದೀಯಲ್ಲವೇ ಮೋಹನಾ?' ಕಣ್ಣುರೆಪ್ಪೆಗಳ ಸಂದಿಯಿಂದ ನುಗ್ಗಿ ಒಳಬಂದ ಮೆಹತಾಬ ಪ್ರಶ್ನಿಸಿದ್ದ!.

ಬಾಪೂಜಿಯ ಮುಖದಲ್ಲಿ ಮಂದಹಾಸ ಮೂಡಿತು; ತುಟಿಗಳು ಅದುರಿದವು.  ತಮ್ಮ ಬಾಲ್ಯದ ಗೆಳೆಯನನ್ನು ಎವೆಯೊಳಗೆಯೇ ದಿಟ್ಟಿಸಿ ನೋಡಿದರು. ತೆಳುವಾದ ಕೋಲಿಗೆ ಬಟ್ಟೆ ಹೊದಿಸಿದಂತೆ ಕಾಣಿಸುತ್ತಿದ್ದ ಎಂಭತ್ತರ ಮುದಿಯನ ಮುಖದಲ್ಲಿ ವ್ಯಂಗ್ಯದ ಗೆರೆಗಳಿದ್ದಿರಲಿಲ್ಲ. ಒಣಗಿ ಹೋದ ಕೆನ್ನೆಗಳಲ್ಲಿ ಹುದುಗಿ ಹೋಗಿದ್ದ ನೀಲಿ ಕಣ್ಣುಗಳಲ್ಲಿ ಕಪಟ ಕಾಣಿಸಲಿಲ್ಲ.

ಬಾಪೂಜಿಯ ಎದೆಯೊಳಗೆ ಮೆಹತಾಬ ಮಾತನಾಡುತ್ತಿದ್ದ: 'ಮುಂದೊಂದು ದಿನ ಚರಿತ್ರೆ ಓದುವವರು, ದೇಶ ವಿಭಜನೆಯಲ್ಲಿ ನಿನ್ನನ್ನೂ ಪಾಲುದಾರನೆಂದು ತಿಳಿದಾರೆಂಬ ಭಯದಿಂದಲ್ಲವೇ ನೀನು, ಆಗಸ್ಟ್ ೧೫ ರ ಸಮಾರಂಭವನ್ನು ತಪ್ಪಿಸಿಕೊಂಡು ಕಲಕತ್ತಾಕ್ಕೆ ಹೋಗಿ ಕುಳಿತದ್ದೂ? ನಿಜ ಹೇಳು ಮೋಹನಾ. . , ನಿನಗಿಷ್ಟವಾಗದ ಪ್ರತಿಯೊಂದನ್ನೂ ನಿನ್ನ ಉಪವಾಸ ಸತ್ಯಾಗ್ರಹದಿಂದ ಸೋಲಿಸುತ್ತಿದ್ದ ನೀನು, ದೇಶ ವಿಭಜನೆಯಂತಹ ವಿಪತ್ತಿನ ವಿರೋಧವಾಗಿ ಯಾಕೆ ಉಪವಾಸ ಸತ್ಯಾಗ್ರಹ ಹೂಡಲಿಲ್ಲಾ?  ಕಾಂಗ್ರೆಸ್  ಕಾರ್ಯಕಾರೀ ಸಭೆಯಲ್ಲಿ ದೇಶ ವಿಭಜನೆಯ ಪ್ರಶ್ನೆ ಬಂದಾಗ ನೀನೇಕೆ ಮೌನವಾಗಿದ್ದೇ? ಅಥವಾ, ಉಪವಾಸ ಸತ್ಯಾಗ್ರಹದ ಬೆದರಿಕೆ ಹಾಕಿರುತ್ತಿದ್ದರೂ ನಿನ್ನ ಜನರು ನಿನ್ನನ್ನು ಕಡೆಗಣಿಸುತ್ತಾರೆಂಬ ಆತಂಕವಿತ್ತೇ? ಇದ್ದಿರಲೇಬೇಕು. ನಿನ್ನ ಅಮೂಲ್ಯವಾದ ಉಪವಾಸವೆಂಬ ಆಯುಧವನ್ನು ನಿನ್ನ ಶಿಷ್ಯರೇ ನಿಷ್ಪ್ರಯೋಜಕವೆಂದು ಸಾರುವುಧು ನಿನಗೆ ಇಷ್ಟವಿದ್ದಿರಲಿಲ್ಲ; ಅಲ್ಲವೇ ಮೋಹನಾ?' ಬಾಪೂಜಿಯ ಎದೆಗೆ ಮೊದಲನೆಯ ಗುಂಡು ನಾಟಿತು.

'ಕಸ್ತೂರಿ ನಿನ್ನ ಹೆಂಡತಿಯಾಗಿ ಬಂದಾಗ ಹದಿಮೂರು ವರ್ಷದ ಪುಟ್ಟ ಹುಡುಗಿ. ಸುಮಾರು ಅರುವತ್ತು ವರ್ಷಗಳ ಕಾಲ ಅವಳು ನಿನ್ನ ನೆರಳಲ್ಲೇ ಬದುಕಿದಳು. ಸಪ್ತಪದಿ ತುಳಿಯುವಾಗ

ನೀನು ಅವಳಿಗೆ ನೀಡಿದ್ದ ವಾಗ್ದಾನಗಳಲ್ಲಿ ಯಾವುದನ್ನು ಪೂರೈಸಿರುವೆ ಹೇಳು? ಗಂಡನ ಆದರ್ಶ ಕಾಪಾಡಲು, ಆಶ್ರಮವಾಸಿಗಳ ಕಕ್ಕಸು ತೊಳೆಯಲೂ ಹಿಂಜರಿಯದಿದ್ದ ಹೆಂಡತಿ ಅವಳು. ಆದರೆ, ಗಂಡನ ಸಂಪಾದನೆಯಲ್ಲಿ ಅವಳು ಮುಂದೆ ಬರಲಿರುವ ತನ್ನ ಸೊಸೆಗಾಗಿ ಒಂದಿಷ್ಟು ಬಂಗಾರ ಕೂಡಿಡಲು ಆಸೆಪಟ್ಟದ್ದು, ದೊಡ್ಡ ತಪ್ಪಾಗಿ ಕಾಣಿಸಿತ್ತಲ್ಲವೇ ನಿನಗೇ?' ಎರಡನೆಯ ಗುಂಡು ಬಾಪೂಜಿಯ ಎದೆಗೆ ಇರಿಯಿತು.

'ದಕ್ಷಿಣ ಆಫ್ರಿಕಾದಲ್ಲಿರುವಾಗ, ನಿನ್ನ ಮಕ್ಕಳಿಗೆ ಅಲ್ಲಿಯ ಬಿಳಿಯರ ಶಾಲೆಗಳಲ್ಲಿ ಆಧುನಿಕ ಶಿಕ್ಷಣ ಕೊಡಿಸಬಲ್ಲ ಶಕ್ತಿ ಮತ್ತು ಅವಕಾಶ ಎರಡೂ ನಿನಗೆ ಇದ್ದವು. ಆದರೆ ನಿನಗೆ, ಮಕ್ಕಳ ಶಿಕ್ಷಣಕ್ಕಿಂತ ನಿನ್ನ ಆದರ್ಶಗಳೇ ಮುಖ್ಯವಾಗಿಬಿಟ್ಟಿತು. ನಿನ್ನ ಮೊಂಡುತನದಿಂದಾಗಿ ಆ ಮಕ್ಕಳು ತಮ್ಮ ಶಿಕ್ಷಣದ ಹಕ್ಕನ್ನೇ ಕಳೆದುಕೊಂಡರು. ಮಕ್ಕಳಿಗೆ ಹೆತ್ತವರು ನೀಡಬೇಕಾದದ್ದು ಪ್ರೀತಿಯನ್ನು ಮಾತ್ರ; ಹೆತ್ತವರು ನಂಬಿದ ವಿಚಾರವನ್ನಲ್ಲ. ಮಕ್ಕಳನ್ನು ಹಿರಿಯರಂತೆ ವರ್ತಿಸಲು ಒತ್ತಾಯಿಸಿ ಜೀವನವನ್ನು ಹಿಮ್ಮುಖವಾಗಿ ಹರಿಸಬಾರದೆಂಬುದು ನಿನಗೆ ಗೊತ್ತಿತ್ತು. ಆದರೂ ಅಸಹಾಯಕರಾಗಿದ್ದ ಮಕ್ಕಳ ಮೇಲೆ ನಿನ್ನ ಆದರ್ಶವನ್ನು ಪ್ರಯೋಗಿಸಿದ್ದು ತಪ್ಪಲ್ಲವೇ?' ಮೂರನೆಯ ಗುಂಡು ಬಾಪೂಜಿಯ ಎದೆಯಾಳಕ್ಕೆ ಇಳಿಯಿತು.

ಮೆಹತಾಬ ಮಾತು ಮುಂದುವರಿಸಿದ್ದ, 'ಇವುಗಳು ನನ್ನ ಪ್ರಶ್ನೆಗಳಲ್ಲ ಮೋಹನಾ; ನೀನು ನಿನ್ನನ್ನೇ ಕೇಳಿಕೊಳ್ಳುತ್ತಿರುವ ಪ್ರಶ್ನೆಗಳು. ಹೋಗಲಿ ಬಿಡು, ನಿನ್ನ ನೋವನ್ನು ಮರೆಸಲು ನಾನೊಂದು ಕತೆ ಹೇಳುತ್ತೇನೆ, ಕೇಳು.

'ನಿನ್ನನ್ನು ರಾಷ್ಟ್ರಪಿತನೆಂದೇ ಕರೆದಿದ್ದ ಸುಭಾಸ್‌ಚಂದ್ರ ಬೋಸರಿಗೆ ನಿನ್ನ ಬಗ್ಗೆ ಅಪಾರವಾದ ಗೌರವವಿತ್ತು. ಆದರೆ, ಬ್ರಿಟಿಷರ ಬಗೆಗಿನ ನಿನ್ನ ನಿಲುವು ಅವರಿಗೆ ಹಿಡಿಸಿದ್ದಿರಲಿಲ್ಲವೆಂಬುದೂ ನಿನಗೆ ಗೊತ್ತು. ಸುಭಾಸ್‌ಚಂದ್ರ ಬೋಸರೊಂದಿಗೆ ನಾನು ಜೈಲಿನಲ್ಲಿದ್ದಾಗ, ಒಂದು ದಿನ ಸಂಜೆ ನಿನ್ನ ಬಗ್ಗೆ ತಮಾಷೆಯಾಗಿ ಮಾತಾಡಿಕೊಳ್ಳುತ್ತಿದ್ದೆವು. ನೀನು ದನದ ಹಾಲು ಕುಡಿಯುವುದನ್ನು ತ್ಯಜಿಸಿ ಆಡಿನ ಹಾಲು ಕುಡಿಯುವುದರ ಹಿಂದಿದ್ದ ತಾತ್ವಿಕ ನಿಲುವುಗಳ ಬಗ್ಗೆ ಚರ್ಚೆಯಾಗುತ್ತಿತ್ತು. ದನ ಮತ್ತು ಆಡುಗಳ ನಡುವೆ ಏನು ಭೇದವಿದೇ? ಎರಡೂ ಮಾತು ಬಾರದ ಮೂಕ ಪ್ರಾಣಿಗಳು. ದನದ ಹಾಲಿನ ಬಗೆಗಿನ ನಿನ್ನ ನಿಲುವಿಗೆ, ನಿನ್ನ ಮೊಂಡುತನವೊಂದೇ ಕಾರಣವೆಂದು ನಾವೆಲ್ಲ ತೀರ್ಮಾನಿಸಿದ್ದೆವು. ಆ ದಿನದ ಚರ್ಚೆಯಲ್ಲಿ, ನಿನ್ನನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿದ್ದ, ದಕ್ಷಿಣದ ಮೈಸೂರು ಪ್ರಾಂತ್ಯದಿಂದ ಬಂದಿದ್ದ ಐ.ಎನ್.ಎ. ಯೋಧನೊಬ್ಬ ಹೇಳಿದ್ದ ಕತೆಯಿದು; ಕೇಳು:

'ಕಲ್ಲುಗಳನ್ನು ಕಡೆದು ಅದಕ್ಕೆ ಜೀವ ತುಂಬಬಲ್ಲ ಜಕಣಾಚಾರಿಯೆಂಬ ಶಿಲ್ಪಿಯಿದ್ದ. ಅವನೊಂದು ದಿನ ಶಿಲೆಯನ್ನು ಕಡೆದು ಸುಂದರವಾದ ದೇವರ ಮೂರ್ತಿಯೊಂದನ್ನು ನಿರ್ಮಿಸಿದ. ಅದು ಎಷ್ಟು ಸುಂದರವಾದ ಮೂರ್ತಿಯಾಗಿಬಿಟ್ಟಿತ್ತೆಂದರೆ, ಅದನ್ನು ನಿರ್ಮಿಸಿದ ಜಕಣಾಚಾರಿಯೂ ಅಚ್ಚರಿಯಿಂದ, ಹಗಲೂ ರಾತ್ರಿ ಅದನ್ನೇ ನೋಡುತ್ತಾ ಕುಳಿತುಬಿಟ್ಟ. ಜಕಣಾಚಾರಿಯ ಅಪರೂಪದ ವರ್ತನೆಯಿಂದ ಕುತೂಹಲಗೊಂಡ ಅವನ ಶಿಷ್ಯನೊಬ್ಬ, ಇದರ ಕಾರಣವನ್ನು ಪ್ರಶ್ನಿಸಿದಾಗ

ಜಕಣಾಚಾರಿ ಹೇಳಿದ, 'ಈ ಮೂರ್ತಿ ಪರಿಪೂರ್ಣವಾಗಿದೆ'. ಜಕಣಾಚಾರಿ ಹಾಗೆ ಹೇಳಿದ್ದೇ ತಡ; ಆ ಮೂರ್ತಿಯು ನೆಲದಿಂದ ಕಳಚಿಕೊಂಡು ಬಾನಿನತ್ತ ಏರತೊಡಗಿತು. ಶಿಷ್ಯನಿಗೆ ತನ್ನ ಗುರುವಿನ ಮಾತಿನಿಂದಾದ ಪ್ರಮಾದ ಅರ್ಥವಾಗಿ ಬಿಟ್ಟಿತ್ತು'.

'ಪರಿಪೂರ್ಣವಾದ ಯಾವುದೂ ಭೂಮಿಯ ಮೇಲೆ ಇರಲು ಸಾಧ್ಯವಿಲ್ಲ. ಆದ್ದರಿಂದಲೇ, ಮೂರ್ತಿಯನ್ನು ಜಕಣಾಚಾರಿ 'ಪರಿಪೂರ್ಣ'ವೆಂದು ಕರೆದ ನಂತರ, ಅದು ಭೂಮಿಯ ಮೇಲೆ ಇರಲು ಸಾಧ್ಯವಿಲ್ಲ. ಅದು ಮೇಲಕ್ಕೆ ಏರಲೇ ಬೇಕು; ಏರತೊಡಗಿತು. ಜಾಣನಾದ ಆ ಶಿಷ್ಯ ತಡಮಾಡಲಿಲ್ಲ. ಓಡಿ ಹೋಗಿ ಕೊಡಲಿಯಿಂದ ಮೂರ್ತಿಯ ಕಾಲುಗಳ ಮೇಲೆ ಬರೆಯೊಂದನ್ನು ಎಳೆದುಬಿಟ್ಟ. ಮೂರ್ತಿ 'ಭಿನ್ನವಾಗಿ'ಬಿಟ್ಟಿತ್ತು. ಮೂರ್ತಿ ಮರಳಿ ಕೆಳಗಿಳಿದು ನೆಲದ ಮೇಲೆ ನಿಂತಿತು.

'ಅರ್ಥವಾಯಿತೆ ಮೋಹನಾ?' ಮೆಹತಾಬ ವಿಷಾದದಿಂದ ಪ್ರಶ್ನಿಸಿದ್ದ;


ಅರೆ ಕ್ಷಣ ಮೌನದ ನಂತರ ಬಾಪೂಜಿಯ ಕಿವಿಯಲ್ಲಿ ಗುಟ್ಟಾಗಿ ಹೇಳಿದ, 'ನೀನೀಗ ಭಿನ್ನಗೊಂಡ ಮೂರ್ತಿಯಲ್ಲ ಮೋಹನಾ; ಪರಿಪೂರ್ಣ ಯುಗಪುರುಷ.'

ಬಾಪೂಜಿಯ ಉಸಿರು ನಿಂತಿತು.

**ಯುಗಪುರುಷನ ಮೇಲೆ ಯಾರೂ ಗೆರೆ ಎಳೆಯದಿರಲಿ.**

ಆಮೆನ್.

❑



## ತಾರೆ ಸಾಕ್ಷಿ

ನಾಥುರಾಮ ಒಬ್ಬನೇ ಕೊಂದ ಗಾಂಧಿಯ ದೇಹಕ್ಕೆ, ನಾಡ ನಾಯಕರೆಲ್ಲ ಒಟ್ಟು ಸೇರಿ ಕೊಳ್ಳಿಯಿಡುತ್ತಿದ್ದ ಹೊತ್ತಲ್ಲಿ, ದೆಹಲಿಯ ಕಾನಾಟ್ ಪ್ಲೇಸ್‌ನ ನಿರ್ಜನ ರಸ್ತೆಯಲ್ಲಿದ್ದ ಮನೆಯೊಂದರೆದುರು ಅರುವತ್ತರ ಮುದುಕನೊಬ್ಬ ಬಂದು ನಿಂತಿದ್ದ. ಮನೆಯ ಗೇಟಿನ ಕಂಬಿಗಳಿಗೆ ಅಂಟಿಸಿದ್ದ ತುಕ್ಕು ಹಿಡಿದ ತಗಡಿನ ಫಲಕದಲ್ಲಿ 'ದೇವದಾಸ ಮೋಹನದಾಸ ಗಾಂಧಿ' ಎಂದು ಬರೆದಿತ್ತು. ಆ ಅಕ್ಷರಗಳ ಅಡಿಯಲ್ಲಿ ತುಂಟ ಮಕ್ಕಳಾರೋ ಸೀಮೆ ಸುಣ್ಣದಿಂದ 'ನಾಯಿಗಳಿಲ್ಲ, ಒಳಗೆ ಬನ್ನಿ' ಎಂದು ಬರೆದಿದ್ದರು. ಇಬ್ಬರು ಪುಟ್ಟ ಮಕ್ಕಳೊಂದಿಗೆ ಕಿಟಕಿಯ ಬದಿಯಲ್ಲಿ ಕುಳಿತಿದ್ದ ತಾರೆಗೆ, ಅಪರೂಪಕ್ಕೆ ಬಂದಿದ್ದ ದೊಡ್ಡಪ್ಪನನ್ನು ಕಂಡು ಅಚ್ಚರಿಯಾಯಿತು. ಹೊರಗೋಡಿ ಬಂದು ದೊಡ್ಡಪ್ಪನ ಕೈ ಹಿಡಿದು ಒಳಗೆ ಕರೆದುಕೊಂಡು ಹೋದಳು. 'ನೀವು ಸ್ಮಶಾನಕ್ಕೆ ಹೋಗಲಿಲ್ಲವೇ ಹರಿಕಾಕಾ?' ಎಂದು ಪ್ರಶ್ನಿಸಿದಳು.

'ಇನ್ನೂ ಇಲ್ಲ ಮಗಳೇ, ನನಗೆ ಆ ಅಧಿಕಾರವಿಲ್ಲ.' ಎಂದ ಮುದುಕ ವಿಷಾದದಿಂದ ನಕ್ಕ. ದೊಡ್ಡಪ್ಪನನ್ನು ಪ್ರೀತಿಯಿಂದ ಅಪ್ಪಿಕೊಂಡ ಮಕ್ಕಳು ಅಳತೊಡಗಿದವು. ಮುದುಕನೂ ಮಕ್ಕಳೊಂದಿಗೆ ಅಳುತ್ತಾ ಸ್ವಲ್ಪಹೊತ್ತು ಕುಳಿತ. ಒಳಗೆ ಹೋಗಿದ್ದ ತಾರಾ ನೀರಿನ ಲೋಟ ತಂದು ದೊಡ್ಡಪ್ಪನ ಎದುರಿಗಿರಿಸಿದಳು. ಮುದುಕ ನೀರು ಕುಡಿಯಲು ನಿರಾಕರಿಸಿದ; 'ಬೇಡ ಮಗಳೆ, ನಾನಿಂದು ಉಪವಾಸ ವ್ರತದಲ್ಲಿದ್ದೇನೆ.' ಎಂದ. ನಂತರ ಅತ್ತಿತ್ತ ನೋಡುತ್ತಾ, 'ಮನೆಯಲ್ಲಿ ಒಗೆಯಲು ಹಾಕಿರುವ ಬಟ್ಟೆಗಳನ್ನೆಲ್ಲಾ ಒಟ್ಟು ಮಾಡಿ ಹಿತ್ತಲಲ್ಲಿ ನೀರಿನ ನಲ್ಲಿಯ ಹತ್ತಿರ ಇಟ್ಟು ಬಿಡು ಮಗಳೇ' ಎಂದ. ತಾರೆ ಹಾಗೆಯೇ ಮಾಡಿದಳು. ಕೊಳೆಯಾದ ಬಟ್ಟೆಗಳನ್ನು ಒಂದೊಂದಾಗಿ ಒಗೆದು ಶುಚಿಗೊಳಿಸಲಾರಂಭಿಸಿದ್ದ ಮುದುಕನಿಗೆ ತಾರೆ ಸಾಕ್ಷಿಯಾದಳು.

– **ಬೊಳುವಾರು**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨